ಸಂಪುಟ-I, ಸಂಖ್ಯೆ-1

ಜುಲೈ-ಆಗಸ್ಟ್-ಸೆಪ್ಟೆಂಬರ್, 2019

ಕರ್ನಾಟಕ ವಿಧಾನಮಂಡಲ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)



ಪ್ರಕಟಣೆ:

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,
ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನ ಸೌಧ
ಬೆಂಗಳೂರು - 560 233

ಪ್ರವೇಶಿಸುವುದರ ಮೂಲಕ 1994ರ ಅವಧಿಯವರೆವಿಗೆ ಉತ್ತರ ಕನ್ನಡ ಜಿಲ್ಲಾ ಭಾರತೀಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ, ಯುವಮೋರ್ಚ ಪ್ರಧಾನ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿರುತ್ತಾರೆ.

ಶ್ರೀಯುತರು ಸರಳ, ಸಜ್ಜನ, ಮೃದು ಮಾತಿನ ಸೌಮ್ಯ ಸ್ವಭಾವದವರಾಗಿದ್ದು, ವೃತ್ತಿಯಲ್ಲಿ ಕೃಷಿಕರು ಮತ್ತು ಪುಸ್ತಕಗಳನ್ನು ಓದುವುದು ಹಾಗೂ ಕ್ರಿಕೆಟ್ ಇವರ ಮೆಚ್ಚಿನ ಕ್ರೀಡೆಯಾಗಿರುತ್ತದೆ. ಸದರಿಯವರು ಶಿರಸಿಯ ಸ್ವರ್ಣವಲ್ಲಿ ಮಠದಲ್ಲಿ ಉಪಾಧ್ಯಕ್ಷರಾಗಿ, ಸಾಮಾಜಿಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅವರು 1991ರಲ್ಲಿ ಶ್ರೀಮತಿ ಭಾರತಿಯವರನ್ನು ವಿವಾಹವಾಗಿದ್ದು, ಇವರಿಗೆ 3 ಜನ ಹೆಣ್ಣು ಮಕ್ಕಳು ಇರುತ್ತಾರೆ.

1994–1999ರವರೆಗೆ ಮೊದಲ ಬಾರಿಗೆ 10ನೇ ವಿಧಾನಸಭೆಗೆ ಅಂಕೋಲ ಕ್ಷೇತ್ರದಿಂದ ಪ್ರವೇಶಿಸಿದರು. ನಂತರ ಅಂಕೋಲ ಕ್ಷೇತ್ರದಿಂದ ಹನ್ನೊಂದನೆ (1999–2004) ಹಾಗೂ ಹನ್ನೆರಡನೇ (2004–2008) ವಿಧಾನಸಭೆಗೆ ಆಯ್ಕೆಯಾಗಿರುತ್ತಾರೆ. ಕ್ಷೇತ್ರ ಪುನರ್ ವಿಂಗಡಣೆಯ ಪ್ರಕ್ರಿಯೆ ನಡೆದ ನಂತರ ಹೊಸದಾಗಿ ರಚಿಸಲಾದ ಕ್ಷೇತ್ರಕ್ಕೆ 2008–2013, 2013–2018ರ ಚುನಾವಣೆಗಳಲ್ಲಿ ಶಿರಸಿ–ಸಿದ್ದಾಪುರ ಕ್ಷೇತ್ರವನ್ನು ಪ್ರತಿನಿಧಿಸಿ ಶಾಸಕರಾಗಿ ಆಯ್ಕೆಯಾಗಿರುತ್ತಾರೆ. ಅಂದರೆ ಅವರು ತಮ್ಮ ರಾಜಕೀಯ ಜೀವನದಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದಂದಿನಿಂದ ಸತತವಾಗಿ ಈವರೆವಿಗೆ ಗೆಲ್ಲುತ್ತಾ ಶಾಸಕರಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ವಿಧಾನ ಸಭಾಧ್ಯಕ್ಷರಾಗಿರುತ್ತಾರೆ.

ಹನ್ನೆರಡನೇ ವಿಧಾನಸಭೆ (2006)ಯ ಅವಧಿಯಲ್ಲಿ ಶ್ರೀಯುತರು ಮಾನ್ಯ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಹದಿಮೂರನೇ ವಿಧಾನಸಭೆ (2008–13) ಯ ಅವಧಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಂತಹ ಉನ್ನತ ಹುದ್ದೆಯಲ್ಲಿ ಇದ್ದಾಗ್ಯೂ ಸಹ ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ತಮ್ಮ ಊರಿನ ಸರ್ಕಾರಿ ಶಾಲೆಯಲ್ಲಿ ಮಾಡಿಸಿರುತ್ತಾರೆ.

ಜುಲೈ 2011ರಲ್ಲಿ ಕರ್ನಾಟಕ ಸರ್ಕಾರದ ಪಠ್ಯ ಕ್ರಮದಲ್ಲಿ ಭಗವದ್ಗೀತೆಯನ್ನು ಸೇರಿಸಲು ಕರ್ನಾಟಕದಲ್ಲಿ ಅಭಿಯಾನ ನಡೆಯುತ್ತಿದ್ದು, ಶ್ರೀಯುತರು ಆ ಅವಧಿಯಲ್ಲಿ ಸಂಪುಟ ದರ್ಜೆ ಸಚಿವರಾಗಿದ್ದು, ಈ ಕ್ರಮವನ್ನು ಬೆಂಬಲಿಸಿರುತ್ತಾರೆ. ಇದನ್ನು ಹಲವಾರು ಜನರು ವಿರೋಧಿಸಿದರು. ***"ಗೀತಾ ಬೋಧನೆಗಳನ್ನು ವಿರೋಧಿಸುವವರು ಭಾರತವನ್ನು ತೊರೆಯಬೇಕು"*** ಎಂಬ ಹೇಳಿಕೆಗೆ ಸಾಕಷ್ಟು ಟೀಕೆಗೆ ಗುರಿಯಾದರು.

ಶ್ರೀಯುತರು ಚೈನಾ, ಸಿಂಗಾಪುರ, ದುಬೈ ಮತ್ತು ಅಮೆರಿಕಾ ದೇಶಗಳ ಪ್ರವಾಸಗಳನ್ನು ಕೈಗೊಂಡಿರುತ್ತಾರೆ.

ಲೋಕಸಭೆಯ ಸ್ಪೀಕರ್‌ರವರಾದ ಮಾನ್ಯ ಓಂ ಬಿರ್ಲಾ ಇವರ ಅಧ್ಯಕ್ಷತೆಯಲ್ಲಿ ದಿನಾಂಕ **28.08.2019** ರಂದು ನವದೆಹಲಿಯಲ್ಲಿ ನಡೆದ ವಿವಿಧ ರಾಜ್ಯಗಳ ವಿಧಾನ ಸಭಾಧ್ಯಕ್ಷರ ಸಮಾವೇಶದಲ್ಲಿ ಮಾನ್ಯ ಸಭಾಧ್ಯಕ್ಷರವರು ಪಾಲ್ಗೊಂಡಿದ್ದು, ಶಿಸ್ತು ಬದ್ಧವಾಗಿ ಸದನ ನಡೆಸುವುದು, ಇ–ಆಡಳಿತ ವಿಧಾನ ಅಳವಡಿಸಿಕೊಂಡು ಕಾಗದ ರಹಿತ ವಿಧಾನಸಭೆ ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ದಿನಾಂಕ 22ನೇ ಸೆಪ್ಟೆಂಬರ್ 2019 ರಿಂದ 29ನೇ ಸೆಪ್ಟೆಂಬರ್ 2019ರವರೆಗೆ ಹೊರದೇಶದ ಉಗಾಂಡದ ಕಂಪಾಲದಲ್ಲಿ ನಡೆದ 64ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಸಮ್ಮೇಳನದ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಮಾನ್ಯ ಸಭಾಧ್ಯಕ್ಷರು ಭಾಗವಹಿಸಿ ಜಮ್ಮು–ಕಾಶ್ಮೀರ್ ಸದಸ್ಯತ್ವವನ್ನು

ಅಮಾನತ್ತಿನಲ್ಲಿಟ್ಟಿರುವ ವಿಧೇಯಕಕ್ಕೆ ಅನುಮೋದನೆ ನೀಡುವ ವಿಷಯದಲ್ಲಿ ಪಾಕಿಸ್ತಾನ ಅನಗತ್ಯವಾಗಿ ನೀಡಿರುವ ಹೇಳಿಕೆಯನ್ನು ಖಂಡಿಸಿ ಮಾತನಾಡಿರುತ್ತಾರೆ.

2. ಸಂವಿಧಾನ ಭಗವದ್ಗೀತೆ ಇದ್ದಂತೆ

ಶಿರಸಿ–ಸಿದ್ದಾಪುರ ಕ್ಷೇತ್ರದ ಬಿಜೆಪಿ ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ವಿಧಾನಸಭೆಯ ಸಭಾಧ್ಯಕ್ಷರಾಗಿ ದಿನಾಂಕ 31.07.2019ರಂದು ಪೀಠದಲ್ಲಿ ಆಸೀನರಾಗಿ ಮಾತನಾಡುತ್ತಾ ಡಾ:ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿರುವ ಸಂವಿಧಾನವೇ ಶ್ರೇಷ್ಠ. ಸಂವಿಧಾನವು ಭಗವದ್ಗೀತೆ ಇದ್ದಂತೆ, ಅದರ ಚೌಕಟ್ಟಿನಲ್ಲಿ ರೂಪಿತವಾದ ಕಾನೂನನ್ನು ಪ್ರತಿಯೊಬ್ಬರು ಪಾಲಿಸಬೇಕೆಂದರು.

ಸಂವಿಧಾನದಡಿ ರಾಜ್ಯ ವಿಧಾನಮಂಡಲದ ನಿಯಮಾವಳಿಯ ಪ್ರಕಾರವೇ ಕಾರ್ಯವನ್ನು ನಿರ್ವಹಿಸುವುದಾಗಿ ತಿಳಿಸುತ್ತಾ, ಸದನದಲ್ಲಿ ಹೊಸ ಸದಸ್ಯರಿಗೆ ಹೆಚ್ಚು ಮಾತನಾಡಲು ಅವಕಾಶ ನೀಡುವುದಾಗಿ ಹಾಗೂ ಸದಸ್ಯರು ಪೂರ್ಣ ಪ್ರಮಾಣದಲ್ಲಿ ಸದನದಲ್ಲಿ ಹಾಜರಿದ್ದು, ಚರ್ಚೆಯಲ್ಲಿ ಭಾಗಿಯಾಗಬೇಕೆಂದು ತಿಳಿಸಿದರು. ಎಲ್ಲರೂ ಸಂವಿಧಾನದ ಚೌಕಟ್ಟಿನಲ್ಲಿ ಕಾನೂನನ್ನು ಅಕ್ಷರಶ ಪಾಲಿಸಬೇಕು. ನಮ್ಮ ದೇಶಕ್ಕೆ ಸಂವಿಧಾನವೇ ಇಲ್ಲದಿದ್ದರೆ ಈಗ ಪರಿಸ್ಥಿತಿ ಹೇಗಿರುತ್ತಿತ್ತು ಎಂಬುದು ಊಹಿಸುವುದು ಕಷ್ಟವೆಂದು ಹೇಳಿದರು.

ಆಧಾರ –ಉದಯವಾಣಿ/ಪ್ರಜಾವಾಣಿ, 01.08.2019

3. ಮಾದರಿ ವಿಧಾನಸಭೆ ಮಾಡಲು ಪ್ರಯತ್ನ

ಸಭಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ಶಿರಸಿಯಲ್ಲಿ ಕ್ಷೇತ್ರದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ, ಕರ್ನಾಟಕ ವಿಧಾನ ಸಭಾಧ್ಯಕ್ಷನಾಗಿ ಸದನವನ್ನು ಅಚ್ಚುಕಟ್ಟಾಗಿ ಮುನ್ನಡೆಸಿ ದೇಶದ ಮಟ್ಟದಲ್ಲಿ ಮಾದರಿ ವಿಧಾನಸಭೆ ಮಾಡಲು ಎಲ್ಲಾ ಪ್ರಯತ್ನ ಮಾಡುವುದಾಗಿ ತಿಳಿಸಿ, ಸದನದಲ್ಲಿ ಹಿರಿಯರು, ಅನುಭವಿಗಳ ದೊಡ್ಡ ತಂಡವಿರುವುದರಿಂದ ಅವರುಗಳ ಸಲಹೆ ಪಡೆದು ನಾಡಿನ ಜನತೆಯ ಧ್ವನಿಗೆ ಧ್ವನಿಯಾಗುವ ರೀತಿಯಲ್ಲಿ ಸದನವನ್ನು ಮುನ್ನಡೆಸಿಕೊಂಡು ಹೋಗಲು ಪ್ರಯತ್ನಿಸುವುದಾಗಿ ತಿಳಿಸಿದರು.

ಆಧಾರ – ವಿಶ್ವವಾಣಿ, 04.08.2019

4. ಸಭಾಧ್ಯಕ್ಷರ ನಡೆ ಸ್ವಾಗತಾರ್ಹ

ಯಾವುದೇ ವಿಧೇಯಕಕ್ಕೆ ಸದನದಲ್ಲಿ ಕನಿಷ್ಠ 10 ಸದಸ್ಯರು ಭಾಗವಹಿಸಿ ಚರ್ಚೆ ನಡೆಸದಿದ್ದರೆ ಆ ವಿಧೇಯಕವನ್ನು ಅನುಮೋದನೆಗಾಗಿ ಮತಕ್ಕೆ ಹಾಕದಿರಲು ನೂತನ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಯವರು ದಿಟ್ಟ ನಿರ್ಧಾರ ಕೈಗೊಂಡಿರುತ್ತಾರೆ. ಶಾಸನ ಸಭೆಯ ಕಲಾಪದ ಗುಣಮಟ್ಟ ಸುಧಾರಣೆಯಲ್ಲಿ ಈ ನಿರ್ಧಾರ ಮಹತ್ವದ ಹೆಜ್ಜೆಯಾಗಲಿದೆ.

ಭಾರತದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಿದ ಸಂಸ್ಥೆಗಳ ಪೈಕಿ ಕರ್ನಾಟಕ ವಿಧಾನಸಭೆಯ ಪಾತ್ರವೂ ಹಿರಿದಾಗಿದ್ದು, ಅದಕ್ಕೆ ತನ್ನದೇ ಆದ ಘನತೆ ಇದೆ. ಸದನದಲ್ಲಿ ನಡೆದ ಚರ್ಚೆಗಳು, ತೆಗೆದುಕೊಂಡ ತೀರ್ಮಾನಗಳು ದೇಶದ ಬೇರೆ–ಬೇರೆ ರಾಜ್ಯದ ವಿಧಾನಸಭೆಗಳಲ್ಲಿ ಉಲ್ಲೇಖಗೊಂಡು ಸಂಸತ್ತಿನಲ್ಲೂ ಮೆಚ್ಚುಗೆಗಳಿಸಿವೆ. ಯಾವುದೇ ಒಂದು ವಿಷಯದ ಬಗ್ಗೆ ಹೊಸ ಕಾನೂನಿನ ಬಗ್ಗೆ ಕರ್ನಾಟಕ ವಿಧಾನಸಭೆ ಚರ್ಚೆ ಮಾಡುತ್ತಿದೆ ಎಂದರೆ ಇಡೀ ದೇಶವೇ ಕಿವಿಯಾಗಿ ಆಲಿಸುತ್ತಿತ್ತು.

ಆದರೆ, ಇತ್ತೀಚಿನ ವರ್ಷಗಳಲ್ಲಿ ವಿಧಾನಸಭೆಯಲ್ಲಿ ನಡೆಯುವ ಚರ್ಚೆಗಳ ಗುಣಮಟ್ಟ ಕುಸಿದಿದೆ. ಯಾವುದೇ ನೀತಿ ನಿರೂಪಣೆಯನ್ನು ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹಾಗಾಗಿ, ಸಂವಾದಕ್ಕೆ

ಕರ್ನಾಟಕ ವಿಧಾನಮಂಡಲ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಜುಲೈ-ಆಗಸ್ಟ್-ಸೆಪ್ಟೆಂಬರ್, 2019

ಸಂಪುಟ – I ಸಂಖ್ಯೆ – 1

ಪ್ರಕಟಣೆ:

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,
ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನ ಸೌಧ,
ಬೆಂಗಳೂರು – 560 233.

ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕರಣಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ/ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

ಮುನ್ನುಡಿ

ಕರ್ನಾಟಕ ವಿಧಾನಮಂಡಲದ ವತಿಯಿಂದ ಈ ಹಿಂದೆ ರಾಜ್ಯದಲ್ಲಿನ ದೇಶ ವಿದೇಶಗಳಲ್ಲಿನ ಸುದ್ದಿಗಳನ್ನು ಅದರಲ್ಲೂ ಸಂಸತ್ತು, ರಾಜ್ಯ ವಿಧಾನ ಮಂಡಲದ ಆಗುಹೋಗುಗಳ ವಿಷಯಗಳ ಸುದ್ದಿಗಳನ್ನು ಕ್ರೂಢೀಕರಿಸಿ ಮಾನ್ಯ ಸದಸ್ಯರುಗಳಿಗೆ ಉಪಯೋಗವಾಗುವಂತೆ ಮಹತ್ತರ ಉದ್ದೇಶದಿಂದ ಒಂದು ವಿಶಿಷ್ಟವಾದ ರೀತಿಯಲ್ಲಿ ಕರ್ನಾಟಕ ಶಾಸಕಾಂಗ ಪತ್ರಿಕೆ (ತ್ರೈಮಾಸಿಕ ಪತ್ರಿಕೆ)ಯನ್ನು ಮುದ್ರಿಸಿ ಪ್ರಕಟಿಸಲಾಗುತ್ತಿತ್ತು. ಆದರೆ, ಸದರಿ ಪತ್ರಿಕೆಯು ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದು, ಪ್ರಸ್ತುತ ಸನ್ಮಾನ್ಯ ಸಭಾಧ್ಯಕ್ಷರ ಸ್ವಯಂಪ್ರೇರಣೆ ಹಾಗೂ ಉತ್ತೇಜನದಿಂದ ಸದರಿ ಪ್ರಕಟಣೆಯನ್ನು ಈಗ ಪುನರಾರಂಭಿಸಲಾಗಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡು ಸದನಗಳ ಶಾಸಕಾಂಗದ ಸುದ್ದಿಗಳು ಹಾಗೂ ಲೋಕಸಭೆ, ರಾಜ್ಯಸಭೆಗಳ ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2019ನೇ ಸಾಲಿನ ಜುಲೈ–ಆಗಸ್ಟ್–ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ ಹಾಗೂ ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ನಿರಂತರವಾಗಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ:

ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

ಶ್ರೀಮತಿ/ಶ್ರೀಯುತರುಗಳಾದ:-

1. ಎಂ. ಕೆ. ವಿಶಾಲಾಕ್ಷಿ	: ಕಾರ್ಯದರ್ಶಿ (ಪ್ರ)
2. ಎಂ. ಮಂಜುಳ	: ಜಂಟಿ ನಿರ್ದೇಶಕರು
3. ಶಿವರಾಮ ಆಚಾರಿ	: ಉಪ ನಿರ್ದೇಶಕರು
4. ಎಸ್. ಶೋಭಾವತಿ	: ಉಪ ನಿರ್ದೇಶಕರು
5. ವಿ. ಭಾಗ್ಯ	: ಸಹಾಯಕ ನಿರ್ದೇಶಕರು
6. ಅರ್ಜುನ್ ಡಿ.ಜಿ.	: ಸಹಾಯಕ ನಿರ್ದೇಶಕರು
7. ಡಿ.ಕೆ. ಸರಳ	: ಸಹಾಯಕ ನಿರ್ದೇಶಕರು
8. ಜಿ. ಮಮತ	: ಸಹಾಯಕ ನಿರ್ದೇಶಕರು

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಜುಲೈ–ಆಗಸ್ಟ್–ಸೆಪ್ಟೆಂಬರ್, 2019

ಸಂಪುಟ – I , ಸಂಖ್ಯೆ – 1

ಪರಿವಿಡಿ

ಭಾಗ–1

ಕರ್ನಾಟಕ ವಿಧಾನಮಂಡಲದ ಸುದ್ದಿಗಳು

ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.
ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

ಭಾಗ – 1

ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು

ಕರ್ನಾಟಕ ವಿಧಾನಮಂಡಲದ ಸುದ್ದಿಗಳು

1. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಯವರು ಸಭಾಧ್ಯಕ್ಷರಾಗಿ ಆಯ್ಕೆ



ವ್ಯಕ್ತಿ ಪರಿಚಯ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ಶಿರಸಿ-ಸಿದ್ದಾಪುರ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಶಾಸಕರಾಗಿದ್ದು, ಕರ್ನಾಟಕ ವಿಧಾನಸಭೆಯಲ್ಲಿ ದಿನಾಂಕ 31.07.2019ರಂದು ನಡೆದ ಸಭಾಧ್ಯಕ್ಷರ ಚುನಾವಣೆ ಪ್ರಕ್ರಿಯೆಯಲ್ಲಿ ಅವಿರೋಧವಾಗಿ ಸದನದ ಅಧ್ಯಕ್ಷರ ಸ್ಥಾನಕ್ಕೆ ಆಯ್ಕೆಯಾಗಿರುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ದಿನಾಂಕ 10ನೇ ಜುಲೈ 1961ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ 10 ಕಿ.ಮೀ. ದೂರದಲ್ಲಿರುವ ಬರೂರಿನಲ್ಲಿ ಶ್ರೀ ಅನಂತ ಹೆಗಡೆ ಹಾಗೂ ಶ್ರೀಮತಿ ಸರ್ವೇಶ್ವರಿ ಹೆಗಡೆರವರ ಮಗನಾಗಿ ಜನಿಸಿರುತ್ತಾರೆ. ಶ್ರೀಯುತರಿಗೆ ನಾಲ್ಕು ಜನ ಸಹೋದರರು (ಶಿವರಾಮ ಹೆಗಡೆ, ಗಣಪತಿ ಹೆಗಡೆ, ಪರಮೇಶ್ವರ್ ಹೆಗಡೆ ಹಾಗೂ ನಾಗಪತಿ ಹೆಗಡೆ) ಮತ್ತು ಇಬ್ಬರು ಸಹೋದರಿಯರು.

ಸದರಿಯವರು ಶಿರಸಿಯ ಬರೂರಿನ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ಶಿರಸಿಯ ಮಾರಿಕಾಂಬ ಸರ್ಕಾರಿ ಪ್ರೌಢ ಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಾಣಿಜ್ಯ ಪದವಿಯನ್ನು ಪಡೆದು ನಂತರ ತಮ್ಮ ಊರಾದ ಶಿರಸಿಯಲ್ಲಿ ಕಾನೂನು ಪದವಿಯ ವ್ಯಾಸಂಗವನ್ನು ಮಾಡಿರುತ್ತಾರೆ.

ಕಾಗೇರಿ ಅವರ ತಂದೆ ಕೃಷಿ ಜೊತೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಇದ್ದವರು ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಸ್ವಯಂ ಸೇವಕರಾಗಿದ್ದರಿಂದ ಶ್ರೀಯುತರು ಸದರಿ ಸಂಘಕ್ಕೆ ಹೋಗಿ ಸ್ವಯಂ ಸೇವಕನಾಗುವಂತಹ ಅವಕಾಶ ಸಿಕ್ಕಿತು. ವಿದ್ಯಾರ್ಥಿಯಾಗಿದ್ದ ಅವಧಿಯಲ್ಲಿ ವಿದ್ಯಾರ್ಥಿ ಚಳುವಳಿಗಳಲ್ಲಿ ಭಾಗವಹಿಸುವುದರ ಮೂಲಕ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪದಾಧಿಕಾರಿಗಳಾಗಿ ಪ್ರಭಾವಿ ನಾಯಕರೆನಿಸಿದರು. ಅಲ್ಲದೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಕಾರ್ಯದರ್ಶಿಯಾಗಿ 5 ವರ್ಷಗಳ ಪೂರ್ಣ ಅವಧಿ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸಿ, ಭ್ರಷ್ಟಾಚಾರ ವಿರೋಧಿ, ಸಾಮಾಜಿಕ, ಶೈಕ್ಷಣಿಕ, ಪರಿಸರ ಸಮಸ್ಯೆಗಳ ಹೋರಾಟಗಳಲ್ಲಿ ಭಾಗಿಯಾಗಿದ್ದರು.

1981-82ರಲ್ಲಿ ಅಸ್ಸಾಂ ಉಳಿಸಿ ಚಳುವಳಿಯಲ್ಲಿ ಪಾಲ್ಗೊಳ್ಳುವುದರ ಮೂಲಕ ಹೆಸರುವಾಸಿಯಾದರು. ಆ ಬಳಿಕ ಅಘನಾಶಿನಿ ಆಂದೋಲನದಲ್ಲಿ ಸಕ್ರಿಯರಾಗಿದ್ದರು. 1990ರಲ್ಲಿ ಸಕ್ರಿಯ ರಾಜಕೀಯಕ್ಕೆ

ಪ್ರವೇಶಿಸುವುದರ ಮೂಲಕ 1994ರ ಅವಧಿಯವರೆವಿಗೆ ಉತ್ತರ ಕನ್ನಡ ಜಿಲ್ಲಾ ಭಾರತೀಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ, ಯುವಮೋರ್ಚ ಪ್ರಧಾನ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿರುತ್ತಾರೆ.

ಶ್ರೀಯುತರು ಸರಳ, ಸಜ್ಜನ, ಮೃದು ಮಾತಿನ ಸೌಮ್ಯ ಸ್ವಭಾವದವರಾಗಿದ್ದು, ವೃತ್ತಿಯಲ್ಲಿ ಕೃಷಿಕರು ಮತ್ತು ಪುಸ್ತಕಗಳನ್ನು ಓದುವುದು ಹಾಗೂ ಕ್ರಿಕೆಟ್ ಇವರ ಮೆಚ್ಚಿನ ಕ್ರೀಡೆಯಾಗಿರುತ್ತದೆ. ಸದರಿಯವರು ಶಿರಸಿಯ ಸ್ವರ್ಣವಲ್ಲಿ ಮಠದಲ್ಲಿ ಉಪಾಧ್ಯಕ್ಷರಾಗಿ, ಸಾಮಾಜಿಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅವರು 1991ರಲ್ಲಿ ಶ್ರೀಮತಿ ಭಾರತಿಯವರನ್ನು ವಿವಾಹವಾಗಿದ್ದು, ಇವರಿಗೆ 3 ಜನ ಹೆಣ್ಣು ಮಕ್ಕಳು ಇರುತ್ತಾರೆ.

1994-1999ರವರೆಗೆ ಮೊದಲ ಬಾರಿಗೆ 10ನೇ ವಿಧಾನಸಭೆಗೆ ಅಂಕೋಲ ಕ್ಷೇತ್ರದಿಂದ ಪ್ರವೇಶಿಸಿದರು. ನಂತರ ಅಂಕೋಲ ಕ್ಷೇತ್ರದಿಂದ ಹನ್ನೊಂದನೆ (1999-2004) ಹಾಗೂ ಹನ್ನೆರಡನೇ (2004-2008) ವಿಧಾನಸಭೆಗೆ ಆಯ್ಕೆಯಾಗಿರುತ್ತಾರೆ. ಕ್ಷೇತ್ರ ಪುನರ್ ವಿಂಗಡಣೆಯ ಪ್ರಕ್ರಿಯೆ ನಡೆದ ನಂತರ ಹೊಸದಾಗಿ ರಚಿಸಲಾದ ಕ್ಷೇತ್ರಕ್ಕೆ 2008-2013, 2013-2018ರ ಚುನಾವಣೆಗಳಲ್ಲಿ ಶಿರಸಿ-ಸಿದ್ದಾಪುರ ಕ್ಷೇತ್ರವನ್ನು ಪ್ರತಿನಿಧಿಸಿ ಶಾಸಕರಾಗಿ ಆಯ್ಕೆಯಾಗಿರುತ್ತಾರೆ. ಅಂದರೆ ಅವರು ತಮ್ಮ ರಾಜಕೀಯ ಜೀವನದಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದಂದಿನಿಂದ ಸತತವಾಗಿ ಈವರೆವಿಗೆ ಗೆಲ್ಲುತ್ತಾ ಶಾಸಕರಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ವಿಧಾನ ಸಭಾಧ್ಯಕ್ಷರಾಗಿರುತ್ತಾರೆ.

ಹನ್ನೆರಡನೇ ವಿಧಾನಸಭೆ (2006)ಯ ಅವಧಿಯಲ್ಲಿ ಶ್ರೀಯುತರು ಮಾನ್ಯ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಹದಿಮೂರನೇ ವಿಧಾನಸಭೆ (2008-13) ಯ ಅವಧಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಂತಹ ಉನ್ನತ ಹುದ್ದೆಯಲ್ಲಿ ಇದ್ದಾಗ್ಯೂ ಸಹ ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ತಮ್ಮ ಊರಿನ ಸರ್ಕಾರಿ ಶಾಲೆಯಲ್ಲಿ ಮಾಡಿಸಿರುತ್ತಾರೆ.

ಜುಲೈ 2011ರಲ್ಲಿ ಕರ್ನಾಟಕ ಸರ್ಕಾರದ ಪಠ್ಯ ಕ್ರಮದಲ್ಲಿ ಭಗವದ್ಗೀತೆಯನ್ನು ಸೇರಿಸಲು ಕರ್ನಾಟಕದಲ್ಲಿ ಅಭಿಯಾನ ನಡೆಯುತ್ತಿದ್ದು, ಶ್ರೀಯುತರು ಆ ಅವಧಿಯಲ್ಲಿ ಸಂಪುಟ ದರ್ಜೆ ಸಚಿವರಾಗಿದ್ದು, ಈ ಕ್ರಮವನ್ನು ಬೆಂಬಲಿಸಿರುತ್ತಾರೆ. ಇದನ್ನು ಹಲವಾರು ಜನರು ವಿರೋಧಿಸಿದರು. ***"ಗೀತಾ ಬೋಧನೆಗಳನ್ನು ವಿರೋಧಿಸುವವರು ಭಾರತವನ್ನು ತೊರೆಯಬೇಕು"*** ಎಂಬ ಹೇಳಿಕೆಗೆ ಸಾಕಷ್ಟು ಟೀಕೆಗೆ ಗುರಿಯಾದರು.

ಶ್ರೀಯುತರು ಚೈನಾ, ಸಿಂಗಾಪುರ, ದುಬೈ ಮತ್ತು ಅಮೆರಿಕಾ ದೇಶಗಳ ಪ್ರವಾಸಗಳನ್ನು ಕೈಗೊಂಡಿರುತ್ತಾರೆ.

ಲೋಕಸಭೆಯ ಸ್ಪೀಕರ್‌ರವರಾದ ಮಾನ್ಯ ಓಂ ಬಿರ್ಲಾ ಇವರ ಅಧ್ಯಕ್ಷತೆಯಲ್ಲಿ ದಿನಾಂಕ **28.08.2019** ರಂದು ನವದೆಹಲಿಯಲ್ಲಿ ನಡೆದ ವಿವಿಧ ರಾಜ್ಯಗಳ ವಿಧಾನ ಸಭಾಧ್ಯಕ್ಷರ ಸಮಾವೇಶದಲ್ಲಿ ಮಾನ್ಯ ಸಭಾಧ್ಯಕ್ಷರವರು ಪಾಲ್ಗೊಂಡಿದ್ದು, ಶಿಸ್ತು ಬದ್ಧವಾಗಿ ಸದನ ನಡೆಸುವುದು, ಇ-ಆಡಳಿತ ವಿಧಾನ ಅಳವಡಿಸಿಕೊಂಡು ಕಾಗದ ರಹಿತ ವಿಧಾನಸಭೆ ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ದಿನಾಂಕ 22ನೇ ಸೆಪ್ಟೆಂಬರ್ 2019 ರಿಂದ 29ನೇ ಸೆಪ್ಟೆಂಬರ್ 2019ರವರೆಗೆ ಹೊರದೇಶದ ಉಗಾಂಡದ ಕಂಪಾಲದಲ್ಲಿ ನಡೆದ 64ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಸಮ್ಮೇಳನದ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಮಾನ್ಯ ಸಭಾಧ್ಯಕ್ಷರು ಭಾಗವಹಿಸಿ ಜಮ್ಮು-ಕಾಶ್ಮೀರ್ ಸದಸ್ಯತ್ವವನ್ನು

ಅಮಾನತ್ತಿನಲ್ಲಿಟ್ಟಿರುವ ವಿಧೇಯಕಕ್ಕೆ ಅನುಮೋದನೆ ನೀಡುವ ವಿಷಯದಲ್ಲಿ ಪಾಕಿಸ್ತಾನ ಅನಗತ್ಯವಾಗಿ ನೀಡಿರುವ ಹೇಳಿಕೆಯನ್ನು ಖಂಡಿಸಿ ಮಾತನಾಡಿರುತ್ತಾರೆ.

2. ಸಂವಿಧಾನ ಭಗವದ್ಗೀತೆ ಇದ್ದಂತೆ

ಶಿರಸಿ–ಸಿದ್ದಾಪುರ ಕ್ಷೇತ್ರದ ಬಿಜೆಪಿ ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ವಿಧಾನಸಭೆಯ ಸಭಾಧ್ಯಕ್ಷರಾಗಿ ದಿನಾಂಕ 31.07.2019ರಂದು ಪೀಠದಲ್ಲಿ ಆಸೀನರಾಗಿ ಮಾತನಾಡುತ್ತಾ ಡಾ:ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿರುವ ಸಂವಿಧಾನವೇ ಶ್ರೇಷ್ಠ. ಸಂವಿಧಾನವು ಭಗವದ್ಗೀತೆ ಇದ್ದಂತೆ, ಅದರ ಚೌಕಟ್ಟಿನಲ್ಲಿ ರೂಪಿತವಾದ ಕಾನೂನನ್ನು ಪ್ರತಿಯೊಬ್ಬರು ಪಾಲಿಸಬೇಕೆಂದರು.

ಸಂವಿಧಾನದಡಿ ರಾಜ್ಯ ವಿಧಾನಮಂಡಲದ ನಿಯಮಾವಳಿಯ ಪ್ರಕಾರವೇ ಕಾರ್ಯವನ್ನು ನಿರ್ವಹಿಸುವುದಾಗಿ ತಿಳಿಸುತ್ತಾ, ಸದನದಲ್ಲಿ ಹೊಸ ಸದಸ್ಯರಿಗೆ ಹೆಚ್ಚು ಮಾತನಾಡಲು ಅವಕಾಶ ನೀಡುವುದಾಗಿ ಹಾಗೂ ಸದಸ್ಯರು ಪೂರ್ಣ ಪ್ರಮಾಣದಲ್ಲಿ ಸದನದಲ್ಲಿ ಹಾಜರಿದ್ದು, ಚರ್ಚೆಯಲ್ಲಿ ಭಾಗಿಯಾಗಬೇಕೆಂದು ತಿಳಿಸಿದರು. ಎಲ್ಲರೂ ಸಂವಿಧಾನದ ಚೌಕಟ್ಟಿನಲ್ಲಿ ಕಾನೂನನ್ನು ಅಕ್ಷರಶ ಪಾಲಿಸಬೇಕು. ನಮ್ಮ ದೇಶಕ್ಕೆ ಸಂವಿಧಾನವೇ ಇಲ್ಲದಿದ್ದರೆ ಈಗ ಪರಿಸ್ಥಿತಿ ಹೇಗಿರುತ್ತಿತ್ತು ಎಂಬುದು ಊಹಿಸುವುದು ಕಷ್ಟವೆಂದು ಹೇಳಿದರು.

ಆಧಾರ –ಉದಯವಾಣಿ/ಪ್ರಜಾವಾಣಿ, 01.08.2019

3. ಮಾದರಿ ವಿಧಾನಸಭೆ ಮಾಡಲು ಪ್ರಯತ್ನ

ಸಭಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ಶಿರಸಿಯಲ್ಲಿ ಕ್ಷೇತ್ರದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ, ಕರ್ನಾಟಕ ವಿಧಾನ ಸಭಾಧ್ಯಕ್ಷನಾಗಿ ಸದನವನ್ನು ಅಚ್ಚುಕಟ್ಟಾಗಿ ಮುನ್ನಡೆಸಿ ದೇಶದ ಮಟ್ಟದಲ್ಲಿ ಮಾದರಿ ವಿಧಾನಸಭೆ ಮಾಡಲು ಎಲ್ಲಾ ಪ್ರಯತ್ನ ಮಾಡುವುದಾಗಿ ತಿಳಿಸಿ, ಸದನದಲ್ಲಿ ಹಿರಿಯರು, ಅನುಭವಿಗಳ ದೊಡ್ಡ ತಂಡವಿರುವುದರಿಂದ ಅವರುಗಳ ಸಲಹೆ ಪಡೆದು ನಾಡಿನ ಜನತೆಯ ಧ್ವನಿಗೆ ಧ್ವನಿಯಾಗುವ ರೀತಿಯಲ್ಲಿ ಸದನವನ್ನು ಮುನ್ನಡೆಸಿಕೊಂಡು ಹೋಗಲು ಪ್ರಯತ್ನಿಸುವುದಾಗಿ ತಿಳಿಸಿದರು.

ಆಧಾರ – ವಿಶ್ವವಾಣಿ, 04.08.2019

4. ಸಭಾಧ್ಯಕ್ಷರ ನಡೆ ಸ್ವಾಗತಾರ್ಹ

ಯಾವುದೇ ವಿಧೇಯಕಕ್ಕೆ ಸದನದಲ್ಲಿ ಕನಿಷ್ಠ 10 ಸದಸ್ಯರು ಭಾಗವಹಿಸಿ ಚರ್ಚೆ ನಡೆಸದಿದ್ದರೆ ಆ ವಿಧೇಯಕವನ್ನು ಅನುಮೋದನೆಗಾಗಿ ಮತಕ್ಕೆ ಹಾಕದಿರಲು ನೂತನ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಯವರು ದಿಟ್ಟ ನಿರ್ಧಾರ ಕೈಗೊಂಡಿರುತ್ತಾರೆ. ಶಾಸನ ಸಭೆಯ ಕಲಾಪದ ಗುಣಮಟ್ಟ ಸುಧಾರಣೆಯಲ್ಲಿ ಈ ನಿರ್ಧಾರ ಮಹತ್ವದ ಹೆಜ್ಜೆಯಾಗಲಿದೆ.

ಭಾರತದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಿದ ಸಂಸ್ಥೆಗಳ ಪೈಕಿ ಕರ್ನಾಟಕ ವಿಧಾನಸಭೆಯ ಪಾತ್ರವೂ ಹಿರಿದಾಗಿದ್ದು, ಅದಕ್ಕೆ ತನ್ನದೇ ಆದ ಘನತೆ ಇದೆ. ಸದನದಲ್ಲಿ ನಡೆದ ಚರ್ಚೆಗಳು, ತೆಗೆದುಕೊಂಡ ತೀರ್ಮಾನಗಳು ದೇಶದ ಬೇರೆ–ಬೇರೆ ರಾಜ್ಯದ ವಿಧಾನಸಭೆಗಳಲ್ಲಿ ಉಲ್ಲೇಖಗೊಂಡು ಸಂಸತ್ತಿನಲ್ಲೂ ಮೆಚ್ಚುಗೆಗಳಿಸಿವೆ. ಯಾವುದೇ ಒಂದು ವಿಷಯದ ಬಗ್ಗೆ ಹೊಸ ಕಾನೂನಿನ ಬಗ್ಗೆ ಕರ್ನಾಟಕ ವಿಧಾನಸಭೆ ಚರ್ಚೆ ಮಾಡುತ್ತಿದೆ ಎಂದರೆ ಇಡೀ ದೇಶವೇ ಕಿವಿಯಾಗಿ ಆಲಿಸುತ್ತಿತ್ತು.

ಆದರೆ, ಇತ್ತೀಚಿನ ವರ್ಷಗಳಲ್ಲಿ ವಿಧಾನಸಭೆಯಲ್ಲಿ ನಡೆಯುವ ಚರ್ಚೆಗಳ ಗುಣಮಟ್ಟ ಕುಸಿದಿದೆ. ಯಾವುದೇ ನೀತಿ ನಿರೂಪಣೆಯನ್ನು ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹಾಗಾಗಿ, ಸಂವಾದಕ್ಕೆ

ಆಸ್ಪದವೇ ಇಲ್ಲ. ಒಮ್ಮೊಮ್ಮೆ ಮಂಡನೆಯಾಗುವ ವಿಧೇಯಕಗಳ ಬಗ್ಗೆ ಶಾಸಕರುಗಳಿಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಹಾಗಿದ್ದ ಮೇಲೆ ಅದರ ಮೇಲೆ ಗಂಭೀರ ಚರ್ಚೆಯನ್ನು ನಿರೀಕ್ಷಿಸುವುದು ಹೇಗೆ ಈ ಪ್ರಮಾದಕ್ಕೆ ಆಡಳಿತ ಮತ್ತು ಪ್ರತಿಪಕ್ಷಗಳೆರಡೂ ಕಾರಣ. ಎರಡೂ ಕಡೆಯಿಂದಲೂ ತಮ್ಮದೇ ಆದ ಅಜೆಂಡಾಗಳನ್ನು ಮುಂದಿಟ್ಟುಕೊಂಡು ಗದ್ದಲದ ಕಲಾಪಕ್ಕೆ ಕಾರಣರಾಗುತ್ತಾರೆ. ಈ ಪ್ರವೃತ್ತಿ ಯಾವುದೇ ಒಂದು ಪಕ್ಷಕ್ಕೆ ಮಾತ್ರ ಸೀಮಿತವಾಗಿಲ್ಲ. ಸದನದಲ್ಲಾಗುವ ಈ ಪ್ರಮಾದದ ಪರಿಣಾಮಗಳು ವಿಧೇಯಕವು ಕಾನೂನಾಗಿ ಜಾರಿಗೊಳ್ಳುವ ಸಂದರ್ಭದಲ್ಲಿ ವಿಫಲಗೊಳ್ಳುತ್ತವೆ.

ವರ್ಷಕ್ಕೆ ಕನಿಷ್ಠ 60 ದಿನಗಳಾದರೂ ಅಧಿವೇಶನ ನಡೆಯಬೇಕು. ಇತ್ತೀಚಿನ ವರ್ಷಗಳಲ್ಲಿ ಇಷ್ಟು ಪ್ರಮಾಣದಲ್ಲಿ ಅಧಿವೇಶನ ನಡೆದ ಉದಾಹರಣೆಗಳೇ ಇಲ್ಲ. ನಡೆಯುವ ಅಲ್ಪಕಾಲದ ಅಧಿವೇಶನವು ಕೂಡ ಗದ್ದಲ, ಪ್ರತಿಷ್ಠೆಯ ಒಣ ಚರ್ಚೆಯಲ್ಲೇ ಕಳೆದು ಹೋಗಿ ಬಿಡುತ್ತದೆ.

ನಿರ್ದಿಷ್ಟ ದಿನಗಳಿಗೆ ಅಧಿವೇಶನ ಕರೆದು, ಮುಕ್ತಾಯದ ದಿನ ಒಮ್ಮೆಗೆ ಎಲ್ಲಾ ವಿಧೇಯಕಗಳನ್ನು ಮಂಡಿಸಿ ಅನುಮೋದನೆ ಪಡೆದುಕೊಳ್ಳುವ ಕೆಟ್ಟ ಸಂಪ್ರದಾಯ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಎಸ್. ನಿಜಲಿಂಗಪ್ಪ, ದೇವರಾಜ ಅರಸು, ರಾಮಕೃಷ್ಣ ಹೆಗಡೆ ಅವರ ಕಾಲಘಟ್ಟದಲ್ಲಿ ಈ ವಿಧಾನಸಭೆ ಅತ್ಯದ್ಭುತವಾದ ಚರ್ಚೆಗೆ ಸಾಕ್ಷಿಯಾಗಿದೆ. ಆಗ ಜನಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅಂತದೇ ಪರಿಸ್ಥಿತಿಯನ್ನು ಸೃಷ್ಟಿಸುವುದು ಅಸಾಧ್ಯವಾದುದೇನಲ್ಲ. ವಿಧಾನಸಭೆಯ ಪೋಷಕರಾಗಿರುವ ಸ್ಪೀಕರ್‌ರವರು ಈ ದಿಸೆಯಲ್ಲಿ ಒಂದಿಷ್ಟು ಗಂಭೀರ ಕ್ರಮಗಳನ್ನು ಕೈಗೊಂಡರೆ ಸಾಧ್ಯವಾದೀತು.

ಆಧಾರ–ವಿಜಯ ಕರ್ನಾಟಕ, 11.09.2019

5. ವಿಧಾನ ಸಭಾಧ್ಯಕ್ಷರಾಗಿ ಉಪಸ್ಥಿತರಾದ ಸಂದರ್ಭ ಮತ್ತು ಭಾಷಣ



ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಾಗ ಸರ್ವಾನುಮತದಿಂದ ವಿಧಾನಸಭಾಧ್ಯಕ್ಷರಾಗಿ ಆಯ್ಕೆಗೊಂಡಿದ್ದ ವಿಧಾನ ಸಭಾಧ್ಯಕ್ಷರಾದ ಮೈತ್ರಿ ಸರ್ಕಾರವು ಪತನಗೊಂಡಿದ್ದರೂ ಸಹ ಸಭಾಧ್ಯಕ್ಷರ ಸ್ಥಾನದಲ್ಲಿದ್ದು ದಿನಾಂಕ 29.07.2019ರಂದು ನಡೆದ ಅಧಿವೇಶನದ ಅವಧಿಯಲ್ಲಿ ರಾಜ್ಯ ಧನವಿನಿಯೋಗವನ್ನು ಅಂಗೀಕರಿಸಿದ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿರುತ್ತಾರೆ.

ಶ್ರೀ ಕೆ. ಆರ್. ರಮೇಶ್ ಕುಮಾರ್‌ರವರು ರಾಜೀನಾಮೆ ನೀಡುತ್ತಿದ್ದಂತೆ ದಿನಾಂಕ:30.07.2019ರಂದು ಬಿ.ಜೆ.ಪಿ ಸರ್ಕಾರವು ನೂತನ ಸಭಾಧ್ಯಕ್ಷರ ಆಯ್ಕೆಯ ಪ್ರಕ್ರಿಯೆಗೆ ಚಾಲನೆಯನ್ನು ನೀಡಿದ್ದು, ಅದರಂತೆ,

ವಿಧಾನಸಭೆಯ ಸಭಾಧ್ಯಕ್ಷರಾಗಿ ಶಿರಸಿ–ಸಿದ್ಧಾಪುರ ಕ್ಷೇತ್ರದ ಬಿಜೆಪಿ ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಅವಿರೋಧವಾಗಿ ಆಯ್ಕೆಯಾದರು. ಸದರಿಯವರು ದಿನಾಂಕ:31.07.2019ರಂದು ಪೀಠದಲ್ಲಿ ಆಸೀನರಾದ ನಂತರ ತಮ್ಮ ಭಾಷಣವನ್ನು ಮಾಡಿದರು.

ಸಭಾಧ್ಯಕ್ಷರ ಸ್ಥಾನಕ್ಕೆ ನನ್ನನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಮೊದಲಿಗೆ ದೇವರುಗಳನ್ನು ಆರಾಧಿಸುತ್ತಾ, ನನ್ನ ತಂದೆ ತಾಯಿ, ಕ್ಷೇತ್ರದ ಜನತೆ ಹಾಗೂ ರಾಜ್ಯದ ಜನತೆಯನ್ನು ಸ್ಮರಿಸಿಕೊಳ್ಳುತ್ತಾ ಹೃದಯಪೂರ್ವಕವಾಗಿ ಕೃತಜ್ಞತೆ ಹಾಗೂ ಧನ್ಯವಾದಗಳನ್ನು ಸಲ್ಲಿಸಿದರು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಬಿ.ಎಸ್.ಯಡಿಯೂರಪ್ಪ ಹಾಗೂ ಇತರೆ ಮಾನ್ಯ ಹಿರಿಯ ನಾಯಕರುಗಳು, ಅನುಭವಿಗಳು ಪ್ರಮುಖರು ನನ್ನ ಕುರಿತಂತೆ ಒಳ್ಳೆಯ ಮಾತುಗಳನ್ನು ಆಡುವುದರ ಜೊತೆಗೆ, ಎಚ್ಚರಿಕೆಯ ಮಾತುಗಳನ್ನು ನನಗೆ ತಿಳಿಸಿರುತ್ತೀರಿ ಎಂದರು.

ರಾಜ್ಯದ ಜನರ ಕಷ್ಟವನ್ನು ದೂರ ಮಾಡುವಂತಹ ಸದನವಾಗಬೇಕಾಗಿರುವುದು ನಮ್ಮೆಲ್ಲರ ಅಭಿಪ್ರಾಯವಾಗಿರುವುದರಿಂದ ಸದನದ ಘನತೆ ಗೌರವವನ್ನು ನಾವೆಲ್ಲರೂ ಸೇರಿ ಹೆಚ್ಚಿಸಬೇಕೆನ್ನುವಂತಹ ಭಾವನೆಯನ್ನು ಎಲ್ಲರೂ ವ್ಯಕ್ತಪಡಿಸಿರುವುದರಿಂದ ಮತ್ತೊಮ್ಮೆ ತಮ್ಮೆಲ್ಲರಿಗೂ ವೈಯಕ್ತಿಕವಾಗಿ ಅಭಿನಂದಿಸುತ್ತಾ ಈ ಸ್ಥಾನಕ್ಕೆ ಬಂದಿರುವ ಹಿನ್ನೆಲೆಯನ್ನು ನೋಡಿದಾಗ ಒಂದು ಪ್ರಶ್ನಾರ್ಥಕ ಚಿಹ್ನೆ ಎಲ್ಲರಲ್ಲೂ ಮೂಡಿರುತ್ತದೆಂದರು.

ನಾನು ಕೃಷಿ ಕುಟುಂಬದಲ್ಲಿ ಹುಟ್ಟಿದ್ದರಿಂದ ಶಿರಸಿ ತಾಲ್ಲೂಕಿನ 10ಕಿ.ಮೀ. ದೂರದಲ್ಲಿರುವ ಕಾಗೇರಿಯಲ್ಲಿ ವಾಸಿಸುತ್ತಿದ್ದು, ನನ್ನ ತಂದೆಯವರು ಕೃಷಿ ಕ್ಷೇತ್ರದ ಜೊತೆಗೆ ಸಹಕಾರಿ ಕ್ಷೇತ್ರದಲ್ಲಿದ್ದು ಹಾಗೂ ರಾಷ್ಟ್ರೀಯ ಸ್ವಯಂ ಸೇವಕರಾಗಿದ್ದರಿಂದ ನಾನು ಬಾಲ್ಯದಿಂದಲೂ ಆ ಸಂಘದ ಶಾಖೆಗಳಿಗೆ ಭೇಟಿ ನೀಡಿದ್ದರಿಂದ ಸಂಘದ ಸ್ವಯಂ ಸೇವಕನಾಗುವಂತಹ ಅವಕಾಶ ಸಿಕ್ಕಿರುವುದಾಗಿ ತಿಳಿಸಿದರು. ನಾನು ಧಾರವಾಡದಲ್ಲಿ ವ್ಯಾಸಂಗ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ತಿನ ಸಂಪರ್ಕವನ್ನು ಹೊಂದಿ ಅನೇಕ ಜವಾಬ್ದಾರಿಯನ್ನು ನಿರ್ವಹಿಸುವುದರ ಮೂಲಕ ಪೂರ್ಣಾವಧಿ ಕಾರ್ಯಕರ್ತನಾಗಿರುತ್ತೇನೆ. 5 ವರ್ಷಗಳು ರಾಜ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿ 1985ನೇ ಸಾಲಿನಿಂದ 1990ನೇ ಸಾಲಿನವರೆಗೆ ಇಡೀ ರಾಜ್ಯವನ್ನು ಸುತ್ತಿ ಶಿಕ್ಷಣ ಕ್ಷೇತ್ರದ ಮೂಲಕ ವಿದ್ಯಾರ್ಥಿಗಳ ಮಧ್ಯ ಒಂದು ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸುವಂತಹ ಪ್ರಯತ್ನವು ಹಿರಿಯರಾದಂತಹ ಶ್ರೀ ಪಿ.ವಿ.ಕೃಷ್ಣ ಭಟ್, ಶ್ರೀ ದತ್ತಾತ್ರೆಯ ಹೊಸ ಬಾಳೆ, ಶ್ರೀ ಅನಂತಕುಮಾರ್, ಮುಂತಾದ ಹಿರಿಯರ ನೇತೃತ್ವದ ಮಾರ್ಗದರ್ಶನದಲ್ಲಿ ಒದಗಿ ಬಂದಿದ್ದು, ಆ ಸಂದರ್ಭದಲ್ಲಿ ನಡೆದಂತಹ ಅನೇಕ ಹೋರಾಟಗಳು, ಚಳುವಳಿಗಳು ರಾಷ್ಟ್ರಮಟ್ಟದಿಂದ ಹಿಡಿದು ರಾಜ್ಯದ ಹಲವು ರೀತಿಯ ಸಮಸ್ಯೆಗಳ ಬಗ್ಗೆ ಸ್ನೇಹಿತರುಗಳಾದ ಶ್ರೀ ಅರವಿಂದ ಲಿಂಬಾವಳಿ, ಶ್ರೀ ಸಿ.ಟಿ.ರವಿ, ಶ್ರೀ ಸುನೀಲ್ ಕುಮಾರ್ ಹಾಗೂ ಇತರರೊಂದಿಗೆ ಜೊತೆಗೂಡಿ ಹೋರಾಟವನ್ನು ಮಾಡಿರುತ್ತೇನೆ.

1990ನೇ ಸಾಲಿನಲ್ಲಿ ಕಾಗೇರಿಯಲ್ಲಿ ಹಿರಿಯರಾದಂತಹ ಡಾ:ಎಂ.ಪಿ.ಕರ್ಕಿ, ಚಿತ್ತರಂಜನ್ ಹಾಗೂ ಅನೇಕರು ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯ ಜವಾಬ್ದಾರಿಯನ್ನು ನೀಡಿದ ಸಂದರ್ಭದಲ್ಲಿ ಶ್ರೀಯುತರಾದ ಯಡಿಯೂರಪ್ಪ ಮತ್ತು ಅನಂತಕುಮಾರ್ ಇವರುಗಳು ಯುವ ಮೋರ್ಚಾ ರಾಜ್ಯದ ಪ್ರಧಾನ ಕಾರ್ಯದರ್ಶಿ ಕಾರ್ಯವನ್ನು ನಿರ್ವಹಿಸಲು ತಿಳಿಸಿದಾಗ್ಗಿನಿಂದಲೂ ನಿರಂತರವಾಗಿ ಸದರಿ ಪಕ್ಷದ ರಾಜ್ಯಾಧ್ಯಕ್ಷನಾಗಿ ಕಾರ್ಯನಿರ್ವಹಿಸಿರುತ್ತೇನೆ.

1994ನೇ ಸಾಲಿನಲ್ಲಿ ಶ್ರೀಯುತರಾದ ಬಿ.ಎಸ್. ಯಡಿಯೂರಪ್ಪ, ಅನಂತಕುಮಾರ್ ಮತ್ತು ಈಶ್ವರಪ್ಪ ಇವರುಗಳು ಯುವಕರು ರಾಜಕೀಯ ಮೂಲಕ ಭಾರತೀಯ ಜನತಾ ಪಕ್ಷಕ್ಕೆ ಹೆಚ್ಚಾಗಿ ಸೇರಿಕೊಳ್ಳಬೇಕೆಂದು ಹಾಗೂ ನನ್ನನ್ನು ಅಂಕೋಲ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಬೇಕೆಂದು ತಿಳಿಸಿದ್ದರ ಹಿನ್ನೆಲೆಯಲ್ಲಿ ಇಂದಿಗೂ ನಿರಂತರವಾಗಿ ಗೆಲ್ಲುತ್ತಿರುವುದಕ್ಕೆ ನನ್ನ ಕ್ಷೇತ್ರದ ಮತದಾರರ ಪ್ರೀತಿ, ವಿಶ್ವಾಸ ಹಾಗೂ ಕೌಟುಂಬಿಕವಾದಂತಹ

ವಾತಾವರಣದಲ್ಲಿ ಬೆಳೆದಿರುವಂತಹ ಹಿನ್ನೆಲೆಯೇ ಕಾರಣವಾಗಿರುವುದರಿಂದ ನನ್ನ ಕ್ಷೇತ್ರದ ಜನತೆಯನ್ನು ಹಾಗೂ ಪಕ್ಷದಲ್ಲಿ ಅವಕಾಶವನ್ನು ಕೊಟ್ಟಿರುವಂತಹ ಎಲ್ಲಾ ಹಿರಿಯರನ್ನು ಸ್ಮರಿಸಿಕೊಳ್ಳುತ್ತಾ ಅಭಿನಂದಿಸಿದರು.

ಇಲ್ಲಿಯವರೆಗೆ ಶ್ರೀಯುತರುಗಳಾದ ಶ್ರೀ ಎಂ.ವಿ. ವೆಂಕಟಪ್ಪ, ಶ್ರೀ ಕೃಷ್ಣ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಕೆ.ಜಿ.ಬೋಪಯ್ಯ, ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ಕೋಳಿವಾಡ್ ಹಾಗೂ ಶ್ರೀ ರಮೇಶ್ ಕುಮಾರ್ ಇವರುಗಳೆಲ್ಲರೂ ಸದನವನ್ನು ನಡೆಸಿರುವುದನ್ನು ನಾವೆಲ್ಲರೂ ನೋಡಿದ್ದು, ಸದನದ ಘನತೆ ಗೌರವ ಪಾವಿತ್ರ್ಯತೆಯ ಬಗ್ಗೆ ಎಲ್ಲರಿಗೂ ಅರಿವು ಇರುತ್ತದೆಂದು ತಿಳಿಸಿದರು.

1952ನೇ ಸಾಲಿನಿಂದ ಈವರೆವಿಗೂ ಸುಮಾರು 21 ಜನ ಸಭಾಧ್ಯಕ್ಷರಾಗಿ ಜವಾಬ್ದಾರಿಯನ್ನು ನಿರ್ವಹಿಸಿರುತ್ತಾರೆ ಹಾಗೂ 22ನೇ ಸಭಾಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸಂದರ್ಭ ನನಗೆ ಒದಗಿ ಬಂದಿರುವುದಾಗಿ ತಿಳಿಸಿದರು. ಎಲ್ಲಾ ಹಿರಿಯರು ಸದನದ ಘನತೆ ಗೌರವವನ್ನು ಹೆಚ್ಚಿಸಬೇಕು, ಜನರ ಅಪೇಕ್ಷೆಯನ್ನು ಈಡೇರಿಸುವುದಕ್ಕೆ ಆಯ್ಕೆಯಾಗಿ ಬಂದಿರುವ ನಾವೆಲ್ಲರೂ ಬದ್ಧತೆಯಿಂದ ಕೆಲಸ ಮಾಡಲು ನಿರಂತರವಾಗಿ ಶ್ರಮಿಸಬೇಕು. ನಿರಂತರವಾಗಿ ಕೆಲಸ ನಿರ್ವಹಿಸಿರುವಂತಹ ಹಿರಿಯರಾದ ಶ್ರೀ ವೈಕುಂಠ ಬಾಳಿಗಾ, ಶ್ರೀ ಎಸ್.ಆರ್.ಕಂಠಿ, ಶ್ರೀ ಎಸ್.ಎಂ.ಕೃಷ್ಣ ಹಾಗೂ ಇತರರನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮನುಷ್ಯರಾಗಿ ಹುಟ್ಟುವುದು ಅದೆಷ್ಟೋ ಜನ್ಮದ ಪುಣ್ಯ. ಮನುಷ್ಯರಾಗಿ ಹುಟ್ಟಿದ ಮೇಲೆ ಜನರಿಂದ ಆಯ್ಕೆಯಾದ ಮೇಲೆ 224 ಸದಸ್ಯರಲ್ಲಿ ಒಬ್ಬನಾಗುವಂತಹ ಅವಕಾಶ ಸಿಕ್ಕಿರುವುದು ಒಂದು ಪುಣ್ಯ ಎಂದು ಉಲ್ಲೇಖಿಸುತ್ತಾ, ಆ ಜವಾಬ್ದಾರಿಯನ್ನು ಅರ್ಥೈಸಿಕೊಂಡು ಜನರ ಕಷ್ಟ ಸುಖಗಳಿಗೆ ಧ್ವನಿಯಾಗುವುದು ಹಾಗೂ ಪ್ರಾಮಾಣಿಕವಾಗಿ ಬದ್ಧತೆಯ ಒಂದು ಪ್ರಯತ್ನವನ್ನು ಮಾಡಲೇಬೇಕಾದಂತಹ ಹೊಣೆಗಾರಿಕೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಮೌಲ್ಯ ಹಾಳಾಗುತ್ತಿದೆ. ಅದನ್ನು ಸರಿಪಡಿಸುವ ಜವಾಬ್ದಾರಿ, ನಮ್ಮ ಬದ್ಧತೆಯಲ್ಲಿ ಯಾವ ಕೊರತೆಯೂ ಆಗದಂತಹ ಸಂದರ್ಭ ನಿರ್ಮಿಸಬೇಕು. ಹೊಸ ಸದಸ್ಯರುಗಳು ಹೆಚ್ಚು ಸಮಯ ಸದನದಲ್ಲಿ ಹಾಜರಿದ್ದು ಕಲಾಪಗಳನ್ನು ವೀಕ್ಷಿಸಬೇಕು. ಜನರು ಭ್ರಮನಿರಸನಗೊಂಡು ಆಕ್ರೋಶಗೊಂಡರೆ ಅದು ಕ್ರಾಂತಿಗೆ ಕಾರಣವಾಗುತ್ತದೆ. ಹೀಗಾಗಿ ನಾವು ನಮ್ಮ ಸಂವಿಧಾನದ ಚೌಕಟ್ಟಿನೊಳಗೆ ಇರುವ ಕಾನೂನು ನಿಯಮಾವಳಿಗಳಡಿ ಕೆಲಸ ನಿರ್ವಹಿಸಬೇಕೆಂದರು.

ಡಾ:ಅಂಬೇಡ್ಕರ್‌ರವರು ದೇಶಕ್ಕೆ ನೀಡಿರುವಂತಹ ಸಂವಿಧಾನ ಅತ್ಯಂತ ಶ್ರೇಷ್ಠ ಗ್ರಂಥ. ಸಂವಿಧಾನ ಭಗವದ್ಗೀತೆ ಇದ್ದಂತೆ. ಸಂವಿಧಾನದ ಚೌಕಟ್ಟಿನಲ್ಲಿ ರೂಪಿತವಾದ ಕಾನೂನನ್ನು ಪ್ರತಿಯೊಬ್ಬರು ಪಾಲಿಸಬೇಕು.

ಸಾರ್ವಜನಿಕ ಜೀವನದಲ್ಲಿ ಸಂವಿಧಾನವನ್ನು ಒಪ್ಪುವಂತಹವರು ಅದರ ಚೌಕಟ್ಟಿನಲ್ಲಿಯೇ ರೂಪಿಸಿಕೊಳ್ಳಬೇಕೆನ್ನುವ ಜವಾಬ್ದಾರಿಯ ಅರಿವು ಹಾಗೂ ನಂಬಿರುವಂತಹ ವಿಚಾರಗಳು ಸಮಾಜಕ್ಕೆ, ರಾಷ್ಟ್ರಕ್ಕೆ ಪೂರಕವಾಗಿಯೇ ಇದ್ದಾಗ ಅದು ಹಾಗೆಯೇ ಆಗಲಿ ಎಂದು ಬಯಸುವವನು ನಾನು ಎಂದರು.

ನಾನು ರಾಷ್ಟ್ರೀಯ ಸ್ವಯಂ ಸೇವಕ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಮತ್ತು ಭಾರತೀಯ ಜನತಾ ಪಕ್ಷದ ಎಲ್ಲಾ ಸ್ಥಾನವನ್ನು ನಿರ್ವಹಿಸಿರುವುದಾಗಿ ತಿಳಿಸಿದರು. ಜನತೆ ಸಾಕಷ್ಟು ಸಂಕಷ್ಟ ಎದುರಿಸುತ್ತಿದ್ದು, ಅವರ ಕಷ್ಟಗಳಿಗೆ ಜನ ಪ್ರತಿನಿಧಿಗಳು ಸ್ಪಂದಿಸಬೇಕು. ಹೋರಾಟ ಹಿನ್ನೆಲೆಯಿಂದ ಬಂದಿರುವ ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು ಇವರಿಗೆ ಜನರ ಕಷ್ಟಗಳ ಅರಿವಿದೆ. ನಾವೆಲ್ಲರೂ ಸೇರಿ ಜನರ ಆಶೋತ್ತರಗಳಿಗೆ ಧ್ವನಿಯಾಗಬೇಕಾದಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿ ಹಾಗೂ ಸದನದ ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಿದರು.

ಕಾರ್ಯಾಂಗದ ಅಧಿಕಾರಿಗಳಲ್ಲಿ ಬೇಜವಾಬ್ದಾರಿ ಪ್ರವೃತ್ತಿ ಹೆಚ್ಚಿದೆ. ಸರ್ಕಾರ ಅಂತ್ಯ ಸಂಸ್ಕಾರಕ್ಕೆಂದು ಕೊಟ್ಟ ಹಣ ಮೂರು ತಿಂಗಳಾದರೂ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಇದನ್ನು ಗಮನಿಸಿದರೆ ಅಧಿಕಾರಿಗಳಲ್ಲಿ ಎಷ್ಟರಮಟ್ಟಿಗೆ ಬೇಜವಾಬ್ದಾರಿ ಇದೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆಡಳಿತ

ಯಂತ್ರದಲ್ಲಿರುವಂತಹ ಶಿಥಿಲತೆ ಹಾಗೂ ಜನಪರವಾದಂತಹ ಒಂದು ಧೋರಣೆ ನಿಲುವು ಇಲ್ಲದೇ ಇರುವುದರಿಂದ ಇವತ್ತಿಗೂ ಸಾಮಾನ್ಯ ಜನ ಕಷ್ಟಪಡುವಂತಾಗಿದೆ. ಸಾಮಾಜಿಕ ಭದ್ರತಾ ಯೋಜನಾ ಕಾರ್ಯಕ್ರಮಗಳು, ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ನಿರಂತರವಾಗಿ ಆಯವ್ಯಯದಲ್ಲಿ ತೋರಿಸುವಂತಹ ಬದ್ಧತೆಗಳು ಕಾರ್ಯರೂಪದಲ್ಲಿ ವ್ಯಕ್ತವಾಗಬೇಕು. ಹಾಗಾಗಿ ಕಾರ್ಯಾಂಗದ ಜವಾಬ್ದಾರಿಯೂ ಸಹ ಅಷ್ಟೆ ಪ್ರಾಮುಖ್ಯವಾದುದ್ದು. ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗದವರು ಪರಸ್ಪರ ವಿಶ್ವಾಸದಲ್ಲಿ ಕಷ್ಟದಲ್ಲಿರುವಂತಹ ಜನರ ಧ್ವನಿಯಾಗುವುದಕ್ಕೆ ಅಗತ್ಯವಿರುವಂತಹ ಬದ್ಧತೆಯನ್ನು ನಾವೆಲ್ಲರೂ ತೋರಿಸೋಣವೆಂದು ವಿನಂತಿಸಿದರು.

ನಾನು 1994ರಲ್ಲಿ ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿ ವಿಧಾನಸಭೆಗೆ ಬಂದಾಗ ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರು ಮಾನ್ಯ ಸಭಾಧ್ಯಕ್ಷರಾಗಿದ್ದರು ಹಾಗೂ ಹಲವು ಸಭಾಧ್ಯಕ್ಷರೊಂದಿಗೆ ಸದಸ್ಯನಾಗಿ ಕಾರ್ಯನಿರ್ವಹಿಸಿರುತ್ತೇನೆ. ಹೊಸ ಸದಸ್ಯರುಗಳಿಗೆ ಸದನದಲ್ಲಿ ಮಾತನಾಡಲು ಅವಕಾಶ ಹೆಚ್ಚಾಗಿ ಸಿಗಬೇಕಾಗಿರುವ ಜವಾಬ್ದಾರಿಯಿದ್ದು ಅವರುಗಳನ್ನು ಈ ಕ್ಷೇತ್ರದಲ್ಲಿ ಬೆಳೆಸಿ, ಕ್ಷೇತ್ರದ ಜನತೆಯ ಭಾವನೆಗಳಿಗೆ ಧ್ವನಿಯಾಗುವಂತಹ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿರುವುದರಿಂದ ಸದನವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಸುವುದಕ್ಕೆ ಪ್ರಯತ್ನ ಮಾಡೋಣ ಹಾಗೂ ಸದನದ ಕಾರ್ಯಕಲಾಪ ನಡೆಯುವುದಕ್ಕೆ ಸಚಿವಾಲಯವು ಸಹ ಹೇಗೆ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಪ್ರತ್ಯೇಕವಾಗಿ ಚರ್ಚಿಸಿ ಸುಧಾರಣೆ ತರಬೇಕಾದಂತಹ ಪ್ರಯತ್ನವನ್ನು ಎಲ್ಲಾ ಹಿರಿಯರ ಸಲಹೆ ಸೂಚನೆಗಳನ್ನು ಪಡೆದು ತಮ್ಮ ಪ್ರಯತ್ನವನ್ನು ಮುಂದುವರೆಸುವುದಾಗಿ ತಿಳಿಸಿದರು.

ವಿಶೇಷವಾಗಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಅಮಿತ್ ಶಾ, ಕಾರ್ಯಾಧ್ಯಕ್ಷರಾದ ಶ್ರೀ ಜೆ.ಪಿ.ನಡ್ಡಾ, ಮಾನ್ಯ ಮುಖ್ಯಮಂತ್ರಿಯಾದ ಶ್ರೀ ಬಿ.ಎಸ್.ಯಡಿಯೂರಪ್ಪ ಹಾಗೂ ಎಲ್ಲಾ ಸದಸ್ಯರುಗಳಿಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಮುಂದಿನ ದಿನಗಳಲ್ಲಿ ನಾವೆಲ್ಲರೂ ಸದನದ ಘನತೆ ಗೌರವವನ್ನು ಹೆಚ್ಚಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡೋಣವೆಂದು ತಿಳಿಸಿದರು.

6. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಅಭಿನಂದಿಸಿ ವಿವಿಧ ಪಕ್ಷಗಳ ನಾಯಕರು ವ್ಯಕ್ತಪಡಿಸಿದ ಅನಿಸಿಕೆಗಳು:

ದಿನಾಂಕ: 31ನೇ ಜುಲೈ 2019ರಂದು ನಡೆದ 15ನೇ ವಿಧಾನಸಭೆಯ 4ನೇ ಅಧಿವೇಶನದ ಉಪವೇಶನದಲ್ಲಿ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ಸಭಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಗೊಂಡು, ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದ ನಂತರ ಸದನದಲ್ಲಿ ಹಾಜರಿದ್ದ ವಿವಿಧ ಪಕ್ಷಗಳ ಸದಸ್ಯರುಗಳು ವ್ಯಕ್ತಪಡಿಸಿರುವ ಅನಿಸಿಕೆಗಳು.

- **ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು:**

ಸಭಾಧ್ಯಕ್ಷರ ಹುದ್ದೆಗೆ ಅತ್ಯಂತ ಅರ್ಹ ವ್ಯಕ್ತಿ ಅವಿರೋಧವಾಗಿ ಆಯ್ಕೆಯಾಗಿರುವುದು ಒಂದು ಸಂತೋಷ ಸಂಗತಿಯಾಗಿದ್ದು, ಇದಕ್ಕೆ ಸಹಕಾರ ನೀಡಿದಂತಹ ಎಲ್ಲಾ ಮುಖಂಡರುಗಳಿಗೆ (ಕಾಂಗ್ರೆಸ್ ಮತ್ತು ಜೆಡಿಎಸ್) ಹಾಗೂ ಪೀಠವನ್ನು ಅಲಂಕರಿಸಿರುವ ನೂತನ ಸಭಾಧ್ಯಕ್ಷರಿಗೂ ಹೃತ್ಪೂರ್ವಕವಾಗಿ ಅಭಿನಂದಿಸಿದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ತಮ್ಮ ವಿದ್ಯಾರ್ಥಿ ಜೀವನದಿಂದಲೇ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಹಲವು ಹೋರಾಟಗಳಲ್ಲಿ ಭಾಗವಹಿಸಿ, ಉತ್ತರ ಕನ್ನಡ ಜಿಲ್ಲೆಯ ಪರಿಸರದ ಚಳುವಳಿಯಲ್ಲಿ ಪಾಲ್ಗೊಳ್ಳುವುದರ ಮೂಲಕ ಗುರುತಿಸಿಕೊಂಡಿದ್ದರು. 1994ರಲ್ಲಿ ಅಂಕೋಲಾ-ಯಲ್ಲಾಪುರ ಕ್ಷೇತ್ರದ ಶಾಸಕರಾಗಿ ವಿಧಾನಸಭೆಯನ್ನು ಪ್ರವೇಶಿಸಿ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿ,

ಅಂದಿನಿಂದ ಇಂದಿನವರೆವಿಗೂ ಸತತವಾಗಿ ವಿಧಾನಸಭೆಯ ಶಾಸಕರಾಗಿ 6 ಬಾರಿ ಆಯ್ಕೆಯಾಗಿರುತ್ತಾರೆ. ಸರಳ ಸಜ್ಜನಿಕೆವುಳ್ಳ ಇವರು ಎಲ್ಲರೊಂದಿಗೆ ಬೆರೆಯುವ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. 2008ರ ಭಾರತೀಯ ಜನತಾ ಪಕ್ಷ ಸರ್ಕಾರದ ಅವಧಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದು, ಆ ಕ್ಷೇತ್ರದ ಸುಧಾರಣೆಗಾಗಿ ಬಹಳಷ್ಟು ಶ್ರಮಿಸಿದ್ದು, ಇದುವರೆವಿಗೂ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಕಾರ್ಯವನ್ನು ನಿರ್ವಹಿಸಿರುತ್ತಾರೆ.

ಸದನದ ಘನತೆ, ಗೌರವ ಎತ್ತಿ ಹಿಡಿಯುತ್ತಾರೆ ಎಂಬ ವಿಶ್ವಾಸವಿರುವುದಾಗಿ ಹಾಗೂ ಸದನದ ಪೀಠವನ್ನು ಅಲಂಕರಿಸಿರುವುದಕ್ಕೆ ಮತ್ತೊಮ್ಮೆ ಶ್ರೀಯುತರಿಗೆ ಅಭಿನಂದನೆಯನ್ನು ಸಲ್ಲಿಸುವುದರ ಮೂಲಕ ಮಾತನ್ನು ಮುಗಿಸಿದರು.

- **ಶ್ರೀ ಸಿದ್ಧರಾಮಯ್ಯರವರು:**

ಕಾಂಗ್ರೆಸ್ ಪಕ್ಷದ ವತಿಯಿಂದ ಎಲ್ಲಾ ಮಾನ್ಯ ಸದಸ್ಯರ ಪರವಾಗಿ, ನೂತನವಾಗಿ ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿರುವ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಸಭಾಧ್ಯಕ್ಷರ ಪೀಠ ಸಂಸದೀಯ ವ್ಯವಸ್ಥೆಯಲ್ಲಿ ಬಹಳ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಸಂಸದೀಯ ಪ್ರಜಾತಂತ್ರವು ಕ್ಷೀಣಿಸುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ. ಸಂಸದೀಯ ಕಲಾಪಗಳು ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಉನ್ನತ ಮಟ್ಟದಲ್ಲಿ ಇಲ್ಲದಿರುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಂಡು ಬಂದಿದೆ. ಸಂಸದೀಯ ವ್ಯವಸ್ಥೆಯಲ್ಲಿ ಯಾವ ಪರಂಪರೆ ಇದೆಯೋ ಆ ಪರಂಪರೆಯ ಮೌಲ್ಯಗಳನ್ನು ಹೆಚ್ಚಿಸಬೇಕು. ಕೆಳಹಂತಕ್ಕೆ ಹೋಗಲು ಬಿಟ್ಟಲ್ಲಿ ಜನರು ನಮ್ಮ ಮೇಲೆ ಗೌರವ ಕಳೆದುಕೊಳ್ಳುವುದರ ಜೊತೆಗೆ ಪ್ರಜಾತಂತ್ರದ ಬಗ್ಗೆಯೂ ನಂಬಿಕೆ ಹೋಗಲು ಪ್ರಾರಂಭವಾಗುತ್ತದೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ರಾಷ್ಟ್ರೀಯ ಸೇವಾ ಸಂಘ, ಭಾರತೀಯ ಜನತಾ ಪಕ್ಷದ ಮೂಲದಿಂದ ಬಂದಿರುವ ನೀವು ನಿಮ್ಮ ಸಜ್ಜನಿಕೆಯ ಹೋರಾಟದಿಂದ ಈವರೆವಿಗೂ ಸತತವಾಗಿ 6 ಬಾರಿ ಶಾಸಕರಾಗಿರುವುದರಿಂದ ರಾಜಕೀಯದಲ್ಲಿ ಸಾಕಷ್ಟು ಅನುಭವವಿರುವುದು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವ ದಿನಗಳಲ್ಲಿ ಜನರ ವಿಶ್ವಾಸ ಉಳಿಸಿಕೊಳ್ಳುವ ದೃಷ್ಟಿಯಿಂದ ಸದನದ ಘನತೆ, ಗೌರವ ಎತ್ತಿ ಹಿಡಿಯುವ ಕೆಲಸ ನಿರ್ವಹಿಸಬೇಕೆಂದು ಹೇಳಿದರು. ಸದನದ ಮಹತ್ವದ ಬಗ್ಗೆ ತಿಳಿಸುತ್ತಾ ಜನರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸುವ ನಿಟ್ಟಿನಲ್ಲಿ ವಿರೋಧಪಕ್ಷಗಳ ಅಭಿಪ್ರಾಯ ಮುಖ್ಯ. ಅಧ್ಯಕ್ಷರು, ವಿರೋಧ ಪಕ್ಷದ ಸದಸ್ಯರುಗಳ ಬಗ್ಗೆ ಪಕ್ಷಾತೀತವಾಗಿರಬೇಕು. ಅವರುಗಳಿಗೆ ಚರ್ಚೆಗೆ ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ಸಮಾಜದ ಓರೆಕೋರೆಗಳನ್ನು ಸರಿಪಡಿಸಲು ನೆರವಾಗಬೇಕೆಂದು ತಿಳಿಸಿದರು.

ಶ್ರೀ ವೈಕುಂಠ ಬಾಳಿಗಾರಿಂದ ಹಿಡಿದು ಇವತ್ತಿನವರೆಗೂ ಹಲವರು ಸತ್ಸಂಪ್ರದಾಯಗಳನ್ನು ಸದನದಲ್ಲಿ ಬಿಟ್ಟು ಹೋದಂತಹ ರೀತಿಯಲ್ಲಿ ಸದನ ನಡೆಯಬೇಕು. ಅಧ್ಯಕ್ಷರ ಪೀಠವು ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಹತ್ವವಾದ ಸ್ಥಾನವನ್ನು ಪಡೆದಿದ್ದು, ಇತ್ತೀಚಿನ ದಿನಗಳಲ್ಲಿ ಸದನದಲ್ಲಿ ನಡೆಯುವ ಚರ್ಚೆಗಳ ಗುಣಮಟ್ಟವು ಕ್ಷೀಣಿಸುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ ಇದನ್ನು ಹೋಗಲಾಡಿಸಲು ಸಂಸದೀಯ ವ್ಯವಸ್ಥೆಯನ್ನು ಎತ್ತಿಹಿಡಿಯಲು ಸದನದಲ್ಲಿ ಗುಣಮಟ್ಟದ ಚರ್ಚೆಯಾಗಬೇಕೆಂದು ಹೇಳುತ್ತಾ ಮತ್ತೊಮ್ಮೆ ಶುಭವಾಗಲಿ ಎಂಬ ಅಭಿನಂದನೆಗಳನ್ನು ಸಲ್ಲಿಸುತ್ತಾ ಮಾತನ್ನು ಮುಗಿಸಿದರು.

- **ಶ್ರೀ ಹೆಚ್.ಡಿ.ಕುಮಾರಸ್ವಾಮಿ**

ನೂತನವಾಗಿ ಆಯ್ಕೆಯಾಗಿರುವ ಶ್ರೀ ವಿಶ್ವೇಶ್ವರ ಅನಂತ ಹೆಗಡೆ ಕಾಗೇರಿ ಅವರಿಗೆ ಅಭಿನಂದಿಸುತ್ತಾ, ಪ್ರಸ್ತುತ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಕ್ಕೆ ಹೆಚ್ಚು ಅವಕಾಶ ಹಾಗೂ ಮಹತ್ವವಿರುವುದರಿಂದ ಆಡಳಿತ

ಪಕ್ಷಕ್ಕಿಂತ ಹೆಚ್ಚಿನ ಅವಕಾಶವನ್ನು ವಿರೋಧ ಪಕ್ಷಕ್ಕೆ ನೀಡಿದಾಗ ಸರ್ಕಾರದ ಸರಿತಪ್ಪುಗಳ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ವೈಕುಂಠ ಬಾಳಿಗಾರಿಂದ ಹಿಡಿದು ಶ್ರೀ ರಮೇಶ್‌ಕುಮಾರ್‌ರವರೆಗೆ ಸದನದ ಪೀಠಕ್ಕೆ ಅತ್ಯಂತ ಸಮರ್ಥವಾಗಿ ಕೆಲಸ ನಿರ್ವಹಿಸಿ ಸದನಕ್ಕೆ ಘನತೆ ಹಾಗೂ ಮೆರಗನ್ನು ತಂದುಕೊಟ್ಟಿರುವುದರಿಂದ ಅವರುಗಳ ಕಾರ್ಯವೈಖರಿಯನ್ನು ಎಲ್ಲರೂ ಕೊಂಡಾಡುತ್ತಿರುವಂತೆ ನೀವೂ ಸಹ ಆ ರೀತಿಯಲ್ಲಿ ಪೀಠದ ಘನತೆಯನ್ನು ಎತ್ತಿ ಹಿಡಿಯಬೇಕು ಹಾಗೂ ನಿಮ್ಮ ಮನೋವೃತ್ತಿಯಿಂದ ಸದನಕ್ಕೆ ಹೆಚ್ಚು ಗೌರವ ಬರಲಿ ಹಾಗೂ ಸರ್ಕಾರದ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಸದಸ್ಯರುಗಳಿಗೆ ನೀಡಬೇಕು.

ಪ್ರತಿ ವರ್ಷ ಕನಿಷ್ಠ 60 ದಿನಗಳ ಕಾಲ ಸದನದ ಕಲಾಪಗಳು ನಡೆಯಬೇಕೆಂಬ ಕಾನೂನಿನಂತೆ ಸದನವನ್ನು ಅಷ್ಟು ದಿನಗಳು ನಡೆಸಬೇಕು. ಹೆಚ್ಚು ದಿವಸಗಳ ಕಲಾಪ ನಡೆದಷ್ಟು ರಾಜ್ಯದ ಜನರ ಸಮಸ್ಯೆಗಳು ಸಮರ್ಪಕವಾಗಿ ಬಿಂಬಿಸಲು ಹಾಗೂ ಆ ಮೂಲಕ ಸರ್ಕಾರ ಎಚ್ಚೆತ್ತುಕೊಳ್ಳುವುದಕ್ಕೆ ಅನುಕೂಲವಾಗುವುದು ಎಂದು ತಿಳಿಸುತ್ತಾ ಪಕ್ಷದ ಪರವಾಗಿ ಮತ್ತೊಮ್ಮೆ ಅಭಿನಂದಿಸುತ್ತಾ ಮಾತನ್ನು ಮುಗಿಸಿದರು.

➢ **ಶ್ರೀ ಕೆ.ಆರ್.ರಮೇಶ್ ಕುಮಾರ್**

ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರು, ನೂತನ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಸದನದ ಪ್ರಾಮುಖ್ಯತೆ, ಆ ಸ್ಥಾನದ ಘನತೆ ಹಾಗೂ ಇತಿಹಾಸವೆಲ್ಲವನ್ನು ತಿಳಿಸುತ್ತಾ ಅವರಿಗೆ ಸಲಹೆಯನ್ನು ನೀಡಿದರು.

ಲೋಕಸಭೆಯ ಇತಿಹಾಸ, ಲೋಕಸಭೆಯಲ್ಲಿ ಸಭಾಧ್ಯಕ್ಷರಾಗಿದ್ದ ಪ್ರಮುಖ ವ್ಯಕ್ತಿಗಳ ಬಗ್ಗೆ ಮೊದಲಿಗೆ ಮಾಹಿತಿಯನ್ನು ನೀಡಿ ಭಾರತ ಹೇಗಿರಬೇಕೆಂಬುದರ ಬಗ್ಗೆ ಚರ್ಚೆಯನ್ನು ಉಲ್ಲೇಖಿಸಿ ಸಂವಿಧಾನದ ಮೌಲ್ಯ ಹಾಗೂ ಅಗತ್ಯತೆಯನ್ನು ತಿಳಿಸಿದರು.

ಶ್ರೀ ಕೆ.ಬಿ.ಹೆಗಡೆವಾರುರವರು ಹಿಂದುತ್ವದ ಆಧಾರದಲ್ಲಿ ಭಾರತ ಇರಬೇಕು ಎಂದು ವಾದಿಸಿ ರಾಷ್ಟ್ರೀಯ ಸ್ವಯಂ ಸೇವಕಾ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಆದರೆ, ಭಾರತವು ಸಮಾನತೆಯ ಆಧಾರದಲ್ಲಿ ನಿರ್ಮಾಣವಾಗಬೇಕೆಂದು ಡಾ:ಬಿ.ಆರ್.ಅಂಬೇಡ್ಕರ್‌ರವರ ವಾದವಾಗಿತ್ತು. ಸಂವಿಧಾನದ ಆಶಯವು ಅದೇ ಆಗಿದೆಯೆಂದು ತಿಳಿಸುತ್ತಾ, ಮನುಸ್ಮೃತಿಯಲ್ಲಿ 1034 ಶ್ಲೋಕಗಳ ಮೂಲಕ ಬ್ರಾಹ್ಮಣರ ಬಗ್ಗೆ, 930 ಶ್ಲೋಕಗಳಲ್ಲಿ ಕ್ಷತ್ರಿಯರ ಬಗ್ಗೆ, ವೈಶ್ಯರ ಬಗ್ಗೆ ಕೆಲವು ಶ್ಲೋಕಗಳಿರುವುದು, ಶೂದ್ರರ ಕುರಿತು ಶ್ಲೋಕಗಳೇ ಇಲ್ಲ. ಶೂದ್ರರೇ ಹೆಚ್ಚಿರುವ ದೇಶದಲ್ಲಿ ಆ ಸಮುದಾಯದ ಬಗ್ಗೆ ಉಲ್ಲೇಖವೇ ಇಲ್ಲದೆ ಮನುಸ್ಮೃತಿಯ ಆಧಾರದಲ್ಲಿ ದೇಶ ನಡೆಸುವ ಉದ್ದೇಶವಾಗಿರುತ್ತದೆ ಎಂದು ತಿಳಿಸುತ್ತಾ ಇತಿಹಾಸವನ್ನು ನೆನಪಿಸಿದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಉದ್ದೇಶಿಸುತ್ತಾ ನಿಮಗೆ ವೈಚಾರಿಕ ಹಿನ್ನೆಲೆ ಸಮರ್ಥಿಸುವ ಸಂಘದ ಹಿನ್ನೆಲೆಯೂ ಇದೆ. ಆದರೆ, ನೀವು ಕುಳಿತಿರುವ ಪೀಠದ ಮೇಲೆ ತಕ್ಕಡಿ ಇದೆ, ಇಲ್ಲಿ ಸಮಾನತೆಯೇ ನಿಮ್ಮ ಗುರಿಯಾಗಿರಬೇಕು. ಸಂವಿಧಾನವೇ ನಿಮಗೆ ಎಲ್ಲವೂ ಆಗಬೇಕಾಗಿದೆ. ಸಂವಿಧಾನಕ್ಕೆ ಮಾತ್ರವೇ ನಿಷ್ಠೆ ತೋರಿ ಎಂದು ಸಲಹೆ ನೀಡಿದರು.

ನೀವು ಒಳ್ಳೆಯ ವ್ಯಕ್ತಿ, ಬಹಳ ಸರಳರು ಹಾಗೂ ಬಿಜೆಪಿ ಮತ್ತು ಕಮ್ಯುನಿಸ್ಟ್‌ರಲ್ಲಿ ವೈಚಾರಿಕ ವಿರೋಧ ಇದ್ದರೂ ಸಹ ಸರಳತೆ ಇಬ್ಬರಲ್ಲೂ ಇದೆಯೆಂದು ಹೇಳಿದರು.

ವಿಧಾನಸಭೆಯಲ್ಲಿ ಚರ್ಚೆಯ ಗುಣಮಟ್ಟ ಏರಬೇಕು. ಸದನ ಲೋಕಸಭೆಗೂ ಮಾದರಿಯಾಗಬೇಕು. ಜನರಿಗೆ ರಾಜಕಾರಣಿಗಳ ಬಗ್ಗೆ ಇರುವ ಅಭಿಪ್ರಾಯ ಬದಲಾಗಬೇಕು ಎಂದು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಅಭಿನಂದನೆ ತಿಳಿಸುತ್ತಾ ಮಾತನ್ನು ಮುಗಿಸಿದರು.

> ಶ್ರೀ ಜಗದೀಶ್ ಶೆಟ್ಟರ್

ಸದನದ ಸಭಾಧ್ಯಕ್ಷರಾಗಿ ಶ್ರೀ ವಿಶ್ವೇಶ್ವರ ಅನಂತ ಹೆಗಡೆ ಕಾಗೇರಿ ಅವರು ಆಯ್ಕೆಯಾಗಿ ಪೀಠವನ್ನು ಅಲಂಕರಿಸಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸುತ್ತಾ, 1994ರಲ್ಲಿ ಪ್ರಥಮ ಬಾರಿಗೆ ನಾವಿಬ್ಬರೂ ಒಟ್ಟಾಗಿ ಶಾಸಕರಾಗಿ ಕಾರ್ಯವನ್ನು ಆರಂಭಿಸಿದ್ದು, ಇಲ್ಲಿಯವರೆವಿಗೆ ನಿರಂತರವಾಗಿ 6 ಬಾರಿ ಆಯ್ಕೆಯಾಗಿರುತ್ತೇವೆ. ಭಾರತೀಯ ಜನತಾ ಪಕ್ಷದ ಸರ್ಕಾರ ಜಾರಿಯಲ್ಲಿದ್ದು, ಮಾನ್ಯ ಯಡಿಯೂರಪ್ಪರವರ ನೇತೃತ್ವದಲ್ಲಿ ಸದನದ ಪೀಠವನ್ನು ಅಲಂಕರಿಸಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿ ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಅತ್ಯಂತ ಮಹತ್ವದ ಜವಾಬ್ದಾರಿಯ ಮುಖಾಂತರ ಶಾಸಕರಾಗಿ ಹಾಗೂ ಶಿಕ್ಷಣ ಸಚಿವರಾಗಿ ಶಿಕ್ಷಣ ಇಲಾಖೆಯ ನಿರ್ವಹಣೆಯನ್ನು ಉತ್ತಮವಾಗಿ ನಿರ್ವಹಿಸಿರುತ್ತೀರಿ. ನಿಮ್ಮ ಸರಳ ಸಜ್ಜನಿಕೆಯಿಂದ ಶಿಕ್ಷಣ ಮಂತ್ರಿಯಾದ ಸಂದರ್ಭದಲ್ಲಿ ನಿಮ್ಮ ಮಕ್ಕಳನ್ನು ನಿಮ್ಮ ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿಸಿರುವುದು ಎಲ್ಲರಿಗೂ ಮಾದರಿಯಾಗಿದೆ. ಸದನವನ್ನು ಸಮಾನತೆಯಿಂದ ನೋಡಿಕೊಂಡು ಕೆಲಸಕಾರ್ಯಗಳನ್ನು ನಿರ್ವಹಿಸಿ ನಮ್ಮೆಲ್ಲರಿಗೂ ಮಾರ್ಗದರ್ಶನ ನೀಡಬೇಕೆಂದು ಹೇಳುತ್ತಾ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸುವುದರ ಮೂಲಕ ಮಾತನ್ನು ಮುಗಿಸಿದರು.

> ಶ್ರೀ ಆರ್.ವಿ.ದೇಶಪಾಂಡೆ

ಶ್ರೀ ವಿಶ್ವೇಶ್ವರ ಅನಂತ ಹೆಗಡೆ ಕಾಗೇರಿ ಆದ ನೀವು 30 ವರ್ಷಗಳಿಂದ ಒಬ್ಬ ಯುವ ನಾಯಕರಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಭಾರತೀಯ ಜನತಾ ಪಕ್ಷದಲ್ಲಿ ಬಹಳ ನಿಷ್ಠೆಯಿಂದ ಕೆಲಸವನ್ನು ನಿರ್ವಹಿಸಿರುತ್ತೀರಿ. 1994ರಿಂದ ಎರಡು ಬಾರಿ ಚುನಾಯಿತರಾದಾಗ ನಿಮ್ಮನ್ನು ಒಳ್ಳೆಯ ನಾಯಕರೆಂದು ಪ್ರಶಂಸಿಸಿದ್ದೆ. ಒಳ್ಳೆಯ ಚಾರಿತ್ರ್ಯಗಳ ಸಜ್ಜನಿಕೆ, ಸರಳ ಸ್ವಭಾವದಿಂದ ನೀವು 6 ಬಾರಿ ಚುನಾಯಿತರಾಗಿರುತ್ತೀರಿ. ನಾನು ವಿರೋಧ ಪಕ್ಷದ ಶಾಸಕನಾಗಿದ್ದಾಗ ನೀವು ನಿಮ್ಮ ಕ್ಷೇತ್ರದ ಅಭಿವೃದ್ಧಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸವನ್ನು ನಿರ್ವಹಿಸಿರುವುದು ಬಹಳ ಸಂತೋಷಕರವಾದ ವಿಷಯ. ನ್ಯಾಯ ನೀಡುವಲ್ಲಿ ನಿಷ್ಪಕ್ಷಪಾತವಾಗಿ, ಜಾಣತನದಲ್ಲಿ ಕೆಲಸ ನಿರ್ವಹಣೆ ಮಾಡುವ ಗುಣವು ತಮ್ಮಲ್ಲಿರುವುದರಿಂದ ಶ್ರೀ ವೈಕುಂಠ ಬಾಳಿಗಾರವರ ಸ್ಥಾನಕ್ಕೆ ಮುಟ್ಟುತ್ತೀರೆಂದು ಭಾವಿಸುವುದಾಗಿ ಮತ್ತು ತುಳಜ ಭವಾನಿ ನಿಮಗೆ ಆರೋಗ್ಯ ಆಯಸ್ಸು ಕೊಟ್ಟು ಇನ್ನು ಹೆಚ್ಚು ಎತ್ತರಕ್ಕೆ ಕೊಂಡೊಯ್ಯಲಿ ಎಂದು ಹೇಳಿ ನಮಸ್ಕರಿಸಿ ಮಾತನ್ನು ಮುಗಿಸಿದರು.

> ಶ್ರೀ ಗೋವಿಂದ ಎಂ ಕಾರಜೋಳ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಸಭಾಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಅಯ್ಕೆ ಮಾಡಿದ್ದಕ್ಕೆ ಸದನದ ಎಲ್ಲಾ ಸದಸ್ಯರಿಗೆ ಕೃತಜ್ಞತೆಗಳನ್ನು ಮೊದಲಿಗೆ ಸಲ್ಲಿಸಿದರು. ನಾನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರ ಜಿಲ್ಲೆಗೆ ಭೇಟಿ ನೀಡಿದಾಗ ಬೆಳಗಿನ ಉಪಹಾರಕ್ಕಾಗಿ ಆಹ್ವಾನಿಸಿದರು. ಒಂದು ದೊಡ್ಡ ಪಾತ್ರೆಯಲ್ಲಿ ತುಪ್ಪವನ್ನು ತಂದಿಟ್ಟರು. ಅದು ಉಪ್ಪಿಟ್ಟು ಇರಬೇಕೆಂದುಕೊಂಡು ಎರಡು ಸೌಟು ಬಾಳೆ ಎಲೆಗೆ ಹಾಕಿಕೊಂಡೆ ಅದನ್ನು ಬಾಯಿಗೆ ಹಾಕಿಕೊಂಡರೆ ತುಪ್ಪದ ದೋಸೆ ಮತ್ತು ಜೋನಿ ಬೆಲ್ಲವನ್ನು ತಂದು ಬಡಿಸಿದರು. ತದನಂತರ, ಕೊಟ್ಟಿಗೆಗೆ ಕರೆದುಕೊಂಡು ಹೋಗಿ ತಾವು ಸಾಕಿದ ಹಸುಗಳನ್ನು ತೋರಿಸಿದರು ತಮ್ಮ ನಿವಾಸದಲ್ಲಿ ಕಂಡಂತಹ ಸರಳ ಜೀವನದ ಬಗ್ಗೆ ಬಹಳ ಆನಂದವಾಯಿತು ಎಂದರು.

ಸಾಮಾನ್ಯ ರೈತರಾಗಿ ಕೆಲಸ ಮಾಡಿರುವುದನ್ನು ನೋಡಿರುವುದಾಗಿ ಹಾಗೂ ಸರಳ ಸಜ್ಜನಿಕೆ, ಪ್ರಾಮಾಣಿಕತೆಯೂ ಇರುವಂತಹ ನೀವು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿರುವುದು ಸದನಕ್ಕಷ್ಟೇ ಅಲ್ಲ ನಾಡಿಗೆ ಸಲ್ಲುವಂತಹ ಗೌರವ.

12ನೇ ಶತಮಾನದ ಅನುಭವ ಮಂಟಪದಲ್ಲಿ ಅಲ್ಲಮ ಪ್ರಭು ದೇವರು, ಬಸವಣ್ಣನವರು, ಅಪ್ಪಶಿವಶರಣ, ಮಾದಾರ ಚೆನ್ನಯ್ಯನವರ ಪಾತ್ರದ ರೀತಿಯಲ್ಲಿ ಈ ಸದನವು ನಡೆಯಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದರು. ಅತ್ಯಂತ ಸಂಭಾವಿತ ಹಾಗೂ ಗೌರವಾನ್ವಿತ ವ್ಯಕ್ತಿ ಸದನದ ಸ್ಥಾನಮಾನದ ಘನತೆ ಗೌರವಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ದೇಶದಲ್ಲಿ ಅತ್ಯುತ್ತಮವಾದ ಕಾರ್ಯಕಲಾಪಗಳು ಸದನದಲ್ಲಿ ನಡೆಯುತ್ತದೆ ಎನ್ನುವ ವಿಶ್ವಾಸವನ್ನು ಮತ್ತೊಮ್ಮೆ ವ್ಯಕ್ತಪಡಿಸಿ ಪೀಠವನ್ನು ಅಲಂಕರಿಸಿರುವ ಅಧ್ಯಕ್ಷರಿಗೆ ವೈಯಕ್ತಿಕವಾಗಿ ಕೃತಜ್ಞತೆಗಳನ್ನು ಸಲ್ಲಿಸುವುದರ ಮೂಲಕ ಮಾತನ್ನು ಮುಗಿಸಿದರು.

- **ಶ್ರೀ ಕೃಷ್ಣ ಬೈರೇಗೌಡ**

ಅವಿರೋಧವಾಗಿ ಸರ್ವಸಮ್ಮತಿಯಿಂದ ಪಕ್ಷಾತೀತವಾಗಿ ಸದನದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಕ್ಕೆ ಮೊದಲಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಸದನದಲ್ಲಿ ಒಳ್ಳೆಯ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗಬೇಕೆನ್ನುವ ಉದ್ದೇಶದಿಂದ ಎರಡು ಪ್ರತಿ ಪಕ್ಷಗಳೂ ಸಹ ಯಾವುದೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೆ ಸಹಮತಿಯನ್ನು ಸೂಚಿಸಿ ಸಹಕಾರವನ್ನು ಕೊಟ್ಟಿವೆ. ಎಲ್ಲರನ್ನೂ ಸಹ ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗತಕ್ಕಂಥ ಸಾಮರ್ಥ್ಯವೂ ಇರುವುದಾಗಿ ನಂಬಿರುತ್ತೇವೆ. 11ನೇ ವಿಧಾನಸಭೆಯ ಅವಧಿಯಲ್ಲಿ ಸ್ವಲ್ಪ ಕಾಲ ಜೊತೆಯಲ್ಲಿದ್ದ ಬಗ್ಗೆ, ತದನಂತರ 12ನೇ ವಿಧಾನಸಭೆಯ ಅವಧಿಯಲ್ಲಿ ಚೈನಾ ಅಧ್ಯಯನ ಪ್ರವಾಸವನ್ನು ಕೈಗೊಂಡಿದ್ದರಿಂದ ಹೆಚ್ಚಿನ ಬಾಂಧವ್ಯ ಬೆಳೆದಿರುವ ಬಗ್ಗೆ ಹೇಳಿದರು. ಅಲ್ಲದೆ ನಾನು ಸಚಿವನಾಗಿದ್ದ ಅವಧಿಯಲ್ಲಿ ಶ್ರೀಯುತರ ಮಾರ್ಗದರ್ಶನವನ್ನು ಪಡೆದಿದ್ದು ಹಾಗೂ ರಾಜ್ಯದ ಜನರ ಹಿತದೃಷ್ಟಿಯಿಂದ ಎಲ್ಲಾ ರೀತಿಯ ಕೆಲಸವನ್ನು ಮಾಡಿಕೊಂಡು ಬಂದಿರುತ್ತೇವೆ. ಸದನದಲ್ಲಿ ಆಡಳಿತ ಪಕ್ಷದ ಸದಸ್ಯರಾಗಲೀ, ಪ್ರತಿಪಕ್ಷದ ಸದಸ್ಯರಾಗಲೀ ನಮಗೆ ಇರತಕ್ಕಂತಹ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡುವುದಲ್ಲದೆ ವಿಶೇಷವಾಗಿ ಪ್ರತಿಪಕ್ಷಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವುದರ ಮೂಲಕ ಸರ್ಕಾರವನ್ನು ರಾಜ್ಯದ ಪ್ರಜೆಗಳ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿಸುವ ಪಾತ್ರವೂ ಅಗತ್ಯವಿರುತ್ತದೆ. ಸದನವು ಮಾದರಿ ಸದನ ಆಗುವ ರೀತಿಯಲ್ಲಿ ನಡೆಸಲು ನಮ್ಮ ಸಹಕಾರ ಇರುವುದಾಗಿ ಹಾಗೂ ಎಲ್ಲಾ ರೀತಿಯ ಯಶಸ್ಸನ್ನು ಕೋರಿ ಮಾತನಾಡಲಿಕ್ಕೆ ಅವಕಾಶ ನೀಡಿರುವುದಕ್ಕೆ ಧನ್ಯವಾದಗಳನ್ನು ಹೇಳಿದರು.

- **ಶ್ರೀ ಕೆ.ಎಸ್.ಈಶ್ವರಪ್ಪ**

ಶ್ರೀ ಕೆ.ಎಸ್. ಈಶ್ವರಪ್ಪ ಅವರು ಸದನದ ಮಹತ್ವವನ್ನು ತಿಳಿಸುತ್ತಾ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ಮೊದಲನೇ ಬಾರಿಗೆ ಸದಸ್ಯರಾಗಿ ಆಯ್ಕೆಯಾಗಿ ಸದನಕ್ಕೆ ಬಂದಾಗ ಅವರ ಅನುಭವದ ಬಗ್ಗೆ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ವಿದ್ಯಾರ್ಥಿ ಪರಿಷತ್ತಿನಲ್ಲಿ ನಿರ್ವಹಿಸಿರುವ ಕಾರ್ಯದ ಬಗ್ಗೆ ತಿಳಿದಿರುವುದಿಲ್ಲ. ಪದವಿ ಪಡೆದ ನಂತರ ಸಮಾಜ ಸೇವೆಯ ಮನೋಭಾವದಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘಟನೆಗೆ ಸೇರಿರುತ್ತೀರಿ. ತಾವು ಕಾರ್ಯನಿರ್ವಹಿಸುವವರೆಗೆ ಶಿಸ್ತು ಬದ್ಧತೆ ಇರುತ್ತದೆಂದರು. ನನ್ನ ಅಣ್ಣ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಹೋಗುತ್ತಿದ್ದರು. ನಮ್ಮ ಊರಿನವರು ಯಾಕೆ ಕಳುಹಿಸುತ್ತೀರಿ ಅಲ್ಲಿ ಬ್ರಾಹ್ಮಣರೇ ಮೇಲುಗೈ. ಹಿಂದುಳಿದವರನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಾರೆಂದು ನಮ್ಮ ತಂದೆ ಹೇಳಿದ್ದರು. ನಮ್ಮ ತಂದೆ ಆ ಶಾಖೆಗೆ ಹೋಗಬೇಡವೆಂದು ಅಣ್ಣನಿಗೆ ಹೊಡೆದು ಮನೆಯಿಂದ ಹೊರಗೆ ಕಳುಹಿಸಿದರು. ಮೂರು ದಿನವಾದರೂ ಆತ ಬರಲಿಲ್ಲ. ಆಗ ನಮ್ಮ ತಂದೆ-ತಾಯಿ ಅಣ್ಣನನ್ನು ಹುಡುಕುತ್ತಿದ್ದಾಗ ಆಂಜನೇಯ ದೇವಾಲಯದ ಅರ್ಚಕರ ಮನೆಯಲ್ಲಿ ಇರಬಹುದು ಎಂದು ಯಾರೋ ಹೇಳಿದರು. ಅಲ್ಲಿಗೆ ಹೋಗಿ ನಮ್ಮ ತಂದೆ ನೋಡಿದಾಗ ಬ್ರಾಹ್ಮಣರಾದ ಅರ್ಚಕರು ಹಿಂದುಳಿದ ವರ್ಗಕ್ಕೆ ಸೇರಿದ ನಮ್ಮ ಅಣ್ಣನನ್ನು ತಮ್ಮ ಮಗಳ ಜೊತೆ ಕೂರಿಸಿ ಊಟ ಮಾಡಿಸುತ್ತಿದ್ದರು. ಇದನ್ನು ನೋಡಿದ ನಮ್ಮ ತಂದೆಗೆ ಆರ್.ಎಸ್.ಎಸ್. ಬಗೆಗಿನ ಇದ್ದಂತಹ ಕಲ್ಪನೆ ಬದಲಾಯಿತು ನಂತರ ನಾನೂ ಶಾಖೆಗೆ ಹೋದೆ ಅದರಿಂದಲೇ ಇಲ್ಲಿ ನಿಂತಿದ್ದೇನೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಬಿಜೆಪಿ ಎಂದರೆ ಹಿಂದುತ್ವ ಎಂದು. ಅದು ಕೇವಲ ಹಿಂದೂಗಳಿಗೆ ಎಂದು ಬೇರ್ಪಡಿಸುವ ಮಾತುಗಳನ್ನು ಆಡಲಾಗುತ್ತಿದೆ. ಆದರೆ ಹಿಂದುತ್ವ ಎಂಬುದು ಜೀವನ ಪದ್ಧತಿ ಎಂದು ತಿಳಿಸುತ್ತಾ, ಎಲ್ಲಾ ರೀತಿಯ ಯಶಸ್ಸನ್ನು ಕೋರುವುದರ ಮೂಲಕ ತಮ್ಮ ಮಾತನ್ನು ಮುಗಿಸಿದರು.

- **ಶ್ರೀ ಕೆ.ಎಂ. ಶಿವಲಿಂಗೇಗೌಡ**

ಸಂಸದೀಯ ವ್ಯವಸ್ಥೆಯೊಳಗೆ ಆಡಳಿತ ಪಕ್ಷ, ವಿರೋಧ ಪಕ್ಷ ಇವರೆಡು ಸರ್ವೇಸಾಮಾನ್ಯವಾಗಿ ಸಂವಿಧಾನ ವ್ಯವಸ್ಥೆಯಲ್ಲಿರುವಂತಹ ಪದ್ಧತಿ ಮತ್ತು ಕಾನೂನು. ಸದನಕ್ಕೆ ಸದಸ್ಯನಾಗಿ ಬಂದಂತಹ ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿ ಸಂಸದೀಯ ಪಟುತ್ವಗೆ ಮಾತನಾಡಲು ಹೆಚ್ಚಿನ ಅವಕಾಶ ಸಿಗುವುದಿಲ್ಲ. ವಿರೋಧ ಪಕ್ಷದ ಸದಸ್ಯತ್ವವು ಬಹಳ ಪ್ರಮುಖವಾಗಿದ್ದು ಹಾಗೂ ಸಮಗ್ರ ಚರ್ಚೆಯನ್ನು ಮಾಡುವ ವ್ಯವಸ್ಥೆ ಇರುತ್ತದೆ. ಬಹಳ ಸರಳ ಗತ್ತುಗಾರಿಕೆಯಿಲ್ಲದೆ ಜನಪ್ರತಿನಿಧಿಗಳಿಗೆ ಹಾಗೂ ಸಾರ್ವಜನಿಕರಿಗೆ ಸ್ಪಂದಿಸುವ ವ್ಯಕ್ತಿತ್ವವನ್ನು ಇಟ್ಟುಕೊಂಡಿರುವ ನೀವು ಸದನವನ್ನು ಉತ್ತಮ ರೀತಿಯಲ್ಲಿ ನಡೆಸುತ್ತೀರಿ. ಅಧಿವೇಶನವನ್ನು 60 ದಿವಸಗಳ ಕಾಲ ನಡೆಸಬೇಕೆಂದು ಮಾಡಿಕೊಂಡಿರುವ ನಿಘಂಟಿನ ಅನ್ವಯ ನಡೆಸಬೇಕೆಂದು ತಿಳಿಸಿ ಅಧ್ಯಕ್ಷರಿಗೆ ಶುಭವನ್ನು ಹಾರೈಸುತ್ತಾ ಮಾತನ್ನು ಮುಗಿಸಿದರು.

- **ಶ್ರೀ ಎನ್.ಮಹೇಶ್**

ಭಾರತೀಯ ಜನತಾ ಪಕ್ಷವು ಬಹಳ ಸೂಕ್ಷ್ಮವಾಗಿ ಪರಿಗಣಿಸಿ ನಿಮ್ಮಂತಹ ತೂಕ ವ್ಯಕ್ತಿತ್ವವುಳ್ಳಂತಹವರನ್ನು ಅಧ್ಯಕ್ಷರ ಸ್ಥಾನಕ್ಕೆ ಆಯ್ಕೆಮಾಡಿದೆ. ಸಮಾಜದಲ್ಲಿ ಶ್ರೇಣಿಕೃತ ಜಾತಿ ವ್ಯವಸ್ಥೆಯನ್ನು ಒಳಗೊಂಡಿರುವಂತಹ ಜನರನ್ನು ನೋಡುತ್ತಿದ್ದು, ಅವುಗಳಲ್ಲಿ ಮೊದಲನೆಯದು ಬುದ್ಧಿಜೀವಿಗಳು ಮತ್ತು ಎರಡನೆಯದು ಭಾವಜೀವಿಗಳು, ಇವುಗಳ ನಡುವೆ ಕೆಲವರು ಬುದ್ಧಿವಂತ ಭಾವಜೀವಿಗಳು ಇದ್ದಾರೆ. ಯಾವುದೇ ಸೈದ್ಧಾಂತಿಕ ಹಿನ್ನೆಲೆಯಿಂದ ಬಂದಿದ್ದರೂ ಕೂಡ ನೀವು ಜೀವನದಲ್ಲಿ ಅಳವಡಿಸಿಕೊಂಡಿರುವ ವ್ಯಕ್ತಿತ್ವ ನಡವಳಿಕೆಯಿಂದ ಬುದ್ಧಿವಂತ ಭಾವಜೀವಿಯಾಗಿ ಸದನವನ್ನು ನಡೆಸುತ್ತೀರೆನ್ನುವ ವಿಶ್ವಾಸವಿದೆ. ಎಲ್ಲಾ ಜಾತಿಗಳಿಗೆ ಮೀರಿದಂತಹ ಆತ್ಮವು ಭಾರತೀಯತೆ. ಈ ಭಾರತೀಯತೆಯು ನಮ್ಮೆಲ್ಲರ ನಂಬಿಕೆ ಮತ್ತು ಜಾತೀಯತೆಯನ್ನು ಮೀರಿದಂತಹದಾಗಿರುವುದರಿಂದ ಆ ದಿಕ್ಕಿನಲ್ಲಿ ಸಭಾಧ್ಯಕ್ಷರ ಪೀಠದಲ್ಲಿ ಕುಳಿತಿರುವ ನೀವು ಅರ್ಹರೆಂದು ಹೇಳಿದರು.

ಅಲ್ಲದೇ, ಅವರ ಕ್ಷೇತ್ರದಲ್ಲಿ ನಡೆದಂತಹ ಜನಸಂಪರ್ಕ ಸಭೆಯ ಬಗ್ಗೆ ಅನುಭವವನ್ನು ಹಂಚಿಕೊಳ್ಳುತ್ತಾ, ನಮ್ಮ ರಾಜ್ಯದಲ್ಲಿ ಇರುವಂತಹ ಕೋಟಿ ಜನರಿಗೆ ನ್ಯಾಯ ದೊರಕಿಸುವಂತಹ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಬ್ಯಾಲೆನ್ಸ್ ಮಾಡುವಂತಹ ಎಮೋಷನಲ್ ಇಂಟೆಲಿಜೆನ್ಸ್ ನಿಮಗೆ ಇರುವುದರಿಂದ ಸದನವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವ ಭರವಸೆಯಿರುವುದಾಗಿ ತಿಳಿಸುತ್ತಾ ಗೌರವಪೂರ್ವಕ ಕೃತಜ್ಞತೆಗಳನ್ನು ಅಧ್ಯಕ್ಷರಿಗೆ ಸಲ್ಲಿಸುತ್ತಾ ಮಾತನ್ನು ಮುಗಿಸಿದರು.

7. ಸರಳತೆಯಿಂದಲೇ ಸಭಾಧ್ಯಕ್ಷರ ಹುದ್ದೆಗೇರಿದ ರೈತನ ಮಗ

ಶಿರಸಿ–ಸಿದ್ದಾಪುರ ವಿಧಾನಸಭಾ ಕ್ಷೇತ್ರದಿಂದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು 6ನೇ ಬಾರಿ ಶಾಸಕರಾಗಿ ಚುನಾಯಿತರಾಗಿರುತ್ತಾರೆ. ಇವರು ಸರಳತೆ, ಪಕ್ಷನಿಷ್ಠೆ ಸಜ್ಜನಿಕೆಯಿಂದಲೇ ಸಂವಿಧಾನಾತ್ಮಕವಾಗಿ ಅತ್ಯಂತ ಮಹತ್ವದ ಹುದ್ದೆಗಳಲ್ಲಿ ಒಂದಾದ ವಿಧಾನಸಭೆಯ ಅಧ್ಯಕ್ಷರಾಗಿರುತ್ತಾರೆ.

ಆಧಾರ –ಪ್ರಜಾವಾಣಿ, 30.07.2019

8. ಕಾಗದ ರಹಿತ ವ್ಯವಸ್ಥೆ ಶೀಘ್ರ ಅನುಷ್ಠಾನ

ವಿಧಾನಸಭೆ ಸಚಿವಾಲಯದ ಹಾಗೂ ಸದನದ ಕಾರ್ಯಕಲಾಪವನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲಾಗುವುದೆಂದು ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಡಿಜಿಟಲೀಕರಣ ಯೋಜನೆ (ಇ–ವಿಧಾನ್ ಅಪ್ಲಿಕೇಶನ್) ಅನುಷ್ಠಾನಕ್ಕೆ ಸಿದ್ಧವಿದ್ದು, ಕಾಲಮಿತಿಯೊಳಗೆ ಸದರಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಹಾಗೂ ಈ ಯೋಜನೆಯಿಂದ ವಿಧಾನಸಭೆಯ ಕಾರ್ಯಕಲಾಪ ಮತ್ತು ಸಚಿವಾಲಯದಲ್ಲಿ ಕಾಗದದ ಬಳಕೆ ಸಂಪೂರ್ಣವಾಗಿ ನಿಲ್ಲಲಿದೆ. ಹಿಮಾಚಲ ಪ್ರದೇಶ ವಿಧಾನಸಭೆ ಡಿಜಟಲೀಕರಣವಾಗಿದ್ದು, ಅಲ್ಲಿ ಕಾಗದದ ಬಳಕೆ ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತದೆ.

ಹಿಮಾಚಲ ಪ್ರದೇಶದ ವಿಧಾನಸಭೆಯಲ್ಲಿ ಎಲ್ಲಾ ಶಾಸಕರು, ಅಧಿಕಾರಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ಅವರ ಆಸನದ ಮುಂದೆಯೇ ಲ್ಯಾಪ್‌ಟಾಪ್ ಇಟ್ಟಿರುತ್ತಾರೆ. ಅದರ ಮೂಲಕವೇ ಎಲ್ಲಾ ಮಾಹಿತಿಗಳನ್ನು ಪಡೆದುಕೊಳ್ಳುತ್ತಾರೆ.

ಸದರಿ ಯೋಜನೆ ಜಾರಿಗೆ ಬಂದರೆ ಪ್ರತಿಯೊಬ್ಬ ಶಾಸಕನು ಸದನದಲ್ಲಿ ಲ್ಯಾಪ್‌ಟಾಪ್ ಬಳಸಬೇಕಾಗುತ್ತದೆ. ಪ್ರಶ್ನೋತ್ತರಗಳು, ವಿಧೇಯಕಗಳು ಹಾಗೂ ವರದಿಗಳೂ ಸೇರಿದಂತೆ ಎಲ್ಲಾ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುತ್ತದೆ. ಇದರಿಂದ ಕಾಗದ ಬಳಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಹೇಳಿದರು.

ಆಧಾರ – ಪ್ರಜಾವಾಣಿ, 10.09.2019

9. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಉಗಾಂಡದಲ್ಲಿ ನಡೆದ 64ನೇ ಸಿ.ಪಿ.ಎ. ಸಮ್ಮೇಳನದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿನ ಛಾಯಾಚಿತ್ರ ಹಾಗೂ ಭಾಷಣ





Workshop on Combatting Rapid Urbanisation and Rural Decline – A Challenge for the common Welath

Respected Ladies and Gentleman,

The Rural Development in India is one of the most important factors for the growth of the Indian economy.

The term rural development as such is a broad and wide topic to be discussed about. We often define it as "the development of rural areas, with regards to provide higher educational facilities, improve sanitation, extension of irrigation facilities, expansion of electricity, improvement in the techniques of cultivation, construction of the school building and provision of educational facilities, health care, etc."**But, if you ask me I would define rural development as a combine hard work of government, its people and nature." Well, I added nature in the definition recently, looking at the climatic condition of Karnataka from the year 2018.**

Karnataka is considered as **India's seventh largest state** in geographical area covering **191,791 sq km** and accounting for **6.3 per cent** of the geographical area of the country. The state is delineated into 30 districts and 176 taluks spread over 27,481 villages.

In Karnataka, agriculture is the major occupation for a majority of the rural population. As per the government records, **agriculture supports 13 million workers, of which 20.61 per cent are cultivators and 22.67 per cent agricultural workers. A total of 123,100 km^2 of land is cultivated in Karnataka**

constituting 64.6% of the total geographical area of the state. Thus, a large portion of agricultural land in the State is exposed to the vagaries of monsoon with severe agro-climatic and resource constraints. Agriculture employs more than 60 per cent of Karnataka's workforce.

- The State ranks fifth in India in terms of horticulture and of vegetable crops.
- Karnataka State stands third in fruit crop production.
- After Gujarat, Karnataka stands as the second largest milk-producing State.
- Karnataka is also the second largest producer of grapes in the country, and accounts for the production of 12 per cent of total fruits, 8 per cent of total vegetables and 70 per cent of coffee in the country.
- It is the third largest producer of sugar and ranks fourth in sugarcane production.
- In floriculture, Karnataka occupies the second position in India.
- Karnataka is the major silk producing State in the country. The export of silk in India with an approximate share of 25 per cent of the total Indian export market.
- It has a coastline of 320 km and yields an annual marine production of 425,000 MT with 276 varieties of fishes.

Karnataka is highly progressive with regard to vegetable production, and enjoys this advantage because of favourable climatic conditions without any extremes in temperature. But in the past two years the climatic condition isn't that favourable to the states. Land slide, heavy rain, flood, typhoon etc have caused crisis in the agriculture and rural sectors. But, we haven't lost hope over our policies applied in the development of the rural sector. **Preferably, we are convinced that our vision on rural development contributed a better results more than what we had a bun in the oven.**

RURAL DEVELOPMENT IN INDIA

We belong to a country where agriculture is considered to be the most important factor for economic growth. Agriculture contributes nearly one-sixth of the gross domestic product in India. It is always after agriculture comes other rural sectors like health, education, good irrigation facilities etc. In order to increase the growth of agriculture, the Government has planned several programs pertaining to Rural Development in India like **Pradhan Mantri Gram Sadak Yojana (PMGSY), Sampoorna Gramin Rozgar Yojana (SGRY), Indira Awaas Yojana (Rural Housing), Sansad Adarsh Gram Yojna, Antyodaya Anna Yojna (AAY), Aam Aadmi Bima Yojna,Sarva Siksha Abhiyan, Prime Minister Arogya Yojana (PMAY G) etc.**

- **Pradhan Mantri Gram Sadak Yojana (PMGSY)**-Pradhan Mantri Gram Sadak Yojna was launched on **the 25th December, 2000**, by the Ministry of Rural Development.The expenditure is shared by **the Centre and State at ratio of 60:40.The main aim of this scheme was to provide road connectivity to the rural areas whose population is more than 500 persons and in hilly areas it is 250 persons.** Nearly **82%** of roads have been built till December **2017** which have successfully connected several

rural areas to cities. Remaining **47,000 habitations** will also get connected by all-weather roads by **March 2019**.

- **Sampoorna Gramin Rozgar Yojana (SGRY)**-By merging the on-going schemes of EAS (Employment Assurance Scheme) and the JGSY (Jawahar Gram Samridhi Yojna) The Government of India launched Swarnajayanti Gram Swarozgar Yojana on 25th September, 2001. **Resources distributed among District Panchayats, Intermediate Panchayats and the Gram Panchayats in the ratio of 20:30:50.** The scheme was framed to provide profitable employment and food to the rural poor. **Under this scheme, Government provides wages and food grains to those who live below the poverty line**. Creation of durable community, social & economic assets and infrastructural development in rural areas is a secondary objective of SGSY. **For example, in Kerala Yellow card is given for AAY family and in Telangana Pink ration card is used by AAY families.**

- **Pradhan Mantri Awaas Yojana (Gramin)/ Indira Awas Yojana-** Indira Awaas Yojana revamped as Pradhan Mantri Gramin Awaas Yojana in **2016** is a welfare programme created by the Indian Government to **provide housing to rural poor people in India**. Through the scheme, the government plans **to construct 29.5 million rural houses and 12 million urban houses by 2022, with a toilet, cooking gas, water, electricity supply and other basic amenities**.

- **Aam Aadmi Bima Yojna -**It is a social security scheme for rural households launched on 2nd October, 2007. **Under this scheme one member of the family is covered with a premium of Rs. 200/- per person per annum which is shared by the State and Central government.** The insured person should be between the 18 years to 59 years.

Are there any boundaries to policy-induced growth? This questions is in the air even as the subject of treatment over the effective policies with regards to the state rural development, might be still echoing in the room. In fact, when compared to the crisis and its resolution is examined, it does come out that the efforts established by governments in the development of rural sector, has not so far taken in the self-reliance that were required prior to the crisis. The policy of building healthy nation helped to a large extent, but has subsequently led to immobility when consumption lagged. For instance, India ranks 145th out of 195 countries regarding the quality and accessibility of Healthcare, based on the global burden of disease study published in 2018. **The lesson that we get from this is, there is no quick-prepare solution for growth; and development of the rural sector is a slow process and you can't expect the policies or actions to receive 100% outcome within an hour, days or a week.**

Schemes Initiated By The Government For The Rural Development

- The Government is aiming to double the farmers' income by 2022.

- Minimum Support Price (MSP) for all kharif crops has been increased by 1.5 times of their production cost, similar to the majority of rabi crops.

- Institutional credit to the agriculture sector is targetted at Rs 11 lakh crore for 2018-19, compared to Rs 10 lakh crore for 2017-18.
- A Fisheries and Aquaculture Infrastructure Development Fund (FAIDF) and an Animal Husbandry Infrastructure Development Fund (AHIDF) will be started with a total corpus of Rs 10,000 crore.
- Allocation for the National Rural Livelihood Mission has increased to Rs 5,750 crore for the year 2018-19.
- Budgeted expenditure on health, education and social protection for 2018-19 are Rs. 1.38 lakh crore which is expected to increase by Rs. 15,000 crore after additional allocations during the year.
- A new initiative named 'Revitalising Infrastructure and Systems in Education (RISE) by 2022' will be launched with an investment of Rs. 1 lakh crore over the next four years.
- A total of Rs. 1,200 crore is allocated for Health and Wellness Centres under the National Health Policy.
- National Health Protection Scheme which will cover over 10 million poor families with a coverage of up to Rs. 5.00 lakh will be launched. This will be the world's largest government-funded Healthcare programme.
- A total of 24 new Government Medical Colleges and Hospitals will be set up.
- 500,000 Wi-Fi hotspots will be set up by the government to provide internet connectivity to over 5 million rural citizens.
- The National Bank for Agriculture and Rural Development (NABARD) plans to provide around 200,000 point-of-sale (PoS) machines in 100,000 villages and distribute RuPay cards to over 34 million farmers across India, to enable farmers to undertake cashless transactions.
- The Government of India aims to provide tap water regularly to every household by 2030 in collaboration with United Nations Sustainable Development Goals, which requires a funding of Rs. 23,000 crore each year until the target is met.

RURAL DEVELOPMENT IN KARNATAKA

Rural development indicates a complex and long term process involving fundamental transformation of rural society, both at social and economic levels. It represents planned programs to upgrade the quality of ruaral lifestyle. **Merely, we shouldn't forget that rural growth is a choice determined by time, place and culture.** For example, at present **the cities found almost 55% of migrants from various different villages of Karnataka trying to earn their livelihood inside the urban centers**. Why? Unaware of the policies made by the government for the upliftment of ruralities, the ruralities are fascinated by the urban lifestyle and are migrating from villages to cities to earn better living. This in turn is a serious threat and challenge to us, but we nevertheless stopped trying to develop the rural sector.

We felt that, its necessary for the ruralities to be educated to know about the government policies. Since the literate level of villagers are very low, we adopted the policy formed by the Ministry of Rural Development in India, **Sarva Siksha Abhiyan(SSA)**. SSA is active since 2000 with the main aim to provide free and compulsory education to rural children between the age group of 6 to 14 years,

under **"Right to education"** related to the 86th Amendment to the Constitution of India. Currently, its expenditure is shared by the centre and state into 50: 50 ratios.

Our policies designed by the Karnataka State Planning Board with regards to the Rural development seeks to transmute all the sectors of the rural economic system – the primary sector, the secondary sector and the tertiary sector. It is concerned with the amelioration of the standard of livelihood of the ruralities through the supply of health and medical facilities, employment opportunities including vocational training, educational facilities etc.

"NAVA KARNATAKA VISION 2025"

On 3rd March 2018 we released "Nava Karnataka Vision 2025" document to provide a governance strategy for Karnataka over the next seven years from the date of release. The strategy included under Nava Karnataka 2025, witnessed short and medium term growth in different sector based on the consumption; in 2019. **The policies and programs were designated to function as a bridge between different sectors and various pursuits. Through Nava Karnataka 2025, we as the Government were striving to talk to every constituent and answer the questions, that mumbled in many minds "what's in it for me?".**

The Vision 2025 exercise covered 13 sectors that covered a sectoral spectrum, which lead to the State's future growth on key socio-economic and human development indicators. The sectors include Agriculture & Allied sectors, Infrastructure, Industrial Development, Services, Education, Employment & Skill Development, Health & Nutrition, Rural Development, Social Justice & Empowerment, Urban Development, IT & BT, among others, apart from areas such as Governance and Law & Order.

The Vision 2025 document was formulated through a participative and inclusive principle through broad based consultations, incorporating both a "**top-down" and "bottom-up**" approach involving stakeholders from the urban and rural sectors, industry, academia, people's representatives, voluntary sector, civil society, etc. These representatives from various field were given responsibility to develop the state and develop rural sector through the means of public consultations, workshops and seminars, conferences, interaction with various sectoral agencies and interest groups, representational organizations as well as through the creation of social media apps and tools for idea generation across a wide section of constituents.

In 2018, the State Government as a part of the direct approach, incorporated views and feedback from all corners of the State, including the 30 Districts. The purpose of the discussions was to obtain the different view of people in the state on the demand " **Where would they see Karnataka as a developed state over next 7 years?** And the feedback received from the masses in terms of essay was incorporated under 13 divisions, where some underwent grass root changes with respect to various views, critical thoughts and insights.

The Vision 2025 ensured that whatever Workshops conducted by the respective sectors, will engage in day-long discussions with stakeholders, involving breakout sessions which will assure that every participant receives a share of voice in the process of the Vision 2025 document formulation.**The State consciously wants to make a departure from the standard "ivory-tower" approach that is usually adopted while preparing such a document.** The State considers that only a participative visioning process can be really meaningful and implementable.

In 2025, Karnataka rural development will observe drastic change by applying the following agendas:-

- An initiation to improve the agriculture sector under the 'Krishi Bhagya' scheme. By providing Better irrigation planning, better use of available water, promotion of water-efficient technologies and crops, and a strategic approach to agricultural research.

- Leader in human development- the government will eradicate malnutrition from rural areas through mid-day meal programme and free milk distribution programme. We will render Help from NGOs and other volunteer agencies in training of work force, adoption of schools, provision of training and health infrastructure, and capacity-building of government itself.

- Leader in knowledge-intensive, ecologically-friendly economic activities- Adoption of a null tolerance policy towards air or water pollution exceeding environmental norms, enhancement of energy and water utilization efficiency, rain harvesting, world-class effluent treatment, and others.

- Have world-class infrastructure- Develop consensus across the political spectrum on the importance of infrastructure planning. Document the costs of inadequate infrastructure and demonstrate them to policy-makers, influencers across political parties.

- Offer opportunities for employment suiting people's locations and community choices.

The Karnataka State Government believes that successful regional visions result in the ability to focus growth where growth is most appropriate; the power to associate growth with transportation and infrastructure investment; predictable, balanced land-use rules that create a level-playing arena for developers & encourage the growth of more vibrant communities; and sufficient resources to support economic growth, infrastructure investment, and environmental security.

Thanking you,

JAI HIND

JAI KARNATAKA

10. ಕಾಶ್ಮೀರ ಕುರಿತು ಪಾಕಿಗೆ ಪಾಠ ಮಾಡಿದ ಕಾಗೇರಿ

ಉಗಾಂಡ ದೇಶದ ಕಂಪಾಲದಲ್ಲಿ ನಡೆದ 64ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದ (ಸಿಪಿಎ) ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಭಾಗವಹಿಸಿದ್ದು, ಸಭೆಯಲ್ಲಿ ಜಮ್ಮು-ಕಾಶ್ಮೀರದಲ್ಲಿ ಸೈನಿಕರ ಆಡಳಿತವಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲ ಎಂದು ಪಾಕಿಸ್ತಾನವು ತಪ್ಪು ಮಾಹಿತಿ ನೀಡುತ್ತಿದ್ದಂತೆ, ಭಾರತದ ಪ್ರತಿನಿಧಿಯಾಗಿದ್ದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿದಂತೆ ಹಲವು ರಾಜ್ಯಗಳ ವಿಧಾನ ಸಭಾಧ್ಯಕ್ಷರು ಕಾಶ್ಮೀರದಲ್ಲಿ ಸೈನಿಕ ಆಡಳಿತವಿಲ್ಲ, ರಾಜ್ಯಪಾಲರ ಆಡಳಿತವಿದೆ ಎಂದು ಸ್ಪಷ್ಟಪಡಿಸಿದರು.

ಭಾರತದ ಜಮ್ಮು-ಕಾಶ್ಮೀರದ ಸದಸ್ಯತ್ವವನ್ನು ಅಮಾನತ್ತಿನಲ್ಲಿಟ್ಟಿರುವ ವಿಧೇಯಕಕ್ಕೆ ಅನುಮೋದನೆ ನೀಡುವ ವಿಚಾರದಲ್ಲಿ ಪಾಕಿಸ್ತಾನವು ಅನಗತ್ಯವಾಗಿ ಜಮ್ಮು-ಕಾಶ್ಮೀರದಲ್ಲಿ ಸೈನಿಕ ಆಡಳಿತವಿದೆ. ಅಲ್ಲಿ ಪ್ರಜಾಪ್ರಭುತ್ವವಿಲ್ಲ ಎಂದು ಹೇಳಿ ಇತರ ವಿಚಾರ ಪ್ರಸ್ತಾಪಿಸುತ್ತಿದ್ದಂತೆ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಾತನಾಡಿ, ಇದು ಭಾರತದ ಆಂತರಿಕ ವಿಷಯ. ಭಾರತದ ಸಂಸತ್ತಿಗೆ ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವ ಅಧಿಕಾರವಿದೆ ಎಂದು ಹೇಳಿದರು. ಹಿಮಾಚಲ ಪ್ರದೇಶದ ವಿಧಾನ ಸಭಾಧ್ಯಕ್ಷರಾದ ಶ್ರೀ ರಾಜೀವ್ ಬಿಂದಲ್ ಅವರು ಪಾಕಿಸ್ತಾನವು ಸಮ್ಮೇಳನದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಕ್ಕೆ ವಿರೋಧ ವ್ಯಕ್ತಪಡಿಸಿದರು. ಆಸ್ಸಾಂ ವಿಧಾನ ಸಭಾಧ್ಯಕ್ಷರು, ಜಮ್ಮು-ಕಾಶ್ಮೀರದಲ್ಲಿ ಸೈನಿಕ ಆಡಳಿತ ಇಲ್ಲ. ಅಲ್ಲಿ ರಾಜ್ಯಪಾಲರ ಆಡಳಿತ ಇದೆ ಎಂದು ಸ್ಪಷ್ಟಪಡಿಸಿದರು.

ಆಧಾರ –ಉದಯವಾಣಿ, 29.09.2019

11. ಶಾಸಕರನ್ನು ಗೆಲ್ಲಿಸಿದ್ದು ಸದನಕ್ಕೆ ಬರಲು

ದಿನಾಂಕ:02.07.2019ರಂದು ನಡೆದ ವಿಧಾನಸಭೆಯ ಸದನದಲ್ಲಿ ಅತೃಪ್ತ ಶಾಸಕರ ಗೈರು ಹಾಜರಿಯ ಬಗ್ಗೆ ಆಪಾದನೆಯನ್ನು ಆಕ್ಷೇಪಿಸಿದ ಪ್ರತಿಪಕ್ಷದ ಸದಸ್ಯರ ವಿರುದ್ಧ ಸಭಾಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದರು.

ರಾಜೀನಾಮೆ ನೀಡಿರುವ ಬಿ.ಸಿ.ಪಾಟೀಲ್ ಮತ್ತು ಬಿ.ಜೆ.ಪಿ. ನಾಯಕರ ಒಡನಾಟ ಸಂಭಾಷಣೆ ಕುರಿತಂತೆ ಸಚಿವ ಕೃಷ್ಣಬೈರೇಗೌಡ ಅವರು ಪ್ರಸ್ತಾಪಿಸಿದಾಗ ಬಿ.ಜೆ.ಪಿ.ಯ ಜಗದೀಶ್ ಶೆಟ್ಟರ್ ಅವರು ಸದನದಲ್ಲಿ ಹಾಜರಿಲ್ಲದ ಸದಸ್ಯರ ಬಗ್ಗೆ ಮಾತನಾಡುವುದು ಬೇಜವಾಬ್ದಾರಿ ಎಂದರು. ಇದಕ್ಕೆ ಸಭಾಧ್ಯಕ್ಷರು ಜನ ಮತ ಹಾಕಿ ಕಳುಹಿಸಿರುವುದು ಸದನಕ್ಕೆ ಬರಲಿ ಬಂದು ಕೂರಲಿ ಎಂಬ ಉದ್ದೇಶದಿಂದ. ಸದನಕ್ಕೆ ಗೈರು ಹಾಜರಿ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಸದನಕ್ಕೆ ಬರಬೇಕಾದವರು ಬಂದು ತಮ್ಮನ್ನು ತಾವು ಸಮರ್ಥನೆ ಮಾಡಿಕೊಳ್ಳಲು ಸಿದ್ದರಿಲ್ಲ. ಇಂತಹ ಶಾಸಕರ ಬಗ್ಗೆ ಸದನದಲ್ಲಿ ಅಲ್ಲದೇ ಬೇರೆಲ್ಲಿ ಚರ್ಚೆ ಮಾಡಬೇಕು. ಗೈರು ಹಾಜರಾದ ಶಾಸಕರ ಬದಲಿಗೆ, ಅವರನ್ನು ಇಷ್ಟಪಟ್ಟು ಆಯ್ಕೆ ಮಾಡಿ ಕಳಿಸಿದ ಜನ ನಿಜಕ್ಕೂ ಅನಾಥರಾಗಿದ್ದಾರೆ ಎಂದು ಸಭಾಧ್ಯಕ್ಷರು ಪ್ರತಿಕ್ರಿಯಿಸಿದರು.

ಆಧಾರ–ವಿಜಯಕರ್ನಾಟಕ, 03.07.2019

12. ರಾಜೀನಾಮೆ ಅಂಗೀಕಾರಕ್ಕೆ ವಿಳಂಬ ಮಾಡಿಲ್ಲ

ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು, ಯಾರನ್ನೋ ಖುಷಿ ಪಡಿಸುವ ಇಲ್ಲವೇ ತೃಪ್ತಿಪಡಿಸುವುದಕೋಸ್ಕರ ನೀತಿ ನಿಯಮ ಮೀರಿ ಸಂವಿಧಾನದ ಆಶಯ ಮತ್ತು ಜನರ ಭಾವನೆಗಳನ್ನು ದಿಕ್ಕರಿಸಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಅತೃಪ್ತ ಶಾಸಕರ ರಾಜೀನಾಮೆ ಪತ್ರ ಸ್ವೀಕರಿಸಿದ ನಂತರ ಸುದ್ದಿಗಾರರಿಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ ಅವರು, ಸಾರ್ವಜನಿಕ ಜೀವನದಲ್ಲಿ ಸತ್ಯಕ್ಕೆ ಹತ್ತಿರವಾಗಿ ಕಾರ್ಯನಿರ್ವಹಿಸಿದ್ದೇನೆ. ಈಗಲೂ ಅದೇ ಹಾದಿಯಲ್ಲಿ ಮುಂದುವರೆದಿದ್ದೇನೆ. ಶಾಸಕರ

ರಾಜೀನಾಮೆ ಅಂಗೀಕರಿಸಲು ಯಾವುದೇ ವಿಳಂಬ ಮಾಡಿಲ್ಲ. ಸಂವಿಧಾನದ ನಿಯಮ 190ರ ಅನ್ವಯ ಶಾಸಕರ ರಾಜೀನಾಮೆ ಕುರಿತಂತೆ ನನಗೆ ಸ್ಪಷ್ಟ ಮನವರಿಕೆ ಮಾಡಿಕೊಳ್ಳಲು ಅವಕಾಶಗಳಿವೆ. ಅದರಂತೆಯೇ ಮುನ್ನಡೆಯಲಿದ್ದೇನೆಂದು ಸ್ಪಷ್ಟಪಡಿಸಿದರು. ಸುಪ್ರೀಂಕೋರ್ಟ್ ರಾಜೀನಾಮೆ ಅಂಗೀಕರಿಸಿ ಎಂದು ಎಲ್ಲಿಯೂ ಹೇಳಿಲ್ಲ. ಪಕ್ಷಾಂತರ ನಿಷೇಧ ಕಾಯ್ದೆ ಜಾರಿ ಮಾಡಿರುವ ಉದ್ದೇಶ ಪರಿಪಾಲನೆ ಆಗಬೇಕಿದೆ ಎಂದು ತಿಳಿಸಿದರು.

ಬೇರೆ ಬೇರೆ ರಾಜ್ಯಗಳಲ್ಲಿ ಶಾಸಕರು ರಾಜೀನಾಮೆ ನೀಡಿದ್ದರೂ ವರ್ಷಾನುಗಟ್ಟಲೆ ತೀರ್ಮಾನ ಕೈಗೊಳ್ಳದ ಉದಾಹರಣೆಗಳಿವೆ. ಅದೇ ರೀತಿ ಶಾಸಕರನ್ನು ಅನರ್ಹಗೊಳಿಸುವ ವಿಷಯವು ಹಾಗೆಯೇ ನೆನೆಗುದಿಗೆ ಬಿದ್ದಿರುವ ಸಂಗತಿಗಳು ಸಾಕಷ್ಟಿವೆ ಎಂದು ತಮ್ಮ ಧೋರಣೆಯನ್ನು ಸಮರ್ಥಿಸಿಕೊಂಡು ಇಡೀ ಪ್ರಕ್ರಿಯೆಯು ಯಾರನ್ನು ಉಳಿಸುತ್ತದೆ ಎಂಬುದಲ್ಲ, ಸಭಾಧ್ಯಕ್ಷರಾಗಿ ನನ್ನ ಕರ್ತವ್ಯ ನಿಭಾಯಿಸಬೇಕಾಗಿದೆ ಎಂದಿದ್ದಾರೆ.

ಶಾಸಕರು ದಿನಾಂಕ:06.07.2019ರಂದು ರಾಜೀನಾಮೆ ನೀಡಿದ್ದು, ಅಂದು ಮಧ್ಯಾಹ್ನ 12.45ರ ರವರೆಗೆ ಮಾನ್ಯ ಸಭಾಧ್ಯಕ್ಷರ ಕಛೇರಿಗೆ ಹಾಜರಾಗದೇ ಸುಮಾರು ಮಧ್ಯಾಹ್ನ 2.30ರ ವೇಳೆಗೆ ಆಗಮಿಸಿ ನನ್ನ ಅನುಪಸ್ಥಿತಿಯಲ್ಲಿ ರಾಜೀನಾಮೆ ನೀಡಿರುತ್ತಾರೆ. ಶಾಸಕರು ಬರುವ ಪೂರ್ವದಲ್ಲಿ ಮಾಹಿತಿಯನ್ನು ನೀಡಬೇಕಿತ್ತು. ಆದರೆ, ಮುಂಬೈಗೆ ತೆರಳಿ ಮಾಧ್ಯಮಗೋಷ್ಠಿ ಮಾಡಿ ಜೀವ ಭಯ ಇದೆ ಎಂದು ತಿಳಿಸಿರುತ್ತಾರೆ. ನನ್ನ ಎದುರಿಗೆ ತಿಳಿಸಿದ್ದರೆ ರಕ್ಷಣೆ ಕೊಡುತ್ತಿದ್ದೆ. ಮುಂಬೈಯಿಂದ ದೆಹಲಿಗೆ ತೆರಳಿ ಸುಪ್ರೀಂಕೋರ್ಟ್ ಆದೇಶ ಮೂಲಕ ಬೆಂಗಳೂರಿನಲ್ಲಿ ಬಿಗಿ ಭದ್ರತೆಯಲ್ಲಿ ಆಗಮಿಸಿ ಪುನಃ ರಾಜೀನಾಮೆ ಪತ್ರವನ್ನು ನೀಡಿರುತ್ತಾರೆ. ರಾಜ್ಯದ ಜನತೆಗೆ ವಾಸ್ತವಾಂಶದ ಮನವರಿಕೆ ಹಾಗೂ ಸಂವಿಧಾನ ಆಶಯಗಳನ್ನು ಪರಿಪಾಲಿಸುವುದಾಗಿ ತಿಳಿಸಿದರು.

ಆಧಾರ–ಸಂಯುಕ್ತ ಕರ್ನಾಟಕ 12.07.2019

13. ಹೊಸ ಸಂಪ್ರದಾಯಕ್ಕೆ ಮೇಲ್ಮನೆ ನಾಂದಿ

ಸಭಾಪತಿಗಳು, ಮೇಲ್ಮನೆ ಸದಸ್ಯರಾಗಿದ್ದವರು, ಕರ್ನಾಟಕದಿಂದ ಕೇಂದ್ರದಲ್ಲಿ ಸಚಿವರಾಗಿದ್ದವರು, ಸಮಾಜದ ವಿವಿಧ ಸ್ತರದ ಗಣ್ಯರು ನಿಧನರಾದಲ್ಲಿ ಅವರುಗಳಿಗೆ ಸಂತಾಪ ಸೂಚನೆ ಮಾಡುವುದು ಸಂಪ್ರದಾಯವಾಗಿದೆ. ಕೆಳಮನೆಯಲ್ಲಿ ಸದಸ್ಯರಾಗಿದ್ದವರು ನಿಧನರಾಗಿದ್ದ ಬಗ್ಗೆಯೂ ಸಂತಾಪ ಸೂಚಿಸಬೇಕು ಎಂದಾದಲ್ಲಿ ಸಭಾನಾಯಕರು, ಪ್ರತಿಪಕ್ಷದ ನಾಯಕರ ಜೊತೆ ಚರ್ಚೆ ಮಾಡುವುದಾಗಿ ತಿಳಿಸಿದರು.

ಕೆಲವು ಸದಸ್ಯರುಗಳು, ಕೆಳಮನೆಯಲ್ಲಿ ಸದಸ್ಯರಾಗಿದ್ದವರು ಕೂಡ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿರುತ್ತಾರೆ. ಅವರುಗಳು ನಿಧನರಾದ ಮೇಲೆ ಅವರಿಗೆ ಮೇಲ್ಮನೆಯಲ್ಲೂ ಗೌರವ ಸೂಚಿಸಬೇಕಾಗುತ್ತದೆ. ಈಗಲೇ ಅದನ್ನು ಪಾಲನೆ ಮಾಡುವಂತೆ ಮನವಿ ಮಾಡಿಕೊಂಡರು.

ಸದಸ್ಯರ ಮನವಿಗೆ ಸ್ಪಂದಿಸಿದ ಮಾನ್ಯ ಸಭಾಪತಿಗಳು ಕೆಳಮನೆ ಸದಸ್ಯರಾಗಿ ನಿಧನರಾದವರಿಗೆ ಸಂತಾಪ ಸೂಚನೆ ಮಾಡುವುದರ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು. ಸಭಾನಾಯಕಿ ಜಯಮಾಲ ಇದನ್ನು ಸ್ವಾಗತಿಸಿ ಕೆಳಮನೆ ಸದಸ್ಯರಾಗಿದ್ದವರಿಗೆ ಸಂತಾಪ ಸೂಚನೆ ಮಾಡಲಾಗಿರುವುದರಿಂದ, ಅದೇ ರೀತಿ ಕೆಳಮನೆಯಲ್ಲಿ ಇದೇ ಸಂಪ್ರದಾಯವನ್ನು ಪಾಲಿಸಿದರೆ ಸೂಕ್ತ ಎಂದರು.

ಆಧಾರ–ಸಂಯುಕ್ತಕರ್ನಾಟಕ, 13.07.2019

14. ಸದನದ ಗ್ಯಾಲರಿಯಲ್ಲಿ ರಾಜ್ಯಪಾಲರ ಪ್ರತಿನಿಧಿ

ವಿಧಾನಸಭೆಯಲ್ಲಿ ದಿನಾಂಕ:18.07.2019ರಂದು ವಿಶ್ವಾಸ ಮತಯಾಚನೆಯ ಸಂದರ್ಭದಲ್ಲಿ ಇಡೀ ಕಾರ್ಯಕಲಾಪದ ಮೇಲೆ ರಾಜ್ಯಪಾಲರು ನಿಗಾವಹಿಸಿರುವುದರಿಂದ, ಅಧಿವೇಶನದಲ್ಲಿ ನಡೆಯುವ ಚರ್ಚೆಗಳ ವಿವರ ಮತ್ತು ಘಟನೆ ಕುರಿತು ಮಾಹಿತಿ ನೀಡುವಂತೆ ರಾಜ್ಯಪಾಲರು ತಮ್ಮ ಅಧಿಕಾರಿಯಾದ ಶ್ರೀ ರಮೇಶ್

ರವರಿಗೆ ಸೂಚನೆ ನೀಡಿದ್ದರಿಂದ, ಅವರು ಅಧಿಕಾರಿಗಳ ಗ್ಯಾಲರಿಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರೊಂದಿಗೆ ಕುಳಿತು ಸದನದಲ್ಲಿ ನಡೆದ ಚರ್ಚೆಯ ಸ್ವರೂಪ, ವಾದವಿವಾದ, ಸಭಾಧ್ಯಕ್ಷರ ನಡೆ, ಆಡಳಿತ ಪಕ್ಷ ಮತ್ತು ಪ್ರತಿಪಕ್ಷದ ನಾಯಕರುಗಳು ಪ್ರಸ್ತಾಪಿಸಿದ ವಿಷಯದ ಬಗ್ಗೆ ಮಾಹಿತಿಯನ್ನು ಕ್ರೂಢೀಕರಿಸಿ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಿರುತ್ತಾರೆ.

ಆಧಾರ–ಉದಯವಾಣಿ, 19.07.2019

15. ಅಧಿಕಾರಕ್ಕಾಗಿ ನಿಲ್ಲದ ಹಗ್ಗಾಟ

ದಿನಾಂಕ:19.07.2019ರಂದು ಬಹುಮತ ಸಾಬೀತುಪಡಿಸಿ ಎಂದು ರಾಜ್ಯಪಾಲರಾದ ವಾಜುಬಾಯಿ ವಾಲ ಇವರು ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರಿಗೆ ನಿರ್ದೇಶನ ನೀಡಿರುತ್ತಾರೆ. ಕಲಾಪ ಆರಂಭವಾಗುತ್ತಿದ್ದಂತೆ ಚರ್ಚೆ ಆರಂಭಿಸಿದ ಕುಮಾರಸ್ವಾಮಿಯವರು ವಿಶ್ವಾಸ ಮತ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿರುವಾಗ ಗಡುವು ವಿಧಿಸುವಂತೆ ನಿರ್ದೇಶನ ನೀಡಿರುವುದು ಸರಿಯಲ್ಲ ಎಂದು ತಿಳಿಸಿದಾಗ ಕಲಾಪ ಇನ್ನಷ್ಟು ವಿಳಂಭವಾಗುವ ಸೂಚನೆ ನೀಡಿದರು.

ರಾಜಭವನದ ಪ್ರತಿನಿಧಿಗಳು 2 ಗಂಟೆಯ ವೇಳೆಗೆ ಕಲಾಪದ ಕುರಿತು ವರದಿಯನ್ನು ಸಲ್ಲಿಸಲಾಗಿ, ಮತ್ತೊಂದು ಸೂಚನೆಯನ್ನು ರಾಜ್ಯಪಾಲರು ಕಳುಹಿಸಿದರು. ಉದ್ದೇಶ ಪೂರ್ವಕವಾಗಿ ವಿಳಂಬವಾಗುತ್ತಿದೆ ಎಂಬ ಅನುಮಾನ ಬೇಡ. ರಾತ್ರಿ 7.30ರೊಳಗಾಗಿ ಪೂರ್ಣಗೊಳಿಸೋಣವೆಂದು ಸಭಾಧ್ಯಕ್ಷರು ಪ್ರತಿಪಾದಿಸಿದರು.

ಸಚಿವರು ಇಲಾಖೆಯ ಸಾಧನೆಯ ಬಗ್ಗೆ ಹೇಳಬೇಕಾಗಿದೆ, 26 ಶಾಸಕರು ಮಾತನಾಡುವುದು ಇರುವುದರಿಂದ ಸೋಮವಾರ ಚರ್ಚೆಯನ್ನು ಪೂರ್ಣಗೊಳಿಸಿ ಅಂದೇ ಮತಕ್ಕೆ ಹಾಕೋಣ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ಅವರು ಹೇಳಿದರು. ಇದಕ್ಕೆ ವಿರೋಧ ಪಕ್ಷದ ನಾಯಕರಾದ ಬಿ.ಎಸ್.ಯಡಿಯೂರಪ್ಪ ಹಾಗೂ ಶಾಸಕರಾದ ಜೆ.ಸಿ.ಮಾಧುಸ್ವಾಮಿ, ಬಸವರಾಜ ಬೊಮ್ಮಾಯಿ ಅವರುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಆಧಾರ–ಪ್ರಜಾವಾಣಿ/ಕನ್ನಡಪ್ರಭ, 20.07.2019

16. ರಾಜೀನಾಮೆ ಇತ್ತವರಿಗೆ ವಿಪ್ ಅನ್ವಯ

ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಪಕ್ಷದ ಎಲ್ಲಾ ಶಾಸಕರಿಗೆ ವಿಪ್ ನೀಡುವ ಹಕ್ಕು ಶಾಸಕಾಂಗ ಪಕ್ಷದ ನಾಯಕರಿಗೆ ಇದೆ. ರಾಜೀನಾಮೆ ನೀಡಿರುವ ಶಾಸಕರಿಗೆ ಹೀಗೆಯೇ ಮಾಡಬೇಕೆಂದು ಒತ್ತಡ ಹೇರುವಂತಿಲ್ಲ ಎಂದು ಸುಪ್ರೀಂಕೋರ್ಟ್ ನೀಡಿರುವ ಆದೇಶ ಶಾಸಕಾಂಗ ಪಕ್ಷದ ನಾಯಕರಲ್ಲದ ಬೇರೆಯವರಿಗೆ ಅನ್ವಯವಾಗುತ್ತದೆ ಎಂದು ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ಕೆ.ಆರ್.ರಮೇಶ್‌ಕುಮಾರ್ ಅವರು ರೂಲಿಂಗ್ ನೀಡಿರುತ್ತಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸುಪ್ರೀಂಕೋರ್ಟ್ ನೀಡಿದ ಮಧ್ಯಂತರ ಆದೇಶದ ಸಂವಿಧಾನದ 10ನೇ ಪರಿಚ್ಛೇದ ಅನ್ವಯ ಶಾಸಕರಿಗೆ ವಿಪ್ ನೀಡುವ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ ಎಂದು ತಿಳಿಸಿದ ಕ್ರಿಯಾಲೋಪದ ಬಗ್ಗೆ ಸಭಾಧ್ಯಕ್ಷರು ಸುಪ್ರೀಂಕೋರ್ಟ್ ತನ್ನ ಆದೇಶದ ಸಂವಿಧಾನದ 10ನೇ ಪರಿಚ್ಛೇದವನ್ನು ಮೊಟಕುಗೊಳಿಸುವ ಪ್ರಯತ್ನವನ್ನು ಮಾಡಿರುವುದಿಲ್ಲ ಎಂದು ತಿಳಿಸಿದರು.

ಸುಪ್ರೀಂಕೋರ್ಟ್ ಮೊರೆ ಹೋಗಿದ್ದ 12 ಶಾಸಕರಿಗೆ ಶಾಸಕಾಂಗ ಪಕ್ಷದ ನಾಯಕರನ್ನು ಹೊರತುಪಡಿಸಿ ಬೇರೆ ಯಾರಾದರೂ ಬಲವಂತ ಮಾಡಿದರೆ ಇಲ್ಲವೇ ಒತ್ತಡ ಹೇರಿದರೆ ಅವರಿಗೆ ರಕ್ಷಣೆ ಕೊಡುವುದು ಸಭಾಧ್ಯಕ್ಷರ ಜವಾಬ್ದಾರಿ. ಅದರಂತೆ ನನ್ನ ಕಾರ್ಯವನ್ನು ನಿಭಾಯಿಸಿರುತ್ತೇನೆ ಎಂದು ಸ್ಪಷ್ಟಪಡಿಸಿದರು.

ಆಧಾರ–ಕನ್ನಡಪ್ರಭ, 23.07.2019

17. ಮಾನ್ಯ ಸಭಾಧ್ಯಕ್ಷರವರ ತೀರ್ಪು

ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷಗಳ ದೂರಿನ ಅನ್ವಯ 3 ಮಂದಿ ಹಾಗೂ 14 ಮಂದಿ ಶಾಸಕರುಗಳನ್ನು ಸದಸ್ಯತ್ವದಿಂದ ಪಕ್ಷಾಂತರ ನಿಷೇಧ ಕಾಯ್ದೆಯಡಿ 15ನೇ ವಿಧಾನಸಭೆ ಮುಗಿಯುವವರೆಗೆ ಮಾನ್ಯ ಸಭಾಧ್ಯಕ್ಷರು ಅನರ್ಹಗೊಳಿಸಿ ತೀರ್ಪನ್ನು ಪ್ರಕಟಿಸಿದರು. ಇದರಿಂದ ಅತೃಪ್ತ ಶಾಸಕರು ಸುಪ್ರೀಂಕೋರ್ಟ್ ಮೊರೆ ಹೋಗಲು ನಿರ್ಧರಿಸಿದರು.

ಮಾನ್ಯ ಸಭಾಧ್ಯಕ್ಷರು ತಾವು ನೀಡಿರುವ ತೀರ್ಪು ಅಂತಿಮ ತೀರ್ಪಲ್ಲ. ಅನರ್ಹಗೊಂಡಿರುವ ಶಾಸಕರು ಮಾನ್ಯ ಸಭಾಧ್ಯಕ್ಷರ ತೀರ್ಪನ್ನು ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಲು ಅವಕಾಶವಿದೆ. ಈ ಹಿನ್ನೆಲೆಯಲ್ಲಿ ಅನರ್ಹ ಶಾಸಕರುಗಳು ಸಲ್ಲಿಸಿರುವ ರಾಜೀನಾಮೆ ಅಂಗೀಕಾರವಾಗದಿರುವ ಕುರಿತು ಪ್ರಕರಣವು ಬಾಕಿ ಇದ್ದು, ಅಂತಿಮವಾಗಿ ಅನರ್ಹಗೊಂಡ ಶಾಸಕರ ವಿಷಯದಲ್ಲಿ ಸುಪ್ರೀಂಕೋರ್ಟ್ ನೀಡುವ ತೀರ್ಪು ಪ್ರಮುಖವಾಗಲಿದೆ ಎಂದು ಸಮರ್ಥಿಸಿಕೊಂಡರು.

ಆಧಾರ–ಕನ್ನಡಪ್ರಭ, 26.07.2019

18. ಹಿತೈಷಿಗಳು ಎನ್ನುವ ಭ್ರಮೆ ಬೇಡ

ಸದನದಲ್ಲಿ ವಿಶ್ವಾಸ ಮತಯಾಚನೆ, ಹಣಕಾಸು ಮಸೂದೆ ಹಾಗೂ ಪೂರಕ ಅಂದಾಜಿಗೆ ಅನುಮೋದನೆ ಸಿಕ್ಕ ಬಳಿಕ, ಶ್ರೀ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿ.ಜೆ.ಪಿ. ಸರ್ಕಾರ ವಿಶ್ವಾಸ ಮತ ಗೆದ್ದ ಬೆನ್ನಲ್ಲೇ ವಿಧಾನ ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್ ಅವರು, ಅಧಿಕಾರ ಬಂದಾಗ ನಿಮ್ಮ ಸುತ್ತಮುತ್ತಾ ತುಂಬಾ ಮಂದಿ ಸುಳಿದಾಡುತ್ತಾರೆ. ಈ ಬಗ್ಗೆ ಜಾಗರೂಕತೆ ವಹಿಸಿ ಹಿತೈಷಿಗಳು ಎಂಬ ಭ್ರಮೆಗೆ ಒಳಗಾಗಬೇಡಿ ಎಂದು ಮುಖ್ಯಮಂತ್ರಿಯವರಿಗೆ ಕಿವಿ ಮಾತನ್ನು ಹೇಳಿದರು.

ದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವ ಉಳಿಸಲು ಪಕ್ಷಾಂತರ ನಿಷೇಧ ಕಾಯ್ದೆಯನ್ನು ಇನ್ನಷ್ಟು ಶಕ್ತಿಯುತಗೊಳಿಸಬೇಕಾಗಿರುವುದರಿಂದ ಸದನದಲ್ಲಿ ನಿರ್ಧಾರ ಕೈಗೊಳ್ಳಬೇಕು. ಈ ಮೂಲಕ ಬೇರೆ ರಾಜ್ಯಗಳ ಸದನಗಳಿಗೂ ಒತ್ತಡ ಹೇರುವ ಕೆಲಸವಾಗಬೇಕು. ಇದು ಪ್ರಜಾಪ್ರತಿನಿಧಿಗಳ ಕಾಯ್ದೆಯನ್ನು ಪುನಃ ಪರಾಮರ್ಶೆ ಮಾಡಬೇಕೆಂದು ಶ್ರೀ ರಮೇಶ್‌ಕುಮಾರ್‌ರವರು ಪ್ರತಿಪಾದಿಸಿದರು. ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಶ್ರೀ ರಮೇಶ್ ಕುಮಾರ್ ಒಟ್ಟು 14 ತಿಂಗಳು 4 ದಿನಗಳ ಕಾಲ ವಿಧಾನಸಭಾಧ್ಯಕ್ಷರಾಗಿರುತ್ತಾರೆ.

ಆಧಾರ–ಪ್ರಜಾವಾಣಿ, 30.07.2019

19. ಶಾಸಕರ ಖಾತೆಗೆ ವೇತನ

ಶಾಸಕರ ವೇತನ ಹಾಗೂ ಭತ್ಯೆಯನ್ನು ಇನ್ನು ಮುಂದೆ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲು ಸರ್ಕಾರ ಉದ್ದೇಶಿಸಿದೆ. ಇದುವರೆಗೆ ಶಾಸಕರ ವೇತನ ಹಾಗೂ ಭತ್ಯೆಯನ್ನು ಧನಾದೇಶದ ಮೂಲಕ ವಿತರಿಸಿ ಅದನ್ನು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗುತ್ತಿತ್ತು. ಎಲ್ಲಾ ವ್ಯವಹಾರಗಳನ್ನು ಖಜಾನೆ–2 ಮೂಲಕ ಸೆಪ್ಟೆಂಬರ್ 20ರ ನಂತರ ನಿರ್ವಹಿಸಲಿರುವುದರಿಂದ ಧನಾದೇಶದ ಮೂಲಕ ಪಾವತಿ ಮಾಡುವ ವ್ಯವಸ್ಥೆ ರದ್ದುಪಡಿಸುವುದಾಗಿ ಆರ್ಥಿಕ ಇಲಾಖೆಯವರು ತಿಳಿಸಿರುತ್ತಾರೆ.

ಆದುದರಿಂದ, ನೂತನ ವ್ಯವಸ್ಥೆ ಜಾರಿಗೆ ಬಂದ ನಂತರ ಶಾಸಕರಿಗೆ ವೇತನ ಮತ್ತು ಭತ್ಯೆಯನ್ನು ಅವರವರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆಯಾಗಲಿದೆ.

ಆಧಾರ–ಸಂಯುಕ್ತ ಕರ್ನಾಟಕ, 16.09.2019

ಭಾಗ – 2

ಸಂಸತ್ತಿನ ಸುದ್ದಿಗಳು

1. ವಿಭಾಗವಾರು ಮೀಸಲಾತಿ ಇಲ್ಲ: ಮಸೂದೆಗೆ ಲೋಕಸಭೆ ಒಪ್ಪಿಗೆ

ಕೇಂದ್ರಿಯ ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ಲೆಕ್ಕ ಹಾಕಲು ವಿಭಾಗದ ಬದಲಿಗೆ ಇಡೀ ವಿಶ್ವವಿದ್ಯಾಲಯವನ್ನು ಒಂದು ಘಟಕವಾಗಿ ಪರಿಗಣಿಸುವ ಮಸೂದೆಗೆ ಲೋಕಸಭೆ ಒಪ್ಪಿಗೆ ಕೊಟ್ಟಿದೆ. ಮೀಸಲು ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಉದ್ಯೋಗ ದೊರೆಯುವುದನ್ನು ಖಾತರಿಪಡಿಸುವ ಅಂಶವೂ ಈ ಮಸೂದೆಯಲ್ಲಿ ಇದೆ.

ಆಧಾರ–ಪ್ರಜಾವಾಣಿ, 02.07.2019

2. ರಾಷ್ಟ್ರಪತಿ ಆಳ್ವಿಕೆ ವಿಸ್ತರಣೆಗೆ ಸಮ್ಮತಿ

ಕೇಂದ್ರ ಸರ್ಕಾರವು ಭಯೋತ್ಪಾದನೆಯನ್ನು ಸಹಿಸುವುದಿಲ್ಲ ಮತ್ತು ಜಮ್ಮು ಮತ್ತು ಕಾಶ್ಮೀರದ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಅವರು ಪುನರುಚ್ಚರಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಆರು ತಿಂಗಳು ವಿಸ್ತರಿಸುವ ಮಸೂದೆಯ ಮೇಲಿನ ಚರ್ಚೆಗೆ ಶಾ ಉತ್ತರಿಸಿದರು. ಶಾ ಅವರ ಉತ್ತರದ ಬಳಿಕ ರಾಷ್ಟ್ರಪತಿ ಆಳ್ವಿಕೆಯನ್ನು ವಿಸ್ತರಿಸುವ ಮಸೂದೆಗೆ ರಾಜ್ಯಸಭೆ ಒಪ್ಪಿಗೆ ನೀಡಿರುತ್ತದೆ.

ಕಾಶ್ಮೀರದ ಪರಂಪರೆ, ಮಾನವೀಯತೆ ಮತ್ತು ಶಾಂತಿಯನ್ನು ಕಾಪಾಡಲು ಅಗತ್ಯವಾದ ನೀತಿಯನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅನುಸರಿಸುತ್ತಿದೆ. ಅಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ಜನರಿಗೆ ಅಡುಗೆ ಅನಿಲ ಮತ್ತು ವಿದ್ಯುತ್ ಒದಗಿಸಲಾಗಿದೆ. ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಶಾ ವಿವರಿಸಿದರು. ರಾಜ್ಯದ ತೀವ್ರವಾದಿ ಗುಂಪುಗಳನ್ನು ಅವರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಆಧಾರ–ಪ್ರಜಾವಾಣಿ, 02.07.2019

3. ಮಾನವೀಯತೆಯೇ ಆದ್ಯತೆ ರಾಜ್ಯಸಭೆಯಲ್ಲಿ ಕಾಶ್ಮೀರ ಮೀಸಲು ವಿಧೇಯಕ ಅಂಗೀಕಾರ

ಜಮ್ಮು ಮತ್ತು ಕಾಶ್ಮೀರದಲ್ಲಿ ಜುಲೈ 3ರಿಂದ ಅನ್ವಯವಾಗುವಂತೆ ಆರು ತಿಂಗಳ ಕಾಲ ರಾಷ್ಟ್ರಪತಿ ಆಳ್ವಿಕೆ ವಿಸ್ತರಿಸುವ ಕೇಂದ್ರದ ಪ್ರಸ್ತಾವಕ್ಕೆ ರಾಜ್ಯಸಭೆಯಲ್ಲಿಯೂ ಅನುಮತಿ ಹಾಗೂ ಜಮ್ಮು ಮತ್ತು ಕಾಶ್ಮೀರ ಮೀಸಲು (ತಿದ್ದುಪಡಿ) ವಿಧೇಯಕ 2019 ಮೇಲ್ಮನೆಯಲ್ಲಿಯೂ ಅಂಗೀಕಾರವಾಗಿದೆ. ಲೋಕಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಡಿಸಿದ್ದ ಗೊತ್ತುವಳಿಗೆ ಚರ್ಚೆ ನಡೆದು ಅನುಮೋದನೆ ದೊರೆತಿದೆ.

ರಾಜ್ಯಸಭೆಯಲ್ಲಿ ವಿಧೇಯಕ ಮಂಡಿಸಿ, ಬಿರುಸಿನ ಚರ್ಚೆ ನಡೆಸಿದ ನಂತರ ಉತ್ತರಿಸಿದ ಗೃಹ ಸಚಿವ ಅಮಿತ್ ಶಾ, ದೇಶವನ್ನು ಒಡೆಯಬೇಕು ಎಂದು ವಾದ ಮಾಡುವವರ ವಿರುದ್ಧ ಕೇಂದ್ರ ಸರ್ಕಾರ ಕಠಿಣವಾಗಿಯೇ ವರ್ತಿಸಲಿದೆ ಎಂದು ಎಚ್ಚರಿಕೆ ನೀಡಿದರು.

ಆಧಾರ–ಉದಯವಾಣಿ, 02.07.2019

4. ವೈದ್ಯಕೀಯ ಮಂಡಳಿ ತಿದ್ದುಪಡಿ ವಿಧೇಯಕಕ್ಕೆ ಅಸ್ತು

ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ತರುವ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಮಂಡಿಸಿದ ವೈದ್ಯಕೀಯ ಮಂಡಳಿ ತಿದ್ದುಪಡಿ ವಿಧೇಯಕಕ್ಕೆ ಧ್ವನಿಮತದ ಒಪ್ಪಿಗೆ ದೊರೆತ ನಂತರ ವಿಧೇಯಕದ ಬಗ್ಗೆ ಮಾತನಾಡಿದ ಆರೋಗ್ಯ ಸಚಿವ ಹರ್ಷವರ್ಧನ್, ವೈದ್ಯಕೀಯ ಕ್ಷೇತ್ರದಲ್ಲಿ ತರಲುದ್ದೇಶಿಸಿರುವ ಮಹತ್ವದ ಸುಧಾರಣೆಗಳಿಗೆ ಇದು ಆರಂಭವಷ್ಟೆ. ವೈದ್ಯರಿಗೆ, ಹೊಸ ಕಾಲೇಜುಗಳಿಗೆ ಮತ್ತು ವೈದ್ಯಕೀಯ ಪಠ್ಯ ಕುರಿತು ಮಾನದಂಡ ನಿಗದಿಪಡಿಸಲು 1956ರ ವೈದ್ಯಕೀಯ ಮಂಡಳಿ ಕಾಯ್ದೆಯಡಿ ಭಾರತೀಯ ವೈದ್ಯಕೀಯ ಮಂಡಳಿ ಸ್ಥಾಪಿಸಲಾಗಿದೆ. ಸರ್ಕಾರ

ಹೊರಡಿಸಿರುವ ಸುಗ್ರೀವಾಜ್ಞೆಯಂತೆ ಈಗ ವೈದ್ಯಕೀಯ ಮಂಡಳಿ ಬದಲು ಬೋರ್ಡ್ ಆಫ್ ಕೌನ್ಸಿಲ್ ಸ್ಥಾಪಿಸಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಆಧಾರ–ಸಂಯುಕ್ತಕರ್ನಾಟಕ, 03.07.2019

5. ಅಧಿವೇಶನಕ್ಕೆ ಗೈರು: ಶಿಸ್ತಿನ ಚಾಟಿ ಬೀಸಿದ ಮೋದಿ

ಲೋಕಸಭೆ ಅಧಿವೇಶನಕ್ಕೆ ಉದ್ದೇಶಪೂರ್ವಕವಾಗಿಯೇ ಗೈರು ಹಾಜರಾಗುತ್ತಿರುವ ಬಿಜೆಪಿಯ ಸಂಸತ್ ಸದಸ್ಯರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಇಂತಹ ವರ್ತನೆಗಳು ಸಹನೀಯವಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಪಕ್ಷದ ಸಂಸತ್ ಸದಸ್ಯರ ಹಾಜರಾತಿಯನ್ನು ತಾವು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿಯೂ, ಪ್ರಮುಖ ವಿಷಯಗಳ ಕುರಿತ ಚರ್ಚೆಯ ಸಂದರ್ಭದಲ್ಲಿ, ಮುಖ್ಯವಾದ ಮಸೂದೆ ಮಂಡಿಸುವ ಸಂದರ್ಭದಲ್ಲಿ, ಬಿಜೆಪಿಯ ಸಂಸತ್ ಸದಸ್ಯರು ಗೈರುಹಾಜರಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿಯೂ ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಹೇಳಿದರು.

ನಿಮ್ಮ ಕ್ಷೇತ್ರಗಳಲ್ಲಿ ಆಯೋಜಿಸಿರುವ ಸಭೆಯಲ್ಲಿ ಪಾಲ್ಗೊಳ್ಳುವುದಾಗಿ ಹೇಳಿ ಅಮಿತ್ ಶಾ ಬಾರದೆ ಹೋದರೆ ನಿಮಗೆ ಹೇಗೆನಿಸುತ್ತದೆ ಎಂದು ಪ್ರಶ್ನಿಸಿದರು. ಸಂಸತ್ ಸದಸ್ಯರನ್ನುದ್ದೇಶಿಸಿ ನೀವು ಹೇಳಿ ನಿಮಗೆ ಹೇಗೆನಿಸುತ್ತದೆ ಎಂದು ಪದೇಪದೇ ಪ್ರಶ್ನಿಸಿದರು.

ನೀವು 2 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದು, ನಿಮ್ಮ ಆಪ್ತ ಸ್ನೇಹಿತನೇ ನಿಮಗೆ ಮತ ಹಾಕಿಲ್ಲ ಎಂಬುದು ಗೊತ್ತಾದರೆ, ನಿಮಗೆ ಹೇಗೆನಿಸುತ್ತದೆ ಎಂದು ಮತ್ತೊಂದು ಪ್ರಶ್ನೆ ಕೇಳಿದರು. ಆಗ ನಿಮಗೆ ಹೇಗೆನಿಸುತ್ತದೋ ಹಾಗೆಯೇ ನೀವು ಅಧಿವೇಶನದಲ್ಲಿ ಭಾಗವಹಿಸದೇ ಗೈರು ಆದಾಗ ನನಗೂ ತುಂಬಾ ನೋವಾಗುತ್ತದೆ ಎಂದರು.

ಆಧಾರ–ವಿಶ್ವವಾಣಿ, 03.07.2019

6. ಆಧಾರ್ ಮಸೂದೆ ಸಂಸತ್ ಒಪ್ಪಿಗೆ

ಆಧಾರ್ ಸಂಖ್ಯೆಯನ್ನು ಸ್ವಯಂಪ್ರೇರಿತವಾಗಿ ಗುರುತಿನ ಚೀಟಿಯಂತೆ ಬಳಸಲು ಅವಕಾಶ ಕಲ್ಪಿಸುವ ಆಧಾರ್ ಮತ್ತು ಇನ್ನಿತರ ಕಾನೂನು (ತಿದ್ದುಪಡಿ) ಮಸೂದೆಗೆ ಸಂಸತ್‌ನ ಒಪ್ಪಿಗೆ ದೊರೆತಿದೆ. ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲು, ಮೊಬೈಲ್ ಸಿಮ್ ಸಂಪರ್ಕ ಪಡೆಯಲು ಮತ್ತು ಇನ್ನಿತರ ಸೌಕರ್ಯಕ್ಕೆ ಗುರುತಿನ ಚೀಟಿಯಂತೆ ಆಧಾರ್ ಸಂಖ್ಯೆಯನ್ನು ಬಳಕೆ ಮಾಡಲು ಅವಕಾಶ ಕಲ್ಪಿಸುವ ಈ ಮಸೂದೆಗೆ ರಾಜ್ಯಸಭೆಯಲ್ಲಿ ಧ್ವನಿಮತದ ಅಂಗೀಕಾರ ದೊರೆಯಿತು. ಗ್ರಾಹಕರಿಂದ ಪಡೆದ ಆಧಾರ್ ಮಾಹಿತಿಯನ್ನು ಖಾಸಗಿ ಸಂಸ್ಥೆಗಳು ದುರುಪಯೋಗಪಡಿಸಿಕೊಂಡರೆ 1 ಕೋಟಿ ರೂ.ವರೆಗೆ ದಂಡ ಮತ್ತು ಜೈಲು ಶಿಕ್ಷೆ ವಿಧಿಸುವ ಅಂಶ ಈ ಮಸೂದೆಯಲ್ಲಿದೆ.

ಆಧಾರ–ವಿಜಯವಾಣಿ, 09.07.2019

7. ದಂತ ವೈದ್ಯರ ನೋಂದಣಿ ತಿದ್ದುಪಡಿಗೆ ಅಸ್ತು

ಲೋಕಸಭೆಯಲ್ಲಿ ಅಂಗೀಕರಿಸಿದ್ದ ದಂತ ವೈದ್ಯರ ನೋಂದಣಿ(ತಿದ್ದುಪಡಿ) ಮಸೂದೆಗೆ ರಾಜ್ಯಸಭೆ ಒಪ್ಪಿಗೆ ನೀಡಿದೆ. 1949ರ ದಂತ ವೈದ್ಯರ ಕಾಯ್ದೆಗೆ ಕೆಲವು ತಿದ್ದುಪಡಿಯನ್ನು ಸೂಚಿಸಿದ್ದ ಈ ಮಸೂದೆಯನ್ನು ಆರೋಗ್ಯ ಸಚಿವ ಹರ್ಷವರ್ಧನ್ ಮಂಡಿಸಿದ್ದರು.

ಆಧಾರ–ಉದಯವಾಣಿ, 09.07.2019

8. ಉಗ್ರವಾದಕ್ಕೆ ಎಡ, ಬಲ ಇದೆಯೆ

ಭಯೋತ್ಪಾದನೆ ವಿರುದ್ಧ ಕೇಂದ್ರ ಸರ್ಕಾರದ ಶೂನ್ಯ ಸಹನೆ ನೀತಿಯನ್ನು ಪುನರುಚ್ಚರಿಸಿರುವ ಗೃಹ ಸಚಿವ ಅಮಿತ್ ಶಾ, "ಉಗ್ರವಾದ ಉಗ್ರವಾದವೇ. ಅದಕ್ಕೆ ಎಡ ಅಥವಾ ಬಲ ಎಂಬ ಹಣೆಪಟ್ಟಿ ಕಟ್ಟಲಾಗದು. ಭಯೋತ್ಪಾದನೆಯನ್ನು ದೇಶದಿಂದ ನಿರ್ಮೂಲನೆಗೊಳಿಸುವ ಪಣದಿಂದಲೇ ರಾಷ್ಟ್ರೀಯ ತನಿಖಾ ದಳಕ್ಕೆ ಕಾನೂನಿನ ಬಲ ನೀಡಲಾಗುತ್ತಿದೆ" ಹಾಗೂ ಎನ್ಐಎ ಕಾನೂನಿನ ಬಲ ನೀಡಿ, ಹೆಚ್ಚಿನ ತನಿಖಾಧಿಕಾರ ಕಲ್ಪಿಸುವ ರಾಷ್ಟ್ರೀಯ ತನಿಖಾ ದಳ(ತಿದ್ದುಪಡಿ) ವಿಧೇಯಕವನ್ನು ಲೋಕಸಭೆಯಲ್ಲಿ ಮಂಡಿಸಿದ ಅಮಿತ್ ಶಾ, "ಸರ್ಕಾರ ಧರ್ಮದ ಆಧಾರದಲ್ಲಿ ಎನ್ಐಎಯನ್ನು ದುರ್ಬಳಕೆ ಮಾಡಿಕೊಳ್ಳಲಿದೆ ಎಂಬುದು ಪ್ರತಿಪಕ್ಷಗಳ ಭ್ರಮೆ ಅಷ್ಟೆ, ಟೆರರಿಸಂ ಈಸ್ ಟೆರರಿಸಂ, ಈಟ್ಸ್ ನೈದರ್ ರೈಟ್ ನಾರ್ ಲೆಫ್ಟ್ (ಎಡ ಅಥವಾ ಬಲಪಂಥೀಯ ಧೋರಣೆಯೇ ಇರಲಿ. ಉಗ್ರವಾದ ಉಗ್ರವಾದವೇ) ಉಗ್ರರಿಗೆ ತಕ್ಕ ಶಾಸ್ತಿ ಮಾಡುವುದಕ್ಕಾಗಿ ಎನ್ಐಎಗೆ ಹೆಚ್ಚಿನ ಅಧಿಕಾರ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ" ಎಂದು ಹೇಳಿದರು.

ಆಧಾರ–ಉದಯವಾಣಿ, 16.07.2019

9. ಸಂಸತ್ತಿನಲ್ಲಿ ಹೋರಾಟ : ನೀರಿನ ಹೋರಾಟ ಸದನದಲ್ಲಿ ಬೇಡ

ಕಾವೇರಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಹೋರಾಟ ಬೇಡ ನಿಮ್ಮ ರಾಜ್ಯಗಳಲ್ಲಿ ಹೋರಾಟ ಮಾಡಿ ಎಂದು ಕರ್ನಾಟಕದ ಬಿಜೆಪಿ ಸಂಸದರಿಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ಆಧಾರ–ಉದಯವಾಣಿ, 19.07.2019

10. ಸುಪ್ರೀಂ ತೀರ್ಪಿನ ಬಗ್ಗೆ ಸಂಸತ್ತಲ್ಲೂ ಕ್ರಿಯಾಲೋಪ

ಕರ್ನಾಟಕ ವಿಧಾನಸಭಾ ಕಲಾಪದಲ್ಲಿ ಭಾಗಿಯಾಗುವ ವಿವೇಚನಾಧಿಕಾರವನ್ನು 15 ಬಂಡಾಯ ಶಾಸಕರಿಗೆ ಸುಪ್ರೀಂಕೋರ್ಟ್ ನೀಡಿರುವುದು ಸಂವಿಧಾನದ ಉಲ್ಲಂಘನೆಯಾಗಿದೆ. ಇದರಿಂದ ಸಂಸತ್ತಿನ ಪರಮಾಧಿಕಾರಕ್ಕೆ ಧಕ್ಕೆ ಬಂದಿದೆ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಕ್ರಿಯಾಲೋಪ ತಕರಾರು ಎತ್ತಿದೆ. ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಆನಂದ್ ಶರ್ಮಾ ಸಂವಿಧಾನದ 102ನೇ ವಿಧಿ, 191(2) ಮತ್ತು 10ನೇ ಪರಿಚ್ಛೇದ (ಎಲ್ಲವೂ ಶಾಸಕರ ಸಂಸದರ ಅನರ್ಹತೆಯನ್ನು ವ್ಯಾಖ್ಯಾನಿಸುವ ಸಂವಿಧಾನದ ಭಾಗ) ವನ್ನು ಉಲ್ಲೇಖಿಸಿ ಕಾನೂನು ಮಾಡುವುದು ವಿಧಾನಸಭೆ ಅಥವಾ ಸಂಸತ್ತಿನ ಅಧಿಕಾರ. ತನ್ನ ಸದಸ್ಯ ಶಾಸಕನನ್ನು ಅನರ್ಹಗೊಳಿಸುವ ಬಗ್ಗೆ 10ನೇ ಪರಿಚ್ಛೇದವು ರಾಜಕೀಯ ಪಕ್ಷಗಳಿಗೆ ಅಧಿಕಾರವನ್ನು ನೀಡಿದೆ. ಪಕ್ಷ ನಿರ್ದೇಶನಕ್ಕೆ ವಿರುದ್ಧವಾಗಿ ಮತ ಹಾಕುವುದು ಅಥವಾ ಮತ ಚಲಾವಣೆಯಿಂದ ದೂರವಿದ್ದರೆ ಶಾಸಕರನ್ನು ಅನರ್ಹಗೊಳಿಸುವ ಅವಕಾಶವಿದೆ ಎಂದರು. ಆದರೆ ಕ್ರಿಯಾಲೋಪಕ್ಕೆ ಅವಕಾಶ ನೀಡುವುದಿಲ್ಲ ಎಂದು ಸಭಾಪತಿ ವೆಂಕಯ್ಯ ನಾಯ್ಡು ತಿಳಿಸಿದರು.

ಆಧಾರ–ಉದಯವಾಣಿ, 19.07.2019

11. ರೈತರ ಆಯೋಗಕ್ಕೆ ಅಸ್ತು ಸಾಂವಿಧಾನಿಕ ಮಾನ್ಯತೆ ಇರುವ ಆಯೋಗ ರಚನೆಗೆ ಸಮ್ಮತಿ

ರೈತರ ವಿಚಾರ ಮತ್ತು ಸಂಕಷ್ಟಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಸಾಂವಿಧಾನಕ ಮಾನ್ಯತೆ ಇರುವ ರಾಷ್ಟ್ರೀಯ ರೈತರ ಆಯೋಗ (ಎನ್ ಎಫ್ ಸಿ) ರಚಿಸುವ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಗಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಅಧ್ಯಕ್ಷರು, ಸದಸ್ಯರನ್ನು ನೇಮಿಸುವ ಕುರಿತಾಗಿ ಇರುವ ಮಾನವ ಹಕ್ಕುಗಳ ರಕ್ಷಣೆ (ತಿದ್ದುಪಡಿ) ವಿಧೇಯಕ 2019ಕ್ಕೆ ಲೋಕಸಭೆ ಅನುಮೋದನೆ ನೀಡಿದೆ.

ಆಧಾರ–ಉದಯವಾಣಿ, 20.07.2019

12. ಮೋದಿ 2.0 ಬಜೆಟ್‌ಗೆ ಸಂಸತ್ ಒಪ್ಪಿಗೆ

ನರೇಂದ್ರ ಮೋದಿ 2.0 ಸರ್ಕಾರದ ಮೊದಲ ಆಯವ್ಯಯವನ್ನು ಸಂಸತ್ ಅನುಮೋದಿಸಿದೆ. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಜುಲೈ 5 ರಂದು ಮಂಡಿಸಿದ್ದ ಬಜೆಟ್‌ಗೆ ಒಪ್ಪಿಗೆ ನೀಡಿತ್ತು. ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ಗದ್ದಲದ ನಡುವೆಯೇ ಆಯವ್ಯಯದ ಮೇಲೆ ಚರ್ಚೆ ಆರಂಭವಾಯಿತು. ಪ್ರತಿ ಪಕ್ಷಗಳು ಸಭಾತ್ಯಾಗ ಮಾಡಿದ್ದ ಸಂದರ್ಭದಲ್ಲಿ ಧ್ವನಿಮತದಿಂದ ಸದನದ ಒಪ್ಪಿಗೆ ಪಡೆಯಲಾಯಿತು.

ಆಧಾರ–ಉದಯವಾಣಿ, 24.07.2019

13. ಇನ್ನು ಶಂಕಿತರಿಗೂ ಉಗ್ರ ಪಟ್ಟ: ಮಸೂದೆಗೆ ಲೋಕ ಅಂಗೀಕಾರ

ಶಂಕಿತರನ್ನೂ ಸಹ ಭಯೋತ್ಪಾದಕರಂದೇ ಪರಿಗಣಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಅಧಿಕಾರ ನೀಡುವ ಭಯೋತ್ಪಾದನೆ ನಿಗ್ರಹ ಮಸೂದೆಯೊಂದನ್ನು ಲೋಕಸಭೆ ಅಂಗೀಕರಿಸಿದೆ. ಲೋಕಸಭೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ ತಿದ್ದುಪಡಿ ಮಸೂದೆಯ ಮೇಲಿನ ಚರ್ಚೆಯ ಬಗ್ಗೆ ಮಾತನಾಡಿದ ಗೃಹ ಸಚಿವ ಅಮಿತ್ ಶಾ, ಈ ಕಾಯ್ದೆ ಜಾರಿಯಿಂದ ಭದ್ರತಾ ಸಂಸ್ಥೆಗಳು ಭಯೋತ್ಪಾದಕರಿಗಿಂತಲೂ ಒಂದು ಹೆಜ್ಜೆ ಮುಂದಿರಲು ಸಾಧ್ಯವಾಗಲಿದೆ. ಈ ಕಾಯ್ದೆ ದುರುಪಯೋಗವಾಗುವುದಿಲ್ಲ ಮತ್ತು ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲು ಬಳಕೆ ಆಗಲಿದೆ ಎಂದು ಶಾ ತಿಳಿಸಿದರು.

ಆಧಾರ–ಕನ್ನಡಪ್ರಭ, 25.07.2019

14. ತ್ರಿವಳಿ ತಲಾಖ್ ಕ್ರಿಮಿನಲ್ ಅಪರಾಧ: ಮಸೂದೆ ಪಾಸ್

ತ್ರಿವಳಿ ತಲಾಖ್ ನೀಡಿದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ ರಾಜ್ಯಸಭೆಯಲ್ಲಿ ಮಸೂದೆ ಪಾಸ್, ಸಂಸತ್ತಲ್ಲಿ ಅಂಗೀಕಾರ.

"ತಲಾಖ್" ಎಂದು ಮೂರು ಬಾರಿ ಹೇಳಿ ವಿಚ್ಛೇದನಾ ನೀಡುವ ಮುಸಲ್ಮಾನರ ಪದ್ಧತಿ "ತಲಾಖ್ ಎ ಬಿದ್ದತ್" ಕ್ರಿಮಿನಲ್ ಅಪರಾಧ ಎಂದು ಸಾರುವ ಐತಿಹಾಸಿಕ ಮಸೂದೆಯನ್ನು ಸಂಸತ್ ಅಂಗೀಕರಿಸಿದೆ.

ಆಧಾರ–ಉದಯವಾಣಿ, 31.07.2019

15. ಆರ್‌ಟಿಐ ತಿದ್ದುಪಡಿ ಮಸೂದೆಗೆ ಒಪ್ಪಿಗೆ

ಆರ್‌ಟಿಐ ಕಾಯ್ದೆಯ ತಿದ್ದುಪಡಿ ಮಸೂದೆ ಸಂಸತ್ತು ವಿಪಕ್ಷದ ತೀವ್ರ ವಿರೋಧದ ನಡುವೆ ರಾಜ್ಯಸಭೆಯಲ್ಲೂ ಅಂಗೀಕಾರಗೊಂಡಿದ್ದು, ಸಂಸತ್ತಿನ ಅನುಮೋದನೆ ಪಡೆದುಕೊಂಡಿದೆ.

ಆಧಾರ–ಉದಯವಾಣಿ, 26.07.2019

16. ಚಿಟ್ ಮೋಸ ನಡೆಯದು ಮಹತ್ವದ ವಿಧೇಯಕಕ್ಕೆ ರಾಜ್ಯಸಭೆಯಲ್ಲಿ ಅನುಮೋದನೆ

ಶಾರದಾ ಚಿಟ್‌ಫಂಡ್ ಮತ್ತು ಇತರ ಗುರುತರ ಹಗರಣಗಳ ಬಳಿಕ ಜನರು ಹೂಡಿಕೆ ಮಾಡಿದ್ದನ್ನು ರಕ್ಷಿಸುವ ನಿಟ್ಟಿನಲ್ಲಿ ಮಹತ್ವದ ಕಾನೂನಿಗೆ ಸಂಸತ್ ಸಮ್ಮತಿ ನೀಡಿದೆ. ಕಾನೂನಿನ ನಿಯಂತ್ರಣ ಮೀರಿ ವಹಿವಾಟು ನಡೆಸುವ ಸಂಸ್ಥೆಗಳ ಹಣಕಾಸು ಚಟುವಟಿಕೆಗಳಿಗೆ ನಿಯಂತ್ರಣ ಹೇರುವ ನಿಟ್ಟಿನಲ್ಲಿ ಸಿದ್ಧಗೊಂಡಿರುವ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ವಿಧೇಯಕ–2019ಕ್ಕೆ ರಾಜ್ಯ ಸಭೆ ಧ್ವನಿಮತದಿಂದ ಅಂಗೀಕಾರ ನೀಡಿದೆ. ನಂತರ ಲೋಕಸಭೆಯಲ್ಲೂ ಅನುಮೋದನೆ ಸಿಕ್ಕಿರುತ್ತದೆ.

ಆಧಾರ–ಉದಯವಾಣಿ, 30.07.2019

17. ಕ್ಷಮೆ ಕೇಳಿದ ಅಜಂ ಖಾನ್

ಬಿ.ಜೆ.ಪಿ ಸಂಸದೆ, ಡೆಪ್ಯೂಟಿ ಸ್ಪೀಕರ್ ರಮಾದೇವಿ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿದ್ದ ಸಮಾಜವಾದಿ ಪಕ್ಷದ ಸಂಸದ ಆಜಂ ಖಾನ್ ಕೊನೆಗೂ ಕ್ಷಮೆ ಯಾಚಿಸಿದ್ದಾರೆ. ಲೋಕಸಭೆ ಕಲಾಪ ಶುರುವಾಗುತ್ತಲೇ ಸ್ಪೀಕರ್ ಓಂ ಬಿರ್ಲಾ ಅವರು ಖಾನ್‌ಗೆ ಕ್ಷಮೆ ಕೋರುವಂತೆ ಸೂಚಿಸಿದರು. ಈ ವೇಳೆ ಖಾನ್, ಒಂಭತ್ತು ಬಾರಿ ಶಾಸಕ, ನಾಲ್ಕು ಬಾರಿ ಸಚಿವ, ಒಂದು ಬಾರಿ ರಾಜ್ಯಸಭೆ ಸದಸ್ಯನಾಗಿದ್ದ ನನಗೆ ಸಂಸದೀಯ ನಡಾವಳಿ ಗೊತ್ತಿದೆ. ಇದರ ಹೊರತಾಗಿಯೂ ನನ್ನ ಮಾತುಗಳಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ ಎಂದರು. ಖಾನ್ ಹೇಳಿಕೆಯ ಕೆಲವು ಶಬ್ದಗಳು ಕೇಳದೇ ಇದ್ದುದರಿಂದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಕ್ಷಮೆ ಕೇಳುವ ವಾಕ್ಯಗಳನ್ನು ಮತ್ತೊಮ್ಮೆ ಪುನರಾವರ್ತಿಸಬೇಕು ಎಂದು ಸಲಹೆ ನೀಡಿದರು. ಇದಕ್ಕೆ ಸದನದಲ್ಲಿ 2 ಬಾರಿ ಸ್ಪೀಕರ್ ಆ ಮಾತುಗಳನ್ನು ಪುನರಾವರ್ತಿಸುವಂತೆ ಹೇಳಿದರು.

ಆಧಾರ–ಉದಯವಾಣಿ, 30.07.2019

18.ಲೋಕಸಭೆ ಕಲಾಪ ಶೀಘ್ರವೇ ಪೇಪರ್‌ಲೆಸ್

ದೇಶವು ಪ್ರಗತಿಯತ್ತ ದಾಪುಗಾಲಿರಿಸಿರುವ ಸಂದರ್ಭದಲ್ಲಿ ಹೊಸ ಬಗೆಯ ತಂತ್ರಜ್ಞಾನಗಳಿಗೆ ಲೋಕಸಭೆಯೂ ತೆರೆದುಕೊಳ್ಳಲಿದೆ. ಮುಂಬರುವ ದಿನಗಳಲ್ಲಿ ಲೋಕಸಭೆ ಕಲಾಪಗಳು ಕಾಗದ ರಹಿತವಾಗಲಿದ್ದು, ಈ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಯಲಿದೆ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಸದನಕ್ಕೆ ತಿಳಿಸಿದರು.

ಶೂನ್ಯವೇಳೆಯಲ್ಲಿ ಸ್ಪೀಕರ್ ಬಿರ್ಲಾ ಅವರು ಸದಸ್ಯರನ್ನು ಉದ್ದೇಶಿಸಿ "ಲೋಕಸಭೆ ಕಲಾಪದಲ್ಲಿ ಕಾಗದ ರೂಪದ ದಾಖಲೆಗಳ ಬಳಕೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು. ಕಾಗದಗಳ ಬದಲಿಗೆ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿ ಆ ಮೂಲಕವೇ ಚರ್ಚೆ ನಡೆಸುವುದನ್ನು ಅಭ್ಯಾಸ ಮಾಡಿಕೊಳ್ಳಿ ಇದರಿಂದ ಮರಗಳ ಸಂರಕ್ಷಣೆಯ ಜೊತೆಗೆ ಕೋಟ್ಯಾಂತರ ರೂಪಾಯಿ ಉಳಿತಾಯವಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಸಂಸದರೂ ಬದಲಾವಣೆಗೆ ಒಗ್ಗಿಕೊಳ್ಳಬೇಕು" ಎಂದು ತಿಳಿಸಿದರು.

ಆಧಾರ–ವಿಜಯ ಕರ್ನಾಟಕ, 02.08.2019

19. ನದಿ ವಿವಾದ ವಿಧೇಯಕಕ್ಕೆ "ಲೋಕ" ಸಮ್ಮತಿ

ದೇಶದ ಎಲ್ಲಾ ನದಿ ವಿವಾದಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ಉದ್ದೇಶದಿಂದ ಕೈಗೊಳ್ಳಲಾಗುವ 2019ರ ಅಂತರರಾಜ್ಯ ನದಿ ನೀರು ವ್ಯಾಜ್ಯ ತಿದ್ದುಪಡಿ ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ. ಈ ಮಸೂದೆಯ ಮೂಲಕ ಜ್ವಲಂತವಾಗಿರುವ ಕಾವೇರಿ, ಮಹದಾಯಿ ರವಿ ಮತ್ತು ಬೀಸ್, ವಂಸಧಾರಾ ಹಾಗೂ ಕೃಷ್ಣಾನದಿ ಜಲವಿವಾದಗಳು ತ್ವರಿತವಾಗಿ ಇತ್ಯರ್ಥವಾಗುವ ಬಗ್ಗೆ ಕೇಂದ್ರ ಕ್ರಮ ಕೈಗೊಂಡಿದೆ.

ಆಧಾರ–ಉದಯವಾಣಿ, 01.08.2019

20. ಮೋಟಾರು ವಾಹನ ತಿದ್ದುಪಡಿ ಮಸೂದೆಗೆ ಸಂಸತ್ ತಿದ್ದುಪಡಿ

ರಸ್ತೆ ಸುರಕ್ಷತೆ ಹೆಚ್ಚಿಸುವ ಉದ್ದೇಶದ ಮೋಟಾರು ವಾಹನ (ತಿದ್ದುಪಡಿ) ಮಸೂದೆ 2019ಕ್ಕೆ ಸಂಸತ್ತು ಅನುಮೋದಿಸಿದ್ದು, ಸಂಚಾರ ನಿಯಮ ಉಲ್ಲಂಘನೆಗೆ ಭಾರಿ ದಂಡ ತೆರಬೇಕಾಗಿದೆ.

ಆಧಾರ–ವಿಶ್ವವಾಣಿ, 02.08.2019

21. ಮಕ್ಕಳಿಗೆ ಲೈಂಗಿಕ ಕಿರುಕುಳ ಸಂಸತ್ತಿನಲ್ಲಿ ಮಸೂದೆ ಮಂಡನೆ

ಮಕ್ಕಳ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ ನೀಡಿದರೆ ಗಲ್ಲು ಶಿಕ್ಷೆ ಹಾಗೂ ಮಕ್ಕಳು ಇರುವ ಲೈಂಗಿಕ ವೀಡಿಯೋ, ಚಿತ್ರಗಳನ್ನು ಹೊಂದಿರುವುದು ಶಿಕ್ಷಾರ್ಹ ಅಪರಾಧ. ಈ ಸಂಬಂಧ "ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ವಿಧೇಯಕಕ್ಕೆ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಅನುಮೋದನೆ ದೊರೆತಿದ್ದು, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಂಕಿತವಾದ ನಂತರ ಕಾನೂನಾಗಿ ಜಾರಿಯಾಗಲಿದೆ.

ಆಧಾರ–ಉದಯವಾಣಿ, 02.08.2019

22. ಎಂಸಿಐ ಬದಲು ರಾಷ್ಟ್ರೀಯ ವೈದ್ಯಕೀಯ ಆಯೋಗ ಅಸ್ತಿತ್ವ

ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಹಾಗೂ ವೈದ್ಯ ವೃತ್ತಿಯಲ್ಲಿ ಪಾರದರ್ಶಕತೆ ತರುವ ಆಶಯದೊಂದಿಗೆ ಮಂಡನೆಯಾದ "ರಾಷ್ಟ್ರೀಯ ವೈದ್ಯಕೀಯ ಆಯೋಗ" ವಿಧೇಯಕವನ್ನು ಎಐಎಡಿಎಂಕೆಯ ಸಭಾತ್ಯಾಗದ ನಡುವೆ ರಾಜ್ಯಸಭೆ ಅಂಗೀಕರಿಸಿದೆ. ಜುಲೈ 28ರಂದು ಲೋಕಸಭೆಯ ಅಂಗೀಕಾರ ಪಡೆದಿದ್ದ ವಿಧೇಯಕ ರಾಜ್ಯಸಭೆಯಲ್ಲೂ ಪಾಸಾಗಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳ ಅಂಕಿತದ ಬಳಿಕ ವಿಧೇಯಕ ಕಾಯಿದೆಯಾಗಿ ಜಾರಿಗೆ ಬರಲಿದೆ.

ಆಧಾರ–ವಿಜಯ ಕರ್ನಾಟಕ, 02.08.2019

23. ಕನಿಷ್ಠ ವೇತನ ವಿಧೇಯಕಕ್ಕೆ ಸಂಸತ್ ಅಸ್ತು

ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸುವ ವೇತನ ಸಂಹಿತೆ ಮಸೂದೆ–2019ಕ್ಕೆ ಸಂಸತ್ತಿನಲ್ಲಿ ಅನುಮೋದನೆ ದೊರೆತಿದೆ.

ಕಾರ್ಮಿಕರ ವೇತನ ಮತ್ತು ಬೋನಸ್‌ಗೆ ಸಂಬಂಧಿಸಿದ ನಾಲ್ಕು ಭಿನ್ನ ಕಾಯ್ದೆಗಳ ಅಂಶಗಳನ್ನು ಈ ಒಂದೇ ಮಸೂದೆ ಒಳಗೊಂಡಿದೆ. ಈ ಮಸೂದೆಯಿಂದ 50 ಕೋಟಿ ಕಾರ್ಮಿಕರಿಗೆ ಅನುಕೂಲವಾಗಲಿದೆ.

ಆಧಾರ–ವಿಜಯ ಕರ್ನಾಟಕ, 03.08.2019

24. ಅಣೆಕಟ್ಟು ವಿಧೇಯಕಕ್ಕೆ ಒಪ್ಪಿಗೆ

ಲೋಕಸಭೆಯಲ್ಲಿ ಅಣೆಕಟ್ಟುಗಳ ಸುರಕ್ಷತೆಗಾಗಿ ಇರುವ ವಿಧೇಯಕಕ್ಕೆ ಒಪ್ಪಿಗೆ ಸೂಚಿಸಲಾಗಿದೆ. ದೇಶದಲ್ಲಿ ಇರುವ ಅಣೆಕಟ್ಟುಗಳ ಉಸ್ತುವಾರಿ, ನಿರ್ವಹಣೆ, ಪರಿಶೀಲನೆಗಾಗಿ ರಾಷ್ಟ್ರೀಯ ಸಮಿತಿ ರಚಿಸಲಾಗುತ್ತದೆ. ರಾಷ್ಟ್ರ ಮತ್ತು ರಾಜ್ಯಗಳ ಮಟ್ಟದಲ್ಲಿ ಅಣೆಕಟ್ಟು ಸುರಕ್ಷ ಪ್ರಾಧಿಕಾರಗಳ ರಚನೆಗೆ ವಿಧೇಯಕದಲ್ಲಿ ಅವಕಾಶ ಇದೆ.

ಆಧಾರ–ಉದಯವಾಣಿ, 03.08.2019

25. ಜಲಿಯನ್‌ವಾಲಾ ಬಾಗ್ ಟ್ರಸ್ಟ್

ಜಲಿಯನ್‌ವಾಲಾ ಬಾಗ್ ರಾಷ್ಟ್ರೀಯ ಸ್ಮಾರಕದಲ್ಲಿ ಇನ್ನು ಕಾಂಗ್ರೆಸ್ ಅಧ್ಯಕ್ಷರು ಟ್ರಸ್ಟಿ ಹುದ್ದೆಯಲ್ಲಿ ಇರುವುದಿಲ್ಲ. ಅದರ ಬದಲಾಗಿ ಲೋಕಸಭೆಯಲ್ಲಿ ಎರಡನೇ ಅತ್ಯಂತ ದೊಡ್ಡ ಪಕ್ಷದ ನಾಯಕ ಟ್ರಸ್ಟಿಯಾಗಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಜಲಿಯನ್‌ವಾಲಾ ಬಾಗ್ ರಾಷ್ಟ್ರೀಯ ಸ್ಮಾರಕ (ತಿದ್ದುಪಡಿ) ವಿಧೇಯಕಕ್ಕೆ ಲೋಕಸಭೆ ಅನುಮೋದನೆ ನೀಡಿದೆ.

ಆಧಾರ–ಉದಯವಾಣಿ, 03.08.2019

26 .ಕಾಶ್ಮೀರ ವಿಭಜನೆ ಸಂಸತ್ತಿನ ಮನ್ನಣೆ

ಜಮ್ಮು ಮತ್ತು ಕಾಶ್ಮೀರ ರಾಜ್ಯ ಇತಿಹಾಸ ಸೇರಲಿದೆ. ಈ ರಾಜ್ಯದ ವಿಶೇಷ ಸ್ಥಾನಮಾನವನ್ನು ರದ್ದು ಮಾಡುವ ನಿರ್ಣಯ (ಸಂವಿಧಾನದ 370ನೇ ವಿಧಿಯ ಅನ್ವಯ ರದ್ದು) ಮತ್ತು ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸುವ ಮಸೂದೆಗೆ ಲೋಕಸಭೆಯು ಒಪ್ಪಿಗೆ ಕೊಟ್ಟಿದೆ. ರಾಜ್ಯಸಭೆ ಈ ಎರಡಕ್ಕೂ ಅನುಮೋದನೆ ಕೊಟ್ಟಿದೆ. ಜಮ್ಮು ಮತ್ತು ಕಾಶ್ಮೀರವು ಈಗ ಎಲ್ಲ ಸಂಕೋಲೆಗಳಿಂದ ಮುಕ್ತವಾಗಿದೆ. ಹೊಸ ಬೆಳಗು ಕಂಡಿದೆ ಉತ್ತಮ ನಾಳೆ ಎದುರಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಪಾಕಿಸ್ತಾನ ಆಕ್ರಮಿತ ಕಾಶ್ಮೀರವು ನಮ್ಮದು ಎಂಬ ಹಕ್ಕು ಮಂಡನೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಪ್ರತ್ಯೇಕತಾವಾದಿ ನಾಯಕರ ಜೊತೆಗೆ ಮಾತುಕತೆಯೂ ಇಲ್ಲ. ಆದರೆ, ಕಾಶ್ಮೀರದ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಅಲ್ಲಿನ ಜನರ ಜೊತೆ ಮಾತನಾಡುತ್ತೇವೆ ಎಂದು ಶಾ ಹೇಳಿದರು.

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರನ್ನು ಶಾ ತಮ್ಮ ವಾಗ್ದಾಳಿಯ ಗುರಿಯಾಗಿಸಿಕೊಂಡರು. "1948 ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತದ ಸೇನೆ ವಿಜಯದ ಹೊಸ್ತಿಲಲ್ಲಿದ್ದಾಗ ಏಕಪಕ್ಷೀಯವಾಗಿ ಕದನ ವಿರಾಮ ಘೋಷಣೆ ಮಾಡಿದ್ದು ಜವಾಹರಲಾಲ್ ನೆಹರೂ, ಆಗ ಸೇನೆಗೆ ಮುಕ್ತ ಕಾರ್ಯಾಚರಣೆಗೆ ಅವಕಾಶ ಕೊಟ್ಟಿದಿದ್ದರೆ ಪಾಕ್ ಆಕ್ರಮಿತ ಕಾಶ್ಮೀರ ಆಗಲೇ ನಮ್ಮ ವಶವಾಗುತ್ತಿತ್ತು ಎಂದರು.

ಆಧಾರ–ಪ್ರಜಾವಾಣಿ, 07.08.2019

27. ಸುಪ್ರೀಂ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಳಕ್ಕೆ ಸಂಸತ್ ಒಪ್ಪಿಗೆ

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು 30 ರಿಂದ 33ಕ್ಕೆ ಏರಿಕೆ ಮಾಡುವ ಮಸೂದೆ ಸಂಸತ್ತಿನಲ್ಲಿ ಅಂಗೀಕಾರವಾಗಿದೆ. ವಿಚಾರಣೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ.

ಸುಪ್ರಿಂಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ತಿದ್ದುಪಡಿ ಮಸೂದೆ 2019 ಅನ್ನು ಮಂಡಿಸಿದ ಕಾನೂನು ಸಚಿವ ರವಿಶಂಕರ್ ಪ್ರಸಾದ್ "ಸದನ ಈ ಮಸೂದೆ ಪರಿಗಣಿಸಬೇಕೆಂದು ಕೋರುತ್ತೇನೆ" ಎಂದರು. ಯಾವುದೇ ಚರ್ಚೆ ಇಲ್ಲದೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲೂ ಮಸೂದೆ ಅಂಗೀಕಾರಗೊಂಡಿತ್ತು.

ಆಧಾರ–ಪ್ರಜಾವಾಣಿ, 08.08.2019

28. ದಾಖಲೆ ಬರೆದ ಅಧಿವೇಶನ ರಾಜ್ಯಸಭೆಯಲ್ಲಿ 32, ಲೋಕಸಭೆಯಲ್ಲಿ 36 ಮಸೂದೆ ಪಾಸ್

ಸಂಸತ್ತಿನ ಮುಂಗಾರು ಅಧಿವೇಶನ ಹೊಸ ದಾಖಲೆ ನಿರ್ಮಿಸಿದೆ. ಕಳೆದ 17 ವರ್ಷಗಳಲ್ಲಿಯೇ ರಾಜ್ಯಸಭೆ ಅತಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ ಎಂದು ಸಭಾಪತಿ ವೆಂಕಯ್ಯ ನಾಯ್ಡು ಮಾಹಿತಿ ನೀಡಿದ್ದಾರೆ. ಈ ಅಧಿವೇಶನದಲ್ಲಿ ರಾಜ್ಯಸಭೆ ಕಳೆದ 17 ವರ್ಷಗಳಲ್ಲಿಯೇ ಅತಿ ಹೆಚ್ಚು ಫಲಪ್ರದವಾಗಿದೆ. 35 ದಿನಗಳಲ್ಲಿ 32 ಮಸೂದೆಗಳು ಅನುಮೋದನೆ ಪಡೆದುಕೊಂಡಿವೆ. ಈ ಪೈಕಿ ತ್ರಿವಳಿ ತಲಾಕ್ ಮಸೂದೆ ಮತ್ತು ಜಮ್ಮು–ಕಾಶ್ಮೀರ ಪುನರ್ವಿಭಜನಾ ಮಸೂದೆ ಪ್ರಮುಖವಾದವು. ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ತರುವ ಮಸೂದೆ ಇದಾಗಿದೆ ಎಂದರು.

1984ರಲ್ಲಿ ನಡೆದ 131ನೇ ಅಧಿವೇಶನ ಹೆಚ್ಚು ಫಲದಾಯಕವಾಗಿದ್ದಿತು. ಇದರಲ್ಲಿ 37 ಮಸೂದೆಗಳು ಅನುಮೋದನೆ 197ನೇ ಅಧಿವೇಶನದಲ್ಲಿ 35 ಮಸೂದೆಗಳಿಗೆ ಸಮ್ಮತಿ ಸಿಕ್ಕಿತ್ತು. ಕಳೆದ 41 ವರ್ಷಗಳಲ್ಲಿನ ಅಧಿವೇಶನಗಳಲ್ಲಿ ಈ ಬಾರಿಯ ಕಲಾಪ 5ನೇ ಸ್ಥಾನ ಪಡೆದುಕೊಂಡಿವೆ. ಇದರಲ್ಲಿ 32 ಮಸೂದೆಗಳು ಅನುಮೋದನೆ ಪಡೆದುಕೊಂಡಿದೆ. ಅಧಿವೇಶನ ಉತ್ಪಾದಕತೆ ಶೇ.104.92 ಆಗಿದೆ. 2014ರ ನಂತರದಲ್ಲಿ ಇದೇ

ಉತ್ತಮ ಅಧಿವೇಶನ. 19 ದಿನಗಳಲ್ಲಿ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕಲಾಪ ನಡೆದಿತ್ತು. ಇದರಿಂದ ಹೆಚ್ಚುವರಿ 28 ಗಂಟೆಗಳು ಚರ್ಚೆಗೆ ಸಿಕ್ಕಿದ್ದವು.

ಕಳೆದ 14 ವರ್ಷಗಳಲ್ಲಿಯೇ ಈ ಅಧಿವೇಶನ ದೀರ್ಘಾವಧಿಯದ್ದಾಗಿತ್ತು. ಈ ಬಾರಿ 35 ದಿನಗಳ ಕಲಾಪ ನಡೆದಿದೆ. 2005ರಲ್ಲಿ 38 ದಿನಗಳ ಕಲಾಪ ನಡೆದಿತ್ತು. 1955ರ ಅಧಿವೇಶನವನ್ನು ದೀರ್ಘಾವದಿಯದ್ದೆಂದು ಗುರುತಿಸಲಾಗುತ್ತದೆ. ಇದು 50 ದಿನಗಳ ಕಾಲ ನಡೆದಿತ್ತು. ಶೂನ್ಯವೇಳೆಯನ್ನೂ ಸದುಪಯೋಗಪಡಿಸಿಕೊಳ್ಳಲಾಗಿತ್ತು. 1999ರ ಬಳಿಕ ಶೂನ್ಯವೇಳೆಯನ್ನು ಉತ್ತಮ ಚರ್ಚೆಗೆ ಬಳಕೆ ಮಾಡಿಕೊಂಡ ಅಧಿವೇಶನ ಇದಾಗಿತ್ತು. ಕಳೆದ ಅಧಿವೇಶನದಲ್ಲಿ ಶೇ. 40 ಸಮಯ ವ್ಯರ್ಥ ಚರ್ಚೆಗಳಿಂದ ಪೋಲಾಗಿತ್ತು. ಆದರೆ, ಈ ಬಾರಿ ಉತ್ತಮ ಚರ್ಚೆಯಾಗಿದ್ದು, ನೂತನ ಸಂಸದರಿಗೆ ನಾಯ್ಡು ಧನ್ಯವಾದ ತಿಳಿಸಿದ್ದಾರೆ.

ಆಧಾರ–ವಿಜಯವಾಣಿ, 08.08.2019

29. 75 ಗಂಟೆ ಹೆಚ್ಚುವರಿ ಚರ್ಚೆ

ಜಮ್ಮು–ಕಾಶ್ಮೀರ ಪುನರ್ವಿಭಜನಾ ಮಸೂದೆಗೆ ಅನುಮೋದನೆ ಸಿಕ್ಕ ಬಳಿಕ ಲೋಕಸಭೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಈ ವೇಳೆ ಮಾತನಾಡಿದ ಸ್ಪೀಕರ್ ಓಂ ಬಿರ್ಲಾ 1952ರ ಬಳಿಕದ ಫಲದಾಯಕ ಅಧಿವೇಶನ ಇದು ಎಂದು ಹೇಳಿದ್ದಾರೆ. ಜೂನ್ 17ರಂದು ಆರಂಭವಾದ ಅಧಿವೇಶನ ಜುಲೈ, 26ಕ್ಕೆ ಅಂತ್ಯಗೊಳ್ಳಬೇಕಿತ್ತು. ಆದರೆ ಆಗಸ್ಟ್ 7ರವರೆಗೆ ವಿಸ್ತರಿಸಲಾಗಿತ್ತು. 37ದಿನಗಳ ಅಧಿವೇಶನದಲ್ಲಿ ಒಟ್ಟು 280 ಗಂಟೆಗಳ ಕಲಾಪ ನಡೆಯಿತು. ಇದರಲ್ಲಿ 36 ಮಸೂದೆಗಳು ಅನುಮೋದನೆ ಪಡೆದುಕೊಂಡವು. ನಿಗದಿತ ಸಮಯಕ್ಕಿಂತ ಹೆಚ್ಚುವರಿಯಾಗಿ 75ಗಂಟೆಗಳ ಕಾಲ ಚರ್ಚೆ ನಡೆಸಲಾಗಿದೆ.

ಆಧಾರ–ವಿಜಯವಾಣಿ, 08.08.2019

30. ಹೊಸ ಸಂಸತ್ ಭವನ ನಿರ್ಮಾಣ ಅರ್ಹ ವಾಸ್ತುಶಿಲ್ಪ ಕಂಪನಿಗಳಿಂದ ನೀಲನಕ್ಷೆಯ ಪ್ರಸ್ತಾಪ ಆಹ್ವಾನ

ದೇಶದ ಶಕ್ತಿಕೇಂದ್ರವಾದ ಸಂಸತ್ ಭವನವನ್ನು ನವೀಕರಿಸುವ ಇಲ್ಲವೇ ಅದನ್ನು ಮರುನಿರ್ಮಾಣ ಮಾಡುವ ಬೃಹತ್ ಯೋಜನೆಯೊಂದಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ ಸಂಸತ್ ಭವನ ನವೀಕರಣ ಇಲ್ಲವೇ ಮರು ನಿರ್ಮಾಣ ಸಂಬಂಧ ಅರ್ಹ ವಾಸ್ತುಶಿಲ್ಪ ಸಂಸ್ಥೆಗಳಿಂದ ಕೇಂದ್ರ ಗೃಹ ಮತ್ತು ನಗರಾಭಿವೃದ್ಧಿ ಸಚಿವಾಲಯವು ನೀಲನಕ್ಷೆಯ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಜೊತೆಗೆ ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗೆ, ಸುಮಾರು 8ಕಿ.ಮೀ. ಮಾರ್ಗವನ್ನು ಸುಂದರವಾಗಿ ಅಭಿವೃದ್ಧಿಪಡಿಸುವ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಸಚಿವಾಲಯಗಳು ಒಂದೇ ಕಡೆ ಇರುವ ಬೃಹತ್ ಸಚಿವಾಲಯ ಸಮುಚ್ಚಯ ನಿರ್ಮಾಣಕ್ಕೂ ಕೇಂದ್ರ ಸರ್ಕಾರ ನಿರ್ಧರಿಸಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ದೇಶದ 75ನೇ ಸ್ವಾತಂತ್ರ್ಯ ಸಂಭ್ರಮದ ವರ್ಷವಾದ 2022ರ ವೇಳೆಗೆ ಒಂದೇ ಕಡೆ 1000ಕ್ಕೂ ಹೆಚ್ಚು ಸಂಸದರು ಕೂರಬಲ್ಲ ವಿಶ್ವದರ್ಜೆಯ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ನೂತನ ಸಂಸತ್ ಭವನ ಉದ್ಘಾಟನೆಗೊಳ್ಳಲಿದೆ. 7000ಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ಸ್ಥಳಾವಕಾಶ ಹೊಂದಿರುವ ಬೃಹತ್ ಕೇಂದ್ರ ಸಚಿವಾಲಯ ಕಟ್ಟಡ 2024ರ ವೇಳೆಗೆ ಉದ್ಘಾಟನೆಗೊಳ್ಳುವ ನಿರೀಕ್ಷೆ ಇದೆ.

ಆಧಾರ–ಕನ್ನಡಪ್ರಭ, 13.09.2019

ಭಾಗ–3

ಕೇಂದ್ರ ಸರ್ಕಾರದ ಸುದ್ದಿಗಳು

1. ಜಿಎಸ್‌ಟಿ ಸಂಗ್ರಹ ರೂ.99,939 ಕೋಟಿ

ಜೂನ್ ತಿಂಗಳ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ಮೇ ತಿಂಗಳಿಗಿಂತ ಕಡಿಮೆಯಾಗಿದೆ.

ಹಿಂದಿನ ತಿಂಗಳ ರೂ.1,00,289 ಕೋಟಿಗೆ ಹೋಲಿಸಿದರೆ ಜೂನ್‌ನಲ್ಲಿ ರೂ.99,939 ಕೋಟಿ ತೆರಿಗೆ ಸಂಗ್ರಹವಾಗಿದೆ. ವರ್ಷದ ಹಿಂದಿನ ಇದೇ ಅವಧಿಯಲ್ಲಿ ರೂ.95,610 ಕೋಟಿ ಸಂಗ್ರಹವಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಶೇ.4.52ರಷ್ಟು ಹೆಚ್ಚಳವಾಗಿದೆ ಎಂದು ಹಣಕಾಸು ಸಚಿವಾಲಯವು ತಿಳಿಸಿದೆ.

ಕೇಂದ್ರೀಯ ಜಿಎಸ್‌ಟಿ (ಸಿಜಿಎಸ್‌ಟಿ) ರೂ.18,366 ಕೋಟಿ, ರಾಜ್ಯ ಜಿಎಸ್‌ಟಿ (ಎಸ್‌ಜಿಎಸ್‌ಟಿ) ರೂ.47,777 ಕೋಟಿ ಮತ್ತು ಸಮಗ್ರ ಜಿಎಸ್‌ಟಿ (ಐಜಿಎಸ್‌ಟಿ) ರೂ.8,457 ಕೋಟಿಗಳಷ್ಟಿದೆ. ಜೂನ್ ತಿಂಗಳಾಂತ್ಯಕ್ಕೆ ಸಲ್ಲಿಸಲಾದ ಜಿಎಸ್‌ಟಿ–ಆರ್–3ಬಿ ರಿಟರ್ನ್ಸ್‌ಗಳ ಸಂಖ್ಯೆಯು 74.38 ಲಕ್ಷದಷ್ಟಿದೆ. ಮೇ ತಿಂಗಳಲ್ಲಿ ಇದು 72.45 ಲಕ್ಷದಷ್ಟಿದೆ.

'ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಎಸ್‌ಟಿ ಸಂಗ್ರಹದ ಬಜೆಟ್ ಗುರಿ ತಲುಪಲಾಗುವುದು' ಎಂದು ಹಣಕಾಸು ರಾಜ್ಯ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

ಆಧಾರ–ಪ್ರಜಾವಾಣಿ, 02.07.2019

2. ಮೀಸಲು ಪಟ್ಟಿ ಬದಲಿಸುವ ಹಕ್ಕು ರಾಜ್ಯಕ್ಕಿಲ್ಲ: ಕೇಂದ್ರ

ಇತರ ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರಿದ 17 ಸಮುದಾಯಗಳನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಉತ್ತರ ಪ್ರದೇಶ ಸರ್ಕಾರದ ನಿರ್ಧಾರ ಸರಿಯಲ್ಲ. ಮೀಸಲು ಪಟ್ಟಿಯನ್ನು ಬದಲಾಯಿಸುವ ಹಕ್ಕು ಸಂಸತ್ತಿಗಷ್ಟೇ ಇದೆಯೆಂದು ಕೇಂದ್ರ ಸರ್ಕಾರ ಹೇಳಿದೆ. ಉತ್ತರ ಪ್ರದೇಶ ಸರ್ಕಾರದ ಆದೇಶ ಸಂವಿಧಾನ ಬದ್ಧವಾಗಿಲ್ಲ. ಹೀಗಾಗಿ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸಬಾರದು. ಒಂದು ವೇಳೆ ಪ್ರಮಾಣ ಪತ್ರ ವಿತರಿಸಿದರೆ ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಬಹುದು. ಹಾಗಾದಲ್ಲಿ ಯಾರಿಗೂ ಯಾವ ಸೌಕರ್ಯವಾಗುವುದಿಲ್ಲವೆಂದು ಸಾಮಾಜಿಕ ಮತ್ತು ನ್ಯಾಯ ಮತ್ತು ಸಬಲೀಕರಣ ಸಚಿವ ಥಾವರ್ ಚಂದ್ ಗೆಹ್ಲೋತ್‌ರವರು ರಾಜ್ಯ ಸಭೆಯಲ್ಲಿ ಹೇಳಿದ್ದಾರೆ.

ಬಿಎಸ್‌ಪಿ ಸದಸ್ಯ ಸತೀಶ್‌ಚಂದ್ರ ಮಿಶ್ರಾ ಶೂನ್ಯವೇಳೆಯಲ್ಲಿ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಉತ್ತರ ಪ್ರದೇಶ ಸರ್ಕಾರವು ಮೀಸಲು ಪಟ್ಟಿಯಲ್ಲಿ ಬದಲಾವಣೆ ಮಾಡಲು ಉದ್ದೇಶಿಸಿದರೆ, ಆ ಕುರಿತ ಪ್ರಸ್ತಾವವನ್ನು ಕೇಂದ್ರಕ್ಕೆ ಕಳುಹಿಸಿಬೇಕು. ಆಗ ಕೇಂದ್ರವು ಅದನ್ನು ಪರಿಗಣಿಸಬಹುದು. ಜಾತಿಯನ್ನು ಒಂದು ಪಟ್ಟಿಯಿಂದ ಇನ್ನೊಂದು ಪಟ್ಟಿಗೆ ವರ್ಗಾಯಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಇದೆ ಎಂದರು.

2005ರಲ್ಲಿ ಮುಲಾಯಂ ಸಿಂಗ್ ನೇತೃತ್ವದ ಸರ್ಕಾರವು 11 ಸಮುದಾಯಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸುವಂತೆ ಆದೇಶ ನೀಡಿತ್ತು. ಆದರೆ, ಆದೇಶಕ್ಕೆ ತಡೆಯಾಜ್ಞೆ ಬಂದಿದ್ದು, ಕೊನೆಗೆ ಪ್ರಸ್ತಾವವನ್ನು ಕೇಂದ್ರಕ್ಕೆ ಕಳುಹಿಸಲಾಗಿತ್ತು. ಬಳಿಕ ಮಾಯಾವತಿ ಸರ್ಕಾರ ಈ ಆದೇಶವನ್ನು ರದ್ದುಪಡಿಸಿತ್ತು. ಅಖಿಲೇಶ್ ಯಾದವ್ ನೇತೃತ್ವದ ಸರ್ಕಾರವು ಮತ್ತೆ ಆದೇಶ ಮಾಡಿದ್ದಾಗ, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು.

ಆಧಾರ–ಪ್ರಜಾವಾಣಿ, 03.07.2019

3. ಕಬ್ಬಿನ ಬಾಕಿ ಕೊಡದ ಕಾರ್ಖಾನೆ ಮಾಲೀಕರು ಜೈಲಿಗೆ: ಕೇಂದ್ರ

ರೈತರಿಗೆ ಕಬ್ಬಿನ ಬಾಕಿ ಹಣವನ್ನು ನೀಡಲು ವಿಫಲವಾಗುವ ಸಕ್ಕರೆ ಕಾರ್ಖಾನೆ ಮಾಲೀಕರನ್ನು ಜೈಲಿಗೆ ಹಾಕುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಲೋಕಸಭೆಯಲ್ಲಿ ಈ ಹೇಳಿಕೆ ನೀಡಿದ ಆಹಾರ ಮತ್ತು ಪಡಿತರ ವಿತರಣೆ ಸಚಿವ ರಾಮ್‌ವಿಲಾಸ್ ಪಾಸ್ವಾನ್, 2017–18ರಲ್ಲಿ ಕಬ್ಬು ಬೆಳೆಗಾರರಿಗೆ ನೀಡಬೇಕಿರುವ ಬಾಕಿ ಹಣದ ಪ್ರಮಾಣ 85,179 ಕೋಟಿ ರೂ ಇತ್ತು. ಈ ಪ್ರಮಾಣ ಕಬ್ಬಿನ ಬೆಳೆಯ ಋತುವಿನ ಮುಕ್ತಾಯದ ವೇಳೆಗೆ 303 ಕೋಟಿ ರೂ.ಗಳಿಗೆ ಇಳಿಕೆಯಾಗಿತ್ತು. ಪ್ರಸ್ತುತ ಋತುವಿನಲ್ಲಿ ರೈತರಿಗೆ ಪಾವತಿಸಬೇಕಿರುವ 85,355 ಕೋಟಿ ರೂ. ಪೈಕಿ 67,706 ಕೋಟಿ ರೂ. ಈಗಾಗಲೇ ಪಾವತಿಸಲಾಗಿದೆ. ಈ ವರ್ಷ ಅಂತ್ಯದ ವೇಳೆಗೆ ಬಾಕಿ ಹಣ ಪಾವತಿ ಖಾತರಿಪಡಿಸಿಕೊಳ್ಳಲಾಗುವುದು. ಒಂದು ವೇಳೆ ಬಾಕಿ ಹಣ ಪಾವತಿಸದೇ ಇದ್ದರೆ, ಸಕ್ಕರೆ ಕಾರ್ಖಾನೆಯ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಆಧಾರ–ಕನ್ನಡಪ್ರಭ, 03.07.2019

4. ರಾಹುಲ್ ರಾಜೀನಾಮೆ: ಅಧಿಕೃತ ಘೋಷಣೆ

ಲೋಕಸಭೆ ಚುನಾವಣೆಯಲ್ಲಿನ ಹೀನಾಯ ಸೋಲಿನ ಹಿನ್ನಲೆಯಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದ ರಾಹುಲ್ ಗಾಂಧಿ ತಮ್ಮ ರಾಜೀನಾಮೆ ಪತ್ರವನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ. 4 ಪುಟಗಳ ತ್ಯಾಗ ಪತ್ರವನ್ನು ಟ್ವೀಟ್ ಮಾಡಿರುವ ಅವರು ತಮ್ಮ ನೂತನ ಅಧ್ಯಕ್ಷರನ್ನು ನೇಮಕ ಮಾಡಿಕೊಳ್ಳುವಂತೆ ಕಾಂಗ್ರೆಸ್ಸಿನ ಪರಮೋಚ್ಚ ನೀತಿ ನಿರೂಪಣಾ ಸಂಸ್ಥೆ 'ಕಾಂಗ್ರೆಸ್ ಕಾರ್ಯಕಾರಿ ಸಮಿತಿ' (ಸಿಡಬ್ಲ್ಯುಸಿ) ಗೆ ಸೂಚನೆ ನೀಡಿದ್ದಾರೆ.

49 ವರ್ಷದ ರಾಹುಲ್ ಅವರು ಅಧಿಕೃತವಾಗಿ ರಾಜೀನಾಮೆ ಘೋಷಿಸುವುದರೊಂದಿಗೆ, ಕಳೆದ ಒಂದು ತಿಂಗಳಿನಿಂದ ಅವರ ಮನವೊಲಿಕೆಗೆ ಹಿರಿಯ – ಕಿರಿಯ ನಾಯಕರು ನಡೆಸುತ್ತಿದ್ದ ಎಲ್ಲಾ ಪ್ರಯತ್ನಗಳಿಗೂ ತೆರೆ ಬಿದ್ದಿದೆ. ಆದಾಗ್ಯೂ, ಈಗಲೂ ರಾಹುಲ್ ಅವರೇ ನಮ್ಮ ನಾಯಕ, ಅವರೇ ಹುದ್ದೆಯಲ್ಲಿ ಮುಂದುವರಿಯಬೇಕು ಎಂಬ ಧ್ವನಿ ಕಾಂಗ್ರೆಸ್ಸಿನಲ್ಲಿ ಈಗಲೂ ಕೇಳಿ ಬರುತ್ತಿದೆ.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸದ್ಯ ಹಿರಿಯ ಕಾಂಗ್ರೆಸ್ಸಿಗರಾದ ಕರ್ನಾಟಕದ ಮಲ್ಲಿಕಾರ್ಜುನ ಖರ್ಗೆ, ಮಹಾರಾಷ್ಟ್ರದ ಸುಶೀಲ್ ಕುಮಾರ್ ಶಿಂಧೆ ಹಾಗೂ ಮುಕುಲ್ ವಾಸ್ನಿಕ್ ಅವರ ಹೆಸರುಗಳು ಮುಂಚೂಣಿಯಲ್ಲಿವೆ. ಖರ್ಗೆ ಹಾಗೂ ಶಿಂಧೆ ಪೈಕಿ ಒಬ್ಬರು ಆಯ್ಕೆಯಾಗಬಹುದೆಂದು ಹೇಳಲಾಗುತ್ತಿದೆ.

ಆಧಾರ–ಕನ್ನಡಪ್ರಭ, 04.07.2019

5. ಬೆಂಬಲ ಬೆಲೆಗಳ ಏರಿಕೆ– ರಾಗಿ, ಭತ್ತ, ಜೋಳ, ತೊಗರಿ ಬೆಲೆ ಹೆಚ್ಚಿಸಿದ ಕೇಂದ್ರ

ಭತ್ತ, ರಾಗಿ, ಜೋಳ, ತೊಗರಿ, ಉದ್ದು, ಸೋಯಾಬಿನ್, ಹತ್ತಿ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಹೆಚ್ಚಳ ಮಾಡಿದೆ. ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ. ಭತ್ತದ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 65/–ರೂ ಹೆಚ್ಚಿಸಲಾಗಿದ್ದು, ಇದರಿಂದಾಗಿ ಕ್ವಿಂಟಾಲ್ ಭತ್ತಕ್ಕೆ 1,815/– ರೂ ಬೆಂಬಲ ಬೆಲೆ ದೊರೆಯಲಿದೆ. ರಾಗಿಯು ಕನಿಷ್ಠ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 253/–ರೂ.ನಷ್ಟು ಏರಿಕೆ ಮಾಡಲಾಗಿದ್ದು, ಕ್ವಿಂಟಾಲ್ ರಾಗಿಯ ಬೆಲೆ 2,897/–ರೂ.ನಿಂದ 3,150/–ರೂ.ಗೆ ಏರಿಕೆ ಆಗಿದೆ.

ಜೋಳದ ಬೆಂಬಲ ಬೆಲೆ 120/- ರೂ. ಹೆಚ್ಚಳವಾಗಿದ್ದು, ಹೈಬ್ರಿಡ್ ಜೋಳದ ಬೆಲೆ ಕ್ವಿಂಟಾಲ್‌ಗೆ 2,550/-, ಮಾಲ್ದಂಡಿ ಜೋಳದ ಬೆಲೆ ಕ್ವಿಂಟಾಲ್‌ಗೆ 2,570/- ರೂ.ಗೆ ಏರಿಕೆಯಾಗಿದೆ. ಮುಸುಕಿನ ಜೋಳದ ಬೆಂಬಲ ಬೆಲೆಯನ್ನು 60/- ರೂ. ಹೆಚ್ಚಿಸಲಾಗಿದೆ. ಇದರಿಂದಾಗಿ ರೈತರಿಗೆ ಇನ್ನು 1,760/- ರೂ ಸಿಗಲಿದೆ. ಸಜ್ಜೆ ಬೆಂಬಲ ಬೆಲೆಯನ್ನು 50/-ರೂ. ಏರಿಕೆ ಮಾಡಲಾಗಿದ್ದು, ಇದರಿಂದ ಕ್ವಿಂಟಾಲ್‌ಗೆ 2,000/- ರೂ. ಸಿಗಲಿದೆ. ತೊಗರಿ ಬೆಂಬಲ ಬೆಲೆಯನ್ನು 125/- ರೂ ಹೆಚ್ಚಳ ಮಾಡಿ, 5,800 ರೂ.ಗೆ ಏರಿಸಲಾಗಿದೆ. ಉದ್ದು ಬೆಂಬಲ ಬೆಲೆ 100/-ರೂ. ಏರಿಕೆಯಾಗಿ 5,700/-ರೂ.ಗೆ ತಲುಪಿದೆ. ಹೆಸರುಕಾಳಿನ ಬೆಂಬಲ ಬೆಲೆ 75/-ರೂ. ಏರಿಕೆಯಾಗಿ 7,050/-ಕ್ಕೆ ಹೆಚ್ಚಳಗೊಂಡಿದೆ. ಸೋಯಾಬಿನ್ ಬೆಂಬಲ ಬೆಲೆಯನ್ನು 311/- ರೂ.ಗೆ ಹೆಚ್ಚಳ ಮಾಡಿದ್ದು, 3,710/-ರೂ.ಗೆ ಏರಿಕೆ ಮಾಡಲಾಗಿದೆ. ಸೂರ್ಯಕಾಂತಿಯ ಬೆಲೆ 262/-ರೂ.ಗೆ ಏರಿಕೆ ಕಂಡಿದ್ದು, 5,650/- ರೂ.ಗೆ ಹೆಚ್ಚಳಗೊಂಡಿದೆ. ನೆಲಗಡಲೆ ಬೆಂಬಲ ಬೆಲೆ 200/- ರೂ. ಏರಿಕೆಯೊಂದಿಗೆ ಕ್ವಿಂಟಾಲ್‌ಗೆ 5,090/-ರೂ ತಲುಪಿದೆ. ಹತ್ತಿಯ ಬೆಂಬಲ ಬೆಲೆಯನ್ನು ರೂ.100/- ರಿಂದ 105/- ನಷ್ಟು ಏರಿಸಲಾಗಿದೆ.

ಆಧಾರ-ಕನ್ನಡಪ್ರಭ, 04.07.2019

6. ಮಳೆ ನೀರು ಸಂಗ್ರಹದ ಮೇಲೆ ನಿಗಾ : ಪ್ರತ್ಯೇಕ ಘಟಕ ರಚನೆಗೆ ಸೂಚನೆ

ಮಳೆ ನೀರು ಸಂಗ್ರಹದ ಕುರಿತು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ಘಟಕ ಸ್ಥಾಪಿಸಬೇಕು ಹಾಗೂ ಸಂಬಂಧಪಟ್ಟ ಆಯಾ ಪ್ರದೇಶಗಳಲ್ಲಿ ಕನಿಷ್ಠ ಒಂದು ಜಲಮೂಲವನ್ನು ಪುನರುಜ್ಜೀವನಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳು ಮುಂದಾಗಬೇಕೆಂದು ಕೇಂದ್ರ ಹೇಳಿದೆ.

ನಗರ ಸ್ಥಳೀಯ ಸಂಸ್ಥೆಗಳ ಮಳೆ ನೀರು ಸಂಗ್ರಹ ಘಟಕಗಳು ಅಂತರ್ಜಲ ಹೊರತೆಗೆಯುವಿಕೆಯನ್ನು ಮತ್ತು ಅಂತರ್ಜಲ ಮರುಪೂರಣ ಕುರಿತು ಮೇಲ್ವಿಚಾರಣೆ ನಡೆಸಲಿದೆಯೆಂದು ಕೇಂದ್ರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿರುವ ನಗರ ನೀರು ಸಂರಕ್ಷಣೆಗಾಗಿ ಮಾರ್ಗಸೂಚಿಯಲ್ಲಿ ತಿಳಿಸಿದೆ. ಸಾರ್ವಜನಿಕರಿಗಾಗಿ ಈ ಕುರಿತು ಮಾಹಿತಿಯನ್ನು ಸೂಕ್ತ ಸ್ಥಳದಲ್ಲಿ ಪ್ರದರ್ಶಿಸಬೇಕೆಂದು ಸಚಿವಾಲಯ ಹೇಳಿದೆ.

ಮಳೆ ನೀರು ಸಂಗ್ರಹ ವ್ಯವಸ್ಥೆ ಇದ್ದರೆ ಮಾತ್ರ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಬೇಕು. ನಿರ್ಮಾಣ ಮುಗಿದ ಮೇಲೆ ಈ ಸೌಕರ್ಯ ಇರುವುದನ್ನು ಪರಿಶೀಲಿಸಿದ ನಂತರವೇ ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡಬೇಕು. ಜಲಶಕ್ತಿ ಅಭಿಯಾನದ ಸಂದರ್ಭದಲ್ಲಿ ಪ್ರತಿ ನಗರವು ಜಲಮೂಲಗಳ ಪುನರುಜ್ಜೀವನಕ್ಕೆ ಮುಂದಾಗಲೇಬೇಕು. ಜಲಮೂಲಗಳನ್ನು ಗುರುತಿಸಿ ಸಾರ್ವಜನಿಕರ ಸಲಹೆ ಪಡೆದು ಪುನರುಜ್ಜೀವನಕ್ಕೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಸಚಿವಾಲಯ ತಿಳಿಸಿದೆ.

ಆಧಾರ-ಪ್ರಜಾವಾಣಿ, 08.07.2019

7. ಕುಲಭೂಷಣ್ ಗಲ್ಲು ಶಿಕ್ಷೆಗೆ ತಡೆ

ಭಾರತೀಯ ನೌಕಾಪಡೆಯ ನಿವೃತ್ತ ಅಧಿಕಾರಿ ಕುಲಭೂಷಣ್ ಜಾಧವ್ ಅವರಿಗೆ ಪಾಕಿಸ್ತಾನದ ಸೇನಾ ನ್ಯಾಯಾಲಯ ವಿಧಿಸಿದ ಗಲ್ಲು ಶಿಕ್ಷೆಗೆ ಅಂತರರಾಷ್ಟ್ರೀಯ ನ್ಯಾಯಾಲಯ ತಡೆ ನೀಡಿ, ಸದರಿ ಶಿಕ್ಷೆಯನ್ನು ಮರುಪರಿಶೀಲಿಸುವಂತೆ ಪಾಕಿಸ್ತಾನಕ್ಕೆ ಸೂಚಿಸಿದೆ. ರಾಜತಾಂತ್ರಿಕ ನೆರವು ಪಡೆಯುವಂತಾಗಲು ಕುಲಭೂಷಣ್ ಅವರಿಗೆ ಅವಕಾಶ ಕಲ್ಪಿಸಬೇಕೆಂದು ನ್ಯಾಯಾಲಯ ಸೂಚಿಸಿದೆ.

ಭಯೋತ್ಪಾದನೆ ಹಾಗೂ ಬೇಹುಗಾರಿಕೆ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಪಾಕ್ ಸೇನಾ ನ್ಯಾಯಾಲಯವು ಅವರಿಗೆ ಗಲ್ಲು ಶಿಕ್ಷೆ ವಿಧಿಸಿತ್ತು. ತರುವಾಯ ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತು.

2019 ಜುಲೈ 17ರಂದು ಕುಲಭೂಷಣ್‌ಗೆ ಗಲ್ಲು ಶಿಕ್ಷೆಯ ತೀರ್ಪು ಪ್ರಕಟಗೊಂಡ ನಂತರ ಪಾಕ್ ಸೇನಾ ನ್ಯಾಯಾಲಯ ವಿಧಿಸಿದ ಗಲ್ಲು ಶಿಕ್ಷೆಯನ್ನು ಅಂತರರಾಷ್ಟ್ರೀಯ ನ್ಯಾಯಾಲಯ ಅಮಾನತ್ತುಗೊಳಿಸಿದ್ದು, ಭಾರತದ ರಾಜತಾಂತ್ರಿಕರಿಗೆ ಜಾಧವ್ ಭೇಟಿ ಮಾಡಲು ಅವಕಾಶ ನೀಡುವಂತೆಯೂ ಸೂಚನೆ ನೀಡಿರುತ್ತದೆ. ಈ ಪ್ರಕರಣವು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ರಾಜತಾಂತ್ರಿಕತೆಗೆ ಮತ್ತೊಂದು ಗೆಲುವು ನೀಡಿದೆ.

ಆಧಾರ – ವಿಶ್ವವಾಣಿ, 18.07.2019

8. ನರೇಂದ್ರ ಮೋದಿ ಸರ್ಕಾರಕ್ಕೆ 50 ದಿನ

ಪ್ರಧಾನಿ ನರೇಂದ್ರ ಮೋದಿ ಅವರು ಎರಡನೇ ಅವಧಿಗೆ ಪ್ರಧಾನಿಯಾಗಿ 50 ದಿನಗಳು ಪೂರ್ಣಗೊಂಡಿರುತ್ತದೆ. ಮೋದಿ ಅವರ ಮೊದಲ ಅವಧಿಗೆ ಹೋಲಿಸಿದರೆ ಎರಡನೇ ಅವಧಿಯಲ್ಲಿ ಸುಧಾರಣೆ ಪ್ರಕ್ರಿಯೆಗಳ ವೇಗ, ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

ಮೋದಿ ಸರ್ಕಾರದ ಸಾಧನೆಗಳು ಹಾಗೂ ರಿಪೋರ್ಟ್ ಕಾರ್ಡ್ ಅನ್ನು ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಅವರು ಬಿಡುಗಡೆಗೊಳಿಸಿದರು. ಎರಡನೇ ಅವಧಿಯ ಮೊದಲ 50 ದಿನಗಳಲ್ಲಿ ವೇಗ, ಕೌಶಲ್ಯ ಹಾಗೂ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದರು.

ಆಧಾರ–ಕನ್ನಡಪ್ರಭ, 23.07.2019

9. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ "ಪರಾಮರ್ಶೆ" ಯೋಜನೆ: ಕಳಪೆ ಶಿಕ್ಷಣ ಸಂಸ್ಥೆಗಳಿಗೆ ಮಾರ್ಗದರ್ಶನ

ಕಳಪೆ ಕಾರ್ಯಕ್ಷಮತೆಯ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಗುಣ ಮಟ್ಟವನ್ನು ಸುಧಾರಿಸಲು ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳಿಂದ ನೆರವು ಒದಗಿಸುವ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಿದ್ದಪಡಿಸಿದೆ.

ಪರಾಮರ್ಶೆ ಎಂಬುದು ಯೋಜನೆಯ ಹೆಸರು. ಕಳಪೆ ಗುಣಮಟ್ಟದ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಅನುಷ್ಠಾನ ಮಾಡಲಿದೆ.

ಈ ಕೆಲಸಕ್ಕೆ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುವುದು. ಇದಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಭರಿಸಲಿದೆ. ಉತ್ತಮ ಗುಣಮಟ್ಟದ ಸಂಸ್ಥೆಯು ಕನಿಷ್ಠ ಐದು ಸಂಸ್ಥೆಗಳನ್ನು ಆಯ್ಕೆ ಮಾಡಿ ಮಾರ್ಗದರ್ಶನ ನೀಡಬೇಕು. ಸರ್ಕಾರಿ ಸಂಸ್ಥೆಗಳ ಮಾನ್ಯತೆ ಪಡೆದುಕೊಳ್ಳುವುದಕ್ಕೂ ಮಾರ್ಗದರ್ಶಕ ಸಂಸ್ಥೆಗಳು ಸಹಾಯ ಮಾಡಲಿವೆ.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆ (ನ್ಯಾಕ್) ಹಾಗೂ ರಾಷ್ಟ್ರೀಯ ಮಾನ್ಯತಾ ಪರಿಷತ್ (ಎನ್. ಬಿ.ಎ) ಈವರೆವಿಗೆ 903 ವಿಶ್ವವಿದ್ಯಾಲಯಗಳ ಪೈಕಿ ಶೇಕಡ 39ರಷ್ಟನ್ನು ಮತ್ತು 40 ಸಾವಿರ ಕಾಲೇಜುಗಳ ಪೈಕಿ ಶೇಕಡ 20ರಷ್ಟನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ಪ್ರಮಾಣ ಪತ್ರ ನೀಡಿವೆ. 2022ರೊಳಗೆ ಎಲ್ಲ ಸಂಸ್ಥೆಗಳಿಗೆ ಪ್ರಮಾಣ ಪತ್ರ ನೀಡುವುದು ಮಾನವ ಸಂಪನ್ಮೂಲ ಸಚಿವಾಲಯದ ಗುರಿ.

ಆಧಾರ–ಪ್ರಜಾವಾಣಿ, 29.07.2019

10. ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಪ್ರಧಾನಿ ಸ್ಪಷ್ಟೋಕ್ತಿ ಸೇನಾಪಡೆಗಳ ಆಧುನೀಕರಣಕ್ಕೆ ಒತ್ತು ನೀಡುವ ಭರವಸೆ ದೇಶದ ಭದ್ರತೆ ವಿಚಾರದಲ್ಲಿ ರಾಜಿ ಇಲ್ಲ

ರಾಷ್ಟ್ರೀಯ ಭದ್ರತೆ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ. ಯಾವುದೇ ಕಾರಣಕ್ಕೂ ರಾಜಿಯಾಗುವುದಿಲ್ಲ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಪಾಕಿಸ್ತಾನಕ್ಕೆ ಖಡಕ್ ಸಂದೇಶ ರವಾನಿಸಿದ್ದಾರೆ.

"ಯಾವುದೇ ದೇಶಕ್ಕೆ ಭದ್ರತೆ ಇದ್ದರೆ ಮಾತ್ರ ಅದರ ಅಭಿವೃದ್ಧಿ ಸಾಧ್ಯ. ಹೀಗಾಗಿ ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ರಾಜಿಯಾಗುವುದಿಲ್ಲ" ಎಂದಿದ್ದಾರೆ.

20ನೇ ವರ್ಷದ ಕಾರ್ಗಿಲ್ ವಿಜಯ ದಿವಸದ ಸ್ಮರಣಾರ್ಥವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಕಿಸ್ತಾನವನ್ನು ಪರೋಕ್ಷವಾಗಿ ಉಲ್ಲೇಖಿಸಿ ಮಾತನಾಡಿದ ಅವರು "ಕೆಲವು ದೇಶಗಳು ಭಯೋತ್ಪಾದನೆ ಹರಡಲು ಪರೋಕ್ಷ ಯುದ್ಧ ನಡೆಸುತ್ತಿವೆ. ಅಂತಹ ದೇಶಗಳ ವಿರುದ್ಧ ಜಾಗತಿಕ ಮಟ್ಟದಲ್ಲಿ ಹೋರಾಡಲು ಈಗ ಕಾಲ ಕೂಡಿಬಂದಿದೆ" ಎಂದರು.

ದೇಶದ ಶಕ್ತಿ–ಸಾಮರ್ಥ್ಯದ ಸಂಕೇತವಾಗಿರುವ ಕಾರ್ಗಿಲ್ ವಿಜಯವು ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗಿದೆ ಎಂದು ಹೇಳಿದರು. ವೀರ ಯೋಧರು ಮತ್ತು ಅವರ ತ್ಯಾಗ ಬಲಿದಾನಗಳನ್ನು ಸ್ಮರಿಸುತ್ತಾ ಅವರ ಹೆತ್ತವರಿಗೂ ಧನ್ಯವಾದ ಅರ್ಪಿಸಿದರು.

"ಕಾರ್ಗಿಲ್ ಯುದ್ಧ ವಿಜಯವು ನಮ್ಮ ಮಕ್ಕಳು ಸಾಧಿಸಿದ ವಿಜಯ. ಅದು ಭಾರತದ ಸಾಮರ್ಥ್ಯ ಮತ್ತು ಸಹನೆಯ ವಿಜಯ. ಭಾರತದ ಪಾವಿತ್ರ್ಯತೆ ಮತ್ತು ಶಿಸ್ತಿಗೆ ಸಂದ ಜಯ. ಅದು ಭಾರತೀಯರ ನಿರೀಕ್ಷೆಗಳಿಗೆ ಸಂದ ಜಯ" ಎಂದರು.

"ಕಾರ್ಗಿಲ್ ಯುದ್ಧದ ವಿಜಯಕ್ಕಾಗಿ ಯೋಧರು ಮಾಡಿದ ತ್ಯಾಗ ಅತ್ಯುನ್ನತವಾದುದು. ಕಾರ್ಗಿಲ್ ಶಿಖರದ ಮೇಲಿಂದ ತ್ರಿವರ್ಣಧ್ವಜವನ್ನು ತೆರವುಗೊಳಿಸುವ ಸಂಚನ್ನು ವಿಫಲಗೊಳಿಸಿದ ಮತ್ತು ಅದಕ್ಕಾಗಿ ತಮ್ಮ ರಕ್ತವನ್ನೇ ಹರಿಸಿದ ವೀರ ಕಲಿಗಳಿಗೆ ನಾನು ಗೌರವ ಸಲ್ಲಿಸಲು ಬಯಸುತ್ತೇನೆ. ದೇಶದ ಪ್ರತಿಯೊಬ್ಬ ಪ್ರಜೆಯೂ ತಲೆ ತಗ್ಗಿಸಿ ಸೇನಾಪಡೆಗಳಿಗೆ ವಂದಿಸುತ್ತಾರೆ" ಎಂದು ಮೋದಿ ಹೇಳಿದರು. 1999ರಲ್ಲಿ ಕಾರ್ಗಿಲ್ ಯುದ್ಧದ ವೇಳೆ ಅಲ್ಲಿಗೆ ತೆರಳಿ ಯೋಧರನ್ನು ಭೇಟಿ ಮಾಡಿದ ಕ್ಷಣವನ್ನು ಸ್ಮರಿಸಿದ ಅವರು "20 ವರ್ಷದ ಹಿಂದೆ ಯುದ್ಧ ನಡೆಯುತ್ತಿರುವಾಗಲೇ ನಾನು ಕಾರ್ಗಿಲ್ ಪ್ರದೇಶಕ್ಕೆ ಹೋಗಿದ್ದೆ ಶತ್ರು ದೇಶವು ಪರ್ವತದ ತುದಿಯಲ್ಲಿ ಕುಳಿತು ಆಟವಾಡುತ್ತಿತ್ತು. ಸಾವು ಕಣ್ಣೆದುರೇ ಇತ್ತು. ಆದರೂ ಅದನ್ನು ಲೆಕ್ಕಿಸದೇ ತ್ರಿವರ್ಣ ಧ್ವಜ ಹೊತ್ತ ನಮ್ಮ ವೀರ ಯೋಧರು ಶರವೇಗದಲ್ಲಿ ಕಣಿವೆಯತ್ತ ನುಗ್ಗುತ್ತಿದ್ದರು" ಎಂದರು.

ಕಳೆದ 4 ವರ್ಷದಲ್ಲಿ ಯೋಧರು ಮತ್ತು ಅವರ ಕುಟುಂಬ ಸದಸ್ಯರ ಹಿತಾಸಕ್ತಿಯಿಂದ ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ "ಒಂದೇ ಶ್ರೇಣಿ–ಒಂದೇ" ಪಿಂಚಣಿ" ಯೋಜನೆಯನ್ನು ನಮ್ಮ ಸರ್ಕಾರ ಜಾರಿಗೊಳಿಸಿತು. ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡ ಕೂಡಲೇ ಯೋಧರ ಮಕ್ಕಳ ವಿದ್ಯಾರ್ಥಿ ವೇತನ ಏರಿಕೆ ಮಾಡುವ ತೀರ್ಮಾನವನ್ನು ನಮ್ಮ ಸರ್ಕಾರ ಕೈಗೊಂಡಿತು ಎಂದು ಮೋದಿ ತಿಳಿಸಿದರು.

ಯುದ್ಧವು ಅಂತರಿಕ್ಷದವರೆಗೂ ವ್ಯಾಪಿಸಿದೆ. ಸೈಬರ್ ಜಗತ್ತಿನಲ್ಲೂ ಈಗ ಯುದ್ಧಗಳು ನಡೆಯುತ್ತಿವೆ. ಹೀಗಾಗಿ ಸೇನಾಪಡೆಗಳ ಆಧುನೀಕರಣ ಅಗತ್ಯವಷ್ಟೇ ಅಲ್ಲ. ಅದು ನಮ್ಮ ಆದ್ಯತೆಯೂ ಹೌದು" ಎಂದರು.

ಆಧಾರ–ವಿಜಯ ಕರ್ನಾಟಕ, 28.07.2019

11. ವಿವಿಧ ನ್ಯಾಯ ಮಂಡಳಿಗಳು ರದ್ದು: ಕಾಲಮಿತಿಯಲ್ಲಿ ತೀರ್ಪು:

ತಿದ್ದುಪಡಿ ಮಸೂದೆಗೆ ಒಪ್ಪಿಗೆ ಜಲ ವಿವಾದಕ್ಕೆ ಒಂದೇ ವೇದಿಕೆ

ರಾಜ್ಯಗಳ ನಡುವಣ ನದಿ ನೀರು ಹಂಚಿಕೆ ವಿವಾದಗಳ ಪರಿಹಾರ ಸುದೀರ್ಘ ಅವಧಿಗೆ ವಿಳಂಬವಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹೆಜ್ಜೆ ಇರಿಸಿದೆ.

ಅಂತರರಾಜ್ಯ ನದಿ ನೀರು ವಿವಾದಗಳ (ತಿದ್ದುಪಡಿ) ಮಸೂದೆಗೆ ಲೋಕಸಭೆ ಒಪ್ಪಿಗೆ ಕೊಟ್ಟಿದೆ. ವಿವಿಧ ರಾಜ್ಯಗಳ ನಡುವಣ ನೀರು ಹಂಚಿಕೆ ವಿವಾದಗಳ ಪರಿಹಾರಕ್ಕೆ ಒಂದೇ ನ್ಯಾಯಮಂಡಳಿ ಸ್ಥಾಪನೆ ಮತ್ತು ವಿವಾದ ಪರಿಹಾರಕ್ಕೆ ಕಟ್ಟುನಿಟ್ಟಾಗಿ ಸಮಯದ ಗಡುವು ನೀಡುವುದು ಈ ಮಸೂದೆಯ ಉದ್ದೇಶ.

ಈಗ ಇರುವ ನದಿ ನೀರು ವಿವಾದ ಪರಿಹಾರ ನ್ಯಾಯಮಂಡಳಿಗಳು ತಮ್ಮ ಉದ್ದೇಶದಲ್ಲಿ ವಿಫಲವಾಗಿವೆ. ಹಾಗಾಗಿ ಹೊಸ ಧೋರಣೆ ಅನುಸರಿಸುವುದು ಅನಿವಾರ್ಯವಾಗಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದ್ದಾರೆ.

35 ವರ್ಷಗಳಿಂದಲೂ ಪರಿಹಾರವಾಗದೇ ಇರುವ ನದಿ ನೀರು ಹಂಚಿಕೆ ವಿವಾದಗಳು ಇವೆ ಎಂದು ಅವರು ಹೇಳಿದರು.

ಮೂಲ ಕಾಯ್ದೆ ಅಡಿಯಲ್ಲಿ ಈಗಾಗಲೇ ರಚನೆಯಾಗಿರುವ ಯಾವುದೇ ಸಮಿತಿ ಅಥವಾ ಪ್ರಾಧಿಕಾರ ರದ್ದಾಗುವುದಿಲ್ಲ ಎಂದರು.

ಪ್ರಮುಖ ಜಲ ವಿವಾದ ನ್ಯಾಯಮಂಡಳಿ

1. ಗೋದಾವರಿ ರಚನೆ:1969, ತೀರ್ಪು: 1980

   ರಾಜ್ಯಗಳು: ಕರ್ನಾಟಕ, ಮಹಾರಾಷ್ಟ, ಆಂಧ್ರಪ್ರದೇಶ, ಮಧ್ಯಪ್ರದೇಶ, ಒಡಿಶಾ

2. ಕೃಷ್ಣ ನದಿ ನೀರು ವಿವಾದ ನ್ಯಾಯಮಂಡಳಿ–1

   ರಚನೆ: 1969, ತೀರ್ಪು: 1976

   ರಾಜ್ಯಗಳು: ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ

3. ನರ್ಮದಾ ನದಿ ನೀರು ವಿವಾದ ನ್ಯಾಯಮಂಡಳಿ

   ರಚನೆ:1969, ತೀರ್ಪು: 1979

   ರಾಜ್ಯಗಳು: ರಾಜಾಸ್ಥಾನ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ,

4. ರಾವಿ ಮತ್ತು ಬಿಯಾಸ್ ನದಿ ನೀರು ವಿವಾದ ನ್ಯಾಯಮಂಡಳಿ

   ರಚನೆ: 1986, ತೀರ್ಪು: 1987

   (ತೀರ್ಪು ಪ್ರಶ್ನಿಸಿ ರಾಜ್ಯಗಳಿಂದ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಕೆ)

   ರಾಜ್ಯಗಳು: ಪಂಜಾಬ್, ಹರಿಯಾಣ, ರಾಜಸ್ಥಾನ,

5. ಕಾವೇರಿ ಜಲ ವಿವಾದ ನ್ಯಾಯಮಂಡಳಿ

   ರಚನೆ: 1990, ತೀರ್ಪು: 2007 (ತೀರ್ಪು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಕೆ)

   ರಾಜ್ಯಗಳು: ಕರ್ನಾಟಕ, ಕೇರಳ, ತಮಿಳುನಾಡು, ಪುದುಚೇರಿ

6. ಕೃಷ್ಣ ನದಿ ನೀರು ವಿವಾದ ನ್ಯಾಯಮಂಡಳಿ

   ರಚನೆ: 2004, ತೀರ್ಪು: 2010 (ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಕೆ)

   ರಾಜ್ಯಗಳು: ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ

7. ಮಹದಾಯಿ ನೀರು ಹಂಚಿಕೆ ವಿವಾದ ನ್ಯಾಯಮಂಡಳಿ

ರಚನೆ:2010, ತೀರ್ಪು: 2018 (ಅಧಿಸೂಚನೆ ಪ್ರಕಟ ಆಗಿಲ್ಲ)

ರಾಜ್ಯಗಳು: ಕರ್ನಾಟಕ, ಗೋವಾ, ಮಹಾರಾಷ್ಟ್ರ

ಆಧಾರ–ಪ್ರಜಾವಾಣಿ, 01.08.2019

12. ಅಕ್ರಮ ವಲಸಿಗರ ಓಡಿಸಲು ಪ್ಲಾನ್ ದೇಶದಾದ್ಯಂತ ಅಸ್ಸಾಂ ರೀತಿ ಎನ್‌ಆರ್‌ಸಿ

ಬರುವ ಏಪ್ರಿಲ್ 1 ರಿಂದ ದೇಶದಾದ್ಯಂತ ಜನಸಂಖ್ಯಾ ನೋಂದಣಿ ಇದನ್ನು ಆಧರಿಸಿ ದೇಶದ ಅಧಿಕೃತ ನಾಗರಿಕರ ಪಟ್ಟಿ ರಚನೆ.

ಅಸ್ಸಾಂನಲ್ಲಿ ನೆಲೆಸಿರುವ ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕಲು ಜಾರಿಗೊಳಿಸಲಾಗಿರುವ ರಾಷ್ಟ್ರೀಯ ನಾಗರಿಕ ನೋಂದಣಿ ಮಾದರಿ (ಎನ್.ಆರ್.ಸಿ) ಯಲ್ಲೇ ದೇಶವ್ಯಾಪಿ ಭಾರತೀಯ ನಾಗರಿಕರ ರಾಷ್ಟ್ರೀಯ ನೋಂದಣಿ (ಎನ್‌ಆರ್‌ಐಸಿ) ಸಿದ್ಧಪಡಿಸಲು ಸರ್ಕಾರ ನಿರ್ಧಾರಕ್ಕೆ ಬಂದಿದೆ. ಇದಕ್ಕೆ ಪೂರ್ವಭಾವಿಯಾಗಿ ಅದು ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್.ಪಿ.ಆರ್) ಗೆ ನಿರ್ಧರಿಸಿದೆ.

ಅಸ್ಸಾಂ ಮಾದರಿಯಲ್ಲಿ ದೇಶದ ಇತರೆ ವಿವಿಧ ರಾಜ್ಯಗಳಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ದೇಶದಿಂದ ಹೊರಹಾಕಬೇಕೆಂಬ ಕೂಗು ದೇಶದಾದ್ಯಂತ ವ್ಯಕ್ತವಾಗಿರುವ ಬೆನ್ನಲ್ಲೇ ಸರ್ಕಾರ ಈ ಮಹತ್ವದ ನಿರ್ಧಾರ ಪ್ರಕಟಿಸಿದೆ. ಇತ್ತೀಚೆಗೆ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ, ಮಾತನಾಡಿದ್ದ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಆದ್ಯತೆಗಳನ್ನು ಪಟ್ಟಿ ಮಾಡಿದರು. ಅದರಲ್ಲಿ ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಮೂಲಕ ಅಕ್ರಮ ವಲಸಿಗರನ್ನು ಹೊರಹಾಕಲು ಕಟಿಬದ್ಧವಾಗಿದೆ ಎಂದು ಘೋಷಿಸಿದ್ದರು.

ಎನ್.ಪಿ.ಆರ್. ಪೌರತ್ವ ಕಾಯ್ದೆ 2003ರ 3ನೇ ವಿಧಿಯ ಉಪವಿಧಿ(4)ರ ಅನ್ವಯ ಸರ್ಕಾರವು ಜನಸಂಖ್ಯಾ ನೋಂದಣಿ ಸಿದ್ಧಪಡಿಸುವ ಮತ್ತು ಅದನ್ನು ಪರಿಷ್ಕರಿಸುವ ನಿರ್ಧಾರಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಅಸ್ಸಾಂ ಹೊರತುಪಡಿಸಿ ದೇಶದಾದ್ಯಂತ ಮನೆಮನೆಗೆ ತೆರಳಿ ಜನಸಂಖ್ಯಾ ನೋಂದಣಿ ಮಾಡಲಾಗುವುದು. 2020ರ ಏಪ್ರಿಲ್ 1 ರಿಂದ 2020ರ ಸೆಪ್ಟೆಂಬರ್ 30ರವರೆಗೆ ದೇಶದ ಪ್ರತಿಯೊಬ್ಬ ವ್ಯಕ್ತಿಯ ಹೆಸರು ನೋಂದಣಿ ಪ್ರಕ್ರಿಯೆ ನಡೆಯಲಿದೆ ಎಂದು ನಾಗರಿಕ ನೋಂದಣಿಯ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತ ವಿವೇಕ್ ಜೋಶಿ ಹೊರಡಿಸಿದ ಆಧಿಸೂಚನೆಯಲ್ಲಿ ಮಾಹಿತಿ ನೀಡಲಾಗಿದೆ.

ಆಧಾರ–ಕನ್ನಡಪ್ರಭ, 04.08.2019

13. ಎಲ್ಲಾ ನೆರವು– ಕೇಂದ್ರ ಭರವಸೆ

ಪ್ರಳಯ ಪೀಡಿತ ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ರಾಜನಾಥ್ ಸಿಂಗ್ ಅವರ ಜೊತೆ ದೂರವಾಣಿಯಲ್ಲಿ ಮಾತನಾಡಿ ಪ್ರವಾಹದ ಪರಿಸ್ಥಿತಿಯನ್ನು ವಿವರಿಸಿದ್ದರು. ರಾಜ್ಯದ ನೆರವಿಗೆ ಕೇಂದ್ರ ಸರ್ಕಾರ ಬರಬೇಕು ಎಂದು ಕೋರಿದ್ದರು.

ಪ್ರವಾಹದಿಂದ ತತ್ತರಿಸುವ ರಾಜ್ಯಕ್ಕೆ ಹೆಚ್ಚಿನ ನೆರವು ನೀಡುವುದಾಗಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭರವಸೆ ನೀಡಿದ್ದಾರೆ. ಪ್ರವಾಹದಲ್ಲಿ ಸಿಲುಕಿರುವವರನ್ನು ರಕ್ಷಿಸಲು ಹೆಚ್ಚು ರಕ್ಷಣಾ ತಂಡಗಳನ್ನು ಕಳುಹಿಸಲಾಗುವುದು. ಅಗತ್ಯ ವಾಯುಪಡೆ ಹೆಲಿಕಾಪ್ಟರ್‌ಗಳನ್ನು ಒದಗಿಸಲಾಗುವುದು. ಎಲ್ಲಾ ರೀತಿಯ ನೆರವು ನೀಡಲು ಕೇಂದ್ರ ಸರ್ಕಾರ ಸಿದ್ಧವಿದೆ. ಚುರುಕಿನಿಂದ ಕಾರ್ಯನಿರ್ವಹಿಸಿ ಜನರನ್ನು ಆದಷ್ಟು ಬೇಗ ಸಂಕಷ್ಟದಿಂದ ಪಾರು ಮಾಡಿ ಎಂದು ಹೇಳಿದರು.

ಆಧಾರ–ಸಂಯುಕ್ತಕರ್ನಾಟಕ, 09.08.2019

14. ಕಳೆದ ವರ್ಷದ ಪರಿಹಾರ ನೆರವು ಈಗ ಪ್ರಕಟ: ಕೇಂದ್ರದಿಂದ 1 ಸಾವಿರ ಕೋಟಿ ಬರ ಪರಿಹಾರ ನಿಧಿ ಘೋಷಣೆ

ಕಳೆದ ವರ್ಷ ಬರದಿಂದ ತತ್ತರಿಸಿದ ಕರ್ನಾಟಕಕ್ಕೆ ಕೇಂದ್ರ ಸರ್ಕಾರ 1029.39 ಕೋಟಿ ರೂ. ಪರಿಹಾರ ಘೋಷಿಸಿದೆ. ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿ ಕರ್ನಾಟಕ, ಒಡಿಶಾ ಹಾಗೂ ಹಿಮಾಚಲ ಪ್ರದೇಶದಲ್ಲಿ ಉಂಟಾದ ನೈಸರ್ಗಿಕ ವಿಪತ್ತುಗಳಿಗೆ ಒಟ್ಟು 4,432 ಕೋಟಿ ರೂ. ನೆರವು ಪ್ರಕಟಿಸಿದೆ.

ರಾಷ್ಟ್ರೀಯ ಪ್ರಾಕೃತಿಕ ವಿಕೋಪ ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮೂಲಕ ಈ ಹಣವು ರಾಜ್ಯಗಳಿಗೆ ಬಿಡುಗಡೆಯಾಗಲಿದೆ.

ಆಧಾರ–ವಿಜಯಕರ್ನಾಟಕ, 21.08.2019

15. ಸಿಬಿಐ ನಿಂದ ಚಿದಂಬರಂ ಸೆರೆ

ಕೇಂದ್ರದ ಮಾಜಿ ಹಣಕಾಸು ಸಚಿವ ಪಿ. ಚಿದಂಬರಂ ಅವರನ್ನು ಐಎನ್‌ಎಕ್ಸ್ ಮೀಡಿಯಾ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

ನಿರೀಕ್ಷಣಾ ಜಾಮೀನು ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿ, ಅವರ ಅರ್ಜಿಯ ವಿಚಾರಣೆಯನ್ನು ನಿಗದಿಮಾಡಿತು. ನಿರೀಕ್ಷಣಾ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿತ್ತು.

ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ನಡೆಸಿದ ಬಳಿಕ ಅವರ ಮನೆಯಲ್ಲಿಯೇ ಚಿದಂಬರಂ ಅವರನ್ನು ಬಂಧಿಸಲಾಯಿತು.

ಆಧಾರ–ಪ್ರಜಾವಾಣಿ, 22.08.2019

16. ಬೃಹತ್ ಹೂಡಿಕೆದಾರರ ಮೇಲಿನ ಹೆಚ್ಚುವರಿ ತೆರಿಗೆ ಇಳಿಕೆ: ಆರ್ಥಿಕತೆಗೆ ಟಾನಿಕ್

ಇಳಿಕೆ ಹಾದಿಯಲ್ಲಿರುವ ಅರ್ಥವ್ಯವಸ್ಥೆ ಮತ್ತು ಷೇರು ಮಾರುಕಟ್ಟೆಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಮುಂದಡಿ ಇಟ್ಟಿದೆ. ನವೋದ್ಯಮ, ತೆರಿಗೆ, ವಾಹನ, ವಿವಿಧ ಉದ್ಯಮಗಳಿಗೆ ಬಲ ನೀಡುವ ಉದ್ದೇಶದಿಂದ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕೆಲ ಮಹತ್ವದ ಘೋಷಣೆಗಳನ್ನು ಮಾಡಿದ್ದಾರೆ.

ಆರ್‌ಬಿಐ ನಿರಂತರವಾಗಿ ರೆಪೋ ದರ ಇಳಿಕೆ ಮಾಡುತ್ತಿದ್ದರೂ ಇದರ ಲಾಭ ಗ್ರಾಹಕರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ರೆಪೋದರ ಆಧರಿಸಿ ಸಾಲದ ಮೇಲಿನ ಬಡ್ಡಿದರ ಬದಲಾವಣೆ ಮಾಡಲು ಸಚಿವೆ ನಿರ್ಮಲಾ ಸೂಚಿಸಿದ್ದು, ಇದರಿಂದ ಗ್ರಾಹಕರಿಗೆ ಗೃಹ ಮತ್ತು ವಾಹನ ಸಾಲ ಸೇರಿ ಹಲವು ಸಾಲಗಳ ಮಾಸಿಕ ಕಂತಿನಲ್ಲಿ ಇಳಿಕೆಯಾಗಲಿದೆ. ಉದ್ಯಮಗಳಿಗೂ ಸಾಲ ಅಗ್ಗವಾಗಲಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಗ್ರಾಹಕರ ಸಾಲ ಮರುಪಾವತಿ ಮಾಡಲಾದ 15 ದಿನಗಳೊಳಗಾಗಿ ಗ್ರಾಹಕರ ಆಸ್ತಿ ಪತ್ರಗಳನ್ನು ಹಿಂತಿರುಗಿಸುವುದಕ್ಕೂ ಸಚಿವೆ ಸೂಚಿಸಿದ್ದಾರೆ.

- ಬ್ಯಾಂಕುಗಳಿಗೆ ಹೆಚ್ಚುವರಿಯಾಗಿ 70,000ಕೋಟಿ ರೂ. ಬಂಡವಾಳ ಬಿಡುಗಡೆ.
- ಎನ್‌ಬಿಎಫ್‌ಸಿಗಳಿಗೆ ಆಧಾರ್ ಕೆವೈಸಿ ಬಳಸಿಕೊಳ್ಳಲು ಅವಕಾಶ. ಇದರಿಂದ ಸಾಲ ಪ್ರಕ್ರಿಯೆ ಸರಳವಾಗಲಿದೆ.
- ಮಾಧ್ಯಮ ಉದ್ಯಮಗಳ ಬಾಕಿ ಉಳಿದಿರುವ ಜಿಎಸ್‌ಟಿ ರಿಫಂಡ್ 30 ದಿನಗಳೊಳಗಾಗಿ ಹಿಂತಿರುಗಿಸುವುದು. ಮುಂದಿನ ದಿನಗಳಲ್ಲಿ 60 ದಿನಗಳಲ್ಲಿ ಜಿಎಸ್‌ಟಿ ರಿಫಂಡ್‌ಗೆ ವ್ಯವಸ್ಥೆ.

- ಹಣಕಾಸು ಅಕ್ರಮ ನಿಯಂತ್ರಣ ಕಾಯ್ದೆಯ ನಿಯಮಗಳು ಮತ್ತು ಆಧಾರ್ ಸಂಬಂಧಿಸಿದ ನಿಯಮಗಳಲ್ಲಿ ಅಗತ್ಯ ಬದಲಾವಣೆ.

ಆಧಾರ – ವಿಜಯವಾಣಿ, 24.08.2019

17. ಕೇಂದ್ರ ತಂಡ ನೆರೆ ಅಧ್ಯಯನ

ನೆರೆ ಹಾವಳಿಯಿಂದ ಸಂಭವಿಸಿದ ಹಾನಿ ಕುರಿತು ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಕಾಶ ನೇತೃತ್ವದ ತಂಡವು 4 ದಿನಗಳ ಕಾಲ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಅಧ್ಯಯನ ಪ್ರವಾಸ ನಡೆಸಿತು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಸಭೆ ನಡೆಸಿ ಪ್ರವಾಹ ಪರಿಸ್ಥಿತಿಯ ಮಾಹಿತಿಯನ್ನು ಪಡೆದುಕೊಂಡಿತು. ಯಡಿಯೂರಪ್ಪ ಅವರು ಪ್ರವಾಹದಿಂದ ಸಂಭವಿಸಿರುವ ನಷ್ಟ, ಸಮಸ್ಯೆ ಸೇರಿದಂತೆ ಇತರೆ ಮಾಹಿತಿಗಳನ್ನು ತಂಡಕ್ಕೆ ಒದಗಿಸಿದರು. ತಂಡವು ಬಾಗಲಕೋಟೆ, ಧಾರವಾಡ, ಕೊಡಗು, ಬೆಳಗಾವಿ, ಗದಗ ಜಿಲ್ಲೆಗಳಿಗೆ ಭೇಟಿ ನೀಡಿ, ಪ್ರವಾಹದ ಹಾನಿ ಹಾಗೂ ಉಂಟಾಗಿರುವ ಸಮಸ್ಯೆಗಳ ಕುರಿತು ವಿಸ್ತೃತವಾದ ಅಧ್ಯಯನ ನಡೆಸಲಿದೆ. ಬಳಿಕ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಿದೆ. ವರದಿಯನ್ನು ಅವಲೋಕಿಸಿದ ಬಳಿಕ ಕೇಂದ್ರ ಸರ್ಕಾರ ಪರಿಹಾರ ಬಿಡುಗಡೆ ಮಾಡಲಿದೆ.

ಕೇಂದ್ರದ ತಂಡದೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಿಎಂ ಬಿ.ಎಸ್. ಯಡಿಯೂರಪ್ಪ, ಆಗಸ್ಟ್ ತಿಂಗಳ ಮೊದಲ ಎರಡು ವಾರದಲ್ಲಿ ಉಂಟಾದ ತೀವ್ರ ಪ್ರವಾಹ ಪರಿಸ್ಥಿತಿಗೆ ಸಂಬಂಧಿಸಿದಂತೆ ಎರಡು ಬಾರಿ ದೆಹಲಿಗೆ ತೆರಳಿ ಪ್ರಧಾನಿ, ಗೃಹ ಸಚಿವರು, ಹಣಕಾಸು ಸಚಿವರನ್ನು ಭೇಟಿಯಾಗಿ ಶೀಘ್ರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಲಾಯಿತು ಎಂದು ತಿಳಿಸಿದರು.

ಆಧಾರ–ಕನ್ನಡಪ್ರಭ, 25.08.2019

18. ಮನಮೋಹನ ಸಿಂಗ್ ಎಸ್‌ಪಿಜಿ ಭದ್ರತೆ ಹಿಂದಕ್ಕೆ

ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ಗೆ ನೀಡಿದ್ದ ವಿಶೇಷ ಭದ್ರತಾ ದಳ (ಎಸ್‌ಪಿಜಿ) ಭದ್ರತೆಯನ್ನು ಕೇಂದ್ರ ಸರ್ಕಾರ ಶೀಘ್ರದಲ್ಲಿ ವಾಪಸ್ ಪಡೆಯಲಿದೆ ಎಂದು ಗೃಹ ಸಚಿವಾಲಯದ ಮೂಲಗಳು ತಿಳಿಸಿವೆ. ಗುಪ್ತಚರ ದಳ ಹಾಗೂ ಸಂಶೋಧನೆ ಮತ್ತು ವಿಶ್ಲೇಷಣೆ ವಿಭಾಗ (ರಾ) ದಂತಹ ಭದ್ರತಾ ಸಂಸ್ಥೆಗಳು ಮಾಜಿ ಪ್ರಧಾನಿಗಳಿಗೆ ಇರುವ ಬೆದರಿಕೆ ಬಗ್ಗೆ ಮೌಲ್ಯಮಾಪನ ಮಾಡಿ, ಭದ್ರತೆಯನ್ನು ಹೆಚ್ಚಿಸಬೇಕೇ ಅಥವಾ ಕಡಿತಗೊಳಿಸಬೇಕೇ ಎಂಬುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತವೆ. ಈ ವರದಿ ಆಧರಿಸಿ ಮನಮೋಹನ್ ಸಿಂಗ್ ಅವರಿಗೆ ನೀಡಿರುವ ಎಸ್‌ಪಿಜಿ ಭದ್ರತೆಯನ್ನು ಝೆಡ್ ಪ್ಲಸ್‌ಗೆ ಇಳಿಸಲು ಸರ್ಕಾರ ನಿರ್ಧರಿಸಿದೆ. ಸಿಂಗ್ ಪುತ್ರಿಯರು ಸ್ವಯಂಪ್ರೇರಿತರಾಗಿ ಈ ಹಿಂದೆಯೇ ಎಸ್‌ಪಿಜಿ ಭದ್ರತೆ ತ್ಯಜಿಸಿದ್ದರು.

ಪ್ರಸ್ತುತ ಸುಮಾರು 450 ಪ್ರಮುಖ ವ್ಯಕ್ತಿಗಳಿಗೆ ಕೇಂದ್ರದಿಂದ ವಿವಿಧ ಭದ್ರತೆ ಒದಗಿಸಲಾಗಿದೆ. ಎಸ್‌ಪಿಜಿ ಝೆಡ್ ಪ್ಲಸ್‌ಗಿಂತಲೂ ಹೆಚ್ಚು ಭದ್ರತೆ ಒಳಗೊಂಡಿರುತ್ತದೆ. 1984ರಲ್ಲಿ ಇಂದಿರಾಗಾಂಧಿ ಹತ್ಯೆಯ ಬಳಿಕ ಪ್ರಧಾನಿಗಳಿಗೆ ಹೆಚ್ಚಿನ ಭದ್ರತೆ ನೀಡುವ ಸಲುವಾಗಿ ಎಸ್‌ಪಿಜಿ ರಚಿಸಲಾಯಿತು. ಪ್ರಧಾನ ಮಂತ್ರಿಗೆ ಮಾತ್ರ ಎಸ್‌ಪಿಜಿ ಭದ್ರತೆ ನೀಡುತ್ತಿದ್ದರಿಂದ 1989ರಲ್ಲಿ ವಿ.ಪಿ ಸಿಂಗ್ ಅಧಿಕಾರಕ್ಕೆ ಬಂದ ನಂತರ ರಾಜೀವ್ ಗಾಂಧಿಗೆ ನೀಡಿದ್ದ ಎಸ್‌ಪಿಜಿ ಭದ್ರತೆ ಹಿಂಪಡೆಯಲಾಗಿತ್ತು. 1991ರಲ್ಲಿ ಸಾರ್ವಜನಿಕ ರ್‍ಯಾಲಿಯೊಂದರಲ್ಲಿ ಆತ್ಮಾಹುತಿ ದಾಳಿ ಮೂಲಕ ರಾಜೀವ್ ಗಾಂಧಿಯ ಹತ್ಯೆಯಾದ ಬಳಿಕ ಎಸ್‌ಪಿಜಿ ಕಾಯ್ದೆಯಲ್ಲಿ ಬದಲಾವಣೆ ಮಾಡಿ ಎಲ್ಲಾ ಮಾಜಿ ಪ್ರಧಾನಿಗಳು ಹಾಗೂ ಅವರ ಕುಟುಂಬಸ್ಥರಿಗೆ ಅಧಿಕಾರದಿಂದ ಇಳಿದ ಬಳಿಕ ಕನಿಷ್ಠ 10 ವರ್ಷಗಳವರೆಗೆ ಭದ್ರತೆ ನೀಡುವಂತೆ ಬದಲಾವಣೆ ಮಾಡಲಾಯಿತು.

ಆಧಾರ–ವಿಜಯವಾಣಿ, 27.08.2019

19. ಕೇಂದ್ರದಿಂದ ಬರಲಿದೆ ಹೆಚ್ಚು ಪರಿಹಾರ

ಕೇಂದ್ರ ತಂಡವು ಈಗಾಗಲೇ ರಾಜ್ಯದ ಪ್ರವಾಹ ಪೀಡಿತ ಪ್ರದೇಶದಲ್ಲಿ ಅಧ್ಯಯನ ನಡೆಸುತ್ತಿದೆ. ಅಧ್ಯಯನ ವರದಿ ಸಲ್ಲಿಸಿದ ನಂತರ ದೊಡ್ಡ ಪ್ರಮಾಣದ ಪರಿಹಾರ ಅನುದಾನ ಕೇಂದ್ರದಿಂದ ಬರುವ ನಿರೀಕ್ಷೆ ಇದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಈ ತಂಡ ಕೇಂದ್ರಕ್ಕೆ ವರದಿ ಸಲ್ಲಿಸಿದ ನಂತರ ಅತ್ಯಂತ ದೊಡ್ಡ ಮಟ್ಟದ ಪರಿಹಾರ ಅನುದಾನ ರಾಜ್ಯಕ್ಕೆ ಬರುವ ನಿರೀಕ್ಷೆ ಇದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರವಾಹದ ಗಂಭೀರತೆಯನ್ನು ವೈಮಾನಿಕ ಸಮೀಕ್ಷೆಯ ಮೂಲಕ ಅರಿತುಕೊಂಡಿದ್ದಾರೆ. ಹೀಗಾಗಿ ರಾಜ್ಯಕ್ಕೆ ಯಾವುದೇ ರೀತಿಯಲ್ಲೂ ಅನ್ಯಾಯ ಆಗುವುದಿಲ್ಲ ಎಂದು ಹೇಳಿದರು.

ರಾಜ್ಯದಲ್ಲಿ ಇಷ್ಟು ದೊಡ್ಡ ಮಟ್ಟದ ಪ್ರಾಕೃತಿಕ ವಿಕೋಪ ನಡೆದಾಗ ವಿರೋಧ ಪಕ್ಷದವರು ಕೇಂದ್ರದಿಂದ ಅನುದಾನ ಬಂದಿಲ್ಲ ಎಂದು ಟೀಕೆ ಮಾಡುವುದು ಸರಿಯಲ್ಲ. ಕೇಂದ್ರದಿಂದ ಅನುದಾನ ಬಂದೇ ಬರುತ್ತದೆ. ನಮ್ಮ ಕೋರಿಕೆಯ ಮೇರೆಗೆ ತಕ್ಷಣವೇ ಅಧ್ಯಯನಕ್ಕೆ ತಂಡ ಕಳುಹಿಸಿದ್ದಾರೆ. ಅಗತ್ಯ ಬಿದ್ದರಷ್ಟೆ ಸರ್ವಪಕ್ಷದ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ಚಿಂತನೆ ನಡೆಸಲಾಗುತ್ತದೆ ಎಂದರು.

ಕೇಂದ್ರ ನೆರೆ ಅಧ್ಯಯನ ತಂಡ ಬಾಗಲಕೋಟೆ, ಗದಗ ಹಾಗೂ ಧಾರವಾಡ ಜಿಲ್ಲೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕೇಂದ್ರ ಗೃಹ ಇಲಾಖೆ ಜಂಟಿ ಕಾರ್ಯದರ್ಶಿ ಪ್ರಕಾಶ ನೇತೃತ್ವದ ಏಳು ಜನ ಅಧಿಕಾರಿಗಳು ಜಮಖಂಡಿ ತಾಲ್ಲೂಕಿನ ಚಿಕ್ಕಪಡಸಲಗಿಗೆ ತೆರಳಿ 70 ವರ್ಷಗಳ ಸೇತುವೆ ಹಾನಿಯಾಗಿದ್ದನ್ನು ಪರಿಶೀಲಿಸಿದರು.

ಗದಗ ಜಿಲ್ಲೆಗೆ ಆಗಮಿಸಿದ ಅಧಿಕಾರಿಗಳು ಕೊಣ್ಣೂರು, ಹೊಳೆಆಲೂರಿನಲ್ಲಿ ಮಳೆ ಹಾನಿ ವೀಕ್ಷಿಸಿ ಸಂತ್ರಸ್ತರ ಸಮಸ್ಯೆ ಆಲಿಸಿದರು. ಹೊಳೆಆಲೂರು ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದರು. ಸಂಜೆ ವೇಳೆ ಧಾರವಾಡ ಜಿಲ್ಲೆಗೆ ಆಗಮಿಸಿದ ಅಧಿಕಾರಿಗಳ ತಂಡ ಹುಬ್ಬಳ್ಳಿ ನಗರ ತಾಲ್ಲೂಕು ಹಾಗೂ ನವಲಗುಂದ ತಾಲ್ಲೂಕಿನಲ್ಲಿ ನೆರೆಯಿಂದ ಹಾನಿಯಾಗಿರುವ ಬೆಳೆ ಹಾಗೂ ಮನೆಗಳ ಹಾನಿ ಕುರಿತು ಪರಿಶೀಲನೆ ನಡೆಸಿತು. ನವಲಗುಂದ ತಾಲ್ಲೂಕಿನ ಆಲಗವಾಡಿ, ಯಮನೂರು, ಹುಬ್ಬಳ್ಳಿ ತಾಲ್ಲೂಕಿನ ಹೆಬಸೂರು, ಕಿರೆಸೂರು ಗ್ರಾಮದಲ್ಲಿ ಹೆಸರು, ಮೆಕ್ಕೆಜೋಳ, ಶೇಂಗಾ, ಈರುಳ್ಳಿ ಸೇರಿದಂತೆ ಇನ್ನಿತರ ಬೆಳೆ ಹಾನಿ ಕುರಿತು ಪರಿಶೀಲನೆ ನಡೆಸಿತು. ಹುಬ್ಬಳ್ಳಿ ನಗರದ ಉಣಕಲ್ಲ, ದೇವಿನಗರ, ಹನುಮಂತ ನಗರದ ಸೇತುವೆ ಕೊಚ್ಚಿ ಹೋಗಿರುವುದನ್ನು ವೀಕ್ಷಿಸಿದರು. ಗೋಕುಲ ಗ್ರಾಮದಲ್ಲಿ ಮಳೆಯಿಂದ ಬಿದ್ದಿರುವ ಮನೆಗಳನ್ನು ಪರಿಶೀಲಿಸಿದರು. ವಿಮಾನ ನಿಲ್ದಾಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಜಿಲ್ಲೆ ನೆರೆಯನ್ನು ಕಟ್ಟಿಕೊಡುವ ಚಿತ್ರ ಗ್ಯಾಲರಿಯನ್ನು ವೀಕ್ಷಿಸಿದರು.

ಆಧಾರ–ವಿಜಯ ಕರ್ನಾಟಕ, 27.08.2019

20. ಐಟಿ ತೆರಿಗೆ ಮಾಹಿತಿ ಡಿಜಿಟಲೀಕರಣ

ಆದಾಯ ತೆರಿಗೆ ಇಲಾಖೆಯಲ್ಲಿ ಅಮೂಲಾಗ್ರ ಬದಲಾವಣೆ ತಂದು ತೆರಿಗೆದಾರರೊಂದಿಗೆ ಪಾವತಿ ಬಾಕಿ ಬಗೆಗಿನ ವಿಚಾರಣೆ ಮತ್ತು ಮಾಹಿತಿ ವಿಚಾರಣೆ ಮತ್ತು ಮಾಹಿತಿ ವಿನಿಮಯವನ್ನೂ ವಿಜಯದಶಮಿಯಿಂದ ಡಿಜಿಟಲೀಕರಣಗೊಳಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ತೆರಿಗೆದಾರರನ್ನು ಕರೆಯಿಸಿಕೊಂಡು ಮುಖಾಮುಖಿಯಾಗಿ ಅಥವಾ ಅಧಿಕಾರಿಗಳೇ ತೆರಳಿ ತೆರಿಗೆ ಪಾವತಿ ಬಗೆಗೆ ವಿಚಾರಿಸುವ ಅಥವಾ ಮಾಹಿತಿ ಕಲೆಹಾಕುವುದಕ್ಕೆ ಬ್ರೇಕ್ ಹಾಕಲಾಗಿದೆ. ಈ ಬಾರಿಯ ವಿಜಯದಶಮಿಯಿಂದ

ಎಸ್.ಎಂ.ಎಸ್., ವಾಟ್ಸ್ಆ್ಯಪ್, ಇ.ಮೇಲ್ ಅಥವಾ ಬೇರಾವುದೇ ತಂತ್ರಾಂಶವನ್ನು ಬಳಸಿಕೊಳ್ಳಬೇಕು. ತೆರಿಗೆದಾರರು ಮುಖಾಮುಖಿ ಆಗುವುದನ್ನು ತಪ್ಪಿಸಲು ಈ ಡಿಜಿಟಲೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ದೇಶದಲ್ಲಿ ಗುಜರಾತ್, ಅಹಮದಾಬಾದ್, ಉತ್ತರ ಪ್ರದೇಶದ ವಾರಾಣಾಸಿ ಮತ್ತು ಕರ್ನಾಟಕದ ಮೈಸೂರಿನಲ್ಲಿ ನಿರಂತರವಾಗಿ ಮೂರು ಸಭೆ ನಡೆಸಿದ್ದೇನೆ. ಈ ಸರಣಿ ಸಭೆಯ ಬಳಿಕ ಈ ತೀರ್ಮಾನ ಕೈಗೊಳ್ಳಲಾಗಿದೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಮೇಲೆ ಉಂಟಾಗುತ್ತಿದ್ದ ಒತ್ತಡ ಮತ್ತು ತೆರಿಗೆದಾರರಿಗೆ ಉಂಟಾಗುತ್ತಿದ್ದ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಈ ರೀತಿಯ ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಆಧಾರ–ವಿಶ್ವವಾಣಿ, 28.08.2019

21. ಕಬ್ಬು ಬೆಳೆಗಾರರಿಗೆ ಬಂಪರ್ ಕೊಡುಗೆ

ಕರ್ನಾಟಕವೂ ಒಳಗೊಂಡಂತೆ ದೇಶದ ಕಬ್ಬು ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ದಿಸೆಯಲ್ಲಿ ಕೇಂದ್ರ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದ್ದು, ಅಕ್ಟೋಬರ್‌ನಿಂದ ಆರಂಭವಾಗುವ 2019–20ನೇ ಸಾಲಿನ ಕಬ್ಬು ಮಾರುಕಟ್ಟೆಯಿಂದ 6 ಮಿಲಿಯನ್ ಟನ್ ಸಕ್ಕರೆ ರಫ್ತು ಮಾಡುವುದಾಗಿ 6,268 ಕೋಟಿ ರೂ. ಸಬ್ಸಿಡಿ ಘೋಷಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ 2019–20ನೇ ಸಾಲಿನಲ್ಲಿ 6 ಮಿಲಿಯನ್ ಟನ್ ಸಕ್ಕರೆ ರಫ್ತು ಮಾಡುವುದಕ್ಕಾಗಿ ಈ ಸಬ್ಸಿಡಿ ಒದಗಿಸಲು ಸಂಪುಟ ಅನುಮೋದನೆ ನೀಡಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವೇಡಕರ್ ಸುದ್ದಿಗಾರರಿಗೆ ತಿಳಿಸಿದರು.

ಆಧಾರ–ಸಂಯುಕ್ತ ಕರ್ನಾಟಕ, 29.08.2019

22. ಶಿಸ್ತು ಸಮಯಪಾಲಿಸಿ: ಸಚಿವರಿಗೆ ಮೋದಿ ಕಟ್ಟಾಜ್ಞೆ

ಸಂಪುಟ ಸಹೋದ್ಯೋಗಿಗಳಿಗೆ ಮತ್ತೆ ಶಿಸ್ತಿನ ಪಾಠ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಎಲ್ಲಾ ಸಚಿವರು ಬೆಳಿಗ್ಗೆ 9.30ಕ್ಕೆ ಕಚೇರಿಯಲ್ಲಿ ಹಾಜರಿರಬೇಕು ಎಂದು ಕಟ್ಟಾಜ್ಞೆ ನೀಡಿದ್ದಾರೆ. ಅಲ್ಲದೇ ಸಲಹೆಗಾರ, ಆಪ್ತ ಕಾರ್ಯದರ್ಶಿ, ಮುಂತಾದ ಆಯಕಟ್ಟಿನ ಸ್ಥಳದಲ್ಲಿ ನೆಂಟರು ಹಾಗೂ ಸ್ನೇಹಿತರನ್ನು ನೇಮಕ ಮಾಡಕೂಡದು ಎಂದು ಸೂಚಿಸಿದ್ದಾರೆ. ಸಂಪುಟ ಸಭೆಯಲ್ಲಿ ಪ್ರಧಾನಿ ಈ ಕಟ್ಟಪ್ಪಣೆ ನೀಡಿದ್ದು ಬಹಿರಂಗ ಹೇಳಿಕೆ ನೀಡುವಾಗಲೂ ಎಚ್ಚರಿಕೆ ವಹಿಸಬೇಕು. ಈಡೇರಿಸಲು ಆಗುವಂತಹ ಭರವಸೆ ಮಾತ್ರ ನೀಡಬೇಕು ಎಂದಿದ್ದಾರೆ.

ಸಚಿವರು ಹಾಗೂ ರಾಜ್ಯ ಖಾತೆ ಸಚಿವರು ಸಮನ್ವಯ ಸಾಧಿಸಿಕೊಂಡು ಹೋಗಬೇಕು. ಇಲಾಖೆಯ ಎಲ್ಲಾ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಬೇಕು ಎಂದು ಸಲಹೆ ನೀಡಿದ್ದಾರೆ. ನಿಮ್ಮ ಕ್ಷೇತ್ರಗಳಲ್ಲಿರುವ ಕಾಶ್ಮೀರಿಗಳೊಂದಿಗೆ ಬೆರೆತು ಅವರ ಸಮಸ್ಯೆಗಳನ್ನು ಪರಿಹರಿಸಬೇಕು. ಅಲ್ಲದೇ ಪ್ಲಾಸ್ಟಿಕ್ ನಿಯಂತ್ರಣದ ಕುರಿತು ಆಂದೋಲನ ನಡೆಸಬೇಕು ಎಂದು ಸೂಚನೆ ನೀಡಿದ್ದಾರೆ.

ಆಧಾರ–ಕನ್ನಡ ಪ್ರಭ, 30.08.201

23. 10 ಬ್ಯಾಂಕ್‌ಗಳನ್ನು ಸೇರಿಸಿ 4 ಬೃಹತ್ ಬ್ಯಾಂಕ್‌ಗಳ ಮಹಾ ವಿಲೀನ: ಆರ್ಥಿಕತೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಚೈತನ್ಯ ತುಂಬಲು ದಿಟ್ಟಕ್ರಮ

ದಿನದಿಂದ ದಿನಕ್ಕೆ ತೀವ್ರವಾಗುತ್ತಿರುವ ಆರ್ಥಿಕ ಹಿಂಜರಿತವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ದಿಟ್ಟ ಕ್ರಮಗಳನ್ನು ಪ್ರಕಟಿಸಿದೆ. ಸಾರ್ವಜನಿಕ ವಲಯದ 10 ಸಣ್ಣ ಬ್ಯಾಂಕ್‌ಗಳನ್ನು ವಿಲೀನಗೊಳಿಸಿ 4 ದೊಡ್ಡ ಬ್ಯಾಂಕ್‌ಗಳನ್ನು ಸೃಷ್ಟಿಸುವ ಮಹತ್ವದ ಪ್ರಸ್ತಾಪವನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ಜಾಗತಿಕ ಬ್ಯಾಂಕ್‌ಗಳಿಗೆ ಸಮಾನವಾಗಿ ಬೃಹತ್ ಗಾತ್ರದ ಬ್ಯಾಂಕ್‌ಗಳನ್ನು ಸ್ಥಾಪಿಸಿ, ಅವುಗಳ ಆಡಳಿತಾತ್ಮಕ ವೆಚ್ಚ ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ. ಬ್ಯಾಂಕ್‌ಗಳ ಸಾಲದ ಹೊರೆ ಉಳಿಸಿ, ಲಾಭದಾಯಕತೆ ಹೆಚ್ಚಿಸುವುದು ಈ ಕ್ರಮದ ಮತ್ತೊಂದು ಉದ್ದೇಶವಾಗಿದೆ. ಬ್ಯಾಂಕ್‌ಗಳ ಸಾಲ ನೀಡಿಕೆಯನ್ನು ಉತ್ತೇಜಿಸಿ, ಆರ್ಥಿಕತೆಗೆ ಚೈತನ್ಯ ತುಂಬಲು ಸಹ ಕ್ರಮಗಳನ್ನು ಘೋಷಿಸಲಾಗಿದೆ.

ಕರ್ನಾಟಕದ ಕರಾವಳಿ ಮೂಲದ ಕೆನರಾ, ಸಿಂಡಿಕೇಟ್ ಮತ್ತು ಕಾರ್ಪೊರೇಷನ್ ಬ್ಯಾಂಕ್‌ಗಳು ಈ ಬಾರಿಯ ವಿಲೀನ ಪ್ರಕ್ರಿಯೆಯಲ್ಲಿ ಸೇರಿವೆ. ಕೆನರಾ ಬ್ಯಾಂಕ್ ಮೂಲ ಬ್ಯಾಂಕ್ ಆಗಿ ಉಳಿದುಕೊಳ್ಳಲಿದ್ದು, ಅದರೊಳಗೆ ಸಿಂಡಿಕೇಟ್ ಬ್ಯಾಂಕ್ ವಿಲೀನಗೊಳ್ಳಲಿದೆ. ಕಾರ್ಪೊರೇಷನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಆಗಿ ಬದಲಾಗಿದೆ. ಮೂಲ "ಯುಬಿಐ" ಜೊತೆ ಕಾರ್ಪೊರೇಷನ್ ಬ್ಯಾಂಕ್ ಅಂತರ್ಗತವಾಗಲಿದೆ.

ಮಹಾವಿಲೀನದ ಉದ್ದೇಶಗಳು:– ಅನುತ್ಪಾದಕ ಸಾಲ ಮತ್ತು ಬ್ಯಾಂಕಿಂಗ್ ವಂಚನೆ ಪ್ರಮಾಣ ತಡೆಯುವುದು. ಬ್ಯಾಂಕ್‌ಗಳ ಕಾರ್ಯಕ್ಷಮತೆ, ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸುವುದು. ಸಾಲ ನೀಡಿಕೆಯನ್ನು ಉತ್ತೇಜಿಸಿ, ಆರ್ಥಿಕತೆಗೆ ಚೈತನ್ಯ ತುಂಬುವುದು ಮತ್ತು ಬ್ಯಾಂಕ್‌ಗಳ ಸಾಲದ ಹೊರೆ, ನಷ್ಟದ ಪ್ರಮಾಣ ಇಳಿಕೆ, ಆಂತರಿಕ ಮಿತವ್ಯಯ.

ಆಧಾರ–ವಿಜಯವಾಣಿ, 31.08.2019

24. ಬ್ಯಾಂಕ್ ಉದ್ಯೋಗಿಗಳ ಕೆಲಸಕ್ಕೆ ಧಕ್ಕೆಯಿಲ್ಲ

ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದಿಂದ ವಿಲೀನಕ್ಕೆ ಭಾರಿ ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ವಿತ್ತ ಸಚಿವೆಯವರು ಉದ್ಯೋಗಿಗಳು ಕೆಲಸ ಕಳೆದುಕೊಳ್ಳುತ್ತಿದ್ದಾರೆ, ಬ್ಯಾಂಕ್‌ಗಳನ್ನು ಮುಚ್ಚಲಾಗುತ್ತಿದೆ ಎಂಬ ಸುದ್ದಿಗಳು ಸುಳ್ಳು. ಯಾವುದೇ ಕಾರಣಕ್ಕೂ ಯಾವ ಒಬ್ಬ ಉದ್ಯೋಗಿಯು ಕೆಲಸ ಕಳೆದುಕೊಳ್ಳುವುದಿಲ್ಲ ಬ್ಯಾಂಕ್‌ಗಳನ್ನು ಮುಚ್ಚುವುದಿಲ್ಲ, ಬದಲಾಗಿ ಬ್ಯಾಂಕ್‌ಗಳಿಗೆ ಹೆಚ್ಚುವರಿ ಬಂಡವಾಳ ನೀಡಿ, ಕಾರ್ಯವ್ಯಾಪ್ತಿ ಹೆಚ್ಚಿಸಲು ಸಹಾಯ ಮಾಡಲಾಗುವುದು ಎಂದು ಚೆನ್ನೈನಲ್ಲಿ ಅಬಕಾರಿ, ಸರಕು ಮತ್ತು ಸೇವಾ ತೆರಿಗೆ, ಆದಾಯ ತೆರಿಗೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಸಚಿವೆ ನಿರ್ಮಲಾ ಸೀತಾರಾಮನ್ ಈ ಮಾಹಿತಿ ನೀಡಿದ್ದಾರೆ.

ಆಧಾರ–ವಿಜಯವಾಣಿ, 02.09.2019

25. ವೈದ್ಯರ ಮೇಲೆ ಹಲ್ಲೆ ಮಾಡಿದರೆ 10 ವರ್ಷ ಜೈಲು, 10 ಲಕ್ಷ ದಂಡ:

ಕೇಂದ್ರ ಸರ್ಕಾರದಿಂದ ಕಠಿಣ ಅಂಶಗಳುಳ್ಳ ಕರಡು ಮಸೂದೆ ಸಿದ್ಧ

ದೇಶದಾದ್ಯಂತ ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳು ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ ಇಂಥ ಹಲ್ಲೆ ಪ್ರಕರಣದ ದೋಷಿಗಳಿಗೆ ಕಠಿಣಶಿಕ್ಷೆ ನೀಡುವ ಅಂಶಗಳನ್ನು ಒಳಗೊಂಡ ಕರಡು ಮಸೂದೆಯೊಂದನ್ನು ರೂಪಿಸಿದೆ.

ಕರಡು ಮಸೂದೆಯಲ್ಲಿನ ಅಂಶಗಳ ಕುರಿತಂತೆ ಮತ್ತು ಅದನ್ನು ಇನ್ನಷ್ಟು ಸಶಕ್ತಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಾರ್ವಜನಿಕರಿಂದ ಸಲಹೆ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

ಕೇಂದ್ರ ಸರ್ಕಾರ ಸಿದ್ಧಪಡಿಸಿರುವ ಕರಡು ಮಸೂದೆ ಅನ್ವಯ, ವೈದ್ಯರ ಮೇಲಿನ ಹಲ್ಲೆ ಪ್ರಕರಣದ ದೋಷಿಗಳಿಗೆ ಗರಿಷ್ಠ 10 ವರ್ಷ ಜೈಲು ಶಿಕ್ಷೆ ಮತ್ತು ಗರಿಷ್ಠ 10 ಲಕ್ಷ ರೂ ದಂಡ ವಿಧಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

ದೇಶದ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಹಲ್ಲೆ ಪ್ರಕರಣಗಳನ್ನು ಖಂಡಿಸಿ ಕೆಲ ದಿನಗಳ ಹಿಂದಷ್ಟೇ ವೈದ್ಯ ಸಮುದಾಯ ದೇಶವ್ಯಾಪಿ ಪ್ರತಿಭಟನೆ ನಡೆಸಿತ್ತು. ಅಲ್ಲದೆ, ಇಂಥ ಪ್ರಕರಣಗಳನ್ನು ತಡೆಯಲು ಕಠಿಣ ಕಾಯ್ದೆ ರೂಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು. ಈ ವೇಳೆ ವೈದ್ಯರ ಬೇಡಿಕೆ ಈಡೇರಿಸುವ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿರುತ್ತದೆ.

ಆಧಾರ–ಕನ್ನಡಪ್ರಭ, 04.09.2019

26. ಸ್ಥಿರಾಸ್ತಿಗೂ ಬರಲಿದೆ ಆಧಾರ್ ರೀತಿ ವಿಶಿಷ್ಟ ಗುರುತಿನ ಸಂಖ್ಯೆ ಆಧಾರ್ ರೀತಿ ವಿಶಿಷ್ಟ ಗುರುತಿನ ಸಂಖ್ಯೆಯಲ್ಲಿ ಜಾಗದ ಎಲ್ಲಾ ಮಾಹಿತಿ ಅಡಕ ಭೂ ವ್ಯವಹಾರಗಳ ಪ್ರಕ್ರಿಯೆ ಸುಲಭ ಹಾಗೂ ಪಾರದರ್ಶಕಕ್ಕೆ ನೆರವು

ಭೂ ವ್ಯವಹಾರ ಪ್ರಕ್ರಿಯೆಯನ್ನು ಸರಳ ಹಾಗೂ ಪಾರದರ್ಶಕಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಅದಕ್ಕಾಗಿ ಜಮೀನಿನ ಎಲ್ಲಾ ಮಾಹಿತಿಯನ್ನೊಳಗೊಂಡ ಆಧಾರ್ ರೀತಿಯ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಕೇಂದ್ರ ಸರ್ಕಾರ ಪರಿಚಯಿಸಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಗುರುತಿನ ಸಂಖ್ಯೆಯೊಂದಿಗೆ ಆಧಾರ್ ಹಾಗೂ ಕಂದಾಯ ನ್ಯಾಯಾಲಯ ವ್ಯವಸ್ಥೆ ಸಂಖ್ಯೆಯನ್ನು ಜೋಡಣೆಗೊಳಿಸುವುದರಿಂದ, ಭೂ ಮಾಲೀಕ, ವಿಳಾಸ, ವಿಸ್ತೀರ್ಣ ಸೇರಿ ಜಮೀನಿನ ಎಲ್ಲಾ ಮಾಹಿತಿಗಳು ಬೆರಳ ತುದಿಯಲ್ಲೇ ಲಭ್ಯವಾಗಲಿದೆ. ಈ ಬಗ್ಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆ ಈಗಾಗಲೇ ಕೆಲಸ ಆರಂಭಿಸಿದೆ.

ಸರ್ಕಾರದ ಈ ಯೋಜನೆಯಿಂದ ದಾಖಲೆಗಳು ಸಂಪೂರ್ಣವಾಗಿ ಡಿಜಿಟಲೀಕರಣಗೊಳ್ಳುವುದರಿಂದ ಭೂ ಮಾಲೀಕರ ಮಾಹಿತಿ ಪತ್ತೆ ಹಚ್ಚುವುದು ಸುಲಭವಾಗಲಿದೆ. ಭೂ ವ್ಯವಹಾರ, ಆಸ್ತಿ ತೆರಿಗೆ ಸಂಗ್ರಹ ಸಾರ್ವಜನಿಕ ಯೋಜನೆಗಳಿಗೆ ಭೂ ಸ್ವಾಧೀನ ಆಸ್ತಿ ತೆರಿಗೆ ಸಮಸ್ಯೆಗಳ ಪರಿಹಾರ ಹಾಗೂ ಪ್ರಾಕೃತಿಕ ವಿಕೋಪದ ವೇಳೆ ಪರಿಹಾರ ಹಂಚಿಕೆಯೂ ಸರಳವಾಗಲಿದೆ.

ಈ ವಿಶಿಷ್ಟ ಸಂಖ್ಯೆ ಮೂಲಕ ಜಮೀನಿನ ಹಿಂದಿನ ಮಾಲೀಕರ ಮಾಹಿತಿಯೂ ದೊರೆಯಲಿದ್ದು, ಭೂ ವ್ಯವಹಾರದಲ್ಲಿ ಪಾರದರ್ಶಕತೆ ಇರಲಿದೆ. ಮಾಲೀಕತ್ವ ವಿವಾದದಿಂದ ಹೂಡಿಕೆಗೆ ಹಿಂಜರಿಯುವ ಸಮಸ್ಯೆ ಕೂಡ ಇದರಿಂದ ಪರಿಹಾರವಾಗಲಿದ್ದು, ಹೆಚ್ಚಿನ ವಿದೇಶಿ ಬಂಡವಾಳ ಆಕರ್ಷಿಸಲಿದೆ. ಅಲ್ಲದೇ ಬೇನಾಮಿ ಆಸ್ತಿಗಳ ಬಗ್ಗೆಯೂ ಸರ್ಕಾರಕ್ಕೆ ಸುಲಭವಾಗಿ ಮಾಹಿತಿ ಲಭ್ಯವಾಗಲಿದೆ. ಜಮೀನು ಅಡವಿಟ್ಟು ಸಾಲ ಪಡೆಯಲು ರೈತರ ಬವಣೆಯನ್ನು ಇದು ಕಡಿಮೆ ಮಾಡಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆಧಾರ–ಕನ್ನಡಪ್ರಭ, 19.09.2019

27. ಇ– ಸಿಗರೇಟ್ ಮಾರಿದರೆ ರೂ. 1 ಲಕ್ಷ ದಂಡ, ಜೈಲು : ಕೇಂದ್ರದಿಂದ ಸುಗ್ರೀವಾಜ್ಞೆ

ಆರೋಗ್ಯಕ್ಕೆ ಮಾರಕವಾಗಿರುವ ಇ–ಸಿಗರೇಟ್ ನಿಷೇಧಿಸಲು ನಿರ್ಧಾರ ಕೈಗೊಂಡಿದ್ದ ಕೇಂದ್ರ ಸರ್ಕಾರ ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಿದೆ. ಸಂಚಾರ ನಿಯಮಗಳಿಗೆ ಭಾರಿ ದಂಡ ವಿಧಿಸಿ ಸುದ್ದಿಯಾದ ಕೇಂದ್ರ ಇ–ಸಿಗರೇಟ್ ಉತ್ಪಾದನೆ, ಆಮದು, ರಫ್ತು, ಸಾಗಣೆ ಜಾಹೀರಾತಿಗೂ ಭಾರಿ ಮೊತ್ತದ ದಂಡವನ್ನು ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿಸಿದೆ.

ಮೊದಲ ಬಾರಿ ತಪ್ಪಿತಸ್ಥರಿಗೆ 1 ವರ್ಷದವರೆಗೂ ಜೈಲು ಮತ್ತು ರೂ. 1 ಲಕ್ಷ ದಂಡ ವಿಧಿಸಬಹುದಾಗಿದೆ. ಅಪರಾಧ ಪುನರಾವರ್ತನೆಯಾದರೆ 3 ವರ್ಷದವರೆಗೆ ಜೈಲು ಹಾಗೂ ರೂ. 5 ಲಕ್ಷ ದಂಡ ವಿಧಿಸಲಾಗುತ್ತದೆ. ಒಂದು ವೇಳೆ ಇ–ಸಿಗರೇಟ್ ದಾಸ್ತಾನು ಇಟ್ಟಿದ್ದು ಕಂಡು ಬಂದರೆ 6 ತಿಂಗಳು ಜೈಲು ಹಾಗೂ ರೂ.50,000/– ಅಥವಾ ಎರಡನ್ನೂ ವಿಧಿಸಲಾಗುತ್ತದೆ. ಅಲ್ಲದೇ ಅಕ್ರಮವಾಗಿ ಇ–ಸಿಗರೇಟ್ ದಾಸ್ತಾನು ಇಟ್ಟ ಮಳಿಗೆಗಳ ಮೇಲೆ ಶೋಧ ನಡೆಸಲು ಮತ್ತು ಅವರ ಆಸ್ತಿ ಜಪ್ತಿಗೂ ಅಧಿಕಾರ ನೀಡಲಾಗಿದೆ.

ಆಧಾರ–ಕನ್ನಡಪ್ರಭ, 20.09.2019

28. ಆರ್ಥಿಕ ಪ್ರಗತಿ ಕುಸಿತ ತಡೆಗೆ ಕೇಂದ್ರ ಸರ್ಕಾರದಿಂದ ಮತ್ತೊಂದು ಕ್ರಮ ಕಾರ್ಪೊರೇಟ್ ತೆರಿಗೆ ಇಳಿಕೆ

ಕುಂಟುತ್ತಾ ಸಾಗಿರುವ ಅರ್ಥ ವ್ಯವಸ್ಥೆಗೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಸರ್ಕಾರವು ಕಾರ್ಪೊರೇಟ್ ತೆರಿಗೆ ದರ ಕಡಿತದ ಕೊಡುಗೆಯನ್ನು ಪ್ರಕಟಿಸಿದೆ. ಒಟ್ಟು ಆಂತರಿಕ ಉತ್ಪನ್ನದ (ಜೆಡಿಪಿ) ಪ್ರಗತಿಯು ಆರು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 5ಕ್ಕೆ ಇಳಿದ ಕಾರಣ ಸರ್ಕಾರವು ಹಲವು ಉತ್ತೇಜಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದರ ಭಾಗವಾಗಿ ಕಾರ್ಪೊರೇಟ್ ತೆರಿಗೆ ದರ ಕಡಿತವನ್ನು ಪ್ರಕಟಿಸಲಾಗಿದೆ.

ಬಜೆಟ್‌ನಲ್ಲಿ ಕಾರ್ಪೊರೇಟ್ ವಲಯದ ಅತೃಪ್ತಿಗೆ ಕಾರಣವಾಗುವ ಹಲವು ನಿರ್ಧಾರಗಳನ್ನು ಘೋಷಿಸಲಾಗಿತ್ತು., ಕಾರ್ಪೊರೇಟ್ ವಲಯಕ್ಕೆ ನಿರಾಳ ತಂದ ಈ ಘೋಷಣೆಗಳು ಭಾರಿ ಅಚ್ಚರಿಯನ್ನೂ ಹುಟ್ಟಿಸಿತು. ಪ್ರಗತಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಆದಾಯ ತೆರಿಗೆ ಕಾಯ್ದೆಗೆ ಹೊಸ ಅಂಶವೊಂದನ್ನು ಸೇರಿಸಲಾಗಿದೆ. ಇದು 2019–2020ನೇ ಸಾಲಿನಿಂದ ಜಾರಿಗೆ ಬರಲಿದೆ. ಆದರೆ, ಉತ್ತೇಜಕಗಳು ಅಥವಾ ವಿನಾಯಿತಿಗಳನ್ನು ಪಡೆದ ಕಂಪನಿಗಳಿಗೆ ಇದು ಅನ್ವಯವಾಗುವುದಿಲ್ಲ ಎಂದು ಸಚಿವೆ ಹೇಳಿದರು.

ಆಧಾರ–ಪ್ರಜಾವಾಣಿ, 21.09.2019

ಭಾಗ–4

ರಾಜ್ಯ ಸರ್ಕಾರದ ಸುದ್ದಿಗಳು

1. ತ್ಯಾಜ್ಯ ವಿಂಗಡಿಸಿ, ಇಲ್ಲದಿದ್ದರೆ ದಂಡ ಪಾವತಿಸಿ

ನಗರದಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿನ ಲೋಪಗಳನ್ನು ಸರಿಪಡಿಸಲು ಬಿಬಿಎಂಪಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಘನತ್ಯಾಜ್ಯ ನಿರ್ವಹಣೆ ಮತ್ತು ಮೇಲುಸ್ತುವಾರಿಗೆ 233 ಮಾರ್ಷಲ್‌ಗಳನ್ನು ನೇಮಿಸಿ, ವಾರ್ಡ್ ಮಟ್ಟದಲ್ಲಿ ಮಾರ್ಷಲ್‌ಗಳಿಗೆ ಎಲ್ಲೆಂದರಲ್ಲಿ ಕಸ ಹಾಕುವವರು, ಮಿಶ್ರತ್ಯಾಜ್ಯ ನೀಡುವವರು, ಸಾರ್ವಜನಿಕ ಸ್ಥಳದಲ್ಲಿ ಮೂತ್ರ ವಿಸರ್ಜಿಸುವವರು, ಪ್ಲಾಸ್ಟಿಕ್ ಬಳಕೆ ಮತ್ತು ಮಾರಾಟ ಮಾಡುವವರಿಗೆ ದಂಡ ವಿಧಿಸುವ ಅಧಿಕಾರ ನೀಡಲಾಗುತ್ತಿದೆ. ದಂಡ ವಿಧಿಸಲು 500 ಉಪಕರಣಗಳನ್ನು ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಪಡೆಯಲಾಗುತ್ತಿದೆ. ಮಾರ್ಷಲ್ ಹಾಗೂ ಆರೋಗ್ಯಾಧಿಕಾರಿಗಳಿಗೆ ಆ ಉಪಕರಣ ವಿತರಿಸಿ, ದಂಡ ವಿಧಿಸಿದ ಸಮಯ, ಕಾರಣವನ್ನು ಫೋಟೋ ಸಮೇತ ಉಪಕರಣದಲ್ಲಿ ಅಪ್‌ಲೋಡ್ ಮಾಡಬಹುದು. ಅದನ್ನು ಕೇಂದ್ರ ಕಚೇರಿಯಲ್ಲಿ ಪರಿಶೀಲಿಸುವ ವ್ಯವಸ್ಥೆ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆಯುಕ್ತರಾದ ಶ್ರೀ ಮಂಜುನಾಥ ಪ್ರಸಾದ್ ಮಾಹಿತಿ ನೀಡಿದರು.

ದಂಡದ ವಿವರ

ದಂಡ ವಿಧಿಸುವ ಅಪರಾಧ	ಮೊದಲ ಬಾರಿಗೆ	2ನೇ ಬಾರಿಗೆ
ಎಲ್ಲೆಂದರಲ್ಲಿ ಉಗಿಯುವುದು, ಮೂತ್ರ ವಿಸರ್ಜನೆ	500 ರೂ.	1000 ರೂ.

ತ್ಯಾಜ್ಯ ವಿಂಗಡಿಸದಿದ್ದರೆ

ಮನೆಗಳಿಗೆ	500 ರೂ.	1000 ರೂ.
ಸಗಟು ತ್ಯಾಜ್ಯ ಉತ್ಪಾದಕರಿಗೆ	2500 ರೂ.	5000 ರೂ.
ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ	2500 ರೂ.	5000 ರೂ.
ಎಲ್ಲೆಂದರಲ್ಲಿ ಕಸ ಎಸೆಯುವುದು	500 ರೂ.	1000 ರೂ.
ಕಟ್ಟಡ ತ್ಯಾಜ್ಯ ವಿಲೇವಾರಿ	25000 ರೂ.	50000 ರೂ.

ಆಧಾರ–ವಿಜಯವಾಣಿ, 05.07.2019

2. ವಿಶ್ವವಿದ್ಯಾಲಯ, ಶಿಕ್ಷಣ ಸಂಸ್ಥೆಗಳಲ್ಲಿ ನಿಗ್ರಹ ಸಮಿತಿ ರಚನೆಗೆ ಯುಜಿಸಿ ಶಿಫಾರಸ್ಸು

ಶಿಕ್ಷಣ ಸಂಸ್ಥೆಗಳಲ್ಲಿ ಸಹಪಾಠಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸಿಸುವುದು, ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳ ಮೇಲೆ ದಬ್ಬಾಳಿಕೆ ನಡೆಸುವುದು, ಬಣ್ಣ, ಜಾತಿ, ಧರ್ಮ, ಲಿಂಗ, ಜನಾಂಗ, ರಾಷ್ಟ್ರೀಯತೆ, ಪ್ರಾದೇಶಿಕತೆ, ಭಾಷೆ, ಹುಟ್ಟಿದ ಸ್ಥಳ, ವಾಸ ಸ್ಥಳ, ಆರ್ಥಿಕ ಹಿನ್ನೆಲೆ ಇತ್ಯಾದಿ ವಿಷಯಗಳಲ್ಲಿ ತಾರತಮ್ಯ ಮಾಡುವುದು ಸಾಮಾನ್ಯವಾಗಿದೆ. ರ್‍ಯಾಗಿಂಗ್ ತಡೆಗೆ ಸಂಬಂಧಿಸಿದಂತೆ 2009ರಲ್ಲಿ ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಈ ತೀರ್ಪಿನ ಅನ್ವಯ ರ್‍ಯಾಗಿಂಗ್ ತಡೆಗೆ ಯುಜಿಸಿ ಹಲವು ನಿಯಮಗಳನ್ನು ಜಾರಿಗೆ ತಂದಿದೆ. ಆದರೆ, ಈ ನಿಯಮಗಳು ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ರ್‍ಯಾಗಿಂಗ್‌ಗೆ ಒಳಗಾದ ವಿದ್ಯಾರ್ಥಿಗಳು ಅವಮಾನವನ್ನು ಸಹಿಸಲಾಗದೆ, ಆತ್ಮಹತ್ಯೆಗೆ ಶರಣಾಗುತ್ತಿರುವ ಘಟನೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಹಾಗಾಗಿ, ರ್‍ಯಾಗಿಂಗ್ ಕೃತ್ಯಗಳನ್ನು ಗಂಭೀರವಾಗಿ ಪರಿಗಣಿಸಿರುವ ಯುಜಿಸಿ, ಕಟ್ಟುನಿಟ್ಟಿನ

ಕ್ರಮಗಳೊಂದಿಗೆ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 'ರ್‍ಯಾಗಿಂಗ್ ಮುಕ್ತ ವಾತಾವರಣ' ನಿರ್ಮಿಸಲು ಮುಂದಾಗಿದೆ.

ಆಧಾರ–ವಿಜಯಕರ್ನಾಟಕ, 05.07.2019

3. ಡಿಜಿಟಲ್ ಮೌಲ್ಯಮಾಪನ

ಬೆಂಗಳೂರು ವಿಶ್ವವಿದ್ಯಾಲಯದ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲೇ ಪಡೆದುಕೊಳ್ಳಬಹುದು.

2018–19ನೇ ಸಾಲಿನ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು 'ನ್ಯಾಷನಲ್ ಅಕಾಡೆಮಿಕ್ ಡೆಪಾಸಿಟರಿ' (ಎನ್‌ಎಡಿ) ವೆಬ್‌ಸೈಟ್‌ಗಳಿಗೆ ಅಪ್‌ಲೋಡ್ ಮಾಡಲಾಗಿದೆ. ವಿದ್ಯಾರ್ಥಿಗಳು ಅಲ್ಲಿ ಆಧಾರ್ ಸಂಖ್ಯೆ ನಮೂದಿಸಿ ನೋಂದಣಿ ಮಾಡಿಕೊಂಡರೆ ಪಾಸ್ ವರ್ಡ್ ಲಭ್ಯವಾಗುತ್ತದೆ ಹಾಗೂ 2009 ರಿಂದ ಈಚೆಗಿನ ಎಲ್ಲಾ ವಿದ್ಯಾರ್ಥಿಗಳ ಅಂಕಪಟ್ಟಿಯನ್ನೂ ಮುಂದಿನ ದಿನಗಳಲ್ಲಿ ಅಪ್ ಲೋಡ್ ಮಾಡಲಾಗುವುದು. ಅಂಕಪಟ್ಟಿಯಲ್ಲಿ ದೋಷ, ಕಳವು, ದೃಢೀಕರಣ ಸಮಸ್ಯೆಗಳನ್ನು ಇದರಿಂದ ತಡೆಯಬಹುದು. ವಿದ್ಯಾರ್ಥಿಗಳು ಅಂಕಪಟ್ಟಿಗಾಗಿ ವಿಶ್ವವಿದ್ಯಾಲಯಕ್ಕೆ ಅಲೆಯುವುದು ತಪ್ಪುತ್ತದೆ. ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದಿರುವ ಮೊದಲ ವಿಶ್ವವಿದ್ಯಾಲಯ ನಮ್ಮದು ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ ಅವರು ತಿಳಿಸಿದರು.

ಯೋಗ, ಆಧ್ಯಾತ್ಮ, ಪರಿಸರ ಸಂರಕ್ಷಣೆ, ತ್ಯಾಜ್ಯ ನಿರ್ವಹಣೆ, ಆಪತ್ತು ನಿರ್ವಹಣೆಯ ತರಗತಿಗಳನ್ನು ಕಡ್ಡಾಯಗೊಳಿಸುವಿಕೆ ಹಾಗೂ ಭಗವಾನ್ ಬುದ್ಧ, ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ ಮತ್ತು ಡಾ:ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೋಶಗಳನ್ನು ತೆರೆದು ವಾರಕ್ಕೆ ಒಂದು ಗಂಟೆಯ ತರಗತಿ ನಡೆಸಬೇಕೆಂದು ಹಾಗೂ ಸ್ಥಳೀಯ ಪರಿಶೀಲನಾ ಸಮಿತಿ ಭೇಟಿ ನೀಡುವ ವೇಳೆಗೆ ಎಲ್ಲವೂ ಪ್ರಗತಿಯಲ್ಲಿ ಇರಬೇಕೆಂದು ಸೂಚನೆ ನೀಡಲಾಗಿದೆಯೆಂದು ಕುಲಪತಿ ತಿಳಿಸಿದರು.

ಆಧಾರ–ಪ್ರಜಾವಾಣಿ, 04.07.2019

4. 19 ವಿಶ್ವ ವಿದ್ಯಾಲಯಗಳಲ್ಲಿ ಶೈಕ್ಷಣಿಕ ಮೀಸಲಾತಿ

ಲೈಂಗಿಕ ಶೋಷಿತರ ಹಾಗೂ ದೇವದಾಸಿ ಪದ್ಧತಿ ತೊರೆದವರ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ 19 ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಶೇ.1 ರಷ್ಟು ಶೈಕ್ಷಣಿಕ ಮೀಸಲಾತಿ ನೀಡಲು ಉನ್ನತ ಶಿಕ್ಷಣ ಇಲಾಖೆಯು (ವಿಶ್ವವಿದ್ಯಾಲಯಗಳು) ಆದೇಶ ಹೊರಡಿಸಿದೆ.

2011–12ರಲ್ಲೇ ಮೀಸಲಾತಿ ಜಾರಿಗೆ ತಂದಿದ್ದ ಮೈಸೂರು ವಿಶ್ವವಿದ್ಯಾಲಯವು ಶುಲ್ಕದಲ್ಲೂ ಶೇ.50ರಷ್ಟು ವಿನಾಯಿತಿ ನೀಡುತ್ತಿದೆ. ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಆಸಿಡ್ ದಾಳಿ, ದೇವದಾಸಿಯರು ಮತ್ತು ಅವರ ಮಕ್ಕಳಿಗೆ ಈ ಸೌಲಭ್ಯ ಕಲ್ಪಿಸಬೇಕೆಂದು ಸರ್ಕಾರಕ್ಕೆ ಕೋರಿತ್ತು.

ಆಧಾರ–ವಿಜಯವಾಣಿ, 07.07.2019

5. ಕಟ್ಟಡ ಕಾಮಗಾರಿಗೆ ಬೋರ್‌ವೆಲ್ ಕೊರೆಯಲು ಅನುಮತಿ ಇಲ್ಲ

ನಗರದಲ್ಲಿ ಅಂತರ್ಜಲಮಟ್ಟ ಪಾತಾಳ ಮುಟ್ಟುತ್ತಿರುವ ಹಿನ್ನೆಲೆಯಲ್ಲಿ ಕಟ್ಟಡ ಕಾಮಗಾರಿಗಳಿಗಾಗಿ ಬೋರ್‌ವೆಲ್ ಕೊರೆಯುವುದಕ್ಕೆ ಅವಕಾಶ ನೀಡದಿರಲು ಬೆಂಗಳೂರು ಜಲ ಮಂಡಳಿ ನಿರ್ಧರಿಸಿದೆ. ಇದಕ್ಕೆ ಪರ್ಯಾಯವಾಗಿ ಎಸ್‌ಟಿಪಿ ನೀರನ್ನು ಬಳಸಿಕೊಳ್ಳುವಂತೆ ಸೂಚನೆ ನೀಡಲಾಗಿದೆ. ಕಟ್ಟಡ ಮಾಲೀಕರು ಕಾಮಗಾರಿ ಜಾಗದಲ್ಲಿ ತಾತ್ಕಾಲಿಕವಾಗಿ ಶೆಡ್ ಹಾಕಿಕೊಳ್ಳುವ ಕಾರ್ಮಿಕರಿಗೆ ಕುಡಿಯಲು ಹಾಗೂ ಇತರೆ ಬಳಕೆಗಾಗಿ ನೀರು ಬೇಕಿದೆ ಎಂದು ಮನವಿ ಮಾಡುತ್ತಿದ್ದಾರೆ. ಆದರೆ ಹಲವೆಡೆ ಬೋರ್ ವೆಲ್ ನೀರನ್ನು ಕಾಮಗಾರಿಗೆ ಬಳಸಿಕೊಳ್ಳುತ್ತಿರುವುದು ಕಂಡು ಬಂದಿದೆ. ಅಂತರ್ಜಲಮಟ್ಟ ಕೆಳಕ್ಕೆ ಇಳಿದು ಸಮಸ್ಯೆಯಾಗಿರುವ ಸಮಯದಲ್ಲಿ ನೀರಿನ ದುರ್ಬಳಕೆಯನ್ನು ತಡೆಯಬೇಕಿದೆ ಎಂಬ ಅಭಿಪ್ರಾಯ ಬಂದಿದೆ. ಹೀಗಾಗಿ ಕಟ್ಟಡ ಕಾಮಗಾರಿಗಾಗಿ ಬೋರ್‌ವೆಲ್ ಕೊರೆಯಲು ಕೋರುವವರಿಗೆ ಅನುಮತಿ ನೀಡಬಾರದೆಂದು ಅಧಿಕಾರಿಗಳಿಗೆ ಸೂಚನೆ ಹಾಗೂ ಕಾರ್ಮಿಕರಿಗೆ ಕುಡಿಯಲು ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಮತ್ತು ಜಲಮಂಡಳಿಯಿಂದ ಎಸ್‌ಟಿಪಿ ನೀರು ನೀಡಲು ಟ್ಯಾಂಕರ್ ವ್ಯವಸ್ಥೆ ಮಾಡಲಾಗುತ್ತದೆಯೆಂದು ಜಲಮಂಡಳಿ ಅಧ್ಯಕ್ಷ ತುಷಾರ್ ಗಿರಿನಾಥ್ ತಿಳಿಸಿದರು.

"ಅಂತರ್ಜಲ ಸಂರಕ್ಷಣೆಯ ಜವಾಬ್ದಾರಿ ಎಲ್ಲರ ಮೇಲಿದೆ. ಕಟ್ಟಡ ಕಾಮಗಾರಿಗೆ ಎಸ್‌ಟಿಪಿ ನೀರು ಬಳಸಲು ಯಾವುದೇ ಸಮಸ್ಯೆ ಇಲ್ಲ. ಅಪಾರ್ಟ್‌ಮೆಂಟ್ ನಿರ್ಮಿಸುವಾಗ ನಿವಾಸಿಗಳಿಗೆ ಕುಡಿಯುವ ನೀರಿಗಾಗಿ ಬೋರ್‌ವೆಲ್ ಕೊರೆಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನಿಯಮ ಹೇಗೆ ಅನುಷ್ಠಾನ ಮಾಡುತ್ತಾರೆ ಎಂಬುದು ಮುಖ್ಯ" ಎಂದು ಕ್ರೆಡಾಯ್, ಬೆಂಗಳೂರು ಮುಖ್ಯಸ್ಥ ಸುರೇಶ್ ಹರಿ ಹೇಳಿದ್ದಾರೆ.

ಆಧಾರ–ವಿಜಯಕರ್ನಾಟಕ, 22.07.2019

6. 37 ಪ್ಲಾಸ್ಟಿಕ್ ತಯಾರಿಕಾ ಕಾರ್ಖಾನೆಗಳನ್ನು ಮುಚ್ಚಲು ಆದೇಶ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಗರದಲ್ಲಿ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ತಯಾರಿಸುತ್ತಿರುವ 37 ಕಾರ್ಖಾನೆಗಳನ್ನು ಮುಚ್ಚಲು ಆದೇಶಿಸಿದೆ. ಪ್ಲಾಸ್ಟಿಕ್ ವಸ್ತುಗಳ ತಯಾರಕರು, ಮಾರಾಟಗಾರರು ಮತ್ತು ಅಂಗಡಿಗಳಿಗೆ ಪೂರೈಸುತ್ತಿರುವವರನ್ನು ಪತ್ತೆ ಮಾಡಿ, ಕಠಿಣ ಕ್ರಮ ಕೈಗೊಳ್ಳಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ಲಾಸ್ಟಿಕ್ ವಸ್ತುಗಳನ್ನು ತಯಾರಿಸುತ್ತಿದ್ದ ಕೈಗಾರಿಕೆಗಳನ್ನು ಮುಚ್ಚಲು ಆದೇಶಿಸಿದೆ. "ಒಂದೊಮ್ಮೆ ನಿಯಮಬಾಹಿರವಾಗಿ ನಿಷೇಧಿತ ಪ್ಲಾಸ್ಟಿಕ್ ಕೈಚೀಲ ಮತ್ತು ಇನ್ನಿತರೆ ವಸ್ತುಗಳನ್ನು ತಯಾರಿಸುತ್ತಿರುವುದು ಕಂಡು ಬಂದರೆ, ಯಂತ್ರೋಪಕರಣಗಳನ್ನು ಜಪ್ತಿ ಮಾಡಿ, ದುಪ್ಪಟ್ಟು ದಂಡ ಹಾಕಲಾಗುವುದು. ಸಂಬಂಧಪಟ್ಟ ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು." ಎಂದು ಬಿಬಿಎಂಪಿ ಹೆಚ್ಚುವರಿ ಆಯುಕ್ತ ಡಿ.ರಣ್‌ದೀಪ್ ತಿಳಿಸಿದರು.

ಆಧಾರ–ವಿಜಯವಾಣಿ, 20.07.2019

7. ಎಲ್ಲಾ ಶಾಲೆಗಳಲ್ಲಿ ಕಡ್ಡಾಯ ಶೌಚಾಲಯಕ್ಕೆ ಆದೇಶ

ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳೂ ಅಕ್ಟೋಬರ್ 1ರೊಳಗೆ ಕಡ್ಡಾಯವಾಗಿ ಶೌಚಾಲಯಗಳನ್ನು ಹೊಂದಲೇಬೇಕು, ನರೇಗಾ ಯೋಜನೆಯಡಿ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಜಿಲ್ಲಾ ಹಂತದಲ್ಲೇ ಶೌಚಾಲಯ ನಿರ್ಮಾಣಕ್ಕೆ ಅನುದಾನ ನೀಡಲಾಗುತ್ತದೆ. ಎಲ್ಲಾ ಜಿಲ್ಲೆಗಳ ಸಮೀಕ್ಷಾ ವರದಿಯನ್ನು ಅಂಕಿ–ಅಂಶಗಳು ಹಾಗೂ ಶಾಲೆಗಳ ಪಟ್ಟಿ ಸಹಿತವಾಗಿ ಆಗಸ್ಟ್ 30ರೊಳಗೆ ತಮ್ಮ ಜಿಲ್ಲೆಯಲ್ಲಿ ಶೌಚಾಲಯ ರಹಿತ ಶಾಲೆಗಳು ಯಾವುದೂ ಇರುವುದಿಲ್ಲ; ಎಲ್ಲ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಅಕ್ಟೋಬರ್ 1ರ

ಹೊತ್ತಿಗೆ ಶೌಚಾಲಯ ಹೊಂದಿರುತ್ತವೆ ಎಂಬ ದೃಢೀಕರಣ ಪತ್ರವನ್ನು ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಗೆ ನೀಡಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಆದೇಶಿಸಿರುತ್ತಾರೆ.

ಆಧಾರ–ಉದಯವಾಣಿ, 16.07.2019

8. ಸ್ಕೂಲ್ ಬ್ಯಾಗ್‌ಗೆ ವಾರಕ್ಕೊಮ್ಮೆ ವಿರಾಮ

ವಿದ್ಯಾರ್ಥಿಗಳ ಬ್ಯಾಗ್ ಭಾರವನ್ನು ಕಡಿಮೆ ಮಾಡುವಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ–ದೇಶದ ಎಲ್ಲ ಶಾಲೆಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ ಬಳಿಕ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ನೋ ಬ್ಯಾಗ್ ಡೇ ಜಾರಿಗೆ ತರಲಾಯಿತು. ಪ್ರತಿಯೊಂದು ಮಗುವೂ ಬ್ಯಾಗ್ ಇಲ್ಲದೆ ಶಾಲೆಗೆ ಬರಲು ಖುಷಿ ಪಡುತ್ತದೆ. ಪಠ್ಯೇತರ ಚಟುವಟಿಕೆಗೆ ಇದು ಹಾದಿ ಮಾಡಿಕೊಡುತ್ತದೆ. ಮಕ್ಕಳಲ್ಲಿ ಅಂತರ್ಗತವಾಗಿರುವ ಟ್ಯಾಲೆಂಟ್ ತೋರಿಸಲು ನೋ ಬ್ಯಾಗ್ ಡೇ ವೇದಿಕೆ ಕಲ್ಪಿಸಿದೆ. ಚೀಲ ರಹಿತ ದಿನಗಳಲ್ಲಿ ವಿದ್ಯಾರ್ಥಿಗಳು ನೃತ್ಯ, ಹಾಡು ಹಾಗೂ ಇತರ ಆರ್ಟ್‌ಫಾರ್ಮ್ ಮೂಲಕ ಶಿಕ್ಷಣ ಪಡೆಯುತ್ತಾರೆ. ಇದರಿಂದ ಮಕ್ಕಳಿಗೆ ಕಲಿಕೆಯನ್ನು ಎಂಜಾಯ್ ಮಾಡುವ ಜೊತೆಗೆ ಹೊರೆಯನ್ನು ಇಳಿಸಿದಂತೆಯೂ ಆಗುತ್ತದೆ ಎಂದು ಜಿಲ್ಲೆಯ ವಲಯ ಶಿಕ್ಷಣಾಧಿಕಾರಿ ತಿಳಿಸಿದರು.

ಆಧಾರ–ವಿಜಯಕರ್ನಾಟಕ, 09.07.2019

9. ಮೈ ಶುಗರ್ ಪುನಶ್ಚೇತನದ ಭರವಸೆ

ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯ ಪುನಶ್ಚೇತನ ಕುರಿತಂತೆ ರೈತ ಮುಖಂಡರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಘೋಷಿಸಿದಂತೆ ಮೈಶುಗರ್ ಕಾರ್ಖಾನೆಯ ಪುನಶ್ಚೇತನಕ್ಕೆ ಕ್ರಮವಹಿಸಲಾಗಿದ್ದು ಕಾರ್ಖಾನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಖಾಸಗಿಯವರಿಗೆ ವಹಿಸಿಕೊಡಲು ಕ್ರಮ ವಹಿಸಲಾಗುತ್ತಿದೆ ಎಂದರು. ಆದಾಗ್ಯೂ ರೈತರ ಹಿತ ರಕ್ಷಣೆಯ ದೃಷ್ಟಿಯಿಂದ ಶಾಶ್ವತವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಆಧಾರ–ಸಂಯುಕ್ತ ಕರ್ನಾಟಕ, 09.07.2019

10.'ಸ್ಕೂಲ್ ಕ್ಯಾಬ್ ಸೇಫ್ಟಿ ಕಮಿಟಿ' ಕಡ್ಡಾಯಕ್ಕೆ ಸೂಚನೆ

ಮಕ್ಕಳ ಸುರಕ್ಷತೆ ಹಾಗೂ ಸುಗಮ ಪ್ರಯಾಣದ ದೃಷ್ಟಿಯಿಂದ ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ 'ಸ್ಕೂಲ್ ಕ್ಯಾಬ್ ಸುರಕ್ಷತಾ ಸಮಿತಿ'ಗಳನ್ನು ರಚಿಸುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಸಮಿತಿ ಪರಿಶೀಲಿಸುವ ಕೆಲಸಗಳೆಂದರೆ, ಖಾಸಗಿ ವಾಹನಗಳಲ್ಲಿ ಸುರಕ್ಷತೆ, ವಾಹನಗಳು ವಿಧಿಸುವ ಶುಲ್ಕ, ನಿಲುಗಡೆ ಸ್ಥಳ ಗುರುತಿಸುವುದು, ವಾಹನಗಳ ನೋಂದಣಿ ಸರ್ಟಿಫಿಕೇಟ್, ವಾಹನ ಸಾಮರ್ಥ್ಯ ಪ್ರಮಾಣಪತ್ರ, ವಾಹನಕ್ಕೆ ಇರುವ ವಿಮೆ, ಮಾಲಿನ್ಯ ತಪಾಸಣಾ ಪ್ರಮಾಣ ಪತ್ರ, ಚಾಲನಾ ಪರವಾನಿಗಿ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಬೆಂಕಿ ನಂದಿಸುವ ಸಾಧನ ವ್ಯವಸ್ಥೆ, ಮಕ್ಕಳಿಗೆ ಸಂಚರಿಸುವ ವಾಹನಕ್ಕೆ ಅನುಮೋದನೆ.

ಆಧಾರ–ವಿಜಯಕರ್ನಾಟಕ, 28.07.2019

11. ಅಮೆರಿಕ ಮಾದರಿಯತ್ತ ನಮ್ಮ ಶಿಕ್ಷಣ

ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಯೂರೋಪಿಯನ್ ಮಾದರಿಯಿಂದ ಅಮೆರಿಕನ್ ಮಾದರಿಯತ್ತ ಕೊಂಡೊಯ್ಯುತ್ತದೆ. ಬಹುತೇಕ ಶಿಫಾರಸ್ಸುಗಳು ಅಮೆರಿಕದ ಶಿಕ್ಷಣ ವ್ಯವಸ್ಥೆಯ ರೀತಿಯಲ್ಲಿಯೇ ಇವೆ ಎಂದು ಶಿಕ್ಷಣ ತಜ್ಞ ಹಾಗೂ ಸಮಾಜ ವಿಜ್ಞಾನಿ ಪ್ರೊ.ಹರಗೋಪಾಲ್ ಅಭಿಪ್ರಾಯಪಟ್ಟರು.

ವಿದೇಶಿ ವಿಶ್ವವಿದ್ಯಾಲಯಗಳು ಭಾರತಕ್ಕೆ ಬಂದರೆ ಇಲ್ಲಿನ ವಿಶ್ವವಿದ್ಯಾಲಯಗಳು ಬೆಳವಣಿಗೆ ಹೊಂದುತ್ತವೆ ಎಂದು ಹೇಳಲಾಗುತ್ತಿದೆ. ಆದರೆ, ಆರ್ಥಿಕ ಸ್ಥಿತಿಯಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳೊಂದಿಗೆ ಹೋಲಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು. ಅಮೆರಿಕದ ಸ್ಟ್ಯಾನ್‌ಪೋರ್ಡ್ ವಿಶ್ವವಿದ್ಯಾಲಯದ ಬಜೆಟ್‌ನ ಗಾತ್ರವೇ 44 ಸಾವಿರ ಕೋಟಿ ರೂ.ಗಳಷ್ಟಿದೆ. ಆದರೆ ನಮ್ಮ ವಿಶ್ವವಿದ್ಯಾಲಯಗಳಿಗೆ 5 ರಿಂದ 10 ಕೋಟಿ ರೂ.ಅನುದಾನ ಸಿಗುವುದು ಕೂಡ ಕಷ್ಟವಾಗಿದೆ. ಇಂತಹ ಸ್ಥಿತಿಯಲ್ಲಿ ಶಿಕ್ಷಕರ, ಉಪನ್ಯಾಸಕರ ಸಬಲೀಕರಣವಾಗದೆ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಆಧಾರ–ವಿಜಯಕರ್ನಾಟಕ, 29.07.2019

12. 60X40ಗಿಂತ ಕಡಿಮೆ ಜಾಗದ ಸೈಟಲ್ಲಿ ಮನೆಗೆ ನಕ್ಷೆ ಮಂಜೂರಾತಿ ಬೇಕಿಲ್ಲ

2400 ಚ.ಅಡಿಗಿಂತ ಕಡಿಮೆ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಿಸುವವರು ನಕ್ಷೆ ಮಂಜೂರಾತಿಗೆ ಪಾಲಿಕೆಗೆ ಅಲೆದಾಡುವ ಅವಶ್ಯಕತೆ ಇಲ್ಲ. ನಂಬಿಕೆ ಮತ್ತು ಪರಿಶೀಲನೆ ಆಧಾರದಲ್ಲಿ ಬಿಲ್ಡಿಂಗ್ ಬೈಲಾ ಪ್ರಕಾರ ನಕ್ಷೆ ಸಿದ್ಧಪಡಿಸಿ ಪಾಲಿಕೆಗೆ ಆನ್‌ಲೈನ್ ಮೂಲಕ ಸಲ್ಲಿಕೆ ಮಾಡಿ ಕಟ್ಟಡ ನಿರ್ಮಾಣ ಆರಂಭಿಸಬಹುದಾಗಿದೆ. ಆಗಸ್ಟ್ 15ರಿಂದ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಶ್ರೀ ಮಂಜುನಾಥ್ ಪ್ರಸಾದ್, ಆಯುಕ್ತರು ತಿಳಿಸಿದರು.

ನಂಬಿಕೆ ಮತ್ತು ಪರಿಶೀಲನೆ ಆಧಾರದ ಮೇಲೆ 2,400 ಚ.ಅಡಿಗಿಂತ ಕಡಿಮೆ ವಿಸ್ತೀರ್ಣದ ನಿವೇಶನಗಳಲ್ಲಿ ಕಟ್ಟಡ ಕಟ್ಟಿಕೊಳ್ಳಲು ಅನುವು ಮಾಡಿಕೊಡಲಾಗುತ್ತಿದೆ. ಹೀಗಾಗಿ 2400 ಚ.ಅಡಿಗಿಂತ ಕಡಿಮೆ ವಿಸ್ತೀರ್ಣದ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ಪಡೆಯುವ ಅಗತ್ಯವಿಲ್ಲ. ಆದರೆ ಕಟ್ಟಡ ನಿರ್ಮಿಸುವವರು ಕಡ್ಡಾಯವಾಗಿ ನೋಂದಾಯಿತ ವಾಸ್ತುಶಿಲ್ಪಿಗಳಿಂದ ನಕ್ಷೆಯನ್ನು ಸಿದ್ಧಪಡಿಸಿ, ಮಾಹಿತಿಗೆ ಪಾಲಿಕೆಗೆ ಸಲ್ಲಿಸಿದರೆ ಸಾಕಾಗಲಿದೆ. ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವ ಅಗತ್ಯವಿಲ್ಲ ಎಂದು ತಿಳಿಸಿದರು.

ನಕ್ಷೆಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಕೆ ಮಾಡಿದ ತಕ್ಷಣ ಕೆಲಸ ಆರಂಭಿಸಬಹುದು. ಪಾಲಿಕೆ ಅಧಿಕಾರಿಗಳ ಪರಿಶೀಲನೆ ಅನುಮೋದನೆಗಾಗಿ ಕಾಯುವ ಅವಶ್ಯಕತೆ ಇರುವುದಿಲ್ಲ. ಒಂದು ವೇಳೆ ಸುಳ್ಳು ದಾಖಲೆ ನೀಡಿ ಅಥವಾ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿದಲ್ಲಿ ಅಂತಹ ಕಟ್ಟಡ ಮಾಲೀಕರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿ ಈ ನಿಯಮ ವಾಣಿಜ್ಯ ಕಟ್ಟಡಗಳಿಗೆ ಅನ್ವಯವಾಗುವುದಿಲ್ಲ. ವಾಣಿಜ್ಯ ಕಟ್ಟಡಗಳು ಎಂದಿನಂತೆ ನಕ್ಷೆ ಮಂಜೂರಾತಿ ಪಡೆಯಬೇಕು. ವಾಣಿಜ್ಯವಲ್ಲದ ಕಟ್ಟಡಗಳು ನೆಲಮಾಳಿಗೆ ಹಾಗೂ ಮೂರು ಅಂತಸ್ತು ನಿರ್ಮಿಸಬಹುದೆಂದು ಆಯುಕ್ತರು ತಿಳಿಸಿದರು.

ಆಧಾರ–ಕನ್ನಡಪ್ರಭ, 01.08.2019

13. ನೆರೆ ಸಂತ್ರಸ್ತರಿಗೆ ರೂ.10,000/– ಪರಿಹಾರ

ಭೀಕರ ಪ್ರವಾಹದಿಂದ ತತ್ತರಿಸಿರುವ ನೆರೆ ಸಂತ್ರಸ್ತ ಪ್ರತಿ ಕುಟುಂಬಕ್ಕೆ ತಲಾ 10 ಸಾವಿರ ರೂ. ಪರಿಹಾರ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ರಾಷ್ಟ್ರೀಯ ವಿಪತ್ತು ನಿಧಿಯಿಂದ 3,800 ರೂ. ಜೊತೆಗೆ ರಾಜ್ಯ ಸರ್ಕಾರವು 6,200 ರೂ. ಸೇರಿಸಿ ಒಟ್ಟು 10 ಸಾವಿರ ರೂ.ಗಳನ್ನು ಪರಿಹಾರ ನೀಡಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಪ್ರಕೃತಿ ವಿಕೋಪದಿಂದಾಗಿ ಹಾನಿಗೊಳಗಾದ ಮನೆಗಳಲ್ಲಿನ ಬಟ್ಟೆ–ಬರೆ, ದಿನಬಳಕೆ ವಸ್ತುಗಳು, ಪಾತ್ರೆಗಳು ಇತ್ಯಾದಿ ಗೃಹೋಪಯೋಗಿ ವಸ್ತುಗಳು ಹಾನಿಯಾದರೆ ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್/ ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪ್ರತಿ ಕುಟುಂಬಕ್ಕೆ ಬಟ್ಟೆ ಬರೆ ಹಾನಿಗಾಗಿ 1,800 ರೂ. ಮತ್ತು ದಿನಬಳಕೆ ವಸ್ತುಗಳಿಗೆ 2 ಸಾವಿರ ರೂ.ನಂತೆ 3800 ರೂ. ಮಂಜೂರು ಮಾಡಲು ಅವಕಾಶ ಇದೆ. ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ 6,200 ರೂ.ನಂತೆ ಪ್ರತಿ ಸಂತ್ರಸ್ತ ಕುಟುಂಬಗಳಿಗೆ ನೀಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ರಾಜ್ಯದಲ್ಲಿ ತೀವ್ರ ಪ್ರವಾಹ ಉಂಟಾದ ಪರಿಣಾಮ 4 ಲಕ್ಷ ಜನ ನಿರಾಶ್ರಿತರಾಗಿದ್ದು, ಎರಡು ಲಕ್ಷ ಕುಟುಂಬಗಳಿಗೆ 10 ಸಾವಿರ ರೂ. ಸಹಾಯಹಸ್ತ ಚಾಚಲು ನಿರ್ಣಯ ಕೈಗೊಳ್ಳಲಾಗಿದೆ. ಸಂಪೂರ್ಣವಾಗಿ ಮನೆ ಕಳೆದುಕೊಂಡಿರುವ ಕುಟುಂಬಗಳಿಗೆ ಮನೆ ಬಾಡಿಗೆ ಐದು ಸಾವಿರ ರೂ. ಹಾಗೂ ಸಂತ್ರಸ್ತರು ಮನೆ ನಿರ್ಮಿಸಿಕೊಳ್ಳುವವರೆಗೆ 10 ತಿಂಗಳ ಕಾಲ ಪ್ರತಿ ಕುಟುಂಬಕ್ಕೆ 5 ಸಾವಿರ ರೂ. ನೀಡುವ ನಿರ್ಣಯ ಕೈಗೊಳ್ಳಲಾಗಿದೆ. ಸಂತ್ರಸ್ತರು ಅವರಲ್ಲಿರುವ ಯಾವುದಾದರೊಂದು ದಾಖಲೆಯನ್ನು ಕೊಟ್ಟು ಬಾಡಿಗೆ ಹಣ ಪಡೆದುಕೊಳ್ಳಲು ಸಂಪುಟ ಸಭೆಯು ಒಪ್ಪಿಗೆ ಸೂಚಿಸಿದೆ.

ಆಧಾರ–ಕನ್ನಡಪ್ರಭ, 15.08.2019

14. ಸ್ಯಾಟ್ಸ್ ತಂತ್ರಾಂಶ ಸಹವಾಸ, ಶಿಕ್ಷಕರಿಗೆ ನೆಟ್‌ವಾಸ

ಶಿಕ್ಷಕರ ಸಮಸ್ಯೆಗಳ ಸಾಲಿಗೆ ಇತ್ತೀಚಿನ ಹೊಸ ಸೇರ್ಪಡೆ – ಸ್ಯಾಟ್ಸ್. ಶಾಲೆಗೆ ಬರುವ ಎಲ್ಲ ವಿದ್ಯಾರ್ಥಿಗಳ ಸಂಪೂರ್ಣ ವಿವರವನ್ನು ದಾಖಲಿಡುವ ಸ್ಟುಡೆಂಟ್ ಅಚೀವ್‌ಮೆಂಟ್ ಟ್ರ್ಯಾಕಿಂಗ್ ಸಿಸ್ಟಂ ಎಂಬ ಸ್ಯಾಟ್ಸ್ ತಂತ್ರಾಂಶ ಶಿಕ್ಷಕರ ಪಾಲಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಈ ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಪ್ರತಿ ತಿಂಗಳು ಭರ್ತಿ ಮಾಡಬೇಕು. ವಿದ್ಯಾರ್ಥಿಯ ಹಾಜರಾತಿ, ಸಮವಸ್ತ್ರ, ಶೂ, ಸಾಕ್ಸ್ ವಿತರಣೆಯ ವಿವರಣೆ, ಕಿರುಪರೀಕ್ಷೆ, ಅರ್ಧವಾರ್ಷಿಕ, ವಾರ್ಷಿಕ ಪರೀಕ್ಷೆಯ ಎಲ್ಲ ಸಂಗತಿಗಳನ್ನು ಭರ್ತಿ ಮಾಡಬೇಕು. ಶಿಕ್ಷಕರಿಗೆ ಇದನ್ನು ಭರ್ತಿ ಮಾಡುವುದು ಸಮಸ್ಯೆಯಲ್ಲ. ಆದರೆ ಸಮಸ್ಯೆ ಇರುವುದು ಸ್ಯಾಟ್ಸ್ ಅನುಷ್ಠಾನಕ್ಕೆ ಸೂಕ್ತ ಪರಿಸರವನ್ನೇ ಸಾರ್ವಜನಿಕ ಶಿಕ್ಷಣ ಇಲಾಖೆ ರೂಪಿಸಿಲ್ಲ. ಅದಕ್ಕೆ ಬೇಕಾದ ಸೌಲಭ್ಯಗಳನ್ನೂ ನೀಡಿಲ್ಲ. ಕಂಪ್ಯೂಟರನ್ನು ನೀಡದೇ ತಂತ್ರಾಂಶವನ್ನು ದುಡಿಸಿಕೊಂಡು ಕೆಲಸ ಮಾಡಿ ಎಂದರೆ ಹೇಗೆ ಎಂಬುದು ಶಿಕ್ಷಕರ ಪ್ರಶ್ನೆ. ಬಹುಪಾಲು ಅಧಿಕಾರಿಗಳಿಗೆ ತಂತ್ರಾಂಶ ಹೇಗೆ ಕೆಲಸ ಮಾಡುತ್ತೆ ಎಂಬುದರ ಅರಿವೇ ಇರುವುದಿಲ್ಲ. ಶಿಕ್ಷಕರು ಅನಿವಾರ್ಯವಾಗಿ ಸ್ಯಾಟ್ಸ್ ಭರ್ತಿಗೆ ನೆಟ್ ಸೆಂಟರ್‌ಗಳನ್ನೇ ಆಶ್ರಯಿಸಬೇಕಿದೆ.

ಆಧಾರ–ವಿಜಯಕರ್ನಾಟಕ 06.09.2019

15. ಹೈದರಾಬಾದ್ ಕರ್ನಾಟಕ ಈಗ 'ಕಲ್ಯಾಣ ಕರ್ನಾಟಕ'

ಹೈದರಾಬಾದ್ ಕರ್ನಾಟಕ ಇನ್ನು ಮುಂದೆ 'ಕಲ್ಯಾಣ ಕರ್ನಾಟಕ'ವಾಗಿ ಬದಲಾಗಲಿದೆ. ಆ ಭಾಗವನ್ನು 'ಕಲ್ಯಾಣ ಕರ್ನಾಟಕ' ಎಂದು ಕರೆಯಲು ರಾಜ್ಯ ಸರ್ಕಾರ ಐತಿಹಾಸಿಕ ನಿರ್ಧಾರ ಕೈಗೊಂಡಿದ್ದು ಹಳೆಯ ಹೆಸರು ಇತಿಹಾಸ ಸೇರಲಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಇದರೊಂದಿಗೆ 'ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ' ಯು 'ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ'ಯಾಗಿ ಪರಿವರ್ತನೆಯಾಗಲಿದೆ.

ಆಧಾರ–ಪ್ರಜಾವಾಣಿ, 07.09.2019

16. 'ರೋರಿಚ್ ಎಸ್ಟೇಟ್‌ನಲ್ಲಿ ಫಿಲಂ ಸಿಟಿ'

ಬೆಂಗಳೂರು ನಗರದ ಕನಕಪುರ ರಸ್ತೆಯಲ್ಲಿರುವ ಸುಮಾರು 700 ಎಕರೆ ವಿಸ್ತೀರ್ಣದ ರೋರಿಚ್ ಎಸ್ಟೇಟ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದ ಚಿತ್ರ ನಗರಿ (ಫಿಲಂ ಸಿಟಿ) ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ರೋರಿಚ್ ಎಸ್ಟೇಟ್‌ನಲ್ಲಿ ಸಿನಿನಗರಿ ನಿರ್ಮಾಣದ ಘೋಷಣೆ ಕೇಳಿ ಸಂತೋಷವಾಗಿದೆ. ಬೆಂಗಳೂರಿಗೆ ಹತ್ತಿರವಿರುವುದರಿಂದ ಸಿನಿಮಾ ಉದ್ಯಮಕ್ಕೆ ಸಹಾಯವಾಗುತ್ತದೆ ಎಂದು ನಿರ್ಮಾಪಕ ಶ್ರೀ ಕೆ.ಸಿ.ಎನ್.ಚಂದ್ರಶೇಖರ್ ತಿಳಿಸಿದ್ದಾರೆ.

ರೋರಿಚ್ ಎಸ್ಟೇಟ್‌ನಲ್ಲಿ ಸಿನಿನಗರಿ ನಿರ್ಮಾಣ ಮಾಡುವುದು ಖುಷಿ ತಂದಿದೆ. ಮೈಸೂರಿನಲ್ಲೂ ಆಗಲಿ, ಇದರಿಂದ ಚಿತ್ರೋದ್ಯಮಕ್ಕೆ ಅನುಕೂಲ ಎಂದು ನಿರ್ದೇಶಕರಾದ ಶ್ರೀ ಎಸ್.ವಿ.ರಾಜೇಂದ್ರಸಿಂಗ್ ಬಾಬು ತಿಳಿಸಿದ್ದಾರೆ.

ಆಧಾರ–ಪ್ರಜಾವಾಣಿ, 16.09.2019

17. ಕ್ಯಾನ್ಸರ್ ಪತ್ತೆ ಘಟಕ ಮತ್ತು ಪೋಷಣ್ ಅಭಿಯಾನ್

ರಾಜ್ಯದ 10 ಜಿಲ್ಲೆಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಕ್ಯಾನ್ಸರ್ ರೋಗ ತಪಾಸಣಾ ಕೇಂದ್ರ ತೆರೆಯಲು ಸಂಪುಟ ಸಭೆ ತೀರ್ಮಾನಿಸಿದೆ.

ಮಂಗಳೂರು, ತುಮಕೂರು, ವಿಜಯಪುರ, ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾವೇರಿ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಗಳಲ್ಲಿ ತಲಾ 1 ಕೋಟಿ ರೂ. ವೆಚ್ಚದಲ್ಲಿ ಸ್ತನ ಹಾಗೂ ಗರ್ಭಕೋಶ ಕ್ಯಾನ್ಸರ್ ಪತ್ತೆ ಘಟಕ ಆರಂಭಿಸಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದಾರೆ.

ಮಕ್ಕಳಲ್ಲಿ ಪೌಷ್ಟಿಕತೆ ವೃದ್ಧಿಸಲು ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಪೋಷಣ್ ಅಭಿಯಾನ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಇದುವರೆಗೆ ಕೇವಲ 19 ಜಿಲ್ಲೆಗಳಲ್ಲಿ ಯೋಜನೆ ಜಾರಿಯಲ್ಲಿತ್ತು. ಯೋಜನೆ ಜಾರಿಗೆ ಕೇಂದ್ರ ಸರ್ಕಾರ ಒಟ್ಟು 9 ಕೋಟಿ ರೂ. ನೀಡಲಿದೆಯೆಂದು ತಿಳಿಸಿದರು.

ಆಧಾರ–ವಿಜಯಕರ್ನಾಟಕ, 19.09.2019

18. ಬೆಂಗಳೂರು ರಿಂಗ್ ರಸ್ತೆಗೆ ಅಸ್ತು

ಮೈತ್ರಿ ಸರ್ಕಾರದ ಎಲಿವೇಟೆಡ್ ರಿಂಗ್ ರೋಡ್ ಯೋಜನೆಯನ್ನು ಸ್ಥಗಿತಗೊಳಿಸಿರುವ ರಾಜ್ಯ ಸರ್ಕಾರ 11,956 ಕೋಟಿ ರೂ.ವೆಚ್ಚದಲ್ಲಿ ಬೆಂಗಳೂರು ನಗರದಲ್ಲಿ ಫೆರಿಪೆರಲ್ ರಿಂಗ್ ರೋಡ್ ನಿರ್ಮಿಸಲು ಮುಂದಾಗಿದ್ದು, ಸಂಪುಟ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ನೀಡಲಾಗಿದೆ.

ಸಿ.ಎಂ.ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಮುಖ್ಯಮಂತ್ರಿ ನವ ಬೆಂಗಳೂರು ಯೋಜನೆಯನ್ನು 'ಮುಖ್ಯಮಂತ್ರಿ ನವ ನಗರೋತ್ಥಾನ' ಎಂಬ ಹೆಸರಿನೊಂದಿಗೆ ಪುನ: ಆರಂಭಿಸುವುದಕ್ಕೂ ಒಪ್ಪಿಗೆ ನೀಡಲಾಗಿದೆ. ಸಂಪುಟ ಸಭೆ ಬಳಿಕ ಡಿಸಿಎಂ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹಾಗೂ ಸಂಸದೀಯ ವ್ಯವಹಾರ ಸಚಿವ ಜೆ.ಸಿ.ಮಾಧುಸ್ವಾಮಿ ಈ ವಿಷಯ ತಿಳಿಸಿದರು.

ಸುಮಾರು 68.5 ಕಿಮೀ ಉದ್ದ ಹಾಗೂ 100 ಮೀಟರ್ ಅಗಲದಲ್ಲಿ ಫೆರಿಪೆರಲ್ ರಿಂಗ್ ರೋಡ್ ನಿರ್ಮಾಣವಾಗಲಿದೆ. ಬಿಡಿಎ ಹಾಗೂ ಕೆಯುಐಡಿಎಫ್‌ಸಿ ಜೊತೆಗೆ ಯೋಜನೆ ಅನುಷ್ಠಾನಕ್ಕೆ ವಿಶೇಷ ವಾಹಕ ವ್ಯವಸ್ಥೆ ಸ್ಥಾಪಿಸಲಾಗುತ್ತದೆ. ಒಟ್ಟು ಮೂರು ವರ್ಷದ ಅವಧಿಯಲ್ಲಿ ಯೋಜನೆ ಮುಕ್ತಾಯಗೊಳಿಸಲು ನಿರ್ಧರಿಸಲಾಗಿದೆ. ಭೂ ಸ್ವಾಧೀನಕ್ಕೆ 8100 ಕೋಟಿ ರೂ. ರಸ್ತೆ ನಿರ್ಮಾಣಕ್ಕೆ 3850 ಕೋಟಿ ರೂ. ಸೇರಿ 11,956 ಕೋಟಿ ರೂ. ಈ ಮಹತ್ವದ ಯೋಜನೆಗೆ ವೆಚ್ಚವಾಗುತ್ತದೆ. ಭೂ ಸ್ವಾಧೀನಕ್ಕೆ ರಾಜ್ಯ ಸರ್ಕಾರ ಆರ್ಥಿಕ ನೆ

ನೀಡಲಿದ್ದು, ಜೈಕಾದಿಂದ 3850 ಕೋಟಿ ರೂ. ಸಾಲ ಪಡೆದು ರಸ್ತೆ ನಿರ್ಮಿಸಲಾಗುತ್ತದೆಂದು ಹಾಗೂ ನಗರ ಪ್ರದೇಶದಲ್ಲಿ ಈಗಾಗಲೇ ಟೆಂಡರ್ ಕರೆದು ಕಾರ್ಯಾದೇಶ ನೀಡಿದ ವೈಟ್ ಟ್ಯಾಪಿಂಗ್ ಯೋಜನೆ ಮುಂದುವರೆಯುತ್ತದೆ ಹೊಸ ಕಾಮಗಾರಿಗಳಿಗೆ ಇನ್ನು ಮುಂದೆ ಅನುಮತಿ ನೀಡುವುದಿಲ್ಲವೆಂದು ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ಆಧಾರ–ವಿಜಯಕರ್ನಾಟಕ, 19.09.2019

19. ಕೈಗಾರಿಕೆಗೆ ಹೊಸ ನೀತಿ, ಸ್ಥಳೀಯರಿಗೆ ಉದ್ಯೋಗ

ರಾಜ್ಯದಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ಆಕರ್ಷಿಸುವ ಜೊತೆಗೆ ಸ್ಥಳೀಯರಿಗೆ ಉದ್ಯೋಗಾವಕಾಶ ದೊರಕುವಂತೆ ಮಾಡಲು ಅಗತ್ಯ ನಿಯಮಾವಳಿಗಳನ್ನು ಒಳಗೊಂಡ ನೂತನ ಕೈಗಾರಿಕಾ ನೀತಿಯನ್ನು ಶೀಘ್ರ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದರು.

ರಾಜ್ಯದಲ್ಲಿ 2019–20ನೇ ಸಾಲಿನಲ್ಲಿ ಅನುಷ್ಠಾನಕ್ಕೆ ತರಲಿರುವ ನೂತನ ಕೈಗಾರಿಕಾ ನೀತಿಯಲ್ಲಿ ಉದ್ದಿಮೆಗಳು ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ನೀಡುವಂತೆ ಮಾಡಲು ಅಗತ್ಯ ನಿಯಮಾವಳಿ ರೂಪಿಸಲಾಗುವುದು. ಜೊತೆಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹೆಚ್ಚಿನ ರಿಯಾಯಿತಿ ನೀಡುವ ಮೂಲಕ ಪ್ರೋತ್ಸಾಹ ನೀಡಲಾಗುವುದು. ಈ ಸಮುದಾಯದವರಿಗೆ ನೀಡಲಾಗುವ ಫ್ಲಾಟ್, ಶೆಡ್ ಮತ್ತು ಇತರೆ ಮಳಿಗೆಗಳ ಮೀಸಲಾತಿಯನ್ನು ಶೇ.50 ರಿಂದ 75ಕ್ಕೆ ಹೆಚ್ಚಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಹೇಳಿದರು.

ಆಧಾರ–ವಿಜಯಕರ್ನಾಟಕ 20.09.2019

20. ಬಿ ಖಾತಾ ಆಸ್ತಿಗಳಿಗೆ ಎ ಖಾತೆ ಸೌಭಾಗ್ಯ

ರಾಜಧಾನಿಯಲ್ಲಿನ 'ಬಿ' ಖಾತಾ ಸ್ವತ್ತುಗಳಿಗೆ 'ಎ' ಖಾತಾ ನೀಡುವ ಸಂಬಂಧ ನಿಯಮಾವಳಿಗಳನ್ನು ರೂಪಿಸಲು ರಾಜ್ಯ ಸರ್ಕಾರವು ಸಮಿತಿಯೊಂದನ್ನು ರಚಿಸಿದ್ದು, ಶೀಘ್ರದಲ್ಲೇ ವರದಿ ನೀಡುವ ಸಾಧ್ಯತೆಗಳಿವೆ. ಇದರಿಂದ 'ಬಿ' ಖಾತಾ ಆಸ್ತಿ ಮಾಲೀಕರ ಹಲವು ವರ್ಷಗಳ ಕನಸು ನನಸಾಗುವ ಕಾಲ ಸನ್ನಿಹಿತವಾಗುತ್ತಿದೆ.

ಬಿಬಿಎಂಪಿಯು 'ಬಿ' ಖಾತಾ ಆಸ್ತಿಗಳಿಗೆ 'ಎ' ಖಾತೆ ನೀಡಲು ಮುಂದಾಗಿರುವುದರಿಂದ ಮನೆ ಕಟ್ಟಲು ಬ್ಯಾಂಕ್ ಸಾಲ, ನಕ್ಷೆ ಮಂಜೂರಾತಿ, ವಾಸಯೋಗ್ಯ ಪ್ರಮಾಣಪತ್ರ ಪಡೆಯಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದ ಲಕ್ಷಾಂತರ ಆಸ್ತಿ ಮಾಲೀಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಈ ಆಸ್ತಿಗಳ ಮಾಲೀಕರಿಂದ ಸುಧಾರಣಾ ಶುಲ್ಕ ಕಟ್ಟಿಸಿಕೊಂಡು 'ಬಿ' ಖಾತಾವನ್ನು 'ಎ' ಖಾತಾವನ್ನಾಗಿ ಪರಿವರ್ತಿಸಿದರೆ ಪಾಲಿಕೆಗೆ ಅಂದಾಜು 3–4 ಸಾವಿರ ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದೆ.

'ಬಿ' ಖಾತಾ ಹೊಂದಿರುವ ಆಸ್ತಿಗಳಿಂದ ಸುಧಾರಣಾ ಶುಲ್ಕ ಕಟ್ಟಿಸಿಕೊಂಡು, ಅವುಗಳಿಗೆ 'ಎ' ಖಾತೆ ನೀಡುವ ವಿಚಾರವು ಪಾಲಿಕೆಯ ಕೌನ್ಸಿಲ್ ಸಭೆಗಳಲ್ಲಿ ಹಲವು ಸಲ ಚರ್ಚೆಗೆ ಬಂದಿದೆ. 2018ರ ಆಗಸ್ಟ್‌ನಲ್ಲಿ ನಡೆದ ಸಭೆಯಲ್ಲಿ 'ಎ' ಖಾತೆ ನೀಡುವ ಸಂಬಂಧ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು. ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಅವರು 'ಕೆಎಂಸಿ ಕಾಯಿದೆ ಪ್ರಕಾರ ತೆರಿಗೆ ಸಂಗ್ರಹಕ್ಕಷ್ಟೇ ನಮೂನೆ 'ಎ' ಮತ್ತು ನಮೂನೆ 'ಬಿ' ನಲ್ಲಿ ನಿರ್ವಹಿಸಲಾಗುತ್ತಿದೆ. ಇವು ಚರಾಸ್ತಿ ದಾಖಲೆಗಳೇ ಹೊರತು, ಹಕ್ಕಿಗೆ ಸಂಬಂಧಪಟ್ಟ ದಾಖಲೆಗಳಲ್ಲ. ಹಾಗಾಗಿ, 'ಬಿ' ಖಾತಾಗಳಲ್ಲಿನ ಆಸ್ತಿಗಳಿಗೂ ಸುಧಾರಣಾ ವೆಚ್ಚ ಪಾವತಿಸಿಕೊಂಡು ಅವುಗಳನ್ನು 'ಎ' ನಮೂನೆಯಲ್ಲಿ ನೋಂದಣಿ ಮಾಡಿಸಬಹುದು ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಸರ್ಕಾರವು ಅಡ್ವೋಕೇಟ್ ಜನರಲ್ ಅವರ ಸಲಹೆ ಕೋರಿತ್ತು. ಇದಕ್ಕೆ ಅವರು ಪೂರಕ ಅಭಿಪ್ರಾಯ ನೀಡಿದ್ದರು.

ಪ್ರಸ್ತುತ ಕಾನೂನಿನಲ್ಲಿ 'ಬಿ' ಖಾತಾವನ್ನು 'ಎ' ಖಾತಾವನ್ನಾಗಿ ಪರಿವರ್ತಿಸಲು ಅವಕಾಶವಿಲ್ಲ. ಹೀಗಾಗಿ, ಸುಧಾರಣಾ ಶುಲ್ಕ ಕಟ್ಟಿಸಿಕೊಂಡು 'ಎ' ಖಾತೆಗೆ ನೀಡಲು ಶೀಘ್ರದಲ್ಲೇ ಸಮಿತಿಯ ಸಭೆ ನಡೆಸಿ, ನಿಯಮಾವಳಿಗಳನ್ನು ರೂಪಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಿ ಅನುಮೋದನೆ ಪಡೆಯಲಾಗುವುದೆಂದು ಆಯುಕ್ತರು ತಿಳಿಸಿದರು.

ಆಧಾರ–ವಿಜಯ ಕರ್ನಾಟಕ 11.08.2019

21. ನಿವೇಶನದ ಸಿ.ಡಿ ವರದಿ ಇನ್ನು ಆನ್‌ಲೈನ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ಕ್ಕೆ ಸೇರಿದ ನಿವೇಶನಗಳ ನೋಂದಣಿಗೆ ಮುನ್ನ ವಿತರಿಸಲಾಗುವ ಖಚಿತ ಅಳತೆ ವರದಿ (ಸಿ.ಡಿ ರಿಪೋರ್ಟ್)ಯನ್ನು ಇನ್ನು ಮುಂದೆ 'ಇ' ಕಚೇರಿ' ವ್ಯವಸ್ಥೆಯಡಿ ನೀಡಲಾಗುವುದು.

ಆಡಳಿತದಲ್ಲಿ ಪಾರದರ್ಶಕತೆ ಅಳವಡಿಸಿಕೊಂಡು ಸಾರ್ವಜನಿಕರಿಗೆ ಕಾಲಮಿತಿಯಲ್ಲಿ ಸಿ.ಡಿ. ವರದಿ ನೀಡಲು ಇಂಥದ್ದೊಂದು ಉಪಕ್ರಮವನ್ನು ಕೈಗೊಳ್ಳಲಾಗಿದೆ. ಈ ವ್ಯವಸ್ಥೆಯು ಅಧಿಕೃತವಾಗಿ ಜಾರಿಗೆ ಬರಲಿದೆ. ಪ್ರಾಧಿಕಾರದ ಆವರಣದಲ್ಲಿರುವ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಸೈಟ್ ನೋಂದಣಿಗೆ ಇ.ಸಿ.ಡಿ. ವರದಿಯನ್ನು 23ರ ಸೆಪ್ಟೆಂಬರ್ 2019ರಿಂದ ಸ್ವೀಕರಿಸಿ ಸಾರ್ವಜನಿಕರಿಗೆ ಬಿಡಿಎ ಸೈಟನ್ನು ನೋಂದಣಿ ಮಾಡಿಕೊಡಲಾಗುತ್ತದೆ.

ನಿವೇಶನಗಳ ವಿಚಾರದಲ್ಲಿ ಸಿ.ಡಿ. ವರದಿ ಪ್ರಮುಖ ದಾಖಲಾತಿ ಆಗಿದೆ. ಇದು ಸೈಟ್‌ನ ನಿಖರತೆ ಹಾಗೂ ಚೆಕ್ಕುಬಂಧಿ ಸಹಿತ ಆ ಸ್ಥಳದಲ್ಲಿನ ಹಾಲಿ ಅಂಶಗಳನ್ನು ನಿಖರವಾಗಿ ತಿಳಿಸುತ್ತದೆ. ಈ ಮಾಹಿತಿಯನ್ನು ಆಧರಿಸಿ ಪ್ರಾಧಿಕಾರವು ನಿವೇಶನವನ್ನು ಆಯಾ ಹಂಚಿಕೆದಾರರ ಹೆಸರಿಗೆ ನೋಂದಣಿ ಮಾಡಿಕೊಡುತ್ತದೆ.

ಹಾಲಿ ಕೈಯಿಂದಲೇ ವರದಿ ಬರೆದು ನೀಡುವ ಪದ್ಧತಿ ಜಾರಿಯಲ್ಲಿದೆ. ಇದರಿಂದ ವಿಳಂಬದ ಜೊತೆಗೆ ಹಂಚಿಕೆದಾರರ ಹೆಸರು, ವಿಳಾಸದಲ್ಲಿ ತಪ್ಪುಗಳು ನುಸುಳುತ್ತಿದ್ದವು. ಇದನ್ನು ಸರಿಪಡಿಸಲು ನಾಗರಿಕರು ಮತ್ತೆ ಬಿಡಿಎ ಕಚೇರಿಗೆ ಅಲೆದಾಟ ನಡೆಸಬೇಕಿತ್ತು. ಇಂಜಿನಿಯರ್‌ಗಳ ಮರ್ಜಿಯಲ್ಲಿ ಸಿ.ಡಿ. ವರದಿ ಸಿದ್ಧವಾಗುತ್ತಿದ್ದರಿಂದ ಭ್ರಷ್ಟಾಚಾರಕ್ಕೂ ಅವಕಾಶ ನೀಡಿತ್ತು. ಈ ಸಮಸ್ಯೆಗೆ ಅಂತ್ಯ ಹಾಡಲು ಸ್ವತ: ಸರ್ಕಾರ ಆನ್‌ಲೈನ್‌ನಲ್ಲೇ ಅರ್ಜಿ ಸ್ವೀಕರಿಸಿ ಸಿ.ಡಿ. ವರದಿ ಸೌಲಭ್ಯ ನೀಡಲು ಬಿಡಿಎಗೆ ಸೂಚಿಸಿತ್ತು. ಈ ಸೂಚನೆಯನ್ನು ಪ್ರಾಧಿಕಾರವು ಕಾರ್ಯರೂಪಕ್ಕೆ ತಂದಿರುತ್ತದೆ.

ಬಿಡಿಎ ಕಚೇರಿಗೆ ಆಗಮಿಸುವ ನಾಗರೀಕರ ಕುಂದು ಕೊರತೆ, ಅಹವಾಲು ಆಲಿಕೆಗೆ ಆದ್ಯತೆ ನೀಡಲಾಗುವುದು. ಎಲ್ಲಾ ವಿಭಾಗಗಳಲ್ಲಿ ನಾಗರಿಕರೊಂದಿಗೆ ಸೌಜನ್ಯದಿಂದ ವರ್ತಿಸಲು ಸಿಬ್ಬಂದಿಗೆ ಸೂಚಿಸಲಾಗುವುದು. ಕಡತ ವಿಲೇ ಮಾಡದೆ ನಾಗರಿಕರನ್ನು ಸತಾಯಿಸುವ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗುವುದು. ಕಡತ ಕಣ್ಮರೆ ಮಾಡಿರುವ ಹಾಗೂ ಒಂದೇ ಸೈಟ್‌ಗೆ ಎರಡು ಸಿ.ಡಿ. ವರದಿ ನೀಡಿರುವ ಎಂಜಿನಿಯರ್‌ಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಆಯುಕ್ತರು ತಿಳಿಸಿದರು.

ಆಧಾರ–ವಿಜಯಕರ್ನಾಟಕ, 21.09.2019

ಭಾಗ–5

ನೆಲ, ಜಲ, ಭಾಷೆ ಸುದ್ದಿಗಳು

1. ಶಾಶ್ವತ ನೀರಾವರಿ ಜಾರಿಗೆ ಶೀಘ್ರ, ರಾಜ್ಯಕ್ಕೆ ತಜ್ಞರ ತಂಡ

ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಗ್ರಾಮಾಂತರ ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಶೀಘ್ರದಲ್ಲಿ ತಜ್ಞರ ತಂಡವನ್ನು ರಾಜ್ಯಕ್ಕೆ ಕಳುಹಿಸಿ ಸಮೀಕ್ಷೆ ನಡೆಸುವುದಾಗಿ ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್ ಭರವಸೆ ನೀಡಿದ್ದಾರೆ.

ನವದೆಹಲಿಯಲ್ಲಿ ಸಚಿವರ ನಿವಾಸದಲ್ಲಿ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ, ಬಿಜೆಪಿ ಸಹವಕ್ತಾರ ಎ.ಹೆಚ್. ಆನಂದ್, ಬಿಜೆಪಿ ಯುವ ಮೋರ್ಚಾದ ಮುಖಂಡ ವೇಣುಗೋಪಾಲ್ ಸೇರಿದಂತೆ ಮತ್ತಿತರ ನಿಯೋಗ ಭೇಟಿಯಾಗಿ ಮನವಿ ಪತ್ರ ಸಲ್ಲಿಸಿ ನೀರಾವರಿ ಯೋಜನೆ ಅನುಷ್ಠಾನದಿಂದ ಈ ಭಾಗದ ಜನರಿಗೆ ಆಗುವ ಅನುಕೂಲಗಳು ಹಾಗೂ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ, ಅಂತರ್ಜಲ ಕುಸಿತ, ಬೆಳೆ ಹಾನಿ ಸೇರಿದಂತೆ ವಸ್ತುಸ್ಥಿತಿಯನ್ನು ವಿವರಿಸಿದರು.

ನಿಯೋಗದ ಮನವಿಯನ್ನು ಆಲಿಸಿದ ಸಚಿವ ಗಜೇಂದ್ರಸಿಂಗ್ ಶೇಖಾವತ್ ಯೋಜನೆಯನ್ನು ಅನುಷ್ಠಾನ ಮಾಡಲು ಅತೀ ಶೀಘ್ರದಲ್ಲಿ ತಜ್ಞರ ತಂಡವೊಂದನ್ನು ರಾಜ್ಯಕ್ಕೆ ಕಳುಹಿಸಿಕೊಡಲಾಗುವುದು. ಇದು ಗಂಭೀರವಾದ ವಿಷಯವಾಗಿರುವುದರಿಂದ ಪ್ರಧಾನಿಗಳ ಗಮನಕ್ಕೂ ತರುತ್ತೇನೆ. ಈ ಸಂಬಂಧ ರಾಜ್ಯ ಸರ್ಕಾರದ ಜೊತೆ ನಾನು ಮಾತುಕತೆ ನಡೆಸುತ್ತೇನೆ. ವೈಜ್ಞಾನಿಕವಾಗಿ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ತಜ್ಞರ ತಂಡ ನೀಡುವ ವರದಿಯ ಮೇಲೆ ತುರ್ತು ಕ್ರಮ ಕೈಗೊಳ್ಳುತ್ತೇನೆಂಬ ಭರವಸೆ ನೀಡಿದ್ದಾರೆ.

ಆಧಾರ–ಸಂಯುಕ್ತಕರ್ನಾಟಕ, 05.07.2019

2. ಉತ್ತರ ಕರ್ನಾಟಕ ಸಮಗ್ರ ನೀರಾವರಿ; ಕೇಂದ್ರ ಸಚಿವರಿಗೆ ಮನವರಿಕೆ

ಉತ್ತರ ಕರ್ನಾಟಕ ಸಮಗ್ರ ನೀರಾವರಿ ಸೌಲಭ್ಯ ಕುರಿತು ಯೋಜನೆ, ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ಎಂಆರ್ಎನ್ (ನಿರಾಣಿ) ಫೌಂಡೇಶನ್ ಸಂಗಮೇಶ್ ನಿರಾಣಿ ನೇತೃತ್ವದ ವಿವಿಧ ಮಠಾಧೀಶರು ಹಾಗೂ ಜನಪ್ರತಿನಿಧಿಗಳನ್ನೊಳಗೊಂಡ ರಾಜ್ಯದ ನಿಯೋಗ, ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಹಾಗೂ ಕೃಷಿ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಕೇಂದ್ರ ಜಲಶಕ್ತಿ ಇಲಾಖೆ ಸಚಿವ ಗಜೇಂದ್ರಸಿಂಗ್ ಶೇಖಾವತ್, ಕೇಂದ್ರ ಕೃಷಿ ಸಚಿವ ಪುರಷೋತ್ತಮ ರೂಪಾಲ ಅವರನ್ನು ಭೇಟಿ ಮಾಡಿದ ನಿಯೋಗ, ಉತ್ತರ ಕರ್ನಾಟಕದಲ್ಲಿ ನೀರಿನ ಬವಣೆ ನೀಗಿಸುವ ನಿಟ್ಟಿನಲ್ಲಿ ರೂಪಿಸಲಾದ ಕಾಳಿ ನದಿಯಿಂದ ಮಲಪ್ರಭಾ–ಘಟಪ್ರಭಾ ನದಿಗಳಿಗೆ ನೀರು ತರುವ ಅಮೃತಧಾರೆ ಯೋಜನೆ ಹಾಗೂ ಕೃಷ್ಣಾ ನದಿ ನೀರನ್ನು ಹಿಡಕಲ್ಲ ಹಾಗೂ ನವಿಲುತೀರ್ಥ ಜಲಾಶಯಗಳಿಗೆ ಸೇರಿಸುವ ಬಸವಧಾರೆ ಯೋಜನೆ ಕುರಿತು ಸಮಗ್ರ ಮಾಹಿತಿ ನೀಡಲಾಯಿತು.

ಉತ್ತರ ಕರ್ನಾಟಕ ಸಮಗ್ರ ನೀರಾವರಿ ಚಿಂತನೆ ರೂವಾರಿ ಸಂಗಮೇಶ ನಿರಾಣಿ ಹಾಗೂ ನೀರಾವರಿ ತಜ್ಞ ರಂಗನಾಥ ಅವರು ಉತ್ತರ ಕರ್ನಾಟಕದಲ್ಲಿ ನೀರಿನ ಕೊರತೆ, ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ನೀರಿನ ಬಳಕೆ, ಲಭ್ಯವಿರುವ ನೀರಿನ ಪ್ರಮಾಣ ಇನ್ನಿತರ ವಿಷಯಗಳನ್ನು ಸವಿಸ್ತಾರವಾಗಿ ಸಚಿವರಿಗೆ ವಿವರಿಸಿದರು.

ನಿಯೋಗದ ಮಾಹಿತಿಯಿಂದ ಪ್ರೇರಿತರಾದ ಜಲಶಕ್ತಿ ಸಚಿವರು ಕೇಂದ್ರ ಜಲಮಂಡಳಿ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ ಹಾಗೂ ಹಿರಿಯ ಅಧಿಕಾರಿಗಳನ್ನು ಕಛೇರಿಗೆ ಕರೆಸಿಕೊಂಡು ಚರ್ಚಿಸಿದರಲ್ಲದೆ, ಯೋಜನೆ ಕುರಿತು ಸಂಪೂರ್ಣ ಅಧ್ಯಯನ ನಡೆಸಿ ವರದಿ ನೀಡುವಂತೆ ಸೂಚಿಸಿದರು.

ಯೋಜನೆ ಮಾರ್ಗದರ್ಶಕ ಹಾಗೂ ಶಾಸಕ ಮುರುಗೇಶ ನಿರಾಣಿ ಮಾತನಾಡಿ, ಉತ್ತರ ಕರ್ನಾಟಕ ಸಮಗ್ರ ನೀರಾವರಿ ಸ್ಥಿತಿ ಕುರಿತು ಕೇಂದ್ರ ಸಚಿವರಿಗೆ ಮನವರಿಕೆ ಮಾಡಲಾಗಿದೆ. ಸಮಗ್ರ ನೀರಾವರಿ ಯೋಜನೆಗೆ ಅಗತ್ಯ ಸೌಲಭ್ಯ–ಸಹಕಾರ ನೀಡುವ ಕುರಿತು ಕೇಂದ್ರ ಸರ್ಕಾರದಿಂದ ಸಕಾರಾತ್ಮಕ ಭರವಸೆ ದೊರೆತಿದೆ ಎಂದು ತಿಳಿಸಿದ್ದಾರೆ.

ಆಧಾರ–ಉದಯವಾಣಿ, 05.07.2019

3. ಕನ್ನಡ ಸೇರಿ 13 ಭಾಷೆಗಳಲ್ಲಿ ಬ್ಯಾಂಕಿಂಗ್ ಪರೀಕ್ಷೆ ನಡೆಸಲು ನಿರ್ಧಾರ ರಾಜ್ಯದ ಬಹುದಿನ ಬೇಡಿಕೆ, ಸಂಸದರ ಒತ್ತಡಕ್ಕೆ ಮಣಿದ ಕೇಂದ್ರ

ಬ್ಯಾಂಕಿಂಗ್ ಪರೀಕ್ಷೆ ತೆಗೆದುಕೊಳ್ಳುವವರಿಗೊಂದು ಸಿಹಿ ಸುದ್ದಿ ಕನ್ನಡದಲ್ಲೇ ಬ್ಯಾಂಕುಗಳ ಸಿಬ್ಬಂದಿ ನೇಮಕಾತಿ ಪರೀಕ್ಷೆ ಬರೆಯಬಹುದು. ಕರ್ನಾಟಕ ಸರ್ಕಾರದ ಬಹುದಿನಗಳ ಬೇಡಿಕೆಗೆ ಕೇಂದ್ರ ಸರ್ಕಾರ ಕಡೆಗೂ ಒಪ್ಪಿಗೆ ನೀಡಿದೆ.

ಈವರೆಗೆ ಕೇವಲ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ನಡೆಸಲಾಗುತ್ತಿದ್ದ ಬ್ಯಾಂಕುಗಳ ಸಿಬ್ಬಂದಿ ನೇಮಕಾತಿ ಪರೀಕ್ಷೆಗಳನ್ನು ಇನ್ನು ಮುಂದೆ, ಕನ್ನಡ ಸೇರಿದಂತೆ 13 ಪ್ರಾಂತೀಯ ಭಾಷೆಗಳಲ್ಲಿ ನಡೆಸುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಘೋಷಿಸಿದರು.

ವಿವಿಧ ರಾಜ್ಯಗಳಲ್ಲಿನ ಪ್ರಾಂತೀಯ ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿನ (ಆರ್ಆರ್ಬಿ) ಅಧಿಕಾರಿಗಳು(ಶ್ರೇಣಿ–1) ಹಾಗೂ ಕಛೇರಿಯ ಸಹಾಯಕ ಸಿಬ್ಬಂದಿಯ ನೇರ ನೇಮಕಾತಿ ಪರೀಕ್ಷೆಗಳನ್ನು ಆಯಾ ಪ್ರಾದೇಶಿಕ ಭಾಷೆಗಳಲ್ಲಿ ನಡೆಸಬೇಕು ಎಂಬುದು ಕರ್ನಾಟಕವು ಸೇರಿದಂತೆ ಹಲವಾರು ರಾಜ್ಯ ಸರ್ಕಾರಗಳ ಬೇಡಿಕೆಯಾಗಿತ್ತು.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಂಸದರಾದ ತೇಜಸ್ವಿ ಸೂರ್ಯ ಮತ್ತು ಚಂದ್ರಶೇಖರ್, ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ್ದರು. ಇದೇ ವಿಚಾರವಾಗಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸ್ವಯಂ ಪ್ರೇರಿತವಾಗಿ ಉತ್ತರಿಸಿದ ಸಚಿವರು, ಪ್ರಾಂತೀಯ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುವ ಗ್ರಾಮೀಣಾ ಅಭ್ಯರ್ಥಿಗಳಿಗೆ ಪ್ರಾದೇಶಿಕ ಬ್ಯಾಂಕುಗಳಲ್ಲಿ ಉದ್ಯೋಗ ಸಂಪಾದಿಸುವ ಅವಕಾಶಗಳನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು.

ವಿತ್ತ ಸಚಿವರ ಘೋಷಣೆಯನ್ನು ಸ್ವಾಗತಿಸಿದ ರಾಜ್ಯಸಭೆ ಸಂಸದ ಎಲ್.ಹನುಮಂತಯ್ಯ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯುವ ಅವಕಾಶ, ರಾಷ್ಟ್ರೀಯ ಬ್ಯಾಂಕುಗಳ ಸಿಬ್ಬಂದಿ ನೇಮಕಾತಿಗೂ ಅನ್ವಯವಾಗುವಂತಾಗಲಿ ಎಂದು ಆಶಿಸಿದರು. ರಾಜ್ಯಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಕೂಡ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅನುವು ಮಾಡಿಕೊಟ್ಟ ನಿರ್ಮಲಾ ಸೀತಾರಾಮನ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

"ಎಲ್ಲರ ಪ್ರಯತ್ನಕ್ಕೆ ಫಲಶ್ರುತಿ ದೊರಕಿದ್ದು ಕನ್ನಡ ಭಾಷೆಗೆ ಜಯ ಸಿಕ್ಕಿದೆ. ಇದಕ್ಕಾಗಿ ನಾಡಿನ ಸಮಸ್ತ ಜನರ ಪರವಾಗಿ ಪ್ರಧಾನಿ ಹಾಗೂ ಕೇಂದ್ರ ಹಣಕಾಸು ಸಚಿವರಿಗೆ ಅಭಿನಂದನೆ ಸಲ್ಲಿಸಲಾಗುವುದು." ಎಂದು ಡಿ.ವಿ.ಸದಾನಂದಗೌಡ, ಕೇಂದ್ರ ಸಚಿವರು ಹೇಳಿದ್ದಾರೆ.

ಆಧಾರ–ಉದಯವಾಣಿ, 05.07.2019

4. ಮೇಕೆದಾಟು: ತಮಿಳು ನಾಡು ಆಕ್ಷೇಪ

ಮೇಕೆದಾಟು ಅಣೆಕಟ್ಟು ನಿರ್ಮಾಣ ಕುರಿತಂತೆ ಚರ್ಚೆಗೆ ಕೇಂದ್ರ ಸರ್ಕಾರದ ಪರಿಣಿತರ ಸಮಿತಿಯು ನಿರ್ಧರಿಸಿರುವುದಕ್ಕೆ ತಮಿಳುನಾಡು ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ. ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯದ ಅಡಿಯಲ್ಲಿನ ಪರಿಣಿತರ ಸಮಿತಿಯು ಸಭೆ ನಡೆಸಲು ನಿರ್ಧರಿಸಿದ್ದು, ಇದರಲ್ಲಿ ಮೇಕೆದಾಟು ಯೋಜನೆ ವಿಚಾರವನ್ನು ಚರ್ಚಿಸಲು ನಿರ್ಧರಿಸಿರುವುದಕ್ಕೆ ತಮಿಳುನಾಡು ಆಕ್ಷೇಪಿಸಿದೆ. ಈ ಸಂಬಂಧ ಕೇಂದ್ರ ಪರಿಸರ ಸಚಿವ ಶ್ರೀ ಪ್ರಕಾಶ್ ಜಾವಡೇಕರ್ ಮತ್ತು ಜಲ ಶಕ್ತಿ ಸಚಿವ ಶ್ರೀ ಗಜೇಂದ್ರ ಸಿಂಗ್ ಶೇಖಾವತ್‌ರವರಿಗೆ ಮುಖ್ಯಮಂತ್ರಿಗಳಾದ ಶ್ರೀ ಕೆ. ಪಳನಿಸ್ವಾಮಿ ಪತ್ರ ಬರೆದಿದ್ದಾರೆ. ಈ ಹಿಂದೆ ಬರೆದ ಪತ್ರದಲ್ಲೂ ಈ ವಿಚಾರ ಕುರಿತು ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಗೆ ಮನವಿ ಮಾಡಿದ್ದು, ಈ ವಿಚಾರದಲ್ಲಿ ಪ್ರಧಾನಿ ಮಧ್ಯೆ ಪ್ರವೇಶಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ಕರ್ನಾಟಕ ಯೋಜನೆ ಕೈಗೊಳ್ಳಲು ಪರಿಸರ ಸಚಿವಾಲಯ ಅನುಮತಿ ನೀಡಬಾರದು. ಈ ಯೋಜನೆಯು ಕಾವೇರಿ ಜಲ ನ್ಯಾಯಮಂಡಳಿಯ ಅಂತಿಮ ತೀರ್ಪನ್ನು ಉಲ್ಲಂಘನೆ ಮಾಡುತ್ತದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ನೀರಿನ ಸಮಸ್ಯೆಯಾಗುತ್ತದೆ. ಸಾಕಷ್ಟು ಪ್ರಮಾಣದ ನೀರನ್ನು ತಮಿಳುನಾಡು ಪಡೆಯಲು ಇದರಿಂದ ತೊಂದರೆಯಾಗುತ್ತದೆಂದು ತಮಿಳುನಾಡು ಮುಖ್ಯಮಂತ್ರಿ ಶ್ರೀ ಪಳನಿಸ್ವಾಮಿ ಹೇಳಿದರು.

ಆಧಾರ–ಉದಯವಾಣಿ, 11.07.2019

5. ಮಹದಾಯಿ ನದಿ ನೀರು ಹಂಚಿಕೆ ಸಂಬಂಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಸಜ್ಜಾದ ಗೋವಾ ಸರ್ಕಾರ

ಕಳೆದ ಕೆಲ ವರ್ಷಗಳಿಂದ ಗೋವಾದಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆ ಸಮಸ್ಯೆ ಪರಿಹಾರಕ್ಕೆ ಮುಖ್ಯಮಂತ್ರಿ ಶ್ರೀ ಪ್ರಮೋದ್ ಸಾವಂತ್ ನೇತೃತ್ವದ ಸರ್ಕಾರ ಹಲವು ಯೋಜನೆ ಹಮ್ಮಿಕೊಂಡ ಹಿನ್ನೆಲೆಯಲ್ಲಿ ಮಹದಾಯಿ ನದಿ ನೀರನ್ನು ಕೂಡ ಶೇಕಡಾವಾರು ಪ್ರಮಾಣದಲ್ಲಿ ಕುಡಿಯುವ ನೀರಿಗೆ ಬಳಸಿಕೊಳ್ಳಲು ಯೋಜನೆ ರೂಪಿಸಿದ ಕಾರಣದಿಂದ ಇದೀಗ ಮತ್ತೆ ಮಹದಾಯಿ ನದಿ ನೀರು ಹಂಚಿಕೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಮಹದಾಯಿ ನದಿ ನೀರನ್ನು ತಿರುಗಿಸಲು ಅನುಮತಿ ನೀಡಿರುವ ಮಹದಾಯಿ ನ್ಯಾಯಾಧೀಕರಣ ತೀರ್ಪನ್ನು ಪ್ರಶ್ನಿಸಿ ಗೋವಾ ಸರ್ಕಾರ ಸುಪ್ರೀಂಕೋರ್ಟ್‌ಗೆ ವಿಶೇಷ ಅರ್ಜಿ ಸಲ್ಲಿಸಲಿದೆ ಎಂದು ಗೋವಾ ಮುಖ್ಯಮಂತ್ರಿ ಶ್ರೀ ಪ್ರಮೋದ್ ಸಾವಂತ್ ಗೋವಾ ವಿಧಾನ ಸಭೆಯಲ್ಲಿ ಮಾಹಿತಿ ನೀಡಿದರು.

ಮಹದಾಯಿ ನದಿ ನೀರನ್ನು ಮಲಪ್ರಭಾ ಜಲಾನಯನ ಪ್ರದೇಶಕ್ಕೆ ತಿರುಗಿಸುವುದರ ವಿರುದ್ಧ ತಡೆಯಾಜ್ಞೆಗಾಗಿ ಕರ್ನಾಟಕದ ವಿರುದ್ಧ ಈಗಾಗಲೇ ನ್ಯಾಯಮಂಡಳಿ ಮುಂದೆ ಅಸಹಕಾರ ಅರ್ಜಿ ಸಲ್ಲಿಸಿದೆ. ಕರ್ನಾಟಕದಿಂದ ನ್ಯಾಯಮಂಡಳಿ ತೀರ್ಪು ಉಲ್ಲಂಘನೆ ವಿರುದ್ಧ ಸುಪ್ರಿಂಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ನ್ಯಾಯಮಂಡಳಿ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಎಲ್‌ಎಲ್‌ಪಿ ದಾಖಲಿಸಲಾಗುವುದು ಎಂದರು.

ಆಧಾರ–ಉದಯವಾಣಿ, 18.07.2019

6. ಎತ್ತಿನಹೊಳೆ ನೀರು ಶೀಘ್ರವೇ ಲಭ್ಯ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರು ಒದಗಿಸುವ ಎತ್ತಿನಹೊಳೆ ಯೋಜನೆಯಡಿ ಭೂಸ್ವಾಧೀನ ಕಾಯ್ದೆಗೆ ಮಾಡಲಾಗಿರುವ ತಿದ್ದುಪಡಿಗೆ ರಾಜ್ಯಪಾಲರ ಅಂಗೀಕಾರ ದೊರೆತ ನಂತರ ರಾಷ್ಟ್ರಪತಿಗಳ ಅಂಕಿತವು ದೊರೆತಿದೆ. ಎರಡೂ ಜಿಲ್ಲೆಯ ಸಾರ್ವಜನಿಕರಿಗೆ ಎತ್ತಿನಹೊಳೆಯ ನೀರು

ಅತೀ ಶೀಘ್ರದಲ್ಲಿ ಲಭಿಸುವ ಅವಕಾಶ ಹೆಚ್ಚಾಗಿದೆಯೆಂದು ವಿಧಾನ ಸಭಾಧ್ಯಕ್ಷ ರಮೇಶ್‌ಕುಮಾರ್ ಅವರು ತಿಳಿಸಿದ್ದಾರೆ.

ಎತ್ತಿನಹೊಳೆ ಯೋಜನೆಯು ಕುಡಿಯುವ ನೀರಿನ ಯೋಜನೆ ಆಗಿರುವ ಕಾರಣ ಭೂಸ್ವಾಧೀನ ಕಾಯ್ದೆ ಕಲಂ 23 ಮತ್ತು 24ನ್ನು ತಿದ್ದುಪಡಿ ಮಾಡಿ ಜಿಲ್ಲಾಧಿಕಾರಿಗಳು, ಭೂ ಒಡೆಯರು ಮತ್ತು ಸರ್ಕಾರದ ಮಧ್ಯೆ ನೇರ ಮಾತುಕತೆ ನಡೆಸಿ, ಸಮಾಧಾನಕರವಾಗಿರುವ ಬೆಲೆಯನ್ನು ನಿಗದಿಪಡಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ರಾಜ್ಯ ವಿಧಾನ ಸಭೆ, ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ತಂದು ಮಸೂದೆಯನ್ನು ಅಂಗೀಕರಿಸಿತು. ಇದು ರಾಜ್ಯಪಾಲರಿಂದ ಅಂಕಿತವಾಗಿ ರಾಷ್ಟ್ರಪತಿಗಳ ಒಪ್ಪಿಗೆಗೆ ಕಳುಹಿಸಲಾಗಿದ್ದು, ರಾಷ್ಟ್ರಪತಿಗಳಿಂದಲೂ ಅಂಗೀಕಾರ ಪಡೆದು, ಕರ್ನಾಟಕದ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಆಧಾರ–ಉದಯವಾಣಿ, 26.07.2019

7. ದೇಶಕ್ಕೊಂದೇ ಜಲ ನ್ಯಾಯಮಂಡಳಿ

ಅಂತರರಾಜ್ಯ ಜಲವಿವಾದಗಳನ್ನು ಕಾಲಮಿತಿಯಲ್ಲಿ ಬಗೆಹರಿಸಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಪ್ರಸ್ತುತ ದೇಶದಲ್ಲಿ ವಿವಿಧ ನದಿ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಎಲ್ಲ ನ್ಯಾಯಮಂಡಳಿಗಳನ್ನು ಒಗ್ಗೂಡಿಸಿ ದೇಶಕ್ಕೊಂದೇ ಜಲ ನ್ಯಾಯ ಮಂಡಳಿಯನ್ನು ರಚಿಸುವ ಕುರಿತ ವಿಧೇಯಕವನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ.

ಮಸೂದೆ ಬಗ್ಗೆ ಸಂಸತ್‌ನಲ್ಲಿ ಮಾತನಾಡಿದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್, 2013ರಲ್ಲಿಯೇ ರಾಜ್ಯಗಳ ಸಲಹೆ ಪಡೆದು 2017ರಲ್ಲಿಯೇ ವಿಧೇಯಕ ಮಂಡಿಸಲಾಗಿತ್ತು. ಇದನ್ನು ಸ್ಥಾಯಿ ಸಮಿತಿ ಪರಿಶೀಲನೆಗೆ ಶಿಫಾರಸ್ಸು ಮಾಡಲಾಗಿತ್ತಾದರೂ ಬಳಿಕ ರಚನೆಯಾದ ಕರಡು ಕಾನೂನು ರದ್ದುಗೊಂಡಿತ್ತು. ಅಷ್ಟರಲ್ಲಿ 16ನೇ ಲೋಕಸಭೆ ಅವಧಿ ಮುಗಿದಿತ್ತು.

ನಿವೃತ್ತ ನ್ಯಾಯಮೂರ್ತಿಯೊಬ್ಬರ ಅಧ್ಯಕ್ಷತೆಯಲ್ಲಿ ಏಕ ನ್ಯಾಯಮಂಡಳಿ ರಚನೆಯಾಗಲಿದೆ. 2 ವರ್ಷಗಳಲ್ಲಿ ವಿಚಾರಣೆ ನಡೆಸಿ ತೀರ್ಪು ನೀಡಬೇಕಾಗುತ್ತದೆ. 1956ರ ಜಲಕಾಯ್ದೆಗೆ ತಿದ್ದುಪಡಿ ತಂದು ಅಂತರರಾಜ್ಯ ನದಿನೀರು ವ್ಯಾಜ್ಯಗಳು–2019 ಎಂಬ ಮಸೂದೆ ರೂಪಿತವಾಗಲಿದ್ದು, ಮಂಡನೆ ವೇಳೆ ಧ್ವನಿಮತದಿಂದ ಅಂಗೀಕರಿಸಲಾಗಿದೆ. ಇದೀಗ ಕಾವೇರಿ, ಕೃಷ್ಣಾ, ಮಹಾನದಿ, ರವಿ, ಬಿಯಾಸ್ ಮತ್ತು ಮಹದಾಯಿಗೆ ಪ್ರತ್ಯೇಕ ನ್ಯಾಯಮಂಡಳಿಗಳಿವೆ.

ಆಧಾರ–ಸಂಯುಕ್ತಕರ್ನಾಟಕ, 26.07.2019

8. ಜಲಯೋಜನೆ ಬಗ್ಗೆ ಪ್ರಧಾನಿಗೆ ಬಿಎಸ್‌ವೈ ಮನವಿ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ಮಹದಾಯಿ, ಕೃಷ್ಣಾ ಸೇರಿ ರಾಜ್ಯದ ಮೂರು ಮುಖ್ಯ ಜಲ ವಿವಾದಗಳ ವಿಚಾರದಲ್ಲಿ ನೆರವು ನೀಡುವಂತೆ ಮನವಿ ಮಾಡಿದ್ದಾರೆ. ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆ–3ನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸುವಂತೆ ಆಗ್ರಹಿಸಿದರು.

ಕೃಷ್ಣಾ ಜಲ ನ್ಯಾಯಾಧೀಕರಣ–2 ಐತೀರ್ಪು, ಮಹದಾಯಿ ನದಿ ನ್ಯಾಯಾಧೀಕರಣದ ಅಂತಿಮ ಐತೀರ್ಪಿನ ಗೆಜೆಟ್ ಅಧಿಸೂಚನೆ ಹೊರಡಿಸಬೇಕು, ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರು ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್)ಗೆ ಅನುಮತಿ ನೀಡಬೇಕು ಎಂದು ಪ್ರಧಾನಿ ಅವರ ಮುಂದೆ ಮನವಿ ಮಾಡಿಕೊಂಡಿದ್ದಾರೆ.

ಕೃಷ್ಣಾ ನ್ಯಾಯಾಧೀಕರಣವು ತನ್ನ ಅಂತಿಮ ತೀರ್ಪನ್ನು 2010ರಲ್ಲಿ ಮತ್ತು ಸ್ಪಷ್ಟೀಕರಣ ತೀರ್ಪನ್ನು 2013ರಲ್ಲಿ ನೀಡಿದೆ. ಈ ತೀರ್ಪುಗಳಲ್ಲಿ ಕೃಷ್ಣಾ ಕೊಳ್ಳದಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಪರಿಗಣಿಸಿಕೊಳ್ಳದ ರಾಜ್ಯಗಳಿಗೆ ಹೆಚ್ಚಿನ ನೀರು ಹಂಚಲಾಗಿದೆ. ಆದರೆ, ಐತೀರ್ಪಿನ ಅಧಿಸೂಚನೆ ಹೊರಬೀಳದ ಹಿನ್ನೆಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ-3ರಡಿ ನೀರಾವರಿ ಯೋಜನೆ ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಸಂಬಂಧ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕು ಎಂದು ಮಹಾರಾಷ್ಟ್ರ ಮತ್ತು ಕರ್ನಾಟಕ ಸುಪ್ರೀಂಕೋರ್ಟ್ ಮುಂದೆ ಸಲ್ಲಿಸಿರುವ ಅರ್ಜಿಯನ್ನು ಬೆಂಬಲಿಸಬೇಕು ಎಂದು ಕೋರಿದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆ-3ಕ್ಕೆ ನ್ಯಾಯಾಧೀಕರಣವು 130 ಟಿಎಂಸಿ ನೀರು ಹಂಚಿದ್ದು, 2014-15ರ ಸಾಲಿನ ಲೆಕ್ಕದಲ್ಲಿ ರೂ.51,148 ಕೋಟಿಯನ್ನು ಯೋಜನೆಗೆ ನಿಗದಿಪಡಿಸಲಾಗಿದೆ. ಆದರೆ ಈಗ ಯೋಜನಾ ವೆಚ್ಚ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದು ರಾಜ್ಯ ಸರ್ಕಾರ ಈಗಾಗಲೇ 9,000 ಕೋಟಿಗಳನ್ನು ವಿನಿಯೋಗಿಸಿದೆ. ಆದ್ದರಿಂದ ಈ ಯೋಜನೆಯನ್ನು "ರಾಷ್ಟ್ರೀಯ ಯೋಜನೆ" ಎಂದು ಘೋಷಿಸಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಕೋರಿದ್ದಾರೆ.

ಆಧಾರ-ಕನ್ನಡ ಪ್ರಭ, 07.08.2019

9. ಮೇಕೆದಾಟು: ಆದೇಶ ವಿರುದ್ಧ ಹೋರಾಟ

ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಅಣೆಕಟ್ಟು ಯೋಜನೆ ಬಗ್ಗೆ ಮರುಪರಿಶೀಲಿಸಲು ಕೇಂದ್ರ ಸರ್ಕಾರವು ರಾಜ್ಯಕ್ಕೆ ಸೂಚನೆ ನೀಡುವುದರ ಹಿಂದೆ ರಾಜಕೀಯ ದುರುದ್ದೇಶವಿದೆ. ಈ ಆದೇಶದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಶಾಸಕ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಯೋಜನೆಗೆ ಈಗಾಗಲೇ ಸುಪ್ರೀಂಕೋರ್ಟ್ ಅನುಮತಿ ನೀಡಿದ್ದು, ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಲ್ಲಿಸಲು ಸೂಚಿಸಿದೆ. ಕೋರ್ಟ್ ಸೂಚನೆಯಂತೆ, ಡಿಪಿಆರ್ ಸಲ್ಲಿಸಲಾಗಿದ್ದು, ಯೋಜನೆ ಅನುಷ್ಠಾನ ಹಂತದಲ್ಲಿರುವಾಗ ಮರುಪರಿಶೀಲನೆಗೆ ಸೂಚಿಸಿರುವುದು ಸೂಕ್ತ ಕ್ರಮವಲ್ಲ ಎಂದಿದ್ದಾರೆ.

ಯೋಜನೆ ರದ್ದುಪಡಿಸಲು, ಸ್ಥಳಾಂತರ ಮಾಡಲು ಬಿಡುವುದಿಲ್ಲ. ಸಂಸದರು ಹೋರಾಟಕ್ಕೆ ಅಣಿಯಾಗಬೇಕು, ರಾಜ್ಯ ಪ್ರತಿನಿಧಿಸುವ ಕೇಂದ್ರ ಸಚಿವರು ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಆಗ್ರಹಿಸಿದ್ದಾರೆ.

ಆಧಾರ-ಪ್ರಜಾವಾಣಿ, 09.08.2019

10. ಟಿ.ಜಿ. ಹಳ್ಳಿ ಡ್ಯಾಂನಲ್ಲಿ ಹೂಳೆತ್ತಲು ಸಿದ್ಧತೆ

ನಗರಕ್ಕೆ ಹೆಚ್ಚುವರಿಯಾಗಿ ಕುಡಿಯುವ ನೀರು ಪೂರೈಸುವಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ 13 ಲಕ್ಷ ಘನ ಮೀಟರ್ ಹೂಳೆತ್ತುವ ಕಾಮಗಾರಿ ಮುಂದಿನ ತಿಂಗಳು ಆರಂಭವಾಗಲಿದೆ.

ತಿಪ್ಪಗೊಂಡನಹಳ್ಳಿ ಜಲಾಶಯ ಪುನಶ್ಚೇತನಗೊಳಿಸುವ 285.95 ಕೋಟಿ ರೂ. ವೆಚ್ಚದ ಯೋಜನೆಗೆ ಮಾರ್ಚ್‌ನಲ್ಲಿ ಚಾಲನೆ ನೀಡಲಾಗಿತ್ತು. ಮೊದಲ ಹಂತದಲ್ಲಿ 20 ದಶ ಲಕ್ಷ ಲೀಟರ್ ಸಾಮರ್ಥ್ಯದ ಎಸ್‌ಟಿಪಿ ನಿರ್ಮಾಣ, ಕೊಳಚೆ ನೀರು ಪಂಪಿಂಗ್ ಕೇಂದ್ರ, ಹಳೇ ಮೂರು ಎಸ್‌ಟಿಪಿಗಳ ನವೀಕರಣ ಕಾಮಗಾರಿ ನಡೆಯಲಿದೆ. ಜೊತೆಗೆ ಪ್ರಮುಖವಾಗಿ ಹೂಳು ತೆಗೆಯುವ ಕಾಮಗಾರಿ ನಡೆಯಲಿದೆ. ಎತ್ತಿನಹೊಳೆ ಯೋಜನೆಯಿಂದ ದೊರೆಯಲಿರುವ 0.8 ಟಿಎಂಸಿ ನೀರನ್ನು ತಿಪ್ಪಗೊಂಡನಹಳ್ಳಿಗೆ ಹರಿಸಿ ಅಲ್ಲಿಂದ ನಗರಕ್ಕೆ ಸರಬರಾಜು ಮಾಡಲಾಗುತ್ತದೆ.

18 ತಿಂಗಳವರೆಗೆ ನಡೆಯಲಿರುವ ಕಾಮಗಾರಿ ವೇಳೆ 13 ಲಕ್ಷ ಘನಮೀಟರ್ ಹೂಳು ತೆಗೆಯುವ ಗುರಿ ಇರಿಸಿಕೊಳ್ಳಲಾಗಿದೆ. ಕಾಮಗಾರಿ ಬಳಿಕ ಜಲಾಶಯದಲ್ಲಿ ನೀರು ಹಿಡಿಯುವ ಸಾಮರ್ಥ್ಯವು ಶೇ.30ರಷ್ಟು ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದೆ ಎಂದು ಜಲಮಂಡಳಿಯ ಕಾವೇರಿ ವಿಭಾಗದ ಹೆಚ್ಚುವರಿ ಮುಖ್ಯ ಎಂಜಿನಿಯರ್ ಕೆ.ಎನ್. ರಾಜೀವ್ ತಿಳಿಸಿದ್ದಾರೆ.

ಆಧಾರ–ವಿಜಯ ಕರ್ನಾಟಕ, 16.08.2019

11. ಮಹದಾಯಿ, ಕೃಷ್ಣಾ : ಗೆಜೆಟ್ ಅಧಿಸೂಚನೆಗೆ ಕೇಂದ್ರಕ್ಕೆ ಮನವಿ ಮಾಡಲು ತೀರ್ಮಾನ

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್(ಹಿಂದಿನ) ಅವರನ್ನು ಮುಂಬೈನಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಹದಾಯಿ ಹಾಗೂ ಕೃಷ್ಣಾ ನ್ಯಾಯಾಧೀಕರಣದ ತೀರ್ಪಿನ ಗೆಜೆಟ್ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರಕ್ಕೆ ಜಂಟಿ ಮನವಿ ಮಾಡಲು ತೀರ್ಮಾನಿಸಿದ್ದಾರೆ.

ಬಿ.ಎಸ್.ಯಡಿಯೂರಪ್ಪರವರು ದೇವೇಂದ್ರ ಫಡ್ನವೀಸ್‌ರವರ ಭೇಟಿ ಸಮಯದಲ್ಲಿ ಬಹಳಷ್ಟು ವಿಚಾರಗಳನ್ನು ಚರ್ಚಿಸಿದರು. ಅದರಲ್ಲಿ ಪ್ರವಾಹ ವಿಕೋಪವೂ ಒಂದು. ಯಡಿಯೂರಪ್ಪ ಅವರ ಜೊತೆಗೆ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಮತ್ತು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು ಜೊತೆ ಇದ್ದರು. ಈ ಭೇಟಿಯ ವೇಳೆ ಮಹಾರಾಷ್ಟ್ರದ ಸಚಿವರಾದ ಗಿರೀಶ್ ಮಹಾಜನ್ ಮತ್ತು ಚಂದ್ರಶೇಖರ್ ಬಾವಾಂಕುಲೆ ಅವರು ಸಹ ಇದ್ದರು. ಕರ್ನಾಟಕಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ಇಬ್ಬರೂ ಮುಖ್ಯ ಮಂತ್ರಿಗಳು ಮಾತುಕತೆ ನಡೆಸಿದರು.

ಅತಿವೃಷ್ಟಿಯಿಂದ ಇತ್ತೀಚೆಗೆ ಸೃಷ್ಟಿಯಾದ ಪ್ರವಾಸ ಪರಿಸ್ಥಿತಿಗೆ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ಅತೀವ ಸಂಕಷ್ಟಕ್ಕೆ ಸಿಲುಕಿವೆ. ಸಾವಿರಾರು ಗ್ರಾಮಗಳು ಜಲಕಂಟಕಕ್ಕೆ ತುತ್ತಾಗಿವೆ. ಎಷ್ಟೇ ಮುಂಜಾಗ್ರತಾ ಕ್ರಮ ಕೈಗೊಂಡರೂ ಪ್ರಕೃತಿ ವಿಕೋಪ ಎದುರಿಸಲು ಆಡಳಿತಗಳಿಗೆ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಇವತ್ತು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಜಂಟಿಯಾಗಿ ಈ ಪ್ರವಾಹ ಪರಿಸ್ಥಿತಿಗೆ ಸಜ್ಜಾಗಲು ನಿರ್ಧರಿಸಿದೆ ಎಂದು ತಿಳಿಸಿದರು.

ಮಹಾದಾಯಿ ನದಿ ನೀರು ನ್ಯಾಯಾಧೀಕರಣ ನೀರು ಹಂಚಿಕೆ ಮಾಡಿ ಹೊರಡಿಸಿರುವ ಆದೇಶವನ್ನು ಗೆಜೆಟ್ ಅಧಿಸೂಚನೆ ಹೊರಡಿಸಬೇಕಾಗಿದೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ನಡೆಸಿ ಸಮಸ್ಯೆ ಬಗೆಹರಿಸಿ ಶೀಘ್ರವೇ ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು.

ಉತ್ತರ ಕರ್ನಾಟಕದ ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಗದಗ ಸೇರಿದಂತೆ ಕೆಲವು ಭಾಗಗಳಿಗೆ ಶಾಶ್ವತವಾಗಿ ಕುಡಿಯುವ ನೀರು ಪೊರೈಕೆ ಮಾಡಲು ಮಹಾದಾಯಿ ಯೋಜನೆ ಅಗತ್ಯವಿದ್ದು, ಇದಕ್ಕಾಗಿ ಸಮುದ್ರಕ್ಕೆ ಸೇರುವ ಹೆಚ್ಚುವರಿ ನೀರನ್ನಷ್ಟೇ ಬಳಸಿಕೊಳ್ಳುತ್ತೇವೆ. ಮಹಾದಾಯಿ ನದಿಯಿಂದ ಖಾನಾಪುರ ಸಮೀಪ ಇರುವ ಕಳಸಾ ಮತ್ತು ಬಂಡೂರಿ ನಾಲಾ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಇದರಿಂದ ನದಿ ಮೂಲಕ್ಕೆ ಯಾವ ಧಕ್ಕೆಯಾಗುವುದಿಲ್ಲ. ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಫಡ್ನವೀಸ್‌ಗೆ ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದಾರೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಹಾಗೂ ಮಹಾರಾಷ್ಟ್ರ ರಾಜ್ಯದ ನೀರಾವರಿ ಸಚಿವರಾದ ಗಿರೀಶ್ ದತ್ತಾತ್ರೇಯ ಮಹಾಜನ್ ಹಾಗೂ ಇಂಧನ ಸಚಿವರಾದ ಚಂದ್ರಶೇಖರ್ ಕಿಶನ್‌ರಾವ್ ಉಪಸ್ಥಿತರಿದ್ದರು.

ಆಧಾರ–ವಿಶ್ವವಾಣಿ, 4.9.2019

12. ಕಾಳಿ ನದಿ ಜೋಡಣೆಗೆ ಬದ್ಧ

ಉತ್ತರ ಕನ್ನಡ ಜಿಲ್ಲೆಯ ಕಾಳಿ ನದಿ ಜೋಡಣೆಗೆ ಬದ್ಧ ಎಂದು ಶಾಸಕ ಮುರುಗೇಶ್ ನಿರಾಣಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮಲಪ್ರಭ, ಘಟಪ್ರಭ ನದಿಗಳಿಗೆ ಕಾಳಿ ನದಿಯ ಜೋಡಣೆಯಿಂದ ಉತ್ತರ ಕರ್ನಾಟಕದ ಹಲವಾರು ಜಿಲ್ಲೆ, ತಾಲ್ಲೂಕುಗಳ ಬರಡು ಭೂಮಿಗಳಿಗೆ ನೀರಾವರಿ ಸೌಲಭ್ಯ ದೊರೆಯಲಿದೆ ಎಂದರು. ಈಗಾಗಲೇ ಕೇಂದ್ರ – ರಾಜ್ಯ ಸರ್ಕಾರಗಳಿಗೆ ಈ ಯೋಜನೆ ಕುರಿತಂತೆ ಪ್ರಾಥಮಿಕವಾಗಿ ಮನದಟ್ಟು ಮಾಡಿಕೊಟ್ಟಿದ್ದು, ಉನ್ನತ ಮಟ್ಟದಲ್ಲಿ ಸಹಮತ ದೊರೆತಿದೆ ಎಂದರು. ಬಾಗಲಕೋಟೆ ಜಿಲ್ಲೆಯಲ್ಲಿ 3 ನದಿಗಳು ಹರಿದರೂ ಸಹಸ್ರಾರು ರೈತರ ಜಮೀನುಗಳು ನೀರಾವರಿಯಿಂದ ವಂಚಿತವಾಗಿ ರೈತರು ಸದಾಕಾಲ ಸಂಕಷ್ಟದಲ್ಲಿ ದಿನ ಕಳೆಯುತ್ತಿದ್ದು, ಇದರಿಂದಾಗಿ ಮುಕ್ತಿ ಹೊಂದಲು ಕಾಳಿ ನದಿ ಜೋಡಣೆ ಅಗತ್ಯ ಎಂದಿದ್ದಾರೆ.

ಆಧಾರ–ವಿಶ್ವವಾಣಿ, 17.09.2019

ಭಾಗ–6

ಚುನಾವಣೆ ಸುದ್ದಿಗಳು

1. ಮತಪತ್ರಗಳ ಯುಗಾಂತ್ಯ

ಮತಪತ್ರ (ಬ್ಯಾಲೆಟ್ ಪೇಪರ್)ಗಳ ಮೂಲಕ ಮತದಾನ ಮಾಡಲು ಇನ್ನು ಮುಂದೆ ಸಾಧ್ಯವಿಲ್ಲ. ಅದು ಈಗ ಇತಿಹಾಸವಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರಾ ಮತ್ತೊಮ್ಮೆ ಪುನರುಚ್ಚರಿಸಿದ್ದಾರೆ. ಕೆಲವು ರಾಜಕೀಯ ಪಕ್ಷಗಳು ಮತಪತ್ರದ ಮೂಲಕ ಮತದಾನದ ಬಗ್ಗೆ ಕೇಳಿದ್ದಾರೆ. ಅದು ಸಾಧ್ಯವಿಲ್ಲ.

ಇವಿಎಂ ಮೂಲಕ ಮತದಾನಕ್ಕೆ ವಿವಿಧ ರಾಜಕೀಯ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ. ನಾವು ಅದನ್ನೂ ನಿವಾರಿಸಿದ್ದೇವೆ ಎಂದ ಮುಖ್ಯ ಚುನಾವಣಾ ಆಯುಕ್ತರು, ಇವಿಎಂ ಮೂಲಕ ಮತದಾನ ವಿಶ್ವಾಸಾರ್ಹತೆ ಹೆಚ್ಚಿಸಿದೆ ಎಂದರು.

ಚುನಾವಣಾ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಲು ಮುಂದಿನ ದಿನಗಳಲ್ಲಿ ಹೆಚ್ಚುವರಿ ಕೇಂದ್ರ ಸಶಸ್ತ್ರ ಪಡೆಗಳನ್ನು ಸೂಕ್ಷ್ಮ ಪ್ರದೇಶಗಳಿಗೆ ರವಾನಿಸಲಾಗುವುದು. ದೀಪಾವಳಿ ಹಬ್ಬ ಮತ್ತು ಮಧ್ಯವಾರ್ಷಿಕ ಪರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಮಹಾರಾಷ್ಟ್ರ, ಹರ್ಯಾಣ, ಜಾರ್ಖಂಡ್ ಹಾಗೂ ದೆಹಲಿ ವಿಧಾನಸಭಾ ಚುನಾವಣೆಯ ದಿನಾಂಕಗಳನ್ನು ಪ್ರಕಟಿಸಲಾಗುವುದು ಎಂದು ಅರೋರ ಮಾಹಿತಿ ನೀಡಿದರು. ಕೆಲವು ರಾಜಕೀಯ ಪಕ್ಷಗಳು ಮತದಾನದ ವೆಚ್ಚದ ಮಿತಿಯನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿದ್ದಾರೆ.

ಇನ್ನೂ ಕೆಲವರು ವೆಚ್ಚವನ್ನು ಕಡಿಮೆ ಮಾಡಲು ಕೇಳಿಕೊಂಡಿದ್ದಾರೆ. ಈ ಬಗ್ಗೆ ಶೀಘ್ರವೇ ಆಯೋಗದಿಂದ ನಿರ್ಧರಿಸಲಾಗುವುದು. ಹಿರಿಯ ನಾಗರಿಕರು ಮತ್ತು ವಿಕಲಚೇತನರಿಗೆ ಅನುಕೂಲವಾಗುವಂತೆ ಮತದಾನ ಕೇಂದ್ರಗಳು ನೆಲಮಹಡಿಯಲ್ಲಿ ಇರಬೇಕು ಎಂಬ ರಾಜಕೀಯ ಪಕ್ಷಗಳ ಬೇಡಿಕೆಯ ಮೇರೆಗೆ, ಅನೇಕ ಮತಗಟ್ಟೆಗಳನ್ನು ನೆಲ ಮಹಡಿಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು.

ಆಧಾರ–ಸಂಯುಕ್ತಕರ್ನಾಟಕ, 20.09.2019

2. ಹಠಾತ್ ಉಪಚುನಾವಣೆ: ಸಿಎಂ, ಅನರ್ಹರಿಗೆ ಶಾಕ್

ರಾಜ್ಯದ 17 ವಿಧಾನಸಭಾ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಿಗೆ ಉಪ ಚುನಾವಣೆ ದಿನಾಂಕವನ್ನು ಚುನಾವಣಾ ಆಯೋಗವು ಘೋಷಿಸಿರುತ್ತದೆ.

ಮಸ್ಕಿ, ರಾಜರಾಜೇಶ್ವರಿ ನಗರ ಕ್ಷೇತ್ರಗಳಿಗೆ ಕೋರ್ಟ್ ತಡೆಯಾಜ್ಞೆ ಇರುವ ಕಾರಣ ಆ ಎರಡೂ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ 15 ಕ್ಷೇತ್ರಗಳಿಗೆ ಉಪ ಚುನಾವಣೆ ಪ್ರಕಟವಾಗಿದೆ.

ಅಥಣಿ, ಕಾಗವಾಡ, ಗೋಕಾಕ್, ಯಲ್ಲಾಪುರ, ಹಿರೇಕೆರೂರು, ರಾಣೇಬೆನ್ನೂರು, ವಿಜಯನಗರ, ಚಿಕ್ಕಬಳ್ಳಾಪುರ, ಕೆ.ಆರ್.ಪುರಂ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಶಿವಾಜಿನಗರ, ಹೊಸಕೋಟೆ, ಕೆ.ಆರ್.ಪೇಟೆ ಮತ್ತು ಹುಣಸೂರು ವಿಧಾನ ಸಭಾ ಕ್ಷೇತ್ರಗಳಿಗೆ ಆಗಸ್ಟ್ 21ಕ್ಕೆ ಮತದಾನ ನಡೆಯಲಿದೆ. ಆಗಸ್ಟ್ 24ರಂದು ಫಲಿತಾಂಶ ಪ್ರಕಟವಾಗಲಿದೆ.

ಸೆಪ್ಟೆಂಬರ್ 23ರಂದು ಅಧಿಸೂಚನೆ ಹೊರಡಿಸಲಾಗುವುದು. ಸೆಪ್ಟೆಂಬರ್ 30ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ, ಆಗಸ್ಟ್ 1ರಂದು ನಾಮಪತ್ರಗಳ ಪರಿಶೀಲನೆ, ಆಗಸ್ಟ್ 3ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನ, ಆಗಸ್ಟ್ 27ರಂದು ಚುನಾವಣೆ ಪ್ರಕ್ರಿಯೆಗಳು ಮುಕ್ತಾಯವಾಗಲಿದೆಯೆಂದು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಸಂಜೀವ್‌ಕುಮಾರ್ ತಿಳಿಸಿದ್ದಾರೆ.

ಚುನಾವಾಣಾ ಆಯೋಗ ರಾಜ್ಯದ 15 ವಿಧಾನ ಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಿಸಿದ್ದು, ಅನರ್ಹ ಶಾಸಕರಿಗೆ ಬರ ಸಿಡಿಲಿನಂತಾಗಿದೆ. ತಮ್ಮ ಶಾಸಕತ್ವವನ್ನೇ ಪಣಕ್ಕಿಟ್ಟು, ಸ್ಮಿಶ್ರ ಸರ್ಕಾರದ ಪತನಕ್ಕೆ ಕಾರಣವಾಗಿದ್ದ ಅನರ್ಹ ಶಾಸಕರು ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಜಾತಕ ಪಕ್ಷಿಯಂತೆ ಕಾಯುತ್ತಲೇ ಇದ್ದರು. ಇದೀಗ ಸುಪ್ರೀಂಕೋರ್ಟ್‌ನಿಂದ ಯಾವುದೇ ಪರಿಹಾರೋಪಾಯ ಹೊರಬೀಳುವ ಮೊದಲೇ ಚುನಾವಣಾ ಆಯೋಗದಿಂದ ಉಪಚುನಾವಣೆ ಘೋಷಣೆಯಾಗಿರುವುದರಿಂದ ಸಚಿವ ಸ್ಥಾನ ಹೋಗಲಿ ಕೊನೆಗೆ ಶಾಸಕರಾಗುವುದಕ್ಕೂ ಸಂಚಕಾರ ಬರಲಿದೆ ಎಂಬ ಆತಂಕದ ಕಾರ್ಮೋಡ ಅವರನ್ನು ಆವರಿಸಿಕೊಂಡಿದೆ.

ಆಧಾರ–ಕನ್ನಡಪ್ರಭ, 22.09.2019

3. ಅನರ್ಹರ ಸ್ಪರ್ಧೆಗೆ ಆಯೋಗ ಸಮ್ಮತಿ

17 ಅನರ್ಹ ಶಾಸಕರು ಸಲ್ಲಿಸಿದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಸುಪ್ರೀಂಕೋರ್ಟ್ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವಂತೆ ಮಾಡಿಕೊಂಡ ಮಧ್ಯಂತರ ಮನವಿಗೆ ಸುಪ್ರೀಂಕೋರ್ಟ್ ಪುರಸ್ಕರಿಸಿದೆ. ಸೆಪ್ಟೆಂಬರ್ 25, 26ಕ್ಕೆ ವಿಚಾರಣೆ ನಿಗದಿಪಡಿಸಿರುವ ಕೋರ್ಟ್ ಪ್ರಕರಣಕ್ಕೆ ಸಂಬಂಧಿಸಿದ ಪ್ರತಿಕ್ರಿಯೆ ಕೇಳಿ ವಿಧಾನ ಸಭಾ ಸ್ಪೀಕರ್, ಕೆಪಿಸಿಸಿ ಅಧ್ಯಕ್ಷ, ಕಾಂಗ್ರೆಸ್ ಶಾಸಕಾಂಗ ನಾಯಕ ಮತ್ತು ಜೆಡಿಎಸ್ ರಾಜ್ಯಾಧ್ಯಕ್ಷರಿಗೆ ನೋಟಿಸ್ ನೀಡಿದೆ. ಇದೇ ವೇಳೆ, ಮಧ್ಯ ಪ್ರವೇಶಿಸಿರುವ ಚುನಾವಣಾ ಆಯೋಗ ಅನರ್ಹ ಶಾಸಕರು ಸ್ಪರ್ಧಿಸಲು ಅಭ್ಯಂತರವಿಲ್ಲ ಎಂದಿದೆ.

ಪ್ರಕರಣದ ತುರ್ತು ವಿಚಾರಣೆ ನಡೆಸಬೇಕು ಎಂದು ಅನರ್ಹ ಶಾಸಕರು ಕಳೆದ ಒಂದೂವರೆ ತಿಂಗಳಲ್ಲಿ 4 ಬಾರಿ ನ್ಯಾಯಾಲಯದ ಮುಂದೆ ನಿವೇದಿಸಿಕೊಂಡಿದ್ದರೂ, ಸುಪ್ರೀಂಕೋರ್ಟ್ ವಿಚಾರಣೆ ನಡೆಸಿರಲಿಲ್ಲ. ಆದರೆ, ಅನರ್ಹರ ಪರ ವಕೀಲ ಮುಕುಲ್ ರೋಹಟ್ಗಿ ಪ್ರಕರಣದಲ್ಲಿ ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಲು ಕಾರಣವಾಗುವ ಅಂಶಗಳನ್ನು ವಿಚಾರಣೆಯ ಕಲಾಪದ ಆರಂಭದಲ್ಲೇ ಚುಟುಕಾಗಿ ನ್ಯಾಯಾಲಯದ ಮುಂದಿಟ್ಟರು. ನ್ಯಾಯಾಲಯ ಕೂಡ ಪ್ರಕರಣದಲ್ಲಿ ತುರ್ತು ನಿರ್ದೇಶನ ನೀಡಬೇಕಾದ ಅಂಶಗಳಿರುವುದನ್ನು ಮನಗಂಡು, ವಿಚಾರಣೆಯನ್ನು ನಿಗದಿಪಡಿಸಿರುವುದು ಅನರ್ಹ ಶಾಸಕರ ಪಾಲಿಗೆ ಅತ್ಯಂತ ಗಮನಾರ್ಹ ವಿಷಯವಾಗಿದೆ.

ಆಧಾರ–ಕನ್ನಡಪ್ರಭ, 24.09.2019

4. ಉಪ ಚುನಾವಣೆ ಮುಂದಕ್ಕೆ

ಶಾಸಕ ಸ್ಥಾನದಿಂದ ಅನರ್ಹಗೊಳಿಸಿರುವ ಸ್ಪೀಕರ್ ಆದೇಶ ಪ್ರಶ್ನಿಸಿರುವ ಪ್ರಕರಣ ಇತ್ಯರ್ಥವಾಗುವವರೆಗೆ ರಾಜ್ಯದ 15 ಕ್ಷೇತ್ರಗಳಿಗೆ ಘೋಷಿಸಲಾಗಿದ್ದ ಉಪ ಚುನಾವಣೆಯನ್ನು ಮುಂದೂಡಬೇಕೆಂಬ ಚುನಾವಣಾ ಆಯೋಗದ ಪ್ರಸ್ತಾವಕ್ಕೆ ಸುಪ್ರೀಂಕೋರ್ಟ್ ಸಹಮತಿ ಸೂಚಿಸಿದೆ.

15 ಕ್ಷೇತ್ರಗಳಿಗೆ ಅಕ್ಟೋಬರ್ 21ರಂದು ಉಪಚುನಾವಣೆ ನಡೆಯುತ್ತಿರುವುದರಿಂದ ಗೊಂದಲ ಸೃಷ್ಟಿಯಾಗಿದೆ. ಪ್ರಕರಣ ಸಮಗ್ರ ವಿಚಾರಣೆ ನಡೆಸಿ ತೀರ್ಪು ನೀಡಲೇಬೇಕಿದೆ. ಕ್ಷೇತ್ರಗಳು ತೆರವಾಗಿ ಎರಡು ತಿಂಗಳು ಕಳೆದಿದ್ದು, ಆರು ತಿಂಗಳೊಳಗೆ ಉಪ ಚುನಾವಣೆ ನಡೆಸಬೇಕೆಂಬ ನಿಯಮದ ಪ್ರಕಾರ ಕಾಲಾವಕಾಶ ಇದೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಕೃಷ್ಣ ಮುರಾರಿ ಅವರನ್ನು ಒಳಗೊಂಡ ನ್ಯಾಯಪೀಠ ಅಭಿಪ್ರಾಯಪಟ್ಟಿತು. ಈ ವೇಳೆ ವಾದ ಮಂಡಿಸಿದ ದ್ವಿವೇದಿ ಉಪ ಚುನಾವಣೆ ಮುಂದೂಡುವುದಾಗಿ ಆಯೋಗ ಅಧಿಸೂಚನೆ ಹೊರಡಿಸಲಿದೆಯೆಂದರು.

ಆಧಾರ–ಪ್ರಜಾವಾಣಿ, 27.09.2019

5. ಮತ್ತೆ ಬಂತು ಉಪ ಚುನಾವಣೆ

ಉಪ ಚುನಾವಣೆ ಮುಂದೂಡುವುದಾಗಿ ಸುಪ್ರೀಂಕೋರ್ಟ್ ಹೇಳಿದ್ದು, ಇದಕ್ಕನುಸಾರವಾಗಿ ಚುನಾವಣಾ ಆಯೋಗ ಅದರ ಮರುದಿನವೇ ಚುನಾವಣಾ ದಿನಾಂಕವನ್ನು ಮರು ನಿಗದಿ ಮಾಡುವ ಮೂಲಕ ನಿರಾಳರಾಗಿದ್ದ 15 ಅನರ್ಹರ ಶಾಸಕರು, ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರ್ಕಾರವನ್ನು ಮತ್ತೆ ಆತಂಕಕ್ಕೆ ದೂಡಿದೆ.

ಅಥಣಿ, ಕಾಗವಾಡ, ಗೋಕಾಕ್, ಯಲ್ಲಾಪುರ, ಹಿರೇಕೆರೂರು, ರಾಣೆಬೆನ್ನೂರು, ವಿಜಯನಗರ, ಚಿಕ್ಕಬಳ್ಳಾಪುರ, ಕೆ.ಆರ್.ಪುರಂ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಶಿವಾಜಿನಗರ, ಹೊಸಕೋಟೆ, ಕೆ.ಆರ್.ಪೇಟೆ ಮತ್ತು ಹುಣಸೂರು ವಿಧಾನ ಸಭಾ ಕ್ಷೇತ್ರಗಳಿಗೆ ಡಿಸೆಂಬರ್ 5ರಂದು ಮತದಾನ ನಡೆಯಲಿದ್ದು, ನವೆಂಬರ್ 11ರಂದು ನಾಮಪತ್ರ ಸಲ್ಲಿಕೆ ಆರಂಭ, ನವೆಂಬರ್ 18ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ, ನವೆಂಬರ್ 19ರಂದು ನಾಮಪತ್ರ ಪರಿಶೀಲನೆ, ನವೆಂಬರ್ 21ರಂದು ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನ ಹಾಗೂ ಡಿಸೆಂಬರ್ 11ರಂದು ಚುನಾವಣೆ ಫಲಿತಾಂಶ ಘೋಷಣೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಆಧಾರ–ಪ್ರಜಾವಾಣಿ, 28.09.2019

ಭಾಗ–7

ಸರ್ವೋಚ್ಚ /ಉಚ್ಚ ನ್ಯಾಯಾಲಯದ ಸುದ್ದಿಗಳು

1. ಬಡ್ತಿ ಮೀಸಲಾತಿ ಕರ್ನಾಟಕ ಸರ್ಕಾರದ ಕಾಯ್ದೆ ಮಾನ್ಯ ಮಾಡಿದ ತೀರ್ಪು: ಸುಪ್ರೀಂ ಮರು ಪರಿಶೀಲನಾ ಅರ್ಜಿ

ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಪರಿಶಿಷ್ಟ ಜಾತಿ ಮತ್ತು ಪಂಗಡದ ಸರ್ಕಾರಿ ನೌಕರರಿಗೆ ತತ್ಪರಿಣಾಮ ಜ್ಯೇಷ್ಠತೆ ವಿಸ್ತರಿಸುವ ರಾಜ್ಯ ಸರ್ಕಾರದ ನೂತನ ಕಾಯ್ದೆಯನ್ನು ಮಾನ್ಯ ಮಾಡಿರುವ ತೀರ್ಪಿನ ಮರುಶೀಲನೆ ಕೋರಿ ಬಿ.ಕೆ.ಪವಿತ್ರ ಮತ್ತಿತರರು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣಗಳ ವಿಚಾರಣೆ ನಡೆಸಿದ್ದ ಐವರು ಸದಸ್ಯರ ಸಂವಿಧಾನ ಪೀಠ ಕಳೆದ ವರ್ಷ ನೀಡಿದ ತೀರ್ಪಿಗೆ ಸಂಪೂರ್ಣ ತದ್ವಿರುದ್ಧವಾಗಿರುವುದರಿಂದ ಈ ತೀರ್ಪಿನಿಂದ ತೀವ್ರ ಅಸಮಾಧಾನವಾಗಿದೆ ಎಂದು 100ಕ್ಕೂ ಅಧಿಕ ಪುಟಗಳಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ.

ಸುಪ್ರೀಂಕೋರ್ಟ್ ಕಳೆದ 70 ವರ್ಷಗಳಿಂದ ಅನುಸರಿಸಿದ ಸಮತೋಲನವನ್ನು ಧಿಕ್ಕರಿಸಿ, ಮೀಸಲಾತಿ ಕಾನೂನು ಪುನಃ ರಚಿಸುವುದಕ್ಕೆ ಈ ತೀರ್ಪು ಯತ್ನಿಸಿದೆ. ಪ್ರಾತಿನಿಧ್ಯದ ದತ್ತಾಂಶವನ್ನು ಪರಿಗಣಿಸಿ ನೀಡಲಾದ ತೀರ್ಪಿನ ಮೂಲಕ ಸಂವಿಧಾನದ 14 ಮತ್ತು 16(1)ನೇ ವಿಧಿಯಡಿ ಲಭ್ಯವಿರುವ ವೈಯಕ್ತಿಕ ಸಮಾನತೆಯ ಹಕ್ಕನ್ನು ಕಡೆಗಣಿಸಲಾಗಿದೆ ಎಂದು ಅರ್ಜಿದಾರರ ಅಭಿಪ್ರಾಯ.

ದಕ್ಷತೆಯ ಆಧಾರದ ಕುರಿತು ವಾದವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯಸಲಾಗಿದ್ದು, ತೀರ್ಪಿನಲ್ಲಿ ಸೂಚಿಸಲಾದ ಪೂರ್ವಾನ್ವಯದ ತತ್ವವು ದೋಷಪೂರಿತವಾಗಿದೆ. ಇತರೆ ಪ್ರಕರಣದಲ್ಲಿ ನೀಡಲಾದ ತೀರ್ಪಿನ ಅನ್ವಯ ಕೆನೆಪದರ ತತ್ವವನ್ನೂ ಪರಿಗಣಿಸದೆ ಕೈಬಿಡಲಾಗಿದ್ದು, ತೀರ್ಪನ್ನು ಮರು ಪರಿಶೀಲನೆ ಮಾಡಲು ಕೋರಲಾಗಿದೆ.

ಆಧಾರ–ಪ್ರಜಾವಾಣಿ, 02.07.2019

2. ಅಕ್ರಮ ಧಾರ್ಮಿಕ ಕಟ್ಟಡಗಳ ತೆರವು: ವರದಿ ಸಲ್ಲಿಸಲು ಗಡುವು

ಬೆಂಗಳೂರು ರಸ್ತೆ ಉದ್ಯಾನವನ ಮತ್ತಿತರ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಿಕೊಂಡು ನಿರ್ಮಿಸಿರುವ ದೇವಾಲಯ, ಮಸೀದಿ, ಚರ್ಚ್, ಗುರುದ್ವಾರ ಮತ್ತಿತರ ಧಾರ್ಮಿಕ ಕಟ್ಟಡಗಳ ಕುರಿತು ಆಗಸ್ಟ್‌ರೊಳಗೆ ವರದಿ ಸಲ್ಲಿಸುವಂತೆ ಹೈಕೋರ್ಟ್ ಸರ್ಕಾರಕ್ಕೆ ಆದೇಶ ನೀಡಿದೆ.

ಸುಪ್ರೀಂಕೋರ್ಟ್ ಆದೇಶದಂತೆ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಪಿಐಎಲ್ ಹಾಗೂ ಇನ್ನಿತರ ಎರಡು ಪಿಐಎಲ್‌ಗಳ ವಿಚಾರಣೆ ನಡೆಸಿದ ಸಿಜೆ ಎ.ಎನ್.ಓಕ್ ನೇತೃತ್ವದ ಪೀಠ ಈ ನಿರ್ದೇಶನ ನೀಡಿ ವಿಚಾರಣೆ ಮುಂದೂಡಿತು.

ಸರ್ಕಾರ ಮೊದಲು ರಾಜ್ಯದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಅತಿಕ್ರಮಿಸಿಕೊಂಡು ನಿರ್ಮಿಸಿರುವ ಧಾರ್ಮಿಕ ಕೇಂದ್ರಗಳೆಷ್ಟು ಎಂಬುದನ್ನು ಗುರುತಿಸಬೇಕು, ನಂತರ ಕಟ್ಟಡಗಳನ್ನು ಗುರುತಿಸಿದ ಬಳಿಕ ಕಾನೂನು ಪ್ರಕಾರ ಅವುಗಳನ್ನು ತೆರವುಗೊಳಿಸಬೇಕು. ಆ ಕುರಿತಂತೆ ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಸಂಸ್ಥೆಗಳು ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ನಿರ್ದೇಶಿಸಿತು.

ಸುಪ್ರಿಂಕೋರ್ಟ್ ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ನಿರ್ಮಿಸಿರುವ ಧಾರ್ಮಿಕ ಕೇಂದ್ರಗಳನ್ನು ತೆರವುಗೊಳಿಸಲು ತೀರ್ಪು ನೀಡಿದ ನಂತರ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಅಕ್ರಮ ಧಾರ್ಮಿಕ ಕೇಂದ್ರಗಳು ತಲೆ ಎತ್ತದಂತೆ ನೋಡಿಕೊಳ್ಳಬೇಕಾದದ್ದು ಸರ್ಕಾರದ ಕರ್ತವ್ಯ. ಅದರಂತೆ ಸರ್ಕಾರ ನೀತಿ ರೂಪಿಸಬಹುದಿತ್ತು. ಅಂತಹ ನೀತಿಯನ್ನೇನಾದಾರೂ ರೂಪಿಸಿದೆಯೇ ಎಂದು ನ್ಯಾಯಪೀಠ ಎ.ಜಿ. ಅವರನ್ನು ಕೇಳಿತು. ಆ ಬಗ್ಗೆ ಸರ್ಕಾರದ ಜೊತೆ ಸಮಾಲೋಚನೆ ನಡೆಸಿ ವಿವರ ನೀಡುವುದಾಗಿ ಅಡ್ವೋಕೇಟ್ ಜನರಲ್ ಹೇಳಿದರು.

ಆಧಾರ–ವಿಜಯಕರ್ನಾಟಕ, 03.07.2019

3. ಶಾಸಕರ ದೂರವಾಣಿ ಭತ್ಯೆ ಪ್ರಶ್ನಿಸಿದ್ದ ಪಿಐಎಲ್ ವಜಾ

ಜನಪ್ರತಿನಿಧಿಗಳ ದೂರವಾಣಿ ಹಾಗೂ ವೈದ್ಯಕೀಯ ಭತ್ಯೆ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳ ಸಾರ್ವಜನಿಕ ಹಣ ವ್ಯರ್ಥ ಮಾಡುವುದನ್ನು ತಪ್ಪಿಸಲು ಪರ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಕೈಗೆಟುಕುವ ದರದಲ್ಲಿ ದೂರವಾಣಿ ಹಾಗೂ ವೈದ್ಯಕೀಯ ಸೌಲಭ್ಯಗಳು ಸಿಗುತ್ತಿವೆ. ಆದ್ದರಿಂದ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ನೀಡುತ್ತಿರುವ ಭತ್ಯೆಗಳ ಬದಲಿಗೆ ಸರ್ಕಾರದ ವತಿಯಿಂದಲೇ ಕಡಿಮೆ ಬೆಲೆಯ ಸೌಲಭ್ಯ ಕಲ್ಪಿಸುವಂತೆ ನಿರ್ದೇಶಿಸಲು ಕೋರಿ ಕೆ.ಬಿ.ವಿಜಯ ಕುಮಾರ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅರ್ಜಿದಾರರ ಮನವಿಯು ಕರ್ನಾಟಕ ಶಾಸಕಾಂಗ ವೇತನ, ಪಿಂಚಣಿ ಮತ್ತು ಭತ್ಯೆ ಕಾಯ್ದೆ– 1956ರ ಸೆಕ್ಷನ್ 12(5)ಕ್ಕೆ ವಿರುದ್ಧವಾಗಿರುವುದರಿಂದ ಮಾನ್ಯ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಪಿಐಎಲ್ ವಜಾಗೊಳಿಸಿತು.

ಎಂಎಲ್ಎ ಹಾಗೂ ಎಂಎಲ್‌ಸಿಗಳಿಗೆ ಸ್ಥಿರ ದೂರವಾಣಿ ಹಾಗೂ ಮೊಬೈಲ್ ಬಳಕೆಗಾಗಿ ಮಾಸಿಕ 20 ಸಾವಿರ ರೂ. ಪಾವತಿಸಲಾಗಿದ್ದು, ರಾಜ್ಯದ 224 ಎಂಎಲ್‌ಸಿ ಸೇರಿ ಒಟ್ಟು 300 ಜನರಿಗೆ ವಾರ್ಷಿಕ 7.20 ಕೋಟಿ ರೂ. ವೆಚ್ಚವಾಗುತ್ತಿದೆ. ಸರ್ಕಾರಿ ಹಾಗೂ ಖಾಸಗಿ ದೂರವಾಣಿ ಸಂಸ್ಥೆಗಳು ಕಡಿಮೆ ದರದಲ್ಲಿ ಅತ್ಯುತ್ತಮ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಅದೇ ಸೌಲಭ್ಯಗಳನ್ನು ಜನ ಪ್ರತಿನಿಧಿಗಳಿಗೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕೆಂದು ಅರ್ಜಿದಾರರು ಮನವಿ ಮಾಡಿದ್ದರು.

ಆಧಾರ–ವಿಜಯವಾಣಿ, 04.07.2019

4. ಸುಪ್ರೀಂ ತೀರ್ಪು ಕನ್ನಡದಲ್ಲಿ

ಈವರೆಗೆ ಇಂಗ್ಲೀಷ್‌ನಲ್ಲಿ ಇರುತ್ತಿದ್ದ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಇದೀಗ ಕನ್ನಡದಲ್ಲೂ ಲಭ್ಯವಾಗುವ ದಿನಗಳು ಸನ್ನಿಹಿತವಾಗುತ್ತಿದೆ. ಕನ್ನಡವು ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ತೀರ್ಪು ಲಭ್ಯವಾಗಲಿದ್ದು ಮಾಸಾಂತ್ಯದೊಳಗೆ ಸುಪ್ರೀಂಕೋರ್ಟ್ ಅಪ್ ಲೋಡ್ ಮಾಡಲಿದೆ. ಈ ಸಂಬಂಧ ಸುಪ್ರೀಂಕೋರ್ಟಿನ ಆಂತರಿಕ ಎಲೆಕ್ಟ್ರಾನಿಕ್ ಸಾಫ್ಟ್‌ವೇರ್ ವಿಭಾಗ ಸಿದ್ದಪಡಿಸಿರುವ ವೆಬ್‌ಸೈಟ್‌ಗೆ ಮುಖ್ಯ ನ್ಯಾಯಮೂರ್ತಿಗಳು ಒಪ್ಪಿಗೆ ಸೂಚಿಸಿರುತ್ತಾರೆ. ಇದರಿಂದ ವಕೀಲರ ಸಹಾಯವಿಲ್ಲದೇ ಕಕ್ಷಿದಾರರು ತಮಗೆ ಸಂಬಂಧಿಸಿದ ಪ್ರಕರಣದ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದಾಗಿರುತ್ತದೆ.

ಇಂಗ್ಲೀಷ್ ತೀರ್ಪಿನ ಪ್ರತಿ ಆಯಾ ದಿನವೇ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಆದರೆ, ಪ್ರಾದೇಶಿಕ ಭಾಷೆಯಲ್ಲಿ ತೀರ್ಪಿನ ಪ್ರತಿಗಳನ್ನು ಪಡೆಯಲು ಒಂದು ವಾರದಿಂದ 10 ದಿನದವರೆಗೂ ಕಾಯಬೇಕಾಗುತ್ತದೆ. ತೀರ್ಪಿನ ಪ್ರತಿಗಳನ್ನು ಕೇವಲ ಇಂಗ್ಲೀಷ್‌ನಲ್ಲಷ್ಟೆ ಇರುವುದರಿಂದ ಪ್ರಾದೇಶಿಕ ಭಾಷೆಯಲ್ಲಿ ಕೊಡಿ ಎಂದು ಅರ್ಜಿದಾರರು ನ್ಯಾಯಾಲಯವನ್ನು ಕೋರಿದ್ದರು. ಹೆಚ್ಚು ಬೇಡಿಕೆಯ ಹಿನ್ನೆಲೆಯಲ್ಲಿ, ಮೊದಲಿಗೆ ಆರು ಭಾಷೆ ಆಯ್ಕೆ ಮಾಡಬೇಕಾಗಿದ್ದು, ಎರಡನೇ ಹಂತದಲ್ಲಿ ಮತ್ತಷ್ಟು ಭಾಷೆಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ವಿವರಿಸಿರುತ್ತಾರೆ.

ಆಧಾರ–ಕನ್ನಡಪ್ರಭ, 04.07.2019

5. ಇತಿಹಾಸದಲ್ಲೇ ಮೊದಲ ಬಾರಿ ಸಿಜೆಐ ಮಹತ್ವದ ನಿರ್ಧಾರ

(ಹೈ ಜಡ್ಜ್ ವಿರುದ್ಧ ತನಿಖೆ)

ಪ್ರಕರಣದ ಹಿನ್ನೆಲೆ:

ಖಾಸಗಿ ವೈದ್ಯಕೀಯ ಕಾಲೇಜೊಂದರ ಸೀಟು ಹಂಚಿಕೆ ಪ್ರಕಿಯೆಗೆ ಸುಪ್ರಿಂಕೋರ್ಟ್ ತಡೆಯಾಜ್ಞೆ ನೀಡಿತು. ಆದರೆ ಸುಪ್ರೀಂಕೋರ್ಟ್ ಆದೇಶ ಧಿಕ್ಕರಿಸಿ 2017–18 ರ ಪ್ರವೇಶ ಪ್ರಕ್ರಿಯೆಗೆ ಹೈಕೋರ್ಟ್ ನ್ಯಾಯಮೂರ್ತಿ ಶುಕ್ಲಾ ಅನುಮತಿ ನೀಡಿದ್ದರು. ಈ ದೂರು ಆಧರಿಸಿ ಮೂವರು ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಆಂತರಿಕ ತನಿಖೆ ನಡೆಸಲು ಹಿಂದಿನ ಸಿಜೆಐ ದೀಪಕ್ ಮಿಶ್ರಾ ಸೂಚಿಸಿದ್ದರು. ಆಂತರಿಕ ವರದಿ ನ್ಯಾಯಮೂರ್ತಿ ಶುಕ್ಲಾ ವಿರುದ್ಧ ಬಂದಿತು. ಈ ವರದಿ ಆಧರಿಸಿ ಕೂಡಲೇ ರಾಜೀನಾಮೆ ನೀಡಿ ಎಂದು ನ್ಯಾಯಮೂರ್ತಿ ಶುಕ್ಲಾಗೆ ಸಿಜೆಐ ಸೂಚಿಸಿದ್ದರು. ಆದರೆ, ಈ ಆದೇಶಕ್ಕೆ ಮನ್ನಣೆ ನೀಡದಿರುವಾಗ ನ್ಯಾಯಾಂಗದ ಕಾರ್ಯ ಕಲಾಪ ಹಾಗೂ ವಿಚಾರಣೆಗಳಿಂದ ನ್ಯಾಯಮೂರ್ತಿ ಶುಕ್ಲಾ ಅವರನ್ನು 2018 ರ ಜನವರಿಯಿಂದಲೇ ಮುಕ್ತಗೊಳಿಸಲಾಯಿತು. ಪ್ರಾಥಮಿಕ ವಿಚಾರಣೆ ನಡೆಸುವಂತೆ ಸಿಬಿಐಗೆ ಸೂಚಿಸಲಾಗಿತ್ತು. ನ್ಯಾಯಮೂರ್ತಿ ಗೊಗೊಯ್ ಅವರು ಸಿಜೆಐ ಹುದ್ದೆಗೆ ಬಂದ ಕೂಡಲೇ ಕಾರ್ಯಕಲಾಪದಲ್ಲಿ ಭಾಗಿಯಾಗಲು ಅವಕಾಶ ನೀಡುವಂತೆ ನ್ಯಾಯಮೂರ್ತಿ ಶುಕ್ಲಾ ಪತ್ರ ಬರೆದಿದ್ದರು. ಆದರೆ ಮನವಿ ತಿರಸ್ಕರಿಸಿದ್ದ ಗೊಗೊಯ್ ನ್ಯಾಯಮೂರ್ತಿ ಶುಕ್ಲಾ ಮಹಾಭಿಯೋಗಕ್ಕೆ ಪ್ರಧಾನಿಗೆ ಶಿಫಾರಸ್ಸು ಮಾಡಿದ್ದರು.

ಸುಪ್ರಿಂಕೋರ್ಟ್ ಆದೇಶ ಏನಿದೆ:–

ನ್ಯಾಯಾಂಗ ಇತಿಹಾಸದಲ್ಲೇ ಮೊದಲ ಬಾರಿಗೆ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯೊಬ್ಬರ ವಿರುದ್ಧ ಸಿಬಿಐ ತನಿಖೆಗೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಆದೇಶಿಸಿದ್ದಾರೆ. ವೈದ್ಯಕೀಯ ಕಾಲೇಜು ಸೀಟು ಹಂಚಿಕೆ ಹಗರಣದಲ್ಲಿ ಆರೋಪಿಯಾಗಿರುವ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಎಸ್.ಜೆ.ಶುಕ್ಲಾ ವಿರುದ್ಧದ ಕ್ರಿಮಿನಲ್ ತನಿಖೆ ಹಾಗೂ ಎಫ್ಐಆರ್‌ಗೆ ಸಿಜೆಐ ರಂಜನ್ ಗೊಗೊಯ್ ಸೂಚಿಸಿದ್ದಾರೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ವ್ಯಾಪ್ತಿಯಲ್ಲಿ ತನಿಖೆಗೆ ಅನುಮತಿಸಲಾಗಿದೆ.

ನ್ಯಾಯಮೂರ್ತಿ ಶುಕ್ಲಾ ವಿರುದ್ಧದ ಭ್ರಷ್ಟಚಾರ ಆರೋಪ ಆಂತರಿಕ ತನಿಖೆಯಲ್ಲಿ ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ, ಎಫ್ಐಆರ್‌ಗೆ ಅನುಮತಿ ನೀಡಲು ಸಿಜೆಐ ನಿರ್ಧರಿಸಿದ್ದಾರೆ. ಸಿಬಿಐ ನಿರ್ದೇಶಕರಿಗೆ ಬರೆದಿರುವ ಅನುಮತಿ ಪತ್ರದಲ್ಲಿ ಈ ಅಂಶ ಸ್ಪಷ್ಟಪಡಿಸಿದ್ದಾರೆ. ದೇಶದ ಇತಿಹಾಸದಲ್ಲೇ ಇಂತಹದೊಂದು ಪ್ರಸಂಗ ನಡೆದಿರಲಿಲ್ಲ. ಪ್ರಾಥಮಿಕ ತನಿಖೆಯಲ್ಲಿ ಆರೋಪ ಸಾಬೀತಾಗದ ಹಿನ್ನೆಲೆಯಲ್ಲಿ, ಎಫ್ಐಆರ್ ದಾಖಲಿಸಲು ಅನುಮತಿ ಕೋರಿ ಸಿಜೆಐಗೆ ಸಿಬಿಐ ನಿರ್ದೇಶಕರು ಪತ್ರ ಬರೆದಿದ್ದರು. ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ವೀರಸ್ವಾಮಿ ಪ್ರಕರಣದಲ್ಲಿನ ಆದೇಶದ ಪ್ರಕಾರ ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ವಿರುದ್ಧ ಎಫ್ಐಆರ್‌ಗೆ ಸಿಜೆಐಗೆ ಅನುಮತಿ ಕಡ್ಡಾಯವಾಗಿದೆ. ಸಿಬಿಐ ಮೂಲಗಳ ಪ್ರಕಾರ, ನ್ಯಾಯಮೂರ್ತಿ ಶುಕ್ಲಾ ವಿರುದ್ಧ ಎಫ್ಐಆರ್ ದಾಖಲಾಗಲಿದ್ದು, ಬಂಧನದ ಸಾಧ್ಯತೆಯಿದೆ. ಇಲ್ಲಿಯವರೆಗೆ ಯಾವುದೇ ಹಾಲಿ ನ್ಯಾಯಮೂರ್ತಿಗಳನ್ನು ತನಿಖಾ ಸಂಸ್ಥೆ ಬಂಧಿಸಿದ ಉದಾಹರಣೆ ಇಲ್ಲ.

ಆಧಾರ–ವಿಜಯಕರ್ನಾಟಕ, 01.08.2019

6. ಎತ್ತಿನ ಹೊಳೆ ಯೋಜನೆಗಿಲ್ಲ ಸುಪ್ರೀಂ ತಡೆ

ನೇತ್ರಾವತಿ ನದಿ ತಿರುಗಿಸಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಸೇರಿ ವಿವಿಧ ಭಾಗಗಳಲ್ಲಿ ಕುಡಿಯುವ ನೀರು ಪೂರೈಸುವ ಎತ್ತಿನಹೊಳೆ ಯೋಜನೆ ಪ್ರಶ್ನಿಸಿ ಪರಿಸರವಾದಿ ಕೆ.ಎನ್. ಸೋಮಶೇಖರ್ ಸಲ್ಲಿಸಿದ ಮೇಲ್ಮನವಿ ಅರ್ಜಿಯನ್ನು ಸುಪ್ರಿಂಕೋರ್ಟ್ ವಜಾಗೊಳಿಸಿದೆ. ಇದರಿಂದ

ನೇತ್ರಾವತಿ ನದಿ ನೀರು, ಪಶ್ಚಿಮ ಘಟ್ಟಗಳ ಸಂರಕ್ಷಣೆ ಹೆಸರಲ್ಲಿ ಹೋರಾಟ ನಡೆಯುತ್ತಿದ್ದ ಪರಿಸರವಾದಿಗಳಿಗೆ ಭಾರಿ ಹಿನ್ನಡೆಯಾಗಿದೆ.

ಇದು ರಾಜ್ಯ ಸರ್ಕಾರ ಕುಡಿಯುವ ನೀರು ಪೂರೈಕೆಗೆ ಮಾಡಿರುವ ಯೋಜನೆ, ದೇಶದಲ್ಲಿ ಈಗ ನೀರಿಗಾಗಿ ಭಾರಿ ಸಮಸ್ಯೆ ಎದುರಾಗಿದೆ. ಸದರಿ ಯೋಜನೆಗೆ 13 ಹೆಕ್ಟೇರ್‌ನಷ್ಟು ಅರಣ್ಯ ಬಳಸಿಕೊಳ್ಳಲಾಗಿದೆಯಷ್ಟೇ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ನಾಗೇಶ್ವರರಾವ್ ನೇತೃತ್ವದ ನ್ಯಾಯಪೀಠ, ಯೋಜನೆಗೆ ಅನುಮೋದನೆ ನೀಡಿ ಮೇಲ್ಮನವಿ ಅರ್ಜಿ ತಿರಸ್ಕರಿಸಿತು.

ಆಧಾರ–ವಿಜಯವಾಣಿ, 07.09.2019

7. ಸರ್ಕಾರಿ ಶಾಲೆ ಮೂಲ ಸೌಕರ್ಯ ವೃದ್ಧಿಗೆ ಕ್ರಮ ಕೈಗೊಳ್ಳಲು ಸೂಚನೆ

ರಾಜ್ಯ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ, ಶಿಕ್ಷಕರು ಹಾಗೂ ಸಿಬ್ಬಂದಿ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ಜರುಗಿಸುವಂತೆ ಸರ್ಕಾರ ಮತ್ತು ಶಿಕ್ಷಣ ಇಲಾಖೆಗೆ ಹೈಕೋರ್ಟ್ ನಿರ್ದೇಶಿಸಿದೆ.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಆಯ್ದ ಒಂದು ಸಾವಿರ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ವಿಭಾಗ ಆರಂಭಿಸಲಾಗಿದೆ. ಸಾಧಕ–ಬಾಧಕ ಅರಿತು ಉಳಿದ ಶಾಲೆಗಳಿಗೂ ವಿಸ್ತರಿಸುವ ಕುರಿತು ತೀರ್ಮಾನಿಸಲಾಗುವುದು ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಮಾಹಿತಿ ಸಿಂಧು ಯೋಜನೆಯಡಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 2000–01ನೇ ಸಾಲಿನಿಂದ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. 2016–17ನೇ ಸಾಲಿನಿಂದ ಶಿಕ್ಷಕರ ತಾಂತ್ರಿಕ ಜ್ಞಾನದ ಗುಣಮಟ್ಟ ಹೆಚ್ಚಿಸಲು ಟಿಎಎಲ್ಪಿ ಯೋಜನೆಯಡಿ 2,500 ಪ್ರೌಢಶಾಲೆಗಳ 11 ಸಾವಿರ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. 2020–21 ನೇ ಸಾಲಿನಲ್ಲಿ 4,681 ಸರ್ಕಾರಿ ಶಾಲೆಗಳನ್ನು ಈ ಯೋಜನೆಯಡಿ ತರಲಾಗುವುದು ಎಂದು ತಿಳಿಸಲಾಗಿದೆ.

ಆಧಾರ–ಪ್ರಜಾವಾಣಿ, 10.09.2019

8. ಸ್ಪೀಕರ್ ಕ್ರಮವೇ ಕಾನೂನು ಬಾಹಿರ

ಜೆ.ಡಿ.ಎಸ್., ಕಾಂಗ್ರೆಸ್ ಶಾಸಕರ ರಾಜೀನಾಮೆ ಸ್ವೀಕಾರ ಮಾಡದೇ ಅವರನ್ನು ಅನರ್ಹಗೊಳಿಸಿದ್ದು, ಕಾನೂನು ಬಾಹಿರ ಎಂದು ಅನರ್ಹ ಶಾಸಕರ ಪರ ವಕೀಲ ಮುಕುಲ್ ರೋಹಟಗಿ ಸುಪ್ರೀಂಕೋರ್ಟ್‌ನಲ್ಲಿ ಬಲವಾಗಿ ಪ್ರತಿಪಾದಿಸಿದ್ದಾರೆ.

ವಾದದ ಮುಖ್ಯಾಂಶಗಳು

- ❖ ರಾಜೀನಾಮೆ ಸ್ವೀಕಾರ ಮಾಡದೇ ನೋಟಿಸ್ ನೀಡಿದ ಸ್ಪೀಕರ್ ಕ್ರಮವೇ ಕಾನೂನು ಬಾಹಿರ ಇಬ್ಬರಿಗೆ ಮಾತ್ರ ಮೊದಲು ನೋಟೀಸ್ ನೀಡಲಾಗಿದೆ. ಉಳಿದವರಿಗೆ ರಾಜೀನಾಮೆ ಸಲ್ಲಿಸಿದ ನಂತರ ನೋಟೀಸ್ ನೀಡಲಾಗಿದೆ.
- ❖ ಈಗ ಈ ಶಾಸಕರ ಕ್ಷೇತ್ರಗಳಲ್ಲಿ ಉಪಚುನಾವಣೆ ಎದುರಾಗಿದೆ. ಉಪ ಚುನಾವಣೆಯನ್ನು ತಡೆಯಬೇಕು ಅಥವಾ ಅನರ್ಹರು ಸ್ಪರ್ಧಿಸಲು ಅವಕಾಶ ನೀಡಬೇಕು.
- ❖ ಅನರ್ಹ ಶಾಸಕರ ಬಗ್ಗೆ ಸ್ಪೀಕರ್ ನೀಡಿರುವ ಆದೇಶ ಸಂಪೂರ್ಣ ಕಾನೂನುಬಾಹಿರ.
- ❖ ಸ್ಪೀಕರ್ ಆದೇಶದ ಪ್ರಕಾರ 2023ರವರೆಗೂ ಸ್ಪರ್ಧೆಗೆ ಅವಕಾಶ ಇಲ್ಲವಾಗಿದೆ. ಈಗ ಸ್ಪರ್ಧೆಗೆ ಅವಕಾಶ ನೀಡಬೇಕು.

- ರಾಜೀನಾಮೆ ಸ್ವಯಂಪ್ರೇರಿತವಾಗಿದ್ದರೆ ಸ್ವೀಕಾರ ಮಾಡಬೇಕು. ಆದರೆ, ಸ್ಪೀಕರ್ ಹಾಗೆ ಮಾಡಿಲ್ಲ. ಅವರನ್ನು ಕಾನೂನು ಬಾಹಿರವಾಗಿ ಅನರ್ಹ ಮಾಡಲಾಗಿದೆ. ಇದೀಗ ಚುನಾವಣೆ ಎದುರಾಗಿದೆ, ಅದೇ ಸಮಸ್ಯೆ.
- ಕೆಪಿಸಿಸಿ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ಕೇಂದ್ರ ಚುನಾವಣಾ ಆಯೋಗದ ಪರ ರಾಕೇಶ್ ದ್ವಿವೇದಿ ವಾದ ಮಂಡಿಸಿದರು.

ಆಯೋಗದ ನಿರ್ಧಾರವೇ ಅಂತಿಮ

ಅನರ್ಹ ಶಾಸಕರು ಉಪ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಡೆಯಲಾಗದು ಎಂಬ ಕೇಂದ್ರ ಚುನಾವಣೆ ಆಯೋಗದ ಪರ ವಕೀಲರ ವಾದ ಸರಿಯಾಗಿಯೇ ಇದೆ ಎಂದು ಹಿರಿಯ ವಕೀಲರು ಅಭಿಪ್ರಾಯ ಪಟ್ಟಿದ್ದಾರೆ. ಚುನಾವಣೆಯಲ್ಲಿ ಯಾರು ಸ್ಪರ್ಧಿಸಬಾರದು ಎನ್ನುವುದನ್ನು ಸ್ಪೀಕರ್ ನಿರ್ಧರಿಸುವುದು ಸಾಧ್ಯವಿಲ್ಲ ಅದನ್ನು ಚುನಾವಣಾ ಆಯೋಗ ನಿರ್ಧಾರ ಮಾಡಬೇಕು. ಸ್ಪೀಕರ್ ಅವರು ತಮ್ಮ ಆದೇಶದಲ್ಲಿ ಸದನದ ಅವಧಿ ಮುಗಿಯುವವರೆಗೆ ಅವರನ್ನು ಸದಸ್ಯತ್ವದಿಂದ ಅನರ್ಹ ಮಾಡಿದ್ದಾರೆ. ಆದರೆ, ಚುನಾವಣೆಯಲ್ಲಿ ಸ್ಪರ್ಧಿಸಲು ಮುಕ್ತ ಅವಕಾಶ ನೀಡಬೇಕಾಗಿರುವುದು ಚುನಾವಣಾ ಆಯೋಗದ ಕರ್ತವ್ಯ. ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹತೆ ಇರುವವರಿಗೆ ಅವಕಾಶ ಕೊಡದಿದ್ದರೆ ಅಂತಹವರು ಅದನ್ನು ನ್ಯಾಯಾಲಯದ ಮುಂದೆ ಪ್ರಶ್ನಿಸಲು ಅವಕಾಶವಿದೆ. ಅನರ್ಹರನ್ನು ಹೊರಗಿಟ್ಟು ಚುನಾವಣೆ ನಡೆಸುವುದು ಅಸಿಂಧು ಆಗುತ್ತದೆ. ಚುನಾವಣೆಯಲ್ಲಿ ಕಣಕ್ಕಿಳಿಯಲು ಮುಕ್ತ ಅವಕಾಶ ನೀಡುವ ಅಧಿಕಾರ ಆಯೋಗಕ್ಕೆ ಇದೆ ಎಂದು ವಾದ ಮಂಡಿಸಲಾಗಿದೆ.

ಆಧಾರ–ಸಂಯುಕ್ತಕರ್ನಾಟಕ, 24.09.2019

9. ಅನರ್ಹರಿಗೆ ಬಲ ತಂದ ಸ್ಪೀಕರ್ ಕಚೇರಿ

ಸುಪ್ರಿಂಕೋರ್ಟ್ ಮೆಟ್ಟಿಲೇರಿರುವ ರಾಜ್ಯದ ಅನರ್ಹ ಶಾಸಕರಿಗೆ ದಿಢೀರ್ ಬೆಳವಣಿಗೆಯಲ್ಲಿ ಸ್ಪೀಕರ್ ಕಚೇರಿಯ ಬಲ ಸಿಕ್ಕಿದೆ. ಅನರ್ಹರು ಚುನಾವಣೆಯಲ್ಲಿ ಸ್ಪರ್ಧಿಸಬಹುದು ಎಂದು ಕೇಂದ್ರ ಚುನಾವಣಾ ಆಯೋಗ ಮೌಖಿಕ ಒಪ್ಪಿಗೆ ನೀಡಿದ ಹಿನ್ನೆಲೆ ರಾಜ್ಯ ಸ್ಪೀಕರ್ ಕಚೇರಿ ಪರ ವಕೀಲರು ಪರೋಕ್ಷವಾಗಿ ಅನರ್ಹರ ಪರ ನಿಲುವು ಹೊರಹಾಕಿದ್ದಾರೆ. ಪ್ರಕರಣ ಸಂಬಂಧ ಸ್ಪೀಕರ್ ಪರವಾಗಿ ಕೇಂದ್ರದ ಸಾಲಿಸಿಟರ್ ಜನರಲ್ ತುಷರ್ ಮೆಹ್ತಾ ಸುಪ್ರೀಂಗೆ ವಿವರಣೆ ನೀಡಿದರು.

ಶಾಸಕನೊಬ್ಬ ಮಾತ್ರ ಪಕ್ಷಕ್ಕೆ ಬದ್ಧನಾಗಿರಬಹುದು. ಆದರೆ, ಅತನಿಗೆ ಕ್ಷೇತ್ರದ ಮತದಾರರೇ ಸಾರ್ವಭೌಮರು. ಪಕ್ಷ ವಿಪ್ ಜಾರಿ ಮಾಡಿದೆ ಎಂದ ಮಾತ್ರಕ್ಕೆ ಶಾಸಕರ ಕ್ಷೇತ್ರದ ಮತದಾರನ ಆಶಯವನ್ನು ಧಿಕ್ಕರಿಸುವುದು ಕಷ್ಟ. ರಾಜೀನಾಮೆ ನೀಡುವ ಶಾಸಕರ ಹಕ್ಕನ್ನು ಗೌರವಿಸಬೇಕಾಗುತ್ತದೆ ಎಂದು ಮೆಹ್ತಾ ಅವರು ವಿವರಣೆ ನೀಡಿದ್ದಾರೆ.

ಆಧಾರ–ವಿಜಯವಾಣಿ, 20.09.2019

10. ಸ್ಪೀಕರ್ ವರ್ತನೆಗೆ ಕೆಂಡದ ಮಳೆ

ಸುಪ್ರಿಂಕೋರ್ಟ್‌ನಲ್ಲಿ ಅನರ್ಹ ಶಾಸಕರ ಪ್ರಕರಣದ ವಿಚಾರಣೆ ಬಿರುಸಾಗಿ ನಡೆಯಿತು. ಸ್ಪೀಕರ್ ಅಧಿಕಾರ, ರಾಜೀನಾಮೆ ನೀಡಲು ಶಾಸಕರಿಗೆ ಇರುವ ಸ್ವಯಂಮಾಧಿಕಾರ ಸೇರಿದಂತೆ ಸಾಂವಿಧಾನಿಕ ಅಂಶಗಳ ಸುತ್ತ ನಡೆದ ವಾದ – ವಿವಾದದ ಇಣುಕು ನೋಟ ಇಲ್ಲಿದೆ.

ಸದನಕ್ಕೆ ಹೆಡ್ ಮಾಸ್ಟರ್ ಅಲ್ಲ.

- ಕೇಂದ್ರ ಚುನಾವಣಾ ಆಯೋಗ ಅನರ್ಹರು ಸ್ಪರ್ಧೆ ಮಾಡಬಹುದು ಎಂದಿದೆ. ಆದರೆ, ಇದಕ್ಕೆ ವಿರುದ್ಧವಾಗಿ ಆಯೋಗದ ರಾಜ್ಯ ಘಟಕ ಸ್ವರ್ಧೆಗೆ ಅವಕಾಶ ಇಲ್ಲ ಎಂದಿದೆ.
- ಅನರ್ಹ ಶಾಸಕರ ವಿಚಾರದಲ್ಲಿ ಸ್ಪೀಕರ್ ತಾರತಮ್ಯ ಮಾಡಿದ್ದಾರೆ. ಶಾಸಕರು ರಾಜೀನಾಮೆ ನೀಡಿದ್ದರೂ ಅದನ್ನು ಅಂಗೀಕರಿಸುವ ಬದಲಾಗಿ ಅನರ್ಹ ಮಾಡಿದ್ದಾರೆ. ಇದು ಕಾನೂನು ಪ್ರಕಾರ ಸರಿಯಲ್ಲ.
- ಶಾಸಕರಾಗಿದ್ದ ಮಹೇಶ್ ಕಮಟಳ್ಳಿ, ರಮೇಶ್ ಜಾರಕಿಹೊಳಿ, ನಾಗೇಂದ್ರ, ಉಮೇಶ್ ಜಾಧವ್, ಮತ್ತು ಪ್ರತಾಪ ಗೌಡ ಪಾಟೀಲ್ ಇವರೆಲ್ಲರೂ ರಾಜೀನಾಮೆ ನೀಡಿದ್ದರೂ ಸ್ಪೀಕರ್ ಇವರ ರಾಜೀನಾಮೆ ವಿಚಾರದಲ್ಲಿ ಒಂದೇ ರೀತಿ ನಿರ್ಧಾರ ಕೈಗೊಂಡಿಲ್ಲ.
- ಕಲಾಪ ನಡೆಸುವುದು ಸ್ಪೀಕರ್ ಕೆಲಸ. ಅದರ ಬದಲಾಗಿ ಯಾವುದೇ ರಾಜಕೀಯ ಪಕ್ಷದ ಪರ ವಕಾಲತ್ತು ವಹಿಸಬಾರದು. ಸರ್ಕಾರ ಉರುಳುವ ವಿಚಾರ ಅವರಿಗೆ ಸಂಬಂಧಪಟ್ಟಿಲ್ಲ. ಅವರು ಹೆಡ್ ಮಾಸ್ಟರ್ ಮಾದರಿಯಲ್ಲಿ ಶಾಸಕರನ್ನು ನಿಯಂತ್ರಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ.
- ಶಾಸಕರಾದ ಉಮೇಶ್ ಜಾಧವ ಅವರೂ ರಾಜೀನಾಮೆ ನೀಡಿದ್ದರು. ಆದರೆ, ಅವರ ರಾಜೀನಾಮೆ ವಿಷಯದಲ್ಲಿ ಕೈಗೊಂಡ ನಿರ್ಧಾರವನ್ನು ಬೇರೆ ಶಾಸಕರ ವಿಷಯದಲ್ಲಿ ಏಕೆ ಕೈಗೊಂಡಿಲ್ಲ.
- ಶಾಸಕರು ಸ್ಪೀಕರ್‌ಗೆ ರಾಜೀನಾಮೆ ಸಲ್ಲಿಸಿದ ನಂತರ ರಾಜ್ಯಪಾಲರನ್ನು ಭೇಟಿಯಾಗಿ ಅವರಿಗೂ ಅದರ ಪ್ರತಿ ನೀಡಿ ಮಾಹಿತಿ ನೀಡಿದ್ದಾರೆ. ಆದರೂ ಅವರನ್ನು ಅನರ್ಹಗೊಳಿಸಲಾಗಿದೆ.
- ಅನರ್ಹ ಶಾಸಕರಿಗೆ ಚುನಾವಣೆಯಲ್ಲಿ ಸ್ವರ್ಧಿಸುವ ಅವಕಾಶ ನೀಡಿ ಅಥವಾ ಈಗ ಘೋಷಣೆ ಆಗಿರುವ ಉಪ ಚುನಾವಣೆಗೆ ತಡೆ ನೀಡಿ.
- ಯಾವುದೇ ಶಾಸಕರು ರಾಜೀನಾಮೆ ನೀಡುವ ಮುನ್ನ ಅಲೋಚಿಸಿ ನೀಡುತ್ತಾರೆ. ಅದನ್ನು ಸ್ವೀಕರಿಸಬೇಕು. ಬೇರೆ ಕಾರಣ ನೀಡಿ ಅದನ್ನು ತಳ್ಳಿ ಹಾಕುವುದು ಸೂಕ್ತವಲ್ಲ. ಶಾಸಕರು ಚುನಾವಣೆಗೆ ಸ್ಪರ್ಧಿಸುವುದು ಸರಿಯಲ್ಲ.
- ಯಾವುದೇ ಶಾಸಕ ರಾಜೀನಾಮೆ ನೀಡುವುದು ಅತನ ವಿವೇಚನೆಗೆ ಬಿಟ್ಟ ವಿಚಾರ. ಶಾಸಕರು ಬೆದರಿಕೆ ಅಥವಾ ಆಮಿಷಕ್ಕೆ ಒಳಗಾಗಿ ರಾಜೀನಾಮೆ ನೀಡಿಲ್ಲ.
- ಜುಲ್ಲೆ 6 ರಂದು ಪ್ರತಾಪಗೌಡ ಪಾಟೀಲ್ ರಾಜೀನಾಮೆ ಸಲ್ಲಿಸಿದ್ದರು. ತಮ್ಮ ರಾಜೀನಾಮೆ ಸ್ವೀಕಾರ ಮಾಡುವಂತೆ ಸುಪ್ರಿಂಗೆ ಅರ್ಜಿ ಸಲ್ಲಿಸಿದರು. ಇದಾಗಿ ಐದು ದಿನಗಳ ನಂತರ ಆನಂದ್ ಸಿಂಗ್ ರಾಜೀನಾಮೆ ಸಲ್ಲಿಸಿದರು. ಆದರೂ ಅನರ್ಹ ಮಾಡಲಾಗಿದೆ.

ರಾಜೀನಾಮೆ ಕೊಟ್ಟರೆ ಕಳಂಕಿತ ಪಟ್ಟವೇ

- ಶಾಸಕರು ರಾಜೀನಾಮೆ ನೀಡಿದ ನಂತರ ಸ್ವತಂತ್ರರು, ಅಂತಹವರು ಪಕ್ಷೇತರರಾಗಿ ಅಥವಾ ಯಾವುದೇ ಪಕ್ಷದ ಅಡಿ ಚುನಾವಣೆಗೆ ಸ್ಪರ್ಧಿಸಲು ಯೋಗ್ಯರು.
- ರಾಜೀನಾಮೆ ನೀಡಿದ ಮಾತ್ರಕ್ಕೆ ಶಾಸಕರನ್ನು ಕಳಂಕಿತರು ಎಂದು ಪರಿಗಣಿಸಲು ಸಾಧ್ಯವಿಲ್ಲ. ರಾಜೀನಾಮೆ ನೀಡಿದವರು ಬೇರೆ ಪಕ್ಷ ಸೇರಬಹುದು ಅಥವಾ ತಾವೇ ಒಂದು ಪಕ್ಷ

ಕಟ್ಟಬಹುದು ಸರ್ಕಾರದ ಮೇಲೆ ವಿಶ್ವಾಸ ಇಲ್ಲದಿದ್ದರೆ ಅದರಿಂದ ಹೊರಬರುವ ಅಧಿಕಾರ ಅವರಿಗಿದೆ.

- ಡಾ: ಸುಧಾಕರ್ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಪ್ರಕರಣದ ತೀರ್ಪು ಹೊರಬರುವವರೆಗೂ ಉಪ ಚುನಾವಣೆ ಮುಂದೂಡಬೇಕು.

ಪ್ರಶ್ನಿಸಲು ಸಾಧ್ಯವಿಲ್ಲ:–

- ಶಾಸಕರಿಗೆ ರಾಜೀನಾಮೆ ಕೊಡುವ ಹಕ್ಕಿದೆ. ಅದನ್ನು ಪ್ರಶ್ನಿಸಲು ಸಾಧ್ಯವಿಲ್ಲ.
- ರಾಜೀನಾಮೆ ಹಾಗೂ ಅನರ್ಹತೆ ಪ್ರಶ್ನೆ ಬಂದಾಗ ಮೊದಲು ರಾಜೀನಾಮೆ ಅಂಗೀಕರಿಸಬೇಕು ತದನಂತರ ಆನರ್ಹತೆ ವಿಚಾರ.

ಆಗದ ವಿಲೀನಕ್ಕೆ ಅನರ್ಹತೆಯೆ:–

- ಈಗಿನ ಸ್ಪೀಕರ್ ಪರ ಹಾಜರಾಗಿರುವ ವಕೀಲರು ಹಿಂದಿನ ಸ್ಪೀಕರ್ ಕೈಗೊಂಡ ನಿರ್ಧಾರವನ್ನು ಸಮರ್ಥಿಸಿಲ್ಲ. ಶಾಸಕರ ರಾಜೀನಾಮೆ ಅವರ ವಿವೇಚನೆಗೆ ಬಿಟ್ಟ ವಿಚಾರ ಎನ್ನುವುದನ್ನು ಗಮನಿಸಬೇಕು.
- ಶಾಸಕ ಶ್ರೀಮಂತ ಪಾಟೀಲರು ಅನಾರೋಗ್ಯದ ಹಿನ್ನೆಲೆಯಲ್ಲಿ ಮುಂಬೈನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕಲಾಪಕ್ಕೆ ಹಾಜರಾಗುವುದು ಅಸಾಧ್ಯ ಎಂದು ಸ್ಪೀಕರ್‌ಗೆ ಪತ್ರ ಬರೆದಿದ್ದರು, ಅದರೂ ಅವರನ್ನು ಅನರ್ಹಗೊಳಿಸಲಾಗಿದೆ.
- ಶರಿಕರ್ ಅವರು ಕೆಪಿಜೆಪಿ ವಿಲೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ ಎಂದು ಸ್ಪೀಕರ್ ಅವರೇ ಹೇಳಿದ್ದರು. ಕೇವಲ ಒಬ್ಬ ಶಾಸಕ ಇನ್ನೊಂದು ಪಕ್ಷದಲ್ಲಿ ವಿಲೀನ ಆಗಲು ಸಾಧ್ಯವಿಲ್ಲ ಎಂದು ಕೆಪಿಜೆಪಿ ಪ್ರಕ್ರಿಯೆ ಅಪೂರ್ಣ ಆಗಿದೆ.

ಆಧಾರ–ಸಂಯುಕ್ತಕರ್ನಾಟಕ, 26.09.2019

11. ಸಮರಕ್ಕೆ ಅಲ್ಪ ವಿರಾಮ

ರಾಜ್ಯದ 17 ಶಾಸಕರ ಅನರ್ಹತೆ ಪ್ರಶ್ನೆ ಬಗ್ಗೆ ಸಮಗ್ರ ವಿಚಾರಣೆ ಅಗತ್ಯವಿದೆ ಎಂಬ ಸುಪ್ರೀಂಕೋರ್ಟ್ ಅಭಿಪ್ರಾಯವನ್ನು ಮನ್ನಿಸಿದ ಚುನಾವಣಾ ಆಯೋಗ ಆಕ್ಟೋಬರ್ 21ಕ್ಕೆ ನಿಗದಿಯಾಗಿದ್ದ 15 ಕ್ಷೇತ್ರಗಳ ಉಪ ಚುನಾವಣೆಯನ್ನು ಮುಂದೂಡಿದೆ.

ಸುಪ್ರೀಂಕೋರ್ಟ್‌ನಲ್ಲಿ ನಡೆದ ಮಹತ್ವದ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಎನ್.ವಿ.ರಮಣ, ಸಂಜೀವ್ ಖನ್ನಾ ಮತ್ತು ಕೃಷ್ಣ ಮುರಾರಿ ಅವರು ಪ್ರಕರಣವನ್ನು ಇತ್ಯರ್ಥ ಪಡಿಸಿದ ಬಳಿಕವೇ ಚುನಾವಣೆ ನಡೆಸುವುದು ಉತ್ತಮ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಈ ವೇಳೆ ಉಪಸ್ಥಿತರಿದ್ದ ಚುನಾವಣಾ ಆಯೋಗದ ಪರ ವಕೀಲ ರಾಕೇಶ್ ದ್ವಿವೇದಿ ಅವರು ಚುನಾವಣೆ ಮುಂದೂಡಿಕೆಗೆ ಒಪ್ಪಿದರು.

ಸುಪ್ರೀಂಕೋರ್ಟ್ ಸೂಚನೆ ಮತ್ತು ಚುನಾವಣಾ ಆಯೋಗದ ನಿರ್ಧಾರದಿಂದ 17 ಮಂದಿ ಆನರ್ಹ ಶಾಸಕರಿಗೆ ತಾತ್ಕಾಲಿಕ ನಿರಾಳತೆ ಒದಗಿದೆ.

ಒಮ್ಮಿಂದೊಮ್ಮೆಗೇ ಎದುರಾದ ಚುನಾವಣೆಯನ್ನು ಎದುರಿಸಲು ತಾವು ಸಜ್ಜಾಗಿಲ್ಲ ಎಂಬ ಕಾರಣ ನೀಡಿ ಅನರ್ಹ ಶಾಸಕರು ಕೂಡಾ ಚುನಾವಣೆ ಮುಂದೂಡಿಕೆಯನ್ನೇ ತಮ್ಮ ಪ್ರಧಾನ ಬೇಡಿಕೆಯಾಗಿ ಸುಪ್ರೀಂಕೋರ್ಟ್

ಮುಂದಿಟ್ಟಿದ್ದರು. ಈ ನಿಟ್ಟಿನಲ್ಲಿ ಅವರ ಬೇಡಿಕೆ ಈಡೇರಿದಂತಾಗಿದೆ. ಆದರೆ, ಅನರ್ಹತೆ ಪ್ರಶ್ನೆ ಇನ್ನಷ್ಟು ವಿಸ್ತೃತ ಚರ್ಚೆಗೆ ಒಳಪಡುವುದರಿಂದ ಭವಿಷ್ಯ ಏನಾಗಲಿದೆ ಎಂಬ ಆತಂಕವು ಇದೆ.

ಆಧಾರ–ವಿಜಯವಾಣಿ, 27.09.2019

12. ಭೂ ಪರಿವರ್ತನೆಗೆ ಅವಕಾಶ ಕೊಡಬೇಡಿ

ಭೂ ಮಾಫಿಯಾದ ಮರ್ಜಿಗೆ ಅನುಗುಣವಾಗಿ ಬೆಂಗಳೂರಿನಲ್ಲಿ ಭೂಸ್ವಾಧೀನ ಮತ್ತು ಡಿ ನೋಟಿಫಿಕೇಶನ್ ನಡೆಯುತ್ತಿದೆ. ಹಾಗಾಗಿ, ಇನ್ನು ಮುಂದೆ ಈ ರೀತಿಯ ಭೂ ಪರಿವರ್ತನೆಗೆ ಅವಕಾಶ ನೀಡಬಾರದು ಎಂದು ಸುಪ್ರೀಂಕೋರ್ಟ್ ಕರ್ನಾಟಕ ಸರ್ಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿಬಿಎಂಪಿಗೆ ಸೂಚನೆ ನೀಡಿದೆ.

ಒಂದು ಕಾಲದಲ್ಲಿ ಸುಂದರ ನಗರವಾಗಿದ್ದ ಬೆಂಗಳೂರನ್ನು ಅಭಿವೃದ್ಧಿಯ ಹೆಸರಿನಲ್ಲಿ ಸಂಚಾರ ದಟ್ಟಣೆ, ಜನಸಂಖ್ಯಾ ದಟ್ಟಣೆ, ಅಡ್ಡಾದಿಡ್ಡಿ ಕಟ್ಟಡಗಳ ನಗರವನ್ನಾಗಿ ಮಾಡಲಾಗಿದೆ. ಇಲ್ಲಿನ ಕೆರೆಗಳು ಸಾಯುತ್ತಿವೆ. ಮುಕ್ತ ಪ್ರದೇಶದ ವ್ಯಾಪ್ತಿ ಕುಸಿಯುತ್ತಿದೆ. ಮರಗಳ ಹನನವಾಗುತ್ತಿದೆ. ಇವೆಲ್ಲವೂ ಬೆಂಗಳೂರು ನಗರದ ಒಟ್ಟಾರೆ ಅಂದಕ್ಕೆ ಹಾನಿ ಉಂಟು ಮಾಡಿದೆ. ಬೆಂಗಳೂರಿನ ತಂಪು ಮತ್ತು ಸ್ವಚ್ಛ ಗಾಳಿ ಈಗ ಹೊಗೆ ಮತ್ತು ಧೂಳು ಮಿಶ್ರಿತ ಗಾಳಿಯಾಗಿದೆ ಎಂದು ಕೋರ್ಟ್ ಹೇಳಿದೆ.

ಈಗ ಎಷ್ಟೇ ಪ್ರಯತ್ನ ಮಾಡಿದರೂ ಬೆಂಗಳೂರಿನ ಹಳೆಯ ಸೌಂದರ್ಯವನ್ನು ಮರಳಿ ತರಲಾಗದು. ಆದರೆ, ಈಗಲೇ ಎಚ್ಚೆತ್ತುಕೊಂಡು ಯೋಜನಾಬದ್ಧವಾಗಿ ನಗರವನ್ನು ಅಭಿವೃದ್ಧಿಪಡಿಸಿದರೆ ಇರುವ ಸೌಂದರ್ಯವನ್ನಾದರೂ ಉಳಿಸಬಹುದು ಎಂದು ನ್ಯಾಯಾಮೂರ್ತಿಗಳಾದ ಅರುಣ್ ಮಿಶ್ರಾ, ಎಸ್. ಅಬ್ದುಲ್ ನಜೀರ್ ಹಾಗೂ ಎಂ.ಆರ್. ಶಾ ಅವರ ತ್ರಿಸದಸ್ಯ ಪೀಠ ಹೇಳಿತು.

ಪಾರ್ಕ್, ಆಟದ ಮೈದಾನ ಅಥವಾ ಬೇರೆ ಸಾರ್ವಜನಿಕ ಉದ್ದೇಶಕ್ಕೆಂದು ಮೀಸಲಿಟ್ಟ ಜಾಗವನ್ನು ಕಡ್ಡಾಯವಾಗಿ ಆ ಉದ್ದೇಶಕ್ಕೇ ಬಳಕೆ ಮಾಡಬೇಕು ಎಂದು ಸೂಚಿಸಿರುವ ನ್ಯಾಯಾಲಯವು ಇದನ್ನು ಉಲ್ಲಂಘಿಸಿದರೆ ಕಟ್ಟುನಿಟ್ಟಿನ ಕ್ರಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಆಧಾರ–ಪ್ರಜಾವಾಣಿ, 27.08.2019

ಭಾಗ –8

ಇತರೆ ರಾಜ್ಯಗಳ ಸುದ್ದಿಗಳು

1. ಗೋವಾದಲ್ಲಿ ಕಾಂಗ್ರೆಸ್‌ನ 10 ಶಾಸಕರ ಬಿಜೆಪಿ ಸೇರ್ಪಡೆಯಿಂದ ಬಿಜೆಪಿ ಸರ್ಕಾರಕ್ಕೆ ಸ್ಪಷ್ಟ ಬಹುಮತ

ಗೋವಾ ವಿಧಾನ ಸಭೆಯಲ್ಲಿ ಒಟ್ಟು 40 ಸದಸ್ಯ ಬಲವಿದ್ದು, ಯಾವುದೇ ಪಕ್ಷವು ಸರ್ಕಾರ ರಚಿಸಲು ಒಟ್ಟು 21 ಸ್ಥಾನ ಬೇಕು. ಈ 40 ಸ್ಥಾನಗಳಲ್ಲಿ ಬಿಜೆಪಿ 17, ಜಿಎಫ್‌ಪಿ 03, ಪಕ್ಷೇತರರು 03, ಕಾಂಗ್ರೆಸ್ 15, ಎನ್‌ಸಿಪಿ 01, ಎಂಜಿಪಿ 01, ಇದ್ದು ಜಿಎಫ್‌ಪಿ ಮತ್ತು ಪಕ್ಷೇತರರ ಬೆಂಬಲದೊಂದಿಗೆ ಬಿಜೆಪಿ ಸರ್ಕಾರ ರಚಿಸಿತು. ಗೋವಾ ವಿಧಾನ ಸಭೆಯ ವಿಪಕ್ಷ ಕಾಂಗ್ರೆಸ್ ನಾಯಕರಾದ ಶ್ರೀ ಚಂದ್ರಕಾಂತ್ ಕವ್ಲೇಕರ್ ನೇತೃತ್ವದ 10 ಕಾಂಗ್ರೆಸ್ ಶಾಸಕರು ಸಭಾಧ್ಯಕ್ಷರಾದ ಶ್ರೀ ರಾಜೇಶ್ ಪಟ್ನೇಕರ್ ಅವರನ್ನು ಭೇಟಿ ಮಾಡಿ ತಾವು ಕಾಂಗ್ರೆಸ್‌ನಿಂದ ಹೊರ ಹೋಗಿ ಬಿಜೆಪಿ ಸೇರುತ್ತಿರುವ ಕುರಿತು ಪತ್ರ ನೀಡಿದರು. ಕಾಂಗ್ರೆಸ್‌ನ 15 ಶಾಸಕರ ಪೈಕಿ 10 ಶಾಸಕರು ಬಿಜೆಪಿಗೆ ಸೇರಿದ ಕಾರಣ ಅಲ್ಪ ಬಹುಮತದೊಂದಿಗೆ ಸರ್ಕಾರ ನಡೆಸುತ್ತಿದ್ದ ಮುಖ್ಯಮಂತ್ರಿ ಶ್ರೀ ಪ್ರಮೋದ್ ಸಾವಂತ್ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಸ್ಪಷ್ಟ ಬಹುಮತ ಸಿಕ್ಕಿದೆ.

ಆಧಾರ–ಕನ್ನಡ ಪ್ರಭ 11.07.2019

2. ಆರು ರಾಜ್ಯಗಳಿಗೆ ರಾಜ್ಯಪಾಲರ ನೇಮಕ

ಮಧ್ಯಪ್ರದೇಶದ ಹಾಲಿ ರಾಜ್ಯಪಾಲರಾಗಿರುವ ಆನಂದಿಬೆನ್ ಪಟೇಲ್ ಅವರನ್ನು ಉತ್ತರ ಪ್ರದೇಶಕ್ಕೆ ಹಾಗೂ ಬಿಹಾರ ರಾಜ್ಯಪಾಲ ಲಾಲ್ ಜಿ ಟಂಡನ್ ಅವರನ್ನು ಮಧ್ಯಪ್ರದೇಶಕ್ಕೆ ಹಾಗೂ ಬಿಹಾರ ರಾಜ್ಯಪಾಲರ ನೇಮಕವಾಗಿದೆ. ಉತ್ತರಖಂಡ ಮತ್ತು ಉತ್ತರ ಪ್ರದೇಶ ವಲಯಗಳನ್ನು ಹೊಂದಿದ್ದ "ಸಂಯುಕ್ತ ಪ್ರಾಂತ್ಯಕ್ಕೆ" 1947 ರಲ್ಲಿ ಸರೋಜಿನಿ ನಾಯ್ಡು ಅವರ ಮೊದಲ ಜಿದ್ದಾಜಿದ್ದಿಗೆ ಸಾಕ್ಷಿಯಾಗಿರುವ ಪಶ್ಚಿಮ ಬಂಗಾಳದಲ್ಲಿ ರಾಜ್ಯಪಾಲ ಕೇಸರಿನಾಥ್ ತ್ರಿಪಾಠಿ ಅವರ ಸ್ಥಾನಕ್ಕೆ ಸುಪ್ರೀಂಕೋರ್ಟ್ ಹಿರಿಯ ವಕೀಲ ಜಗದೀಪ್ ಧಾನ್ಯರ್ ಅವರ ನೇಮಕವಾಗಿದೆ.

ಯಾವ ರಾಜ್ಯಕ್ಕೆ ರಾಜ್ಯಪಾಲರ ನೇಮಕ:–

- ಉತ್ತರ ಪ್ರದೇಶ – ಆನಂದಿಬೆನ್ ಪಟೇಲ್
- ಮಧ್ಯ ಪ್ರದೇಶ – ಲಾಲ್‌ಜಿ ಟಂಡನ್
- ಪಶ್ಚಿಮ ಬಂಗಾಳ – ಜಗದೀಪ್ ಧಾನ್ಕರ್
- ಬಿಹಾರ – ಫಗು ಚೌಹಾಣ್
- ತ್ರಿಪುರಾ – ರಮೇಶ್ ಬಿಯಾಸ್
- ನಾಗಾಲ್ಯಾಂಡ್ – ಆರ್. ಎನ್. ರವಿ

ಅನಂದಿಬೆನ್ ಪಟೇಲ್: ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2007 ರಿಂದ 2014ರವರೆಗೆ ಹಲವು ಮಹತ್ವದ ಖಾತೆಗಳನ್ನು ನಿರ್ವಹಿಸಿದರು. ಮೋದಿ ಅವರು 2014ರಲ್ಲಿ ಪ್ರಧಾನಿಯಾದ ಬಳಿಕ ಮುಖ್ಯಮಂತ್ರಿಯಾಗಿ ನೇಮಕವಾದರು. ರಾಜ್ಯದ ಮೊದಲ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಅವರದು. ವಯಸ್ಸು 75 ಆದಕಾರಣ 2016ರಲ್ಲಿ ಸ್ವಯಂ ಪ್ರೇರಣೆಯಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 2018ರ ಜನವರಿಯಲ್ಲಿ ಮಧ್ಯಪ್ರದೇಶ ರಾಜ್ಯಪಾಲರಾಗಿ ನೇಮಕವಾಗಿದ್ದರು.

ಲಾಲ್‌ಜಿ ಟಂಡನ್: ಉತ್ತರ ಪ್ರದೇಶದ ಹಿರಿಯ ರಾಜಕಾರಣಿ, ಬಿಜೆಪಿ ಕಟ್ಟಾಳು. ಮಾಜಿ ಪ್ರಧಾನಿ ಎ.ಬಿ.ವಾಜಪೇಯಿ ಅವರಿಗೆ ಬಹಳ ಹತ್ತಿರವಾಗಿದ್ದ ಇವರು ಮಾಜಿ ಸಿಎಂ ಕಲ್ಯಾಣ್ ಸಿಂಗ್ ಸಂಪುಟದಲ್ಲಿ ಸಚಿವರಾಗಿದ್ದರು. ಲಖನೌ ಲೋಕಸಭೆ ಕ್ಷೇತ್ರದಿಂದ 2009ರಲ್ಲಿ ಬಿ.ಜೆ.ಪಿ. ಯಿಂದ ಸ್ಪರ್ಧಿಸಿ ಗೆದ್ದಿದ್ದರು.

ಜಗದೀಪ್ ಧಾನ್ಕರ್: ಮೂಲತಃ ಕಾಂಗ್ರೆಸ್ಸಿಗರಾಗಿದ್ದ ಧಾನ್ಕರ್ 2003ರಲ್ಲಿ ಬಿಜೆಪಿ ಸೇರಿದರು. ಸುಪ್ರೀಂಕೋರ್ಟ್‌ನ ಹಿರಿಯ ವಕೀಲರು. ರಾಜಸ್ಥಾನದ ಕೃಷ್ಣಗಢ ಕ್ಷೇತ್ರದಿಂದ ಶಾಸಕರಾಗಿ ಹಾಗೂ ಜುಂಜುನು ಕ್ಷೇತ್ರದಿಂದ ಸಂಸದರಾಗಿದ್ದವರು. 1989–1991ರ ಅವಧಿಯಲ್ಲಿ ಕೇಂದ್ರ ಸಚಿವರಾಗಿದ್ದರು.

ಫಗು ಚೌಹಾಣ್ : ಉತ್ತರ ಪ್ರದೇಶದ ಘೋಸಿ ಕ್ಷೇತ್ರದ ಬಿಜೆಪಿ ಶಾಸಕರು, ಆರು ಬಾರಿ ಕ್ಷೇತ್ರವನ್ನು ಗೆದ್ದುಕೊಂಡಿದ್ದು ಇವರ ಹೆಚ್ಚುಗಾರಿಕೆ. 1991, 1996, 2002 ರಲ್ಲಿ ಜನತಾದಳದಿಂದ ಆಯ್ಕೆಯಾಗಿದ್ದರು. 2017ರಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದರು. ಈಗ ರಾಜ್ಯಪಾಲರಾಗಿರುವುದರಿಂದ ಶಾಸಕರಾಗಿದ್ದಾಗಲೇ ಸಕ್ರಿಯ ರಾಜಕೀಯ ಜೀವನಕ್ಕೆ ಗುಡ್ ಬೈ ಹೇಳಿದರು.

ರಮೇಶ್ ಬಿಯಾಸ್: ಛತ್ತೀಸ್‌ಗಢದ ಬಿಜೆಪಿ ಹಿರಿಯ ರಾಜಕಾರಣಿ, ಇವರು 1989 ರಿಂದ ರಾಯಪುರ ಲೋಕಸಭೆ ಕ್ಷೇತ್ರವನ್ನು ಸತತವಾಗಿ ಗೆಲ್ಲುವ ಮೂಲಕ ಸದ್ದು ಮಾಡಿದವರು. ವಾಜಪೇಯಿ ಸಂಪುಟದಲ್ಲಿ ಹಲವು ಖಾತೆಗಳನ್ನು ನಿಭಾಯಿಸಿದ್ದಾರೆ. 2019ರ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ.

ಆರ್. ಎನ್. ರವಿ: 1976 ನೇ ಬ್ಯಾಚ್‌ನ ಕೇರಳ ಕೇಡರ್‌ನ ಐಪಿಎಸ್ ಅಧಿಕಾರಿ. ಮಾಜಿ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರ, ಅಜಿತ್ ಧೋವಲ್ ಗುಪ್ತಚರ ವಿಭಾಗದ ನಿರ್ದೇಶಕರಾಗಿದ್ದ ವೇಳೆ ರವಿ ಅವರಿಗೆ ಈಶಾನ್ಯ ಭಾರತದ ಉಸ್ತುವಾರಿ ನೀಡಲಾಗಿತ್ತು. ನಾಗಾಬಂಡುಕೋರ ಸಂಘಟನೆಗಳು ನಡೆಸಲಾಗುತ್ತಿರುವ ಶಾಂತಿ ಮಾತುಕತೆಯಲ್ಲಿ ಇವರ ಪಾತ್ರ ದೊಡ್ಡದಿದೆ.

ಆಧಾರ–ವಿಜಯಕರ್ನಾಟಕ, 21.07.2019

3. ಉತ್ತರ ಪ್ರದೇಶದಲ್ಲಿ ತಲಾಖ್ ಸಂತ್ರಸ್ತರಿಗೆ (6 ಸಾವಿರ) ಪರಿಹಾರ ಘೋಷಣೆ

ತ್ರಿವಳಿ ತಲಾಖ್ ಸಂತ್ರಸ್ತರಿಗೆ ಪುನಶ್ಚೇತನ ವ್ಯವಸ್ಥೆ ಕಲ್ಪಿಸುವವರೆಗೂ ವಾರ್ಷಿಕ 6 ಸಾವಿರ ರೂ. ಪರಿಹಾರ ಧನವನ್ನಾಗಿ ನೀಡುವುದಾಗಿ ಉತ್ತರ ಪ್ರದೇಶ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್ ಪ್ರಕಟಿಸಿದ್ದಾರೆ. ಅಲ್ಲದೇ ಇಂತಹ ಸಂತ್ರಸ್ತರ ದೂರಿನ ವಿಚಾರದಲ್ಲಿ ಪೊಲೀಸರು ಕ್ರಮ ತೆಗೆದುಕೊಳ್ಳದೇ ಇದ್ದರೆ ಪೊಲೀಸರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ಸಂತ್ರಸ್ತರಿಗೆ ಉಚಿತವಾಗಿ ಕಾನೂನು ಸೇವೆಯನ್ನು ಒದಗಿಸಲಾಗುತ್ತದೆ ಎಂದರು.

ತ್ರಿವಳಿ ತಲಾಖ್ ಸಂತ್ರಸ್ತ ಮಹಿಳೆಯರೊಂದಿಗೆ ಪ್ರಧಾನ ಮಂತ್ರಿ ಜನವಿಕಾಸ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಶ್ರೀ ಯೋಗಿ ಅದಿತ್ಯನಾಥ ಸಂವಾದ ನಡೆಸಿ ಸುಶಿಕ್ಷಿತ ಮಹಿಳೆಯರಿಗೆ ಅವರ ಅರ್ಹತೆಗೆ ತಕ್ಕಂತೆ ಸರ್ಕಾರಿ ಉದ್ಯೋಗವನ್ನು ಮತ್ತು ಇತರ ಮಹಿಳೆಯರಿಗೆ ವಸತಿ ಹಾಗೂ ಶಿಕ್ಷಣವನ್ನು ವಿವಿಧ ಯೋಜನೆಗಳ ಅಡಿಯಲ್ಲಿ ಒದಗಿಸಲಾಗುತ್ತದೆ. ಮಹಿಳೆಯರಿಗೆ ಆಯುಷ್ಮಾನ್‌ಭಾರತ್ ಯೋಜನೆ ಅಥವಾ ಮುಖ್ಯಮಂತ್ರಿಗಳ ಆರೋಗ್ಯ ಯೋಜನೆ ಅಡಿಯಲ್ಲಿ ವಿಮೆ ಒದಗಿಸಲಾಗುತ್ತದೆ ಈ ಮಹಿಳೆಯರಿಗೆ ಕಲ್ಯಾಣ ಯೋಜನೆಗಳನ್ನು ರೂಪಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸುಮಾರು 300 ಸಂತ್ರಸ್ತರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಆಧಾರ–ವಿಜಯಕರ್ನಾಟಕ, 21.07.2019

4. ಆಂಧ್ರ ಪ್ರದೇಶದ ಖಾಸಗಿ ಉದ್ಯಮಗಳಲ್ಲಿ ಸ್ಥಳೀಯರಿಗೆ ಶೇಕಡ 75 ಮೀಸಲಾತಿ

ಖಾಸಗಿ ಉದ್ಯಮಗಳಲ್ಲಿ ಶೇಕಡ 75 ರಷ್ಟು ಉದ್ಯೋಗವನ್ನು ಸ್ಥಳೀಯರಿಗೆ ಮೀಸಲಿಡುವ ಮಸೂದೆಗೆ ಆಂಧ್ರಪ್ರದೇಶ ವಿಧಾನ ಸಭೆ ಅನುಮೋದನೆ ನೀಡಿದೆ.

ಎಲ್ಲ ಉದ್ಯಮಗಳು, ಕಾರ್ಖಾನೆಗಳು, ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದ ಯೋಜನೆಗಳಲ್ಲಿ ಸ್ಥಳೀಯರಿಗೆ ಈ ಮೀಸಲಾತಿ ಅನ್ವಯಿಸಲಿದೆ. ಇಂತಹ ಕಾಯ್ದೆಯನ್ನು ದೇಶದಲ್ಲೇ ಮೊದಲ ಬಾರಿಗೆ ರೂಪಿಸಿದ ರಾಜ್ಯ ಆಂಧ್ರ ಪ್ರದೇಶವಾಗಿದೆ.

ಈ ಸಂಬಂಧ ರೂಪಿಸಿರುವ, "ಉದ್ಯಮಗಳು ಮತ್ತು ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಕಾಯ್ದೆ 2019"ಕ್ಕೆ, ವಿಧಾನಸಭೆ ಅನುಮೋದನೆ ನೀಡಿದೆ. ಈ ಕಾಯ್ದೆ ಜಾರಿಯಾದ ಬಳಿಕ ಸ್ಥಾಪನೆಯಾಗುವ ಘಟಕಗಳಿಗೂ ಅನ್ವಯವಾಗಲಿದೆ.

ಕಾಯ್ದೆಯ ಪ್ರಮುಖ ಅಂಶ: ಒಂದು ವೇಳೆ ಕೌಶಲ ಹೊಂದಿದ ಸ್ಥಳೀಯರು ಲಭ್ಯವಾಗದಿದ್ದರೆ ಸರ್ಕಾರದ ಸಹಭಾಗಿತ್ವದಲ್ಲಿ ಉದ್ಯಮಗಳು ತರಬೇತಿ ನೀಡಿ ಉದ್ಯೋಗ ಕಲ್ಪಿಸಬೇಕು. ಅಲ್ಲದೆ ಕಂಪನಿಗಳು ಕಾಯ್ದೆಯನ್ನು ಪಾಲಿಸಿರುವ ಬಗ್ಗೆ ತ್ರೈಮಾಸಿಕ ವರದಿ ನೀಡಬೇಕು. ಯುವಕರನ್ನು ಸಜ್ಜುಗೊಳಿಸಲು ತರಬೇತಿ ಕೇಂದ್ರಗಳನ್ನು ಸರ್ಕಾರ ಆರಂಭಿಸಲಿದೆ ಎಂದು ಕಾಯ್ದೆಯಲ್ಲಿ ಉಲ್ಲೇಖಿಸಲಾಗಿದೆ.

ಆಧಾರ–ಪ್ರಜಾವಾಣಿ, 24.07.2019

5. ಅಸ್ಸಾಂನಲ್ಲಿ 19 ಲಕ್ಷ ಅಕ್ರಮ ವಾಸಿಗಳು

ಈಶಾನ್ಯ ರಾಜ್ಯ ಅಸ್ಸಾಂನಲ್ಲಿರುವ ನೈಜ ಪ್ರಜೆಗಳು ಯಾರು ಹಾಗೂ ಅಕ್ರಮ ವಲಸಿಗರು ಯಾರು ಎಂಬುದನ್ನು ಪತ್ತೆ ಹಚ್ಚಲು ನಡೆಸಲಾದ ರಾಷ್ಟ್ರೀಯ ನಾಗರಿಕ ನೋಂದಣಿ (ಎನ್‌ಆರ್‌ಸಿ) ಅಂತಿಮ ಪಟ್ಟಿ ಪ್ರಕಟಗೊಂಡು, ಸದರಿ ಪಟ್ಟಿಯಿಂದ ಒಟ್ಟು 19.04 ಲಕ್ಷ ಮಂದಿಯನ್ನು ಹೊರಗಿಡಲಾಗಿರುವುದು ದೋಷಪೂರಿತ ಪ್ರಕ್ರಿಯೆ ಎಂದು ಅಸ್ಸಾಂನಲ್ಲಿ ಆಕ್ರೋಶ ವ್ಯಕ್ತವಾಯಿತು. ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲವಾಗಿರುವ 19.04 ಲಕ್ಷ ಮಂದಿಯನ್ನು ಕೂಡಲೇ ದೇಶದಿಂದ ಹೊರದಬ್ಬಲಾಗುವುದಿಲ್ಲ. ಬಂಧಿಸುವುದೂ ಇಲ್ಲ. ಅವರೆಲ್ಲ ವಿದೇಶಿ ನ್ಯಾಯಾಧೀಕರಣದ ಮುಂದೆ 120 ದಿನದೊಳಗೆ ಅಪೀಲು ಸಲ್ಲಿಸಬೇಕು ಅಲ್ಲಿ ನ್ಯಾಯ ಪಡೆಯುವ ಅವಕಾಶವಿದೆ. ಇದಕ್ಕಾಗಿ 300 ನ್ಯಾಯಾಧೀಕರಣಗಳನ್ನು ಸ್ಥಾಪಿಸಲಾಗುತ್ತದೆಂದು ತಿಳಿಸಿ ಒಂದು ವೇಳೆ ಅಲ್ಲಿಯೂ ನ್ಯಾಯ ಸಿಗದಿದ್ದರೆ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಮೊರೆಹೋಗುವ ಅವಕಾಶವಿರುತ್ತದೆ.

ಮಾಜಿ ರಾಷ್ಟ್ರಪತಿ ಶ್ರೀ ಫಕ್ರುದ್ದಿನ್ ಅಲಿ ಅವರ ಕುಟುಂಬದ ಕೆಲವರ ಹೆಸರು ಸದರಿ ಪಟ್ಟಿಯಲ್ಲಿ ಇರುವುದಿಲ್ಲವೆಂದು ವರದಿಯಾಗಿ, ಇದೇ ರೀತಿ ಹಲವು ಅರ್ಹ ಭಾರತೀಯರ ಹೆಸರು ಕೂಡಾ ಪಟ್ಟಿಯಿಂದ ಕೈಬಿಡಲಾಗಿದೆ. ಆದರೆ. ಅವರು ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ. ಅವರಿಗೆ ಸ್ವತಃ ಈ ಸಂಬಂಧ ಸರ್ಕಾರವೇ ಮುಂದಿನ ಕಾನೂನು ಹೋರಾಟಕ್ಕೆ ಬೆಂಬಲ ನೀಡಲಿದೆ ಎಂದು ಅಸ್ಸಾಂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಶ್ರೀ ಚಂದ್ರಮೋಹನ್ ಹೇಳಿದರು.

ಎನ್‌ಆರ್‌ಸಿ ಅಂತಿಮ ಪಟ್ಟಿಗೆ ಅರ್ಹರೆಂದು ಪರಿಗಣಿಸಲ್ಪಟ್ಟವರ ಸಂಖ್ಯೆ 3.11 ಕೋಟಿ ಎನ್‌ಆರ್‌ಸಿ ಅಂತಿಮ ಕರಡು ಪಟ್ಟಿಯಲ್ಲಿ ಸ್ಥಾನ ಪಡೆದವರ ಸಂಖ್ಯೆ 2.89 ಕೋಟಿ ಎನ್‌ಆರ್‌ಸಿ ಅಂತಿಮ ಪಟ್ಟಿಯಿಂದ ಹೊರಗುಳಿದವರ ಸಂಖ್ಯೆ 19.6 ಲಕ್ಷ ಮತ್ತು ಎನ್‌ಆರ್‌ಸಿ ಪಟ್ಟಿ ತಯಾರಿಸಲು ಭಾಗಿಯಾದ ಸರ್ಕಾರಿ ಅಧಿಕಾರಿಗಳ ಸಂಖ್ಯೆ 52,000.

ಆಧಾರ–ಕನ್ನಡಪ್ರಭ, 01.09.2019

6. ಐದು ರಾಜ್ಯಗಳಿಗೆ ನೂತನ ರಾಜ್ಯಪಾಲರ ನೇಮಕ

ಐದು ರಾಜ್ಯಗಳಿಗೆ ನೂತನ ರಾಜ್ಯಪಾಲರ ನೇಮಕ ಮಾಡಿ, ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದ ಅವರು ದಿನಾಂಕ:01.09.2019ರಂದು ಆದೇಶ ಹೊರಡಿಸಿದ್ದಾರೆ. ಶಾಹಬಾನೋ ಪ್ರಕರಣ ವಿಚಾರದಲ್ಲಿ ರಾಜೀವ್ ಗಾಂಧಿ ಸಂಪುಟದಿಂದ ಹೊರನಡೆದಿದ್ದ ಅರಿಫ್ ಮಹಮ್ಮದ್ ಖಾನ್ ಕೇರಳ ನೂತನ ರಾಜ್ಯಪಾಲರಾಗಿ ಆಯ್ಕೆಯಾಗಿದ್ದಾರೆ. ತಮಿಳುನಾಡು ಬಿಜೆಪಿಯ ಅಧ್ಯಕ್ಷೆ ಡಾ. ತಮಿಳ್ ಸಾಯಿ ಸುಂದರ ರಾಜನ್ ಗೆ ತೆಲಂಗಾಣದ ಗವರ್ನರ್ ಹುದ್ದೆಯನ್ನು ನೀಡಲಾಗಿದೆ. ಈ ಮೂಲಕ ಅತಿ ಕಿರಿಯ ರಾಜ್ಯಪಾಲೆ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮಾಜಿ ಸಚಿವ ಶ್ರೀ ಕಲ್‌ರಾಜ್ ಮಿಶ್ರಾಗೆ ರಾಜಸ್ಥಾನ, ಶ್ರೀ ಬಿ.ಎಸ್. ಕೋಶಿಯಾರಿಗೆ ಮಹಾರಾಷ್ಟ್ರ ಮತ್ತು ಶ್ರೀ ಬಂಡಾರು ದತ್ತಾತ್ರೇಯರವರಿಗೆ ಹಿಮಾಚಲ ಪ್ರದೇಶದ ಜವಾಬ್ದಾರಿ ವಹಿಸಲಾಗಿದೆ.

ಆಧಾರ–ವಿಜಯಕರ್ನಾಟಕ, 02.09.2019

7. ಆಂಧ್ರ ಪ್ರದೇಶದ ಮಾಜಿ ಸ್ಪೀಕರ್ ಡಾ॥ ಕೋಡೇಲಾ ಶಿವಪ್ರಸಾದ್ ರಾವ್ ಆತ್ಮಹತ್ಯೆ

ಡಾ॥ ಕೋಡೇಲಾ ಶಿವಪ್ರಸಾದ್ ರಾವ್ ಅವರು ಗುಂಟೂರು ಜಿಲ್ಲೆಯ ಸೆಟ್ಟೇನಪಲ್ಲಿ ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿ ಶ್ರೀ ಎನ್ ಟಿ. ರಾಮರಾವ್ ಮತ್ತು ಶ್ರೀ ಚಂದ್ರಬಾಬು ನಾಯ್ಡು ಸಂಪುಟದಲ್ಲಿ ಸಚಿವರಾಗಿ, ಸ್ಪೀಕರ್ ಆಗಿ ಸೇವೆ ಸಲ್ಲಿಸಿದ್ದರು. 2019ರಲ್ಲಿ ಟಿಡಿಪಿ ಪತನಗೊಂಡು, ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಹಲವು ಭ್ರಷ್ಟಾಚಾರದ ಕೇಸ್‌ಗಳು ಇವರ ವಿರುದ್ಧ ದಾಖಲಾದವು.

ಅಧಿಕಾರದ ಕೊನೆಯಲ್ಲಿ ವಿಧಾನಸಭೆಯ ಕೋಟ್ಯಂತರ ರೂಪಾಯಿ ಮೌಲ್ಯದ ಪೀಠೋಪಕರಣಗಳನ್ನು ಬೇರೆಡೆಗೆ ಸಾಗಿಸಿದ ಆರೋಪವನ್ನು ಇವರ ವಿರುದ್ಧ ಹೊರಿಸಲಾಗಿತ್ತು. ಅದನ್ನು ಅವರೂ ಸಹ ಒಪ್ಪಿಕೊಂಡಿದ್ದರು. ಪುತ್ರ ಶ್ರೀ ಶಿವರಾಂ ವಿರುದ್ಧ ಕೌಶಲ್ಯಾಭಿವೃದ್ಧಿ ಕೇಂದ್ರಗಳಿಂದ ಲ್ಯಾಪ್‌ಟಾಪ್‌ಗಳನ್ನು ಸಾಗಿಸಿದ ಅಪಾದನೆ ಹೊರಿಸಲಾಗಿತ್ತು. ಇಬ್ಬರ ವಿರುದ್ಧವೂ ರಾಜ್ಯ ಸರ್ಕಾರವು ಕಳ್ಳತನದ ಪ್ರಕರಣ ದಾಖಲಿಸಿತ್ತು. ಇದರಿಂದ ತೀವ್ರ ಒತ್ತಡಕ್ಕೆ ಸಿಲುಕಿದ್ದ ಅವರು ಮಾನಸಿಕ ಖಿನ್ನತೆಯಿಂದ ಈ ಮೊದಲು ಒಮ್ಮೆ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಎರಡನೇ ಬಾರಿ ಹೈದರಾಬಾದ್‌ನ ತಮ್ಮ ನಿವಾಸದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರಿಂದ ತೀವ್ರವಾಗಿ ಅಸ್ವಸ್ಥಗೊಂಡಿದ್ದ ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಿ ಚಿಕಿತ್ಸೆ ನೀಡಿದರೂ ವಿಫಲವಾಗಿದ್ದರಿಂದ ದಿನಾಂಕ 16.09.2019 ರಂದು ಮಧ್ಯಾಹ್ನ ಸುಮಾರು 12.30 ಕ್ಕೆ ಕೊನೆಯುಸಿರೆಳೆದರು.

ಆಧಾರ–ವಿಜಯಕರ್ನಾಟಕ, 17.09.2019

ಭಾಗ–9

ಅಂತರರಾಷ್ಟ್ರೀಯ ಸುದ್ದಿಗಳು

1. ಜಾಧವ್ ಗಲ್ಲು ಶಿಕ್ಷೆಗೆ ತಡೆ: ಭಾರತಕ್ಕೆ ಗೆಲುವು

ಭಾರತೀಯ ನೌಕಾಪಡೆಯ ನಿವೃತ್ತ ಅಧಿಕಾರಿ ಕುಲಭೂಷಣ ಜಾಧವ್ ಅವರಿಗೆ ಪಾಕಿಸ್ತಾನದ ಸೇನಾ ನ್ಯಾಯಾಲಯವು ನೀಡಿದ್ದ ಮರಣದಂಡನೆ ತೀರ್ಪಿನ ವಿಚಾರದಲ್ಲಿ ಭಾರತಕ್ಕೆ ಮಹತ್ವದ ಗೆಲುವು ಲಭಿಸಿದೆ. ಪಾಕಿಸ್ತಾನದ ತೀರ್ಪನ್ನು ಮರುಪರಿಶೀಲನೆ ನಡೆಸುವಂತೆ ಅಂತರರಾಷ್ಟ್ರೀಯ ನ್ಯಾಯಾಲಯವು ಸೂಚನೆ ನೀಡಿದೆ. 2017ರಲ್ಲಿ ಜಾಧವ್ ಅವರನ್ನು ಪಾಕಿಸ್ತಾನ ಬಂಧಿಸಿತ್ತು. ಇವರ ವಿಚಾರಣೆ ನಡೆಸಿದ್ದ ಪಾಕಿಸ್ತಾನದ ಸೇನಾ ನ್ಯಾಯಾಲಯವು "ಜಾಧವ್ ಬಲೂಚಿಸ್ತಾನವನ್ನು ಅಸ್ಥಿರಗೊಳಿಸಲು ದೇಶದೊಳಗೆ ನುಸುಳಿ ಬಂದಿರುವ ಭಾರತೀಯ ಗೂಢಚಾರ" ಎಂದು ಆರೋಪಿಸಿ, ಅವರಿಗೆ ಮರಣದಂಡನೆ ವಿಧಿಸಿತ್ತು.

ಈ ತೀರ್ಪಿನ ವಿರುದ್ಧ ಅಂತರರಾಷ್ಟ್ರೀಯ ನ್ಯಾಯಾಲಯದ ಮೊರೆ ಹೋಗಿದ್ದ ಭಾರತವು ಜಾಧವ್ ಅವರ ವಿಚಾರಣೆಯನ್ನು ನ್ಯಾಯಬದ್ಧವಾಗಿ ನಡೆಸಿಲ್ಲ. ಪಾಕಿಸ್ತಾನವು ಅವರಿಗೆ ರಾಜತಾಂತ್ರಿಕ ನೆರವನ್ನು ನಿರಾಕರಿಸಿತ್ತು. ಅದು ವಿಯೆನ್ನಾ ಒಪ್ಪಂದದ ಉಲ್ಲಂಘನೆಯಾಗುತ್ತದೆ ಎಂದು ವಾದಿಸಿತ್ತು. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿತ್ತು. ಐದು ತಿಂಗಳ ಬಳಿಕ ತೀರ್ಪು ಹೊರಬಂದಿದೆ. ಅಂತರರಾಷ್ಟ್ರೀಯ ನ್ಯಾಯಾಲಯದ 16 ನ್ಯಾಯಾಧೀಶರ ಪೈಕಿ 15 ಮಂದಿ ಭಾರತದ ಪರ ತೀರ್ಪು ನೀಡಿದ್ದು, ಪಾಕಿಸ್ತಾನದ ನ್ಯಾಯಾಧೀಶರೊಬ್ಬರು ಮಾತ್ರ ಭಿನ್ನಮತ ದಾಖಲಿಸಿದ್ದಾರೆ.

ಆಧಾರ–ಪ್ರಜಾವಾಣಿ, 18.07.2019

2. ಬ್ರಿಟನ್ ನೂತನ ಪಿಎಂ ಜಾನ್ಸನ್

ಬ್ರಿಟನ್‌ನ ನೂತನ ಪ್ರಧಾನಿಯಾಗಿ, ಕನ್ಸರ್ವೇಟಿವ್ ಪಕ್ಷದ ಬೋರಿಸ್ ಜಾನ್ಸನ್ ಅವರು ಆಯ್ಕೆಯಾಗಿದ್ದಾರೆ.

ಬ್ರೆಕ್ಸಿಟ್ ನಿರ್ಧಾರಕ್ಕೆ ತಮ್ಮದೇ ಪಕ್ಷ ಕನ್ಸರ್ವೇಟಿವ್‌ನೊಳಗೆ ವಿರೋಧ ವ್ಯಕ್ತವಾದ ಹಿನ್ನೆಲೆ, ಹಾಲಿ ಪ್ರಧಾನಿ ಥೆರೇಸಾ ಮೇ ಅವರು ರಾಜೀನಾಮೆ ಸಲ್ಲಿಸಿದ್ದರು. ಹಾಗಾಗಿ ಕನ್ಸರ್ವೇಟಿವ್ ಪಕ್ಷವು ಪ್ರಧಾನಿ ಹುದ್ದೆಗೆ ಹೊಸ ನಾಯಕನನ್ನು ಆಯ್ಕೆ ಮಾಡಲು ಇತ್ತೀಚೆಗೆ ಚುನಾವಣೆ ನಡೆಸಿತ್ತು. ಪ್ರಧಾನಿ ಹುದ್ದೆಯ ಆಕಾಂಕ್ಷಿಗಳಾಗಿದ್ದ ಜಾನ್ಸನ್ ಹಾಗೂ ಹಾಲಿ ವಿದೇಶಾಂಗ ಸಚಿವ ಜೆರೆಮಿ ಹಂಟ್ ನಡುವೆ ತೀವ್ರ ಸ್ಪರ್ಧೆ ಏರ್ಪಟ್ಟಿತ್ತು. ಜಾನ್ಸನ್‌ಗೆ 92,153 ಮತಗಳು ಬಂದರೆ, ಹಂಟ್ ಅವರಿಗೆ 46,656 ಮತಗಳು ಸಿಕ್ಕಿವೆ.

ಆಧಾರ–ಉದಯವಾಣಿ, 24.07.2019

3. ಬ್ರಿಟನ್ ಸಂಪುಟದಲ್ಲಿ ಇನ್ಫಿ ಮೂರ್ತಿ ಅಳಿಯಗೆ ಸ್ಥಾನ

ಬ್ರಿಟನ್‌ನ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬೋರಿಸ್ ಜಾನ್ಸನ್, ತಮ್ಮ ಸಚಿವ ಸಂಪುಟಕ್ಕೆ ಭಾರತೀಯ ಮೂಲದ ಮೂವರನ್ನು ಸೇರ್ಪಡೆ ಮಾಡಿಕೊಂಡಿದ್ದಾರೆ. ಈ ಪೈಕಿ ಬೆಂಗಳೂರಿನ ಇನ್ಫೋಸಿಸ್ ಸಂಸ್ಥೆಯ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರ ಅಳಿಯ ರಿಷಿಸುನಕ್ ಅವರು ಪ್ರಮುಖವಾದ ಹಣಕಾಸು ಇಲಾಖೆಯ ಉಪ ಸಚಿವರಾಗಿ ನಿಯುಕ್ತಿಗೊಂಡಿದ್ದಾರೆ. ಬ್ರಿಟನ್‌ನ ಗೃಹ ಸಚಿವರಾಗಿ ಪ್ರೀತಿ ಪಟೇಲ್ ನೇಮಕಗೊಂಡಿದ್ದು, ಅಂತರರಾಷ್ಟ್ರೀಯ ಸಂಬಂಧ ಅಭಿವೃದ್ಧಿ ಸಚಿವರಾಗಿ ಅಲೋಕ್ ಶರ್ಮಾ ನೇಮಕಗೊಂಡಿದ್ದಾರೆ.

ಆಧಾರ–ಕನ್ನಡಪ್ರಭ, 26.07.2019

4. 370 ವಿಧಿ ರದ್ದು: ಅಮೇರಿಕ, ಇಂಗ್ಲೆಂಡ್ ಎಚ್ಚರಿಕೆಯ ನಡೆ

ಜಮ್ಮು–ಕಾಶ್ಮೀರಕ್ಕೆ ನೀಡಲಾಗಿರುವ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವ ಭಾರತ ಸರ್ಕಾರದ ಕ್ರಮದಿಂದ ಉದ್ಭವಿಸುವ ಬೆಳವಣಿಗೆಯತ್ತ ಕಣ್ಣಲ್ಲಿ ಕಣ್ಣಿಟ್ಟು ನೋಡುವ ತಂತ್ರಕ್ಕೆ ಅಮೆರಿಕ ಹಾಗೂ ಇಂಗ್ಲೆಂಡ್ ಸೇರಿದಂತೆ ಅನೇಕ ದೇಶಗಳು ಮೊರೆ ಹೋಗಿವೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಅರಬ್ ಸಂಯುಕ್ತ ಸಂಸ್ಥಾನವಂತೂ ಭಾರತದ ಕ್ರಮಕ್ಕೆ ಬೆಂಬಲವನ್ನೂ ಘೋಷಿಸಿದೆ.

ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿದ ಕ್ರಮಗಳು ಸಂಪೂರ್ಣವಾಗಿ ಆಂತರಿಕ ವಿಷಯವೆಂದು ಅಮೆರಿಕದ ವಿದೇಶಾಂಗ ಸಚಿವಾಲಯ ಹೇಳಿದರೂ ಈ ರಾಜ್ಯದಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಆಧಾರ–ಸಂಯುಕ್ತಕರ್ನಾಟಕ, 07.08.2019

5. 370: ಭಾರತ ವಿರುದ್ಧ ಪಾಕ್ ಸೇಡು ಭಾರತದ ರಾಯಭಾರಿ ವಜಾ, ದ್ವಿಪಕ್ಷೀಯ ವ್ಯಾಪಾರಕ್ಕೆ ತಡೆ, ವಿಶ್ವಸಂಸ್ಥೆಗೆ ದೂರು

ಪ್ರತ್ಯೇಕತಾವಾದಿ ನಾಯಕರ ಮೂಲಕ ಕಾಶ್ಮೀರದಲ್ಲಿ ಹಿಂಸಾಕೃತ್ಯಗಳನ್ನು ಪೋಷಿಸಿಕೊಂಡು ಬಂದಿದ್ದ ಪಾಕಿಸ್ತಾನ, ಇದೀಗ ಕಾಶ್ಮೀರ ವಿಷಯ ಸಂಬಂಧ ಭಾರತ ಸರ್ಕಾರ ಕೈಗೊಂಡ ಕಠಿಣ ನಿರ್ಧಾರಕ್ಕೆ ತತ್ತರಿಸಿ ಹೋಗಿದ್ದು, ಸೇಡಿನ ಕ್ರಮಕ್ಕೆ ಮುಂದಾಗಿದೆ. ಕಾಶ್ಮೀರ ವಿಷಯದಲ್ಲಿ ಭಾರತ ಕೈಗೊಂಡ ನಿರ್ಧಾರ ಏಕಪಕ್ಷೀಯ ಮತ್ತು ಅಕ್ರಮ ಎಂದು ಬೊಬ್ಬೆ ಹೊಡೆದ ಪಾಕಿಸ್ತಾನ, ಭಾರತದೊಂದಿಗೆ ತನ್ನ ರಾಜತಾಂತ್ರಿಕ ಸಂಬಂಧವನ್ನು ಒಂದು ಸ್ತರ ಕೆಳಗಿಳಿಸಲು ನಿರ್ಧರಿಸಿದೆ ಹಾಗೂ ಭಾರತೀಯ ಹೈಕಮಿಷನರ್ ಅಜಯ್ ಬಿಸಾರಿಯಾ ಅವರನ್ನು ವಜಾಗೊಳಿಸಿದೆ. ಮಾತ್ರವಲ್ಲ ಭಾರತದಲ್ಲಿ ಇನ್ನು ಮುಂದೆ ತನ್ನ ರಾಯಭಾರಿ ಇರುವುದಿಲ್ಲ ಎಂದು ಘೋಷಿಸಿದೆ. ಜೊತೆಗೆ ಭಾರತದ ಜೊತೆಗಿನ ದ್ವಿಪಕ್ಷೀಯ ವ್ಯಾಪಾರ ಹಾಗೂ ಇತರೆ ಒಪ್ಪಂದಗಳನ್ನು ತಡೆಹಿಡಿದಿದೆ. ಕಾಶ್ಮೀರ ವಿಷಯ ಸಂಬಂಧ ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ದೂರು ನೀಡಲು, ಆಗಸ್ಟ್ 14ರಂದು ಸ್ವಾತಂತ್ರ್ಯ ದಿನಾಚರಣೆ ಜೊತೆಗೆ ಆಗಸ್ಟ್–15ನ್ನು ಕಪ್ಪು ದಿನಾಚರಣೆ ಮಾಡಲು ಹಾಗೂ ಭಾರತದ ವಿಮಾನಗಳು ವಾಯು ಸೀಮೆ ಪ್ರದೇಶ ಪ್ರವೇಶ ನಿರ್ಬಂಧಿಸಲು ಪಾಕಿಸ್ತಾನ ನಿರ್ಧರಿಸಿದೆ.

ಆಧಾರ–ಕನ್ನಡಪ್ರಭ, 08.08.2019

6. ಕಾಶ್ಮೀರ ವಿವಾದ: ಪಾಕ್‌ಗೆ ಮುಖಭಂಗ

ಕಾಶ್ಮೀರ ವಿವಾದದ ಹಿನ್ನೆಲೆಯಲ್ಲಿ ಶಾಂತಿ ಮತ್ತು ಸಂಯಮ ಕಾಪಾಡಿಕೊಳ್ಳುವಂತೆ ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಭಾರತ ಹಾಗೂ ಪಾಕಿಸ್ತಾನ ಸರ್ಕಾರಗಳಿಗೆ ಮನವಿ ಮಾಡಿದ್ದಾರೆ. ಸಿಮ್ಲಾ ಒಪ್ಪಂದದ ಪ್ರಕಾರ ಮೂರನೆಯವರ ಮಧ್ಯಸ್ಥಿಕೆಗೆ ಅವಕಾಶವಿಲ್ಲವೆಂದು ಆಂಟೋನಿಯೊ ಗುಟೆರೆಸ್ ಇದೇ ವೇಳೆ ಇಮ್ರಾನ್ ಖಾನ್ ಸರ್ಕಾರಕ್ಕೆ ಸ್ಪಷ್ಟಪಡಿಸಿದ್ದಾರೆ.

ಜಮ್ಮು– ಕಾಶ್ಮೀರ ರಾಜ್ಯದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸುವ ನರೇಂದ್ರ ಮೋದಿ ಸರ್ಕಾರದ ನಿರ್ಧಾರ ವಿರೋಧಿಸಿ ವಿಶ್ವಸಂಸ್ಥೆಗೆ ದೂರು ಸಲ್ಲಿಸಲು ಪಾಕಿಸ್ತಾನ ಸರ್ಕಾರ ಮುಂದಾಗಿದೆ. ಈ ವಿದ್ಯಮಾನಗಳನ್ನು ಗಮನಿಸುತ್ತಿರುವ ವಿಶ್ವಸಂಸ್ಥೆ ಮುಖ್ಯಸ್ಥರು ಕಾಶ್ಮೀರ ವಿಷಯದಲ್ಲಿ ಮಧ್ಯಪ್ರವೇಶಿಸುವುದಿಲ್ಲವೆಂಬ ಸಂದೇಶ ರವಾನಿಸಿದ್ದಾರೆ.

ಚೀನಾಗೆ ಖುರೇಷಿ ದೌಡು: ಜಮ್ಮು ಕಾಶ್ಮೀರ ಬಿಕ್ಕಟ್ಟಿನ ವಿಚಾರದಲ್ಲಿ ಚೀನಾ ಬೆಂಬಲ **ಕೋರಲು** ಬೀಜಿಂಗ್‌ಗೆ ತುರ್ತಾಗಿ ದೌಡಾಯಿಸಿದ್ದ ಪಾಕಿಸ್ತಾನ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿಗೆ

ನಿರಾಶೆಯೇ ಗತಿಯಾಗಿದೆ. ವಿವಾದವನ್ನು ದ್ವಿಪಕ್ಷೀಯ ಮಾತುಕತೆ ಮತ್ತು ಸಂಧಾನದ ಮೂಲಕವೇ ಬಗೆಹರಿಸಿಕೊಳ್ಳುವಂತೆ ಚೀನಾ ಸರ್ಕಾರ ಸೂಚಿಸಿದೆ. ಹೀಗಾಗಿ ಭಾರತದ ವಿರುದ್ಧ ಅಂತರಾಷ್ಟ್ರೀಯ ಅಭಿಪ್ರಾಯ ಸೃಷ್ಟಿಸುವ ಇಮ್ರಾನ್ ಖಾನ್ ಸರ್ಕಾರದ ಹುನ್ನಾರ ವಿಫಲವಾಗಿದೆ.

ಆಧಾರ–ಸಂಯುಕ್ತ ಕರ್ನಾಟಕ, 10.08.2019

7. ಪರಿಸರ ರಕ್ಷಣೆಗೆ ಭಾರತ ಬದ್ಧ: ಜಿ7 ಶೃಂಗದಲ್ಲಿ ಮೋದಿ ಮಾತು, ಪ್ಲಾಸ್ಟಿಕ್ ನಿಯಂತ್ರಣ ಬಗ್ಗೆ ಉಲ್ಲೇಖ

ಫ್ರಾನ್ಸ್‌ನ ಬಿಯಾರೆಜ್‌ನಲ್ಲಿ ನಡೆದ ಜಿ7 ಶೃಂಗಕ್ಕೆ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರನ್‌ರವರ ವಿಶೇಷ ಆಹ್ವಾನದ ಮೇರೆಗೆ ಪ್ರಧಾನ ಮೋದಿ ತೆರಳಿದ್ದು, ಅಲ್ಲಿ ಜೈವಿಕ ವೈವಿಧ್ಯ, ಸಮುದ್ರ, ಪರಿಸರ ಕುರಿತು ಮಾತನಾಡಿದರು.

ಈ ಹಿಂದೆ ಪ್ಯಾರಿಸ್‌ನಲ್ಲಿ ಯುನೆಸ್ಕೋ ಕೇಂದ್ರ ಕಚೇರಿಯಲ್ಲಿ ಭಾರತೀಯ ಸಮುದಾಯವನ್ನುದ್ದೇಶಿಸಿ ಮಾತನಾಡಿದ್ದಾಗ 2030ಕ್ಕೆ ನಿಗದಿಪಡಿಸಲಾಗಿರುವ ಬಹುತೇಕ ಹವಾಮಾನ ವೈಪರೀತ್ಯ ಗುರಿಗಳನ್ನು ಮುಂದಿನ ಒಂದೂವರೆ ವರ್ಷದಲ್ಲಿ ಪೂರೈಸುವುದಾಗಿ ಹೇಳಿದ್ದರು. ಅಲ್ಲದೆ, ಒಮ್ಮೆಗೆ ಬಳಸಿ ಬಿಸಾಡುವ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಪಣತೊಟ್ಟಿದ್ದರು. ಈ ಎಲ್ಲಾ ವಿಚಾರಗಳನ್ನು ಮೋದಿ ಜಿ7 ಶೃಂಗದಲ್ಲಿ ಪುನರುಚ್ಚರಿಸಿದ್ದು, ಹವಾಮಾನ ವೈಪರೀತ್ಯ ಕುರಿತ ದೇಶದ ನಿಲುವಿನಲ್ಲಿ ಬದ್ಧತೆ ಪ್ರದರ್ಶಿಸಿದರು.

ಆಧಾರ–ಉದಯವಾಣಿ, 27.08.2019

8. ಟೈಮ್ ನೂರು ಅಸಾಧಾರಣ ಸ್ಥಳಗಳ ಪಟ್ಟಿಯಲ್ಲಿ ಸರ್ದಾರ್ ಪಟೇಲ್ ಪ್ರತಿಮೆ

ಟೈಮ್ ನಿಯತಕಾಲಿಕೆ 2009ರ ಜಗತ್ತಿನ 100 ಅಸಾಧಾರಣ ಸ್ಥಳಗಳ ಪಟ್ಟಿ ಬಿಡುಗಡೆ ಮಾಡಿದೆ. ಅದರಲ್ಲಿ ಗುಜರಾತ್‌ನ 597 ಅಡಿ ಎತ್ತರದ 'ಐಕ್ಯತಾಮೂರ್ತಿ' ಸರ್ದಾರ್ ವಲ್ಲಭಭಾಯ್ ಪಟೇಲ್‌ರ ಪ್ರತಿಮೆಯೂ ಸ್ಥಾನ ಪಡೆದಿದೆ.

ಅಲ್ಲದೆ, ಅರಬ್ಬಿ ಸಮುದ್ರಕ್ಕೆ ಮುಖಮಾಡಿರುವ ಮುಂಬೈನ 11 ಮಹಡಿಗಳ ಸೋಹೊ ಹೌಸ್ ಕಟ್ಟಡವೂ ಇದೆ. ಇದರಲ್ಲಿ ಗ್ರಂಥಾಲಯ, 34 ಮಂದಿ ಕುಳಿತು ನೋಡಬಲ್ಲ ಸಿನೆಮಾ ಹಾಲ್ ಅಲ್ಲದೆ, 38 ಹೋಟೆಲ್ ಕೊಠಡಿಗಳು ಹಾಗೂ ಮೇಲ್ಛಾವಣಿಯಲ್ಲಿ ಬಾರ್ ಮತ್ತು ಈಜು ಕೊಳವಿದೆ.

ರಾಜಸ್ತಾನದಿಂದ ಪರಿಸರ ಸ್ನೇಹಿ ಮತ್ತು ಸುದೀರ್ಘ ಬಾಳಿಕೆ ಬರಬಲ್ಲ ನವಿರಾದ ಬಟ್ಟೆ, ಕೈಯಿಂದ ಹೆಣಿಗೆ ಮಾಡಿದ ಬೆತ್ತದ ಪೀಠೋಪಕರಣ, ಸೀರೆಯಿಂದಾದ ದೀಪದ ಮಸುಕು, 200 ಕಲಾ ಪ್ರತಿಮೆಗಳು ಇವೆಲ್ಲವೂ ಒಂದೇ ತೆರನಾದ ಏಕೈಕ ಅನುಭೂತಿಯನ್ನು ಉಂಟುಮಾಡುತ್ತದೆ ಎಂದು ಹೇಳಿದೆ.

ಆಧಾರ–ವಿಶ್ವವಾಣಿ, 30.08.2019

9. ಸ್ವಿಸ್ ಬ್ಯಾಂಕ್ ಖಾತೆಗಳ ರಹಸ್ಯ ಬಯಲು ಭಾರತ – ಸ್ವಿಜರ್ಲೆಂಡ್ ಮಾಹಿತಿ ವಿನಿಯೋಗ ಒಪ್ಪಂದ

ತೆರಿಗೆ ವಂಚನೆ ತಡೆಯುವ ನಿಟ್ಟಿನಲ್ಲಿ ಸ್ವಿಜರ್ಲೆಂಡ್‌ನ ಬ್ಯಾಂಕ್‌ಗಳಲ್ಲಿ ತನ್ನ ನಾಗರಿಕರು ಹೊಂದಿರುವ ಬ್ಯಾಂಕ್ ಖಾತೆಗಳ ಮಾಹಿತಿ ನೀಡುವಂತೆ ಬಹಳ ವರ್ಷಗಳಿಂದ ಭಾರತ ಸರ್ಕಾರ ಒತ್ತಾಯಿಸುತ್ತಲೇ ಬಂದಿತ್ತು. ಅಂತಿಮವಾಗಿ ಈ ಕುರಿತು ಮಾಹಿತಿ ಹಂಚಿಕೊಳ್ಳಲು 2016ರಲ್ಲಿ ಉಭಯ ದೇಶಗಳು ಒಪ್ಪಂದಕ್ಕೆ ಸಹಿ

ಹಾಕಿದ್ದವು. ಈ ಕುರಿತ ಒಪ್ಪಂದಕ್ಕೆ ಉಭಯ ದೇಶಗಳ ಸಂಸತ್ತಿನ ಅನುಮೋದನೆ ಸಿಕ್ಕಿ, ವಿವಿಧ ಕಾನೂನು ಪ್ರಕ್ರಿಯೆಗಳು ಪೂರ್ಣಗೊಂಡು, ವ್ಯವಸ್ಥೆಯು ಸೆಪ್ಟೆಂಬರ್ 2019 ರಿಂದ ಜಾರಿಗೆ ಬರುತ್ತಿದೆ.

ಜನವರಿ – 2018 ಬಳಿಕ ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತೀಯರು ಹೊಂದಿರುವ ಎಲ್ಲಾ ಬ್ಯಾಂಕ್ ಖಾತೆಗಳ ಮಾಹಿತಿ ಇನ್ನು ಸ್ವಯಂಚಾಲಿತವಾಗಿ ಭಾರತದ ತೆರಿಗೆ ಅಧಿಕಾರಿಗಳಿಗೆ ರವಾನೆಯಾಗಲಿದೆ. ಜೊತೆಗೆ 2018ರಲ್ಲಿ ಮುಚ್ಚಲ್ಪಟ್ಟ ಬ್ಯಾಂಕ್ ಖಾತೆಗಳ ಪೂರ್ಣ ಮಾಹಿತಿಯೂ ಸಿಗಲಿದೆ. ಆದರೆ ಒಪ್ಪಂದದ ಅನ್ವಯ, ತೆರಿಗೆ ವಂಚನೆಯಾಗಿರದ ಹೊರತು ಈ ಮಾಹಿತಿಯನ್ನು ಭಾರತ ಸರ್ಕಾರ ಯಾವುದೇ ಕಾರಣಕ್ಕೂ ಬಹಿರಂಗಪಡಿಸುವಂತೆ ಇಲ್ಲ.

ಆಧಾರ–ಕನ್ನಡಪ್ರಭ, 01.09.2019

10. ಸ್ವಚ್ಛ ಭಾರತ ಅಭಿಯಾನಕ್ಕಾಗಿ ಮೋದಿಗೆ ಗೇಟ್ಸ್ ಸಂಸ್ಥೆ ಪ್ರಶಸ್ತಿ

ಮೋದಿ ಸಾಧನೆಗೆ ಗ್ಲೋಬಲ್ ಗೋಲ್‌ಕೀಪರ್ ಅವಾರ್ಡ್

ಬಯಲು ಶೌಚಮುಕ್ತ ಸಮಾಜದ ಮೂಲಕ "ನೈರ್ಮಲ್ಯ ಭಾರತ" ನಿರ್ಮಾಣಕ್ಕಾಗಿ ಮಹತ್ವಾಕಾಂಕ್ಷಿ "ಸ್ವಚ್ಛ ಭಾರತ ಅಭಿಯಾನ" ಕೈಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವದ ಅತಿ ದೊಡ್ಡ ಚಾರಿಟೇಬಲ್ ಟ್ರಸ್ಟ್ **'ಬಿಲ್ ಅಂಡ್ ಮಿಲಿಂದಾ ಗೇಟ್ಸ್ ಫೌಂಡೇಷನ್'** ನೀಡುವ **'ಗ್ಲೋಬಲ್ ಗೋಲ್‌ಕೀಪರ್ ಅವಾರ್ಡ್'** ಗೆ ಭಾಜನರಾಗಿದ್ದಾರೆ.

ಜಾಗತಿಕ ಮಟ್ಟದಲ್ಲಿ ತಮ್ಮ ಬದ್ಧತೆ ಮತ್ತು ಸಾಧನೆ ಪ್ರದರ್ಶಿಸುವ ವಿಶೇಷ ವ್ಯಕ್ತಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಕಾರ ಸ್ವಚ್ಛ ಭಾರತ ಅಭಿಯಾನದ ನಾಯಕತ್ವ ಹಾಗೂ ಬದ್ಧತೆಗಾಗಿ ಮೋದಿ ಅವರಿಗೆ ಗ್ಲೋಬಲ್ ಗೋಲ್‌ಕೀಪರ್ ಈ ಪ್ರತಿಷ್ಠಿತ ಪ್ರಶಸ್ತಿ ಘೋಷಿಸಲಾಗಿದ್ದು, ಸೆಪ್ಟೆಂಬರ್ 24ರಂದು ನಡೆಯಲಿರುವ 2019ರ ಸಾಲಿನ ಗ್ಲೋಬಲ್ ಗೋಲ್‌ಕೀಪರ್ ಅವಾರ್ಡ್ ಸಮಾರಂಭದಲ್ಲಿ ಮೋದಿ ಈ ಪ್ರಶಸ್ತಿ ಸ್ವೀಕರಿಸಲಿದ್ದಾರೆ ಎನ್ನಲಾಗಿದೆ.

ಆಧಾರ–ಕನ್ನಡಪ್ರಭ, 04.09.2019

11. ಪ್ರಧಾನಿ ಮೋದಿ, ಅಧ್ಯಕ್ಷ ಪುತಿನ್ ದ್ವಿಪಕ್ಷೀಯ ಸಭೆ:

ಅಣುಸ್ಥಾವರ ಸಹಿತ 15 ಒಪ್ಪಂದಕ್ಕೆ ಅಂಕಿತ

ರಷ್ಯಾಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಅಲ್ಲಿನ ಅಧ್ಯಕ್ಷ ವ್ಲಾದಿಮಿರ್ ಪುತಿನ್‌ರನ್ನು ಭೇಟಿಯಾಗಿ ದಿನಾಂಕ:04.09.2019ರಂದು ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಉಭಯ ದೇಶಗಳ ನಡುವೆ ರಕ್ಷಣಾ ತಂತ್ರಜ್ಞಾನ ಸಹಕಾರ, ಭಾರತದ 20 ಕಡೆ ಅಣುಸ್ಥಾವರ ಸ್ಥಾಪನೆ ಸೇರಿ 15 ಒಪ್ಪಂದಗಳು ಏರ್ಪಟ್ಟಿವೆ.

ಮೋದಿ ಮತ್ತು ಪುತಿನ್ ಭಾರತ– ರಷ್ಯಾದ 20ನೇ ವಾರ್ಷಿಕ ದ್ವಿಪಕ್ಷೀಯ ಸಭೆ ನಡೆಸಿದ ವೇಳೆ 15 ಒಪ್ಪಂದಗಳಿಗೆ ಸಹಿ ಹಾಕಲಾಗಿದ್ದು ಮತ್ತು ಪ್ರಾದೇಶಿಕ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಅಫ್ಘಾನಿಸ್ತಾನದಲ್ಲಿ ಶಾಂತಿ ಸ್ಥಾಪನೆ, ಕೊಲ್ಲಿ ರಾಷ್ಟ್ರಗಳ ಬಿಕ್ಕಟ್ಟಿನ ಬಗ್ಗೆಯೂ ಚರ್ಚೆ ನಡೆಸಿದರು.

2019–2024ರವರೆಗೆ ತೈಲ, ನೈಸರ್ಗಿಕ ಅನಿಲ ಪರಿಶೋಧನೆ ಮತ್ತು ಖರೀದಿ ಕುರಿತಂತೆ ಐದು ವರ್ಷಗಳ ಮಾರ್ಗಸೂಚಿ ರೂಪಿಸುವ ಕುರಿತು ಉಭಯ ಮುಖಂಡರು ಮಾತುಕತೆ ನಡೆಸಿದರು. ವಾಣಿಜ್ಯ, ಹೂಡಿಕೆ, ಗಣಿ, ಪರಮಾಣು ಇಂಧನ, ರಕ್ಷಣೆ ಮತ್ತು ಭದ್ರತೆ, ವಾಯು ಮತ್ತು ಸಮುದ್ರ ಮಾರ್ಗ ಸಂಪರ್ಕ, ಸಾರಿಗೆ

ವ್ಯವಸ್ಥೆಯಲ್ಲಿ ಮೂಲ ಸೌಕರ್ಯ ಹೆಚ್ಚಳ, ಬಾಹ್ಯಾಕಾಶ, ಉಭಯ ದೇಶಗಳ ಜನರ ಸಂಪರ್ಕ ಕುರಿತು ಮಾತುಕತೆ ನಡೆಸಿದರು.

ಗಗನಯಾನಿಗಳಿಗೆ ರಷ್ಯಾದಲ್ಲಿ ತರಬೇತಿ: ಭಾರತದ ಮಹತ್ವಾಕಾಂಕ್ಷೆಯ ಮಾನವ ಸಹಿತ ಗಗನಯಾನದಲ್ಲಿ ಬಾಹ್ಯಾಕಾಶಕ್ಕೆ ತೆರಳಲಿರುವ ಯಾತ್ರಿಗಳಿಗೆ ರಷ್ಯಾ ತರಬೇತಿ ನೀಡಲಿದ್ದು, ಈ ಸಂಬಂಧ ಒಪ್ಪಂದಕ್ಕೂ ಸಹಿ ಹಾಕಲಾಗಿದೆ.

ಎಕೆ–203 ರೈಫಲ್ ಜಂಟಿ ತಯಾರಿಕೆ: ರಕ್ಷಣಾ ಸಹಕಾರದಡಿಯಲ್ಲಿ ಎಕೆ–203 ಕಲಾಷ್ನಿಕೋವ್ ರೈಫಲ್ ತಯಾರಿಸುವ ಒಪ್ಪಂದಕ್ಕೂ ಸಹಿ ಹಾಕಲಾಗಿದೆ. ಈ ರೈಫಲ್‌ಗಳಿಂದ ಭಾರತೀಯ ಸೇನೆಯ ಶಸ್ತ್ರಾಸ್ತ್ರಬಲ ವೃದ್ಧಿಸಲಿದೆ.

ಗೌರವಕ್ಕೆ ಧನ್ಯವಾದ ಹೇಳಿದ ಮೋದಿ: ರಷ್ಯಾದ ಅತ್ಯುನ್ನತ ನಾಗರಿಕ ಗೌರವ **'ಆರ್ಡರ್ ಆಫ್ ಆಂಡ್ರ್ಯೂ ಅಪೊಸ್ತಲ್'** ಪ್ರಶಸ್ತಿಯನ್ನು ಪ್ರಧಾನಿ ಮೋದಿಗೆ ರಷ್ಯಾ ಅಧ್ಯಕ್ಷ ಪುತಿನ್ ಪ್ರಧಾನ ಮಾಡಿದರು. ಉಭಯ ದೇಶಗಳ ಸಹಕಾರ ವೃದ್ಧಿಗೆ ಮೋದಿ ತೋರಿದ ಆಸಕ್ತಿಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದ್ದು, ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರಧಾನಿ ಮೋದಿ ಅವರು 'ಈ ಪ್ರಶಸ್ತಿಯು ಭಾರತದ 130 ಕೋಟಿ ಜನರಿಗೆ ಸಂದ ಗೌರವ' ಎಂದರು.

ಆಧಾರ–ವಿಜಯವಾಣಿ, 05.09.2019

12. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಆರ್ಥಿಕ ಕಾರಿಡಾರ್‌ಗೆ ಬಂಡವಾಳ ಹೂಡಿಕೆಗೆ ಆಕ್ಷೇಪ

ಪಾಕ್ ಆಕ್ರಮಿತ ಕಾಶ್ಮೀರವನ್ನು ಹಾದುಹೋಗುವ ಚೀನಾ – ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಯೋಜನೆಗೆ ಬಂಡವಾಳ ಹೂಡುವುದನ್ನು ತಕ್ಷಣವೇ ನಿಲ್ಲಿಸಿ ಎಂದು ಭಾರತವು ಚೀನಾಕ್ಕೆ ಹೇಳಿದೆ.

ಭಾರತದ ಜಮ್ಮು ಮತ್ತು ಕಾಶ್ಮೀರದ ಕೆಲವು ಭೂಭಾಗವನ್ನು 1947ರಿಂದಲೂ ಪಾಕಿಸ್ತಾನವು ಆಕ್ರಮಿಸಿಕೊಂಡಿದೆ. ಚೀನಾ– ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆಯು ಪಾಕಿಸ್ತಾನವು ಆಕ್ರಮಿಸಿಕೊಂಡಿರುವ ಭಾರತದ ಭೂಪ್ರದೇಶವನ್ನು ಹಾದುಹೋಗುತ್ತದೆ. ಹೀಗಾಗಿ ತಕ್ಷಣವೇ ಇದನ್ನು ನಿಲ್ಲಿಸಿ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರವೀಶ್ ಕುಮಾರ್ ಚೀನಾವನ್ನು ಆಗ್ರಹಿಸಿದ್ದಾರೆ.

ಆಧಾರ–ಪ್ರಜಾವಾಣಿ, 11.09.2019

13. ವಿಶ್ವಸಂಸ್ಥೆಯಲ್ಲಿ ಮೋದಿಗೆ ಪ್ರಾಶಸ್ತ್ಯ: ಹವಾಮಾನ ವೈಪರೀತ್ಯ ಶೃಂಗದಲ್ಲಿ ಪ್ರಧಾನಿಗೆ ಆರಂಭಿಕ ಭಾಷಣದ ಅವಕಾಶ

ತಾಪಮಾನ ವೈಪರೀತ್ಯ ಕುರಿತ ನಡೆದ ವಿಶ್ವಸಂಸ್ಥೆ ಸಮ್ಮೇಳನದಲ್ಲಿ ಮೊದಲ ಸುತ್ತಿನಲ್ಲಿ ಮಾತನಾಡಿದ ನಾಯಕರ ಪೈಕಿ ಪ್ರಧಾನಿ ಮೋದಿಯೂ ಸೇರಿದ್ದು, ಭಾರತಕ್ಕೆ ಸಮ್ಮೇಳನದಲ್ಲಿ ಸಿಕ್ಕ ಪ್ರಾಶಸ್ತ್ಯವನ್ನು ಪ್ರತಿಬಿಂಬಿಸಿದೆ. ವಿಶ್ವಸಂಸ್ಥೆಯ ಮಹಾ ಅಧಿವೇಶನಕ್ಕೂ ಮುನ್ನ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ನಡೆದ ತಾಪಮಾನ ವೈಪರೀತ್ಯ ತಡೆ ಕುರಿತ ಸಮ್ಮೇಳನದಲ್ಲಿ ಮೋದಿ ಸೇರಿದಂತೆ ಹಲವು ದೇಶಗಳ ಗಣ್ಯರು ಮಾತನಾಡಿದರು.

ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರಸ್ ಮಾತನಾಡಿದ ನಂತರ 4ನೇಯವರಾಗಿ ಪ್ರಧಾನಿ ಮೋದಿ ಮಾತನಾಡಿದ್ದಾರೆ. ಕೆಲವೇ ದಿನಗಳ ಹಿಂದೆ ಈ ಬಗ್ಗೆ ಮಾತನಾಡಿದ್ದ ಗುಟೆರಸ್, ಸಮ್ಮೇಳನದಲ್ಲಿ ಮಹತ್ವದ ಘೋಷಣೆ ಮಾಡುವ ನಾಯಕರು ಹಾಗೂ ದೇಶಗಳಿಗೆ ಆದ್ಯತೆ ನೀಡಲಾಗುತ್ತದೆ ಎಂದಿದ್ದರು.

ಮೋದಿ ನಂತರದಲ್ಲಿ ನ್ಯೂಜಿಲೆಂಡ್ ಪ್ರಧಾನಿ ಜಸಿಂದಾ ಆರ್ಡೆನ್, ಮಾರ್ಷಲ್ ದ್ವೀಪದ ಅಧ್ಯಕ್ಷ ಹಿಲ್ಡಾಹೈನೆ, ಜರ್ಮನಿ ಛಾನ್ಸಲರ್ ಆಂಜೆಲಾ ಮೆರ್ಕೆಲ್ ಮಾತನಾಡಿದರು.

ಹೂಸ್ಟನ್‌ನಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರತಿ ವರ್ಷ ಒಬ್ಬೊಬ್ಬರೂ ಕನಿಷ್ಟ ಐದು ಭಾರತಿಯೇತರ ಕುಟುಂಬಗಳನ್ನು ಭಾರತಕ್ಕೆ ಪ್ರವಾಸಕ್ಕಾಗಿ ಕಳುಹಿಸುವ ನಿರ್ಧಾರ ಮಾಡಿ ಎಂದು ಆಗ್ರಹಿಸಿದರು. ಎನ್‌ಆರ್‌ಜಿ ಸ್ಟೇಡಿಯಂನಲ್ಲಿ ಹೌಡಿ ಮೋದಿ ಕಾರ್ಯಕ್ರಮದ ನಂತರ, ಹೂಸ್ಟನ್‌ನಲ್ಲಿ ಪ್ರಧಾನಿ ಮೋದಿ ಎಟರ್ನಲ್ ಗಾಂಧಿ ಮ್ಯೂಸಿಯಂ, ಗುಜರಾತಿ ಸಮಾಜ ಹೂಸ್ಟನ್ ಇವೆಂಟ್ ಸೆಂಟರ್ ಹಾಗೂ ಶ್ರೀ ಸಿದ್ಧಿ ವಿನಾಯಕ ದೇಗುಲವನ್ನೂ ಉದ್ಘಾಟಿಸಿದರು.

ಆಧಾರ–ಉದಯವಾಣಿ, 24.09.2019

14. ಮೋದಿ ಭಾರತದ ಪಿತಾಮಹ: ಟ್ರಂಪ್

ಹೂಸ್ಟನ್‌ನಲ್ಲಿ ಪರಸ್ಪರ ಭೇಟಿಯಾಗಿದ್ದ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಪರಸ್ಪರ ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದರು. ವಿಶ್ವಸಂಸ್ಥೆಯ ಮಹಾಧಿವೇಶನದ ವೇಳೆ ಉಭಯ ದೇಶಗಳ ನಾಯಕರ ಭೇಟಿ ನಡೆಯಿತು. ಈ ವೇಳೆ ಟ್ರಂಪ್ ಅವರನ್ನು **ಭಾರತದ ಅತ್ಯಾಪ್ತ** ಎಂದು ಮೋದಿ ಬಣ್ಣಿಸಿದರೆ, **ಮೋದಿ ಒಬ್ಬ ರಾಕ್‌ಸ್ಟಾರ್, ಅವರು ಭಾರತದ ಪಿತಾಮಹ** ಎಂದು ಟ್ರಂಪ್ ಹೊಗಳಿದ್ದಾರೆ.

ಪಾಕ್ ಪ್ರೇರಿತ ಭಯೋತ್ಪಾದನೆಯನ್ನು ನೋಡಿಕೊಳ್ಳಲು ಮೋದಿ ಸಮರ್ಥರಿದ್ದು, ಎಲ್ಲಾ ದಾಳಿಗಳನ್ನು ಎದುರಿಸುವ ಶಕ್ತಿ ಅವರಿಗಿದೆ. ಪಾಕಿಸ್ತಾನ ಭಾರತವನ್ನು ನೋಡಿ ಕಲಿಯಬೇಕೆಂದು ಹೇಳಿ ಇರಾನ್‌ಗೆ ಪಾಕಿಸ್ತಾನವನ್ನು ಹೋಲಿಕೆ ಮಾಡಿದರು.

ಆಧಾರ–ಕನ್ನಡ ಪ್ರಭ, 25.09.2019

15. ವಿಶ್ವಸಂಸ್ಥೆಯಲ್ಲಿ ಗಾಂಧಿ ಹೆಸರಿನ ಸೌರ ಪಾರ್ಕ್

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹೆಸರಿನಲ್ಲಿ ವಿಶ್ವಸಂಸ್ಥೆಯಲ್ಲಿ ಭಾರತ ನಿರ್ಮಿಸಿರುವ ಸೌರಪಾರ್ಕ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆ ಮುಖ್ಯಸ್ಥ ಆಂಟೋನಿಯೋ ಗುಟೆರಸ್ ಜೊತೆಗೂಡಿ ಉದ್ಘಾಟಿಸಿದರು. ವಿಶ್ವಸಂಸ್ಥೆಯಲ್ಲಿ 193 ಸದಸ್ಯ ರಾಷ್ಟ್ರಗಳಿದ್ದು, ಅಷ್ಟೇ ಸೌರಫಲಕಗಳನ್ನು ಭಾರತ ವಿಶ್ವಸಂಸ್ಥೆಗೆ ನೀಡಿದೆ. ಇದನ್ನು ವಿಶ್ವಸಂಸ್ಥೆ ಕೇಂದ್ರ ಕಚೇರಿಯ ಮೇಲೆ ಅಳವಡಿಸಲಾಗಿದ್ದು, 7 ಕೋಟಿ ರೂ. ವೆಚ್ಚವಾಗಿದೆ. ಈ ಸೌರ ಫಲಕಗಳು 50 ಕಿಲೋವ್ಯಾಟ್ ವಿದ್ಯುತ್ ಉತ್ಪಾದಿಸಲಿವೆ. ಇದರಿಂದ 30 ಸಾವಿರ ಕೆ.ಜಿ. ಕಲ್ಲಿದ್ದಲು ಉಳಿಯಲಿದೆ.

ಇದೇ ವೇಳೆ, ಗಾಂಧೀಜಿಯವರ 150ನೇ ವರ್ಷಾಚರಣೆ ನಿಮಿತ್ತ ಹೊರತರಲಾಗಿರುವ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಗಿದೆ. ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಗಾಂಧಿ ಶಾಂತಿ ಉದ್ಯಾನ ನಿರ್ಮಿಸಲಾಗಿದೆ. ಜನರು ತಮ್ಮ ಪ್ರೀತಿ ಪಾತ್ರರ ಹೆಸರಿನಲ್ಲಿ ಇಲ್ಲಿ ಗಿಡ ನೆಡಬಹುದಾಗಿದೆ. ಮೊದಲ ಹಂತದಲ್ಲಿ 150 ಸಸಿಗಳನ್ನು ನೆಡಲು ನ್ಯೂಯಾರ್ಕ್‌ನಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್, ಶಾಂತಿ ಫಂಡ್ ಎಂಬ ಎನ್‌ಜಿಓ ಹಾಗೂ ನ್ಯೂಯಾರ್ಕ್ ವಿವಿ ಒಪ್ಪಂದ ಮಾಡಿಕೊಂಡಿವೆ.

ಆಧಾರ–ಕನ್ನಡ ಪ್ರಭ, 26.09.2019

ಭಾಗ–10

ಶ್ರದ್ಧಾಂಜಲಿ

1. ಕೆ.ಎಲ್.ಶಿವಲಿಂಗೇಗೌಡ, ಮಾಜಿ ಶಾಸಕರು

ಕೆ.ಎಲ್.ಶಿವಲಿಂಗೇಗೌಡ, ಮಾಜಿ ಶಾಸಕರು (94) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಿನಾಂಕ 06.07.2019ರಂದು ನಿಧನರಾದರು. ಅವರು 1962ರಲ್ಲಿ ರಾಮನಗರದ ವಿರೂಪಾಕ್ಷಪುರ, 1978 ಮತ್ತು 1985ರಲ್ಲಿ ಸಾತನೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಆಧಾರ–ವಿಜಯವಾಣಿ, 07.07.2019

2. ಸುಷ್ಮಾ ಸ್ವರಾಜ್, ಮಾಜಿ ಕೇಂದ್ರ ಸಚಿವರು

ಸುಷ್ಮಾಸ್ವರಾಜ್, ಮಾಜಿ ಕೇಂದ್ರ ಸಚಿವರು (66) ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ದಿನಾಂಕ: 06.08.2019ರಂದು ನಿಧನರಾದರು. ದೆಹಲಿಯ ಮುಖ್ಯಮಂತ್ರಿಯಾಗಿ ಮಹತ್ವದ ಬದಲಾವಣೆ ತಂದಿದ್ದರು.

ದಿನಾಂಕ: 14.02.1953ರಲ್ಲಿ ಹರಿಯಾಣದ ಅಂಬಾಲಾ ಕಂಟೋನ್ಮೋಂಟ್‌ನಲ್ಲಿ ಹರ್‌ದೇವ್ ಶರ್ಮ ಮತ್ತು ಲಕ್ಷ್ಮೀದೇವಿ ಅವರ ಮಗಳಾಗಿ ಜನಿಸಿದ ಶ್ರೀಮತಿ ಸುಷ್ಮಾ ಸ್ವರಾಜ್, ಸುಪ್ರೀಂಕೋರ್ಟ್ ವಕೀಲೆಯಾಗಿ ವೃತ್ತಿ ಜೀವನ ಆರಂಭಿಸಿದರು. ಕಾಲಕ್ರಮೇಣ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೂಲಕ 1970ರಲ್ಲಿ ಸಾಮಾಜಿಕ ಮತ್ತು ರಾಜಕೀಯ ಬದುಕಿಗೆ ಪಾದಾರ್ಪಣೆ ಮಾಡಿದ್ದರು. ಕೇಂದ್ರ ಸಚಿವೆಯಾಗಿ, ಪ್ರತಿಪಕ್ಷ ನಾಯಕಿಯಾಗಿ ಸಂಸದೀಯ ಪಟುವಾಗಿ ಸಲ್ಲಿಸಿದ ಸೇವೆ ಚಿರಸ್ಮರಣೀಯವಾದದ್ದು.

ರಾಷ್ಟ್ರೀಯವಾದಿಯಾಗಿದ್ದ ಅವರು ವಿದೇಶಾಂಗ ಸಚಿವರಾಗಿದ್ದ ಸಂದರ್ಭದಲ್ಲಿ ಸಾಮಾಜಿಕ ತಾಣಗಳ ಮೂಲಕ ಸಾರ್ವಜನಿಕರು ನೀಡುತ್ತಿದ್ದ ಮನವಿಗಳಿಗೆ ಕೂಡಲೇ ಸ್ಪಂದಿಸಿ ಅವಶ್ಯಕ ಕ್ರಮ ಕೈಗೊಳ್ಳುತ್ತಿದ್ದರು.

ಆಧಾರ–ವಿಜಯವಾಣಿ, 07.07.2019

3. ಶೀಲಾದೀಕ್ಷಿತ್, ಮಾಜಿ ಮುಖ್ಯಮಂತ್ರಿಗಳು

ಶೀಲಾದೀಕ್ಷಿತ್, ಮಾಜಿ ಮುಖ್ಯಮಂತ್ರಿಗಳು (81) ಇವರು ಹೃದಯಾಘಾತಕ್ಕೆ ಒಳಗಾಗಿ ದೆಹಲಿ ಫೋರ್ಟಿಸ್ ಆಸ್ಪತ್ರೆಯಲ್ಲಿ ದಿನಾಂಕ:20.07.2019ರಂದು ನಿಧನರಾದರು. ದಿನಾಂಕ:31.03.1938ರಂದು ಜನಿಸಿದ್ದ ಅವರು ಎಂ.ಎ.ಇತಿಹಾಸ ವ್ಯಾಸಂಗ ಮಾಡಿದ್ದು, 1984ರಲ್ಲಿ ಉತ್ತರ ಪ್ರದೇಶದ ಕನೌಜ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ, 1984–89ರಲ್ಲಿ ರಾಜೀವ್ ಗಾಂಧಿ ಸಂಪುಟದಲ್ಲಿ ಸಂಸದೀಯ ವ್ಯವಹಾರ ಖಾತೆ ನಿರ್ವಹಿಸಿದ್ದ ಅವರು 1998 ರಿಂದ 2013ರವರೆಗೆ ದೆಹಲಿಯ ಮುಖ್ಯಮಂತ್ರಿಯಾಗಿ ಹಾಗೂ 2014ರಲ್ಲಿ 5 ತಿಂಗಳು ಕೇರಳ ರಾಜ್ಯದ ರಾಜ್ಯಪಾಲರಾಗಿದ್ದರು ಮತ್ತು 2019ರಲ್ಲಿ ದೆಹಲಿ ಕಾಂಗ್ರೆಸ್ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸಿದ್ದರು.

ಆಧಾರ–ವಿಜಯವಾಣಿ, 21.07.2019

4. ಜೈಪಾಲರೆಡ್ಡಿ, ಮಾಜಿ ಕೇಂದ್ರ ಸಚಿವರು.

ಜೈಪಾಲರೆಡ್ಡಿ, ಮಾಜಿ ಕೇಂದ್ರ ಸಚಿವರು (77) ದಿನಾಂಕ: 28.07.2019ರಂದು ಹೈದರಾಬಾದ್‌ನಲ್ಲಿ ನಿಧನರಾದರು. ಅವರು 16.01.1942ರಂದು ಈಗಿನ ತೆಲಂಗಾಣದ ಮುದ್ಗಲ್ ಗ್ರಾಮದಲ್ಲಿ ಜನಿಸಿದರು. ಪ್ರತಿಷ್ಠಿತ ಒಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. ಕಿರಿಯ ವಯಸ್ಸಿನಲ್ಲಿಯೇ ಪೋಲಿಯೋ ಪೀಡಿತರಾಗಿದ್ದ ಅವರು ದೈಹಿಕ ನ್ಯೂನತೆಯನ್ನು ಮೆಟ್ಟಿ ನಿಂತು ರಾಜಕೀಯದಲ್ಲಿ ಮೇರು ಸಾಧನೆ ಮಾಡಿದರು.

1960ರಲ್ಲಿ ದಶಕದ ಆರಂಭದಲ್ಲಿ ಕಾಂಗ್ರೆಸ್ ಪಕ್ಷ ಸೇರುವ ಮೂಲಕ ತಮ್ಮ ರಾಜಕೀಯ ಯಾತ್ರೆ ಆರಂಭಿಸಿದ ರೆಡ್ಡಿ, 1975ರಲ್ಲಿ ತುರ್ತು ಪರಿಸ್ಥಿತಿ ವೇಳೆ ಕಾಂಗ್ರೆಸ್ ವಿರುದ್ಧ ಪ್ರತಿಭಟಿಸಿ ಸೆರೆವಾಸ ಅನುಭವಿಸಿದರು. ಬಳಿಕ ಜನತಾ ಪಾರ್ಟಿ ಸೇರಿದರು. 1985 ರಿಂದ 1988ರವರೆಗೆ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 1990ರಲ್ಲಿ ಪುನಃ ಕಾಂಗ್ರೆಸ್‌ಗೆ ಮರಳಿ ಕೊನೆಯವರೆಗೂ ಉಳಿದರು. ಅವರು 5 ಭಾರಿ ಲೋಕಸಭಾ ಸದಸ್ಯರಾಗಿ, 2 ಅವಧಿ ರಾಜ್ಯಸಭೆ ಸದಸ್ಯರಾಗಿ ಹಾಗೂ 4 ಭಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಸಲಲಿತ ಮಾತುಗಾರಿಕೆ ಹಾಗೂ ಅಧ್ಯಯನದಿಂದ ಅತ್ಯುತ್ತಮ ಸಂಸದೀಯಪಟುವಾಗಿ ಗುರುತಿಸಿಕೊಂಡಿದ್ದರು. ಕೇಂದ್ರದಲ್ಲಿ ವಾರ್ತಾ ಸಚಿವರಾಗಿ ಸೇವೆ ಸಲ್ಲಿಸಿ ನಂತರ ಪ್ರಮುಖ ಖಾತೆಗಳನ್ನು ನಿರ್ವಹಿಸಿದರು. ತೆಲಂಗಾಣ ಪ್ರತ್ಯೇಕಗೊಳ್ಳಬೇಕು ಎಂದು ಪ್ರತಿಪಾದಿಸಿದ ಮುಖಂಡರಲ್ಲಿ ಶ್ರೀಯುತರು ಕೂಡ ಒಬ್ಬರು.

ಆಧಾರ–ವಿಜಯವಾಣಿ, 29.07.2019

5. ಉಮೇಶ್ ಭಟ್, ಮಾಜಿ ಶಾಸಕರು.

ಉಮೇಶ್ ಭಟ್, ಮಾಜಿ ಶಾಸಕರು (72) ಹೃದಯಘಾತದಿಂದ ನಿಧನರಾದರು. ಅವರು ಮೂಲತ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಬಾವಿಕೆರೆ ಗ್ರಾಮದವರಾಗಿದ್ದು, 1989ರಲ್ಲಿ ಅಂಕೋಲ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದ ಅವರು ನಮ್ಮ ಮೆಟ್ರೋ ಅಧ್ಯಕ್ಷರಾಗಿ ಹಾಗೂ ಕೆ.ಪಿ.ಸಿ.ಸಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಯಲ್ಲಾಪುರದಲ್ಲಿ "ವಿಶ್ವದರ್ಶನ ಶಿಕ್ಷಣ ಸಂಸ್ಥೆ" ಶಿರಸಿಯಲ್ಲಿ "ಲೋಕದ್ವನಿ" ದಿನಪತ್ರಿಕೆಯನ್ನು ಆರಂಭಿಸಿ ಮುನ್ನಡೆಸಿಕೊಂಡು ಬಂದಿದ್ದರು.

ಆಧಾರ–ವಿಜಯವಾಣಿ, 14.08.2019

6. ಅರುಣ್ ಜೇಟ್ಲಿ, ಮಾಜಿ ಕೇಂದ್ರ ಸಚಿವರು

ಅರುಣ್ ಜೆಟ್ಲಿ, ಮಾಜಿ ಕೇಂದ್ರ ಸಚಿವರು (66) ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ದಿನಾಂಕ: 24.08.2019ರಂದು ನಿಧನರಾದರು.

ದೀರ್ಘಾವಧಿ ರಾಜಕೀಯ ಜೀವನದಲ್ಲಿ ಅವರು ಹಲವು ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು. ದೇಶದ ಆರ್ಥಿಕ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದ್ದು, ರಕ್ಷಣಾ ಸಚಿವರಾಗಿ ಅವರು ಪ್ರಮುಖ ಕೊಡುಗೆಗಳನ್ನು ನೀಡಿದ್ದರು. ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಪ್ರಜಾಪ್ರಭುತ್ವದ ಮುಂಚೂಣಿ ನೆಲೆಯಲ್ಲಿ ನಿಂತು ಹೋರಾಟ ಮಾಡಿದರು. ರೆಫೆಲ್‌ಡೀಲ್ ವಿಚಾರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಮುಗಿಬಿದ್ದಂತಹ ಸಂದರ್ಭದಲ್ಲಿ ಜೇಟ್ಲಿ ಅವರು ನಿರ್ವಹಿಸಿದ ರಕ್ಷಣಾತ್ಮಕ ಪಾತ್ರ ಎಲ್ಲರಿಂದ ಮೆಚ್ಚುಗೆ ಗಳಿಸಿತು.

ರೆಫೆಲ್‌ನಿಂದ ಹಿಡಿದು ತ್ರಿವಳಿ ತಲಾಖ್‌ವರೆಗೆ, ಸಂಸತ್‌ನ ಚರ್ಚೆಯಿಂದ ಹಿಡಿದು ಸುದ್ದಿಗೋಷ್ಠಿಯವರೆಗೆ ಪಕ್ಷದ ನಿಲುವನ್ನು ಸಕಾರಣದಿಂದಲೇ ಸಮರ್ಥಿಸಿಕೊಳ್ಳುವಂತಹ ಛಾತಿ ಅವರಿಗಿತ್ತು. ವಿರೋಧಿಗಳನ್ನು ಸೆಳೆಯುವಂತಹ ಜೇಟ್ಲಿಯವರ ವಿಶೇಷ ಗುಣವೇ, ನೆನೆಗುದಿಗೆ ಬಿದ್ದಿದ್ದ ಸರಕು ಮತ್ತು ಸೇವಾ ತೆರಿಗೆ(ಜಿ.ಎಸ್.ಟಿ)ಯ ಅನುಷ್ಠಾನಕ್ಕೆ ದಾರಿ ಮಾಡಿಕೊಟ್ಟಿದ್ದು, ಜಿ.ಎಸ್.ಟಿ. ಜಾರಿ ಮಾಡಿಯೇ ತೀರಬೇಕು ಎಂದು ಪಣ ತೊಟ್ಟಿದ್ದ ಜೇಟ್ಲಿಯವರು 17 ರಾಜ್ಯ ತೆರಿಗೆಗಳ ಮತ್ತು ಕೇಂದ್ರ ತೆರಿಗೆಗಳನ್ನು ವಿಲೀನಗೊಳಿಸುವ ವಿಚಾರದಲ್ಲಿ ಹಗಲಿರಳೆನ್ನದೇ ರಾಜ್ಯ ವಿತ್ತ ಸಚಿವರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದರು. ಕೇವಲ ಬಿ.ಜೆ.ಪಿ. ಆಡಳಿತದ

ರಾಜ್ಯಗಳು ಮಾತ್ರವಲ್ಲದೆ ಪ್ರತಿಪಕ್ಷಗಳು, ಆಡಳಿತದಲ್ಲಿರುವ ರಾಜ್ಯಗಳ ವಿತ್ತ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಕಾರಣದಿಂದಲೇ ಜಿ.ಎಸ್.ಟಿ.ಯಂತಹ ಮಹತ್ವದ ಸುಧಾರಣಾ ಕ್ರಮ ಜಾರಿಯಾಗಲು ಸಾಧ್ಯವಾಯಿತು.

ಆಧಾರ–ವಿಜಯವಾಣಿ, 25.08.2019

7. ಪ್ರವೀಣಾ ಚಂದ್ರು ಕಾಮ್ಲಾನಿ, ಮಾಜಿ ಶಾಸಕರು.

ಪ್ರವೀಣಾ ಚಂದ್ರು ಕಾಮ್ಲಾನಿ, ಮಾಜಿ ವಿಧಾನ ಪರಿಷತ್ ಸದಸ್ಯರು (83) ದಿನಾಂಕ:25.08.2019ರಂದು ಬೆಳಗಾವಿಯಲ್ಲಿ ನಿಧನರಾದರು. ಮಾಜಿ ಮುಖ್ಯಮಂತ್ರಿ ಶ್ರೀ ದೇವರಾಜು ಅರಸು ಅವರ ಸರ್ಕಾರದ ಅವಧಿಯಲ್ಲಿ 1971–77ರವರೆಗೆ ವಿಧಾನ ಪರಿಷತ್ ನಾಮನಿರ್ದೇಶಿತ ಸದಸ್ಯರಾಗಿದ್ದರು.

ಆಧಾರ–ವಿಜಯವಾಣಿ, 27.08.2019

8. ಎ.ಕೆ.ಸುಬ್ಬಯ್ಯ, ಮಾಜಿ ಶಾಸಕರು

ಎ.ಕೆ.ಸುಬ್ಬಯ್ಯ, ಮಾಜಿ ವಿಧಾನಪರಿಷತ್ ಸದಸ್ಯರು (86) ದಿನಾಂಕ:27.08.2019ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಮೂಲ ವಿರಾಜಪೇಟೆ ತಾಲ್ಲೂಕಿನ ಹುದಿಕೇರಿ ಸಮೀಪದ ಕೋಣಗೇರಿ ಗ್ರಾಮದ ನಿವಾಸಿ.

ದಿನಾಂಕ: 09.08.1934ರಲ್ಲಿ ಹುದಿಕೆರಿಯ ಕೋಣಗೇರಿಯಲ್ಲಿ ಜನಿಸಿದ್ದ ಇವರು ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಎಲ್.ಎಲ್.ಬಿ. ವ್ಯಾಸಂಗ ಮಾಡಿದರು. ವಿದ್ಯಾರ್ಥಿ ಜೀವನದಲ್ಲಿಯೇ ರಾಜಕೀಯ ಕಡೆಗೆ ಆಸಕ್ತಿ ಬೆಳೆಸಿಕೊಂಡಿದ್ದ ಅವರು 18ನೇ ವಯಸ್ಸಿನಲ್ಲಿಯೇ ರಾಜಕೀಯಕ್ಕೆ ಧುಮುಕಿದರು. 1968ರಲ್ಲಿ ತಮ್ಮ 34ನೇ ವಯಸ್ಸಿಗೆ ಅಂದಿನ ಕೊಡಗು, ಮಂಗಳೂರು, ಮೈಸೂರು ಪ್ರಾಂತ್ಯ ಒಳಗೊಂಡ ಈಶಾನ್ಯ ಪದವೀಧರರ ಕ್ಷೇತ್ರದಿಂದ ಆಯ್ಕೆಗೊಂಡು ಮೊದಲ ಭಾರಿಗೆ ವಿಧಾನ ಪರಿಷತ್ ಪ್ರವೇಶಿಸಿದರು.

1988ರಲ್ಲಿ ಕರ್ನಾಟಕ ವಿಧಾನಸಭೆಯಿಂದ ಪರಿಷತ್‌ಗೆ ಆಯ್ಕೆಗೊಂಡರು. ಬಿ.ಜೆ.ಪಿ. ರಾಜ್ಯಾಧ್ಯಕ್ಷರಾಗಿದ್ದಾಗ ವಿಧಾನಸಭೆಗೆ 18 ಬಿ.ಜೆ.ಪಿ. ಸದಸ್ಯರು ಪ್ರವೇಶಿಸುವಂತೆ ಮಾಡಿದ ಕೀರ್ತಿ ಇವರದು.

ಪ್ರಗತಿಪರ ಕೃಷಿಕ, ಕಾಫಿ ಬೆಳೆಗಾರ, ಪ್ರಖ್ಯಾತ ಹೈಕೋರ್ಟ್ ವಕೀಲ, ಸಮಾಜ ಸೇವಕ, ಹೋರಾಟಗಾರ ಪ್ರಖರ ವಾಗ್ಮಿ, 2 ದಶಕಕ್ಕೂ ಹೆಚ್ಚು ಕಾಲ ವಿಧಾನ ಪರಿಷತ್ ಸದಸ್ಯ, ಬಿ.ಜೆ.ಪಿ. ಪ್ರಥಮ ರಾಜ್ಯಾಧ್ಯಕ್ಷ ಹೀಗೆ ಹತ್ತು ಹಲವು ವಿಶೇಷತೆ ಹೊಂದಿದ್ದರು.

ಆಧಾರ–ವಿಜಯವಾಣಿ, 28.08.2019

9. ಅರ್ಜುನರಾವ್ ಹಿಶೋಬಕರ್, ಮಾಜಿ ಶಾಸಕರು.

ಅರ್ಜುನರಾವ್ ಹಿಶೋಬಕರ್, ಮಾಜಿ ಶಾಸಕರು (86) ಬೆಳಗಾವಿಯಲ್ಲಿ ದಿನಾಂಕ:23.09.2019ರಂದು ನಿಧನರಾದರು.1992ರಲ್ಲಿ ಬೆಳಗಾವಿ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಎಂ.ಇ.ಎಸ್. ಬೆಂಬಲದಿಂದ ಗೆಲುವು ಸಾಧಿಸಿದ್ದ ಅವರು ಮರಾಠ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಆಧಾರ–ವಿಜಯವಾಣಿ, 28.08.2019

10. ವೀರಭದ್ರಯ್ಯ , ಮಾಜಿ ಶಾಸಕರು.

ವೀರಭದ್ರಯ್ಯ, ಮಾಜಿ ಶಾಸಕರು, (98) ಬೆಂಗಳೂರಿನಲ್ಲಿ ನಿಧನರಾದರು. ಅವರು 1988ರಲ್ಲಿ ಕಾಂಗ್ರೇಸ್ ಪಕ್ಷದಿಂದ ಶಾಸಕರಾಗಿ ಮೊದಲ ಬಾರಿಗೆ ಆಯ್ಕೆಯಾಗಿದ್ದು, 15 ವರ್ಷ ತುಮಕೂರು ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷರಾಗಿದ್ದರು. ತಾಲ್ಲೂಕಿನ ಸಿದ್ದರಬೆಟ್ಟ ರಂಭಾಪುರಿ ಶಾಖ ಮಠದ ಅಧ್ಯಕ್ಷ ಹಾಗೂ ಬೆಂಗಳೂರಿನ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಆಧಾರ–ವಿಜಯವಾಣಿ, 08.09.2019

ಭಾಗ–11

ಪ್ರಮುಖ ಲೇಖನಗಳು

1. ಸಂವಿಧಾನಿಕ ಬಿಕ್ಕಟ್ಟು: ಸ್ಪೀಕರ್ ಮುಂದೆ ಸವಾಲುಗಳ ಕಟ್ಟು

ಕರ್ನಾಟಕದ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲದ ವಾತಾವರಣ ಸೃಷ್ಟಿಯಾಗಿದೆ. ಇದು ಆಡಳಿತಾತ್ಮಕ ಅರಾಜಕತೆಗೆ ಕಾರಣವಾಗಿದೆ. 14 ಶಾಸಕರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರೆ, ಮುಖ್ಯಮಂತ್ರಿ ಹೊರತುಪಡಿಸಿ, ಕಾಂಗ್ರೆಸ್ ಮತ್ತು ಜೆ.ಡಿ.ಎಸ್.ನ ಎಲ್ಲಾ ಸಚಿವರಿಂದ ರಾಜೀನಾಮೆ ನೀಡುವ ಘೋಷಣೆ. ಶಾಸಕರು ರಾಜೀನಾಮೆ ಪತ್ರವನ್ನು ವಿಧಾನ ಸಭೆಯ ಸ್ಪೀಕರ್ ಮತ್ತು ರಾಜ್ಯಪಾಲರಿಬ್ಬರಿಗೂ ಸಲ್ಲಿಸಿದ್ದಾರೆ. ಆದರೆ, ಸಚಿವರು ರಾಜೀನಾಮೆಗಳನ್ನು ತಮ್ಮ ಪಕ್ಷದ ಅಧ್ಯಕ್ಷರಿಗೆ ಸಲ್ಲಿಸಿರುತ್ತಾರೆ. ಶಾಸಕರು ರಾಜೀನಾಮೆ ನೀಡಿದ್ದರೂ ತಕ್ಷಣವೇ ಅದನ್ನು ಒಪ್ಪಿಕೊಳ್ಳಲು ಸ್ಪೀಕರ್ ನಿರುತ್ಸಾಹ, ಇಂತಹ ನಿರುತ್ಸಾಹಕ್ಕೆ ಪೂರ್ವ ನಿರ್ಧಾರಿತ ಕಾರ್ಯಕ್ರಮಗಳೇ ಕಾರಣ ಎನ್ನುವ ಸಮರ್ಥನೆ. ಇಂಥ ಅಭದ್ರ ರಾಜಕೀಯ ವಾತಾವರಣದ ನಡುವೆ ಸಚಿವ ಪದವಿಗೆ ರಾಜೀನಾಮೆ ನೀಡಿದ್ದೇವೆ ಎಂದು ಘೋಷಣೆ ಮಾಡಿದ್ದ ಸಚಿವಗಣದಿಂದ ಮಹತ್ವದ ನಿರ್ಧಾರ ಕೈಗೊಳ್ಳುವ ರಣೋತ್ಸಾಹ, ಸಚಿವ ಸಂಪುಟ ಉಪ ಸಮಿತಿಯಿಂದ ಜಿಂದಾಲ್ ಕಂಪನಿಗೆ ಸೊಂಡೂರಿನ ಸಂಪದ್ಭರಿತ 3667 ಎಕರೆ ಭೂಮಿಯನ್ನು ಮಾರಾಟ ಮಾಡುವ ಅಂತಿಮ ನಿರ್ಧಾರ ಕೈಗೊಳ್ಳುವ ಪ್ರಯತ್ನ. ಮೈತ್ರಿಕೂಟದ ಹಡಗೇ ಮುಳುಗಿ ಹೋಗುವ ಸಂದರ್ಭದಲ್ಲಿ "ಬೆಂದಮನೆಯಲ್ಲಿ ಇರಿದಷ್ಟೇ ಲಾಭ" ಎನ್ನುವ ತರಾತುರಿಯ ಇನ್ನೆಷ್ಟು ನಿರ್ಧಾರಗಳಾಗುತ್ತಿವೆಯೋ ದೇವರೇ ಬಲ್ಲ. ಇಂಥ ನಿರ್ಣಾಯಕ ಎನ್ನುವ ಸಂದರ್ಭದಲ್ಲಿ ಸೃಷ್ಟಿಯಾಗಿರುವ ಸಂವೈಧಾನಿಕ ಬಿಕ್ಕಟ್ಟನ್ನು ಬಗೆಹರಿಸುವ ತರಾತುರಿ ಹೊಣೆಗಾರಿಕೆ ವಿಧಾನ ಸಭೆಯ ಸ್ಪೀಕರ್ ಅವರ ಮೇಲಿದೆ.

ಒಬ್ಬರು ಅಥವಾ ಇಬ್ಬರು ಶಾಸಕರು ರಾಜೀನಾಮೆ ನೀಡಿದ್ದಂಥ ಸಂದರ್ಭದಲ್ಲಿ ವಿಧಾನ ಸಭೆಯ ಸ್ಪೀಕರ್ ಸಂವೈಧಾನಿಕ ನಿಯಮಾವಳಿಗಳ ಪರಿಪಾಲನೆಯ ನೆಪದಲ್ಲಿ ತಿಂಗಳುಗಟ್ಟಲೇ ನಿರ್ಧಾರವನ್ನು ಮುಂದೂಡಬಹುದು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಡಾ: ಉಮೇಶ್ ಜಾಧವ್ ರಾಜೀನಾಮೆ ನೀಡಿದಾಗ ಅದನ್ನು ಒಪ್ಪಿಕೊಳ್ಳಲು ಸ್ಪೀಕರ್ ರಮೇಶ್ ಕುಮಾರ್ ಅವರು ತಿಂಗಳುಗಟ್ಟಲೆ ಸಮಯ ತೆಗೆದುಕೊಂಡರು. ಸಂವಿಧಾನದ ಮೌಲ್ಯಗಳನ್ನು ಕಾಪಾಡುವ ಗುರುತರ ಹೊಣೆಗಾರಿಕೆ ತಮ್ಮ ಮೇಲಿದೆ. ಈ ಹಿನ್ನೆಲೆಯಲ್ಲಿ ಶಾಸಕನೊಬ್ಬ ರಾಜೀನಾಮೆ ನೀಡುವುದಕ್ಕೆ ಕಾರಣವಾದ ಎಲ್ಲಾ ಮಗ್ಗಲುಗಳನ್ನು ಪರಾಮರ್ಶಿಸುವ ಅಗತ್ಯವಿದೆ. ಈ ಕಾರಣದಿಂದ ರಾಜೀನಾಮೆ ಒಪ್ಪಿಕೊಳ್ಳಲು ವಿಳಂಬವಾಯಿತು ಎನ್ನುವ ಸ್ಪೀಕರ್ ಅಭಿಪ್ರಾಯ ಸಮರ್ಥನೀಯವಾಗಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಈಗ ಸೃಷ್ಟಿಯಾಗಿರುವ ಪರಿಸ್ಥಿತಿ ಅತ್ಯಂತ ಭಿನ್ನವಾಗಿದೆ. ಶಾಸಕತ್ವಕ್ಕೆ ರಾಜೀನಾಮೆ ನೀಡಿರುವವರು ಒಬ್ಬರಲ್ಲ ಹದಿನೈದಕ್ಕೂ ಹೆಚ್ಚು ಮಂದಿ. ಇಷ್ಟೊಂದು ಶಾಸಕರು ರಾಜೀನಾಮೆ ನೀಡಿರುವ ಸಂದರ್ಭದಲ್ಲಿ ಸ್ಪೀಕರ್ ರಮೇಶ್ ಕುಮಾರ್ ಅವರು, ರಾಜೀನಾಮೆ ಒಪ್ಪಿಕೊಳ್ಳುವ ಪ್ರಕ್ರಿಯೆಯನ್ನು ವಿಳಂಬ ಮಾಡಿದರೆ ಅದರಿಂದ ರಾಜ್ಯಾಡಳಿತದ ಮೇಲೆ ಗಂಭೀರ ಪರಿಣಾಮಗಳಾಗಲಿದೆ. ಪ್ರಸಕ್ತ ಹಿನ್ನೆಲೆಯಲ್ಲಿ ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ರಾಜಕೀಯ ಅನುಭವ ಇರುವ ಸ್ಪೀಕರ್ ರಮೇಶ್ ಕುಮಾರ್, ಶಾಸಕಾಂಗದ ಇತಿಹಾಸದಲ್ಲಿಯೇ ಮೈಲಿಗಲ್ಲಾಗಬಹುದಾದ ನಿರ್ಧಾರ ಕೈಗೊಳ್ಳಬೇಕಿದೆ.

ಕಾಂಗ್ರೆಸ್, ಜೆ.ಡಿ.ಎಸ್. ಮೈತ್ರಿಕೂಟದ ನಾಯಕರು ಸಂವಿಧಾನದ 164 (1) (ಬಿ) ವಿಧಿ ಅನ್ವ ಶಾಸಕರನ್ನು ಅನರ್ಹಗೊಳಿಸಬೇಕು. ಇವರು ನೀಡಿರುವ ರಾಜೀನಾಮೆ ಪಕ್ಷಾಂತರಕ್ಕೆ ಸಮನಾಗಿದೆ. 14 ಶಾಸಕರ ರಾಜೀನಾಮೆ ಪ್ರಕ್ರಿಯೆಯಲ್ಲಿ ಬಿ.ಜೆ.ಪಿ ನೇರವಾಗಿ ಭಾಗಿ ಆಗಿರದೇ ಇದ್ದರೂ, ಸಾಂದರ್ಭಿಕ ಸಾಕ್ಷ್ಯಗಳು ಶಾಸಕರು ಬಿಜೆಪಿಯ ಒತ್ತಡ ಹಾಗೂ ಪ್ರಚೋದನೆಗೆ ಒಳಗಾಗಿದ್ದಾರೆ ಎನ್ನುವುದನ್ನು ಬಿಂಬಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ ಎಲ್ಲಾ ಶಾಸಕರ ಸದಸ್ಯತ್ವವನ್ನು ಅನೂರ್ಜಿತಗೊಳಿಸಬೇಕು ಎಂದು ಮೈತ್ರಿಕೂಟದ ನಾಯಕರ ತಂತ್ರಗಾರಿಕೆ ಏನೇ ಇದ್ದರೂ ರಾಜೀನಾಮೆ ನೀಡಿರುವ ಶಾಸಕರು ತಾವು ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗಿಲ್ಲ. ರಾಜೀನಾಮೆ ನೀಡುವುದು ತಮ್ಮ ಸಂವೈಧಾನಿಕ ಹಕ್ಕು. ತಾವು ಪ್ರತಿನಿಧಿಸುವ ಕ್ಷೇತ್ರದ

ಮತದಾರರೇ ತಮ್ಮ ಪ್ರಭುಗಳು. ಅವರ ಆಶೋತ್ತರಗಳಿಗೆ ಅನುಗುಣವಾಗಿ ರಾಜೀನಾಮೆ ನೀಡುವ ತಮ್ಮ ಹಕ್ಕನ್ನು ಯಾರೂ ಮೊಟಕುಗೊಳಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸುವ ಸಾಧ್ಯತೆಯಿದೆ. ಜೊತೆಗೆ ತಾವು ನೀಡಿರುವ ರಾಜೀನಾಮೆ ಕಾನೂನು ಬದ್ಧವಾಗಿದೆ ಯಾವುದೇ ಒತ್ತಡಕ್ಕೆ ಒಳಗಾಗಿ ನೀಡಿದ ರಾಜೀನಾಮೆ ಅಲ್ಲ ಅನ್ನುವುದನ್ನು ಖಚಿತಪಡಿಸುವುದಕ್ಕೆ ಪೂರಕವಾಗಿ ಹಾಲಿ ಶಾಸಕರು ರಾಜೀನಾಮೆ ಪತ್ರಗಳನ್ನು ರಾಜ್ಯಪಾಲ ವಾಜುಭಾಯಿ ವಾಲಾ ಅವರಿಗೆ ಸಲ್ಲಿಸಿದ್ದಾರೆ. ಶಾಸಕರು ರಾಜ್ಯಪಾಲರಿಗೆ ಸಲ್ಲಿಸಿರುವುದು ರಾಜೀನಾಮೆಯೇ ಹೊರತು ಸರ್ಕಾರಕ್ಕೆ ಬೆಂಬಲ ವಾಪಸ್ ಪಡೆದಿರುವ ಪತ್ರ ಅಲ್ಲವೇ ಅಲ್ಲ.

ಹೀಗೆ ಯಾವುದೇ ಪ್ರಭಾವಕ್ಕೆ ಒಳಗಾಗದೇ ಶಾಸಕರು ರಾಜೀನಾಮೆ ನೀಡಿದಾಗ ಅವರ ರಾಜೀನಾಮೆಯನ್ನು ಸ್ಪೀಕರ್ ಅವರು ಒಪ್ಪಿಕೊಳ್ಳಲೇ ಬೇಕಾಗುತ್ತದೆ ಎನ್ನುವುದು ಕಾನೂನು ತಜ್ಞರು ಹಾಗೂ ಸಂವಿಧಾನ ಪರಿಣತರ ಅಭಿಮತ ಆಗಿದೆ. The Constitution of India under Article 190 (3) provides for the resignation of the Member from the House. According to it, if a Member of a house of the legislature of a state, becomes subject to any of the disqualifications mentioned in clause (1) (1) or clause (2) of the article 191, or resigns his seat by writing under his hand addressed to Speaker or the Chairman, as a case may be, and his resignation is accepted by the Speaker or the Chairman, as a case may be, his seat shall be there upon vacant; provided that in the case of any resignation referred to in sub clause (b), if from information received or otherwise and after making such enquiry has he thinks fit, the Speaker or Chairman, as the case may be, is satisfied that resignation is not voluntary or genuine, he shall not accepted such resignation . These provisions clearly shows that the resignation so tendered is bound to be accepted by the Speaker if he satisfied that, (a) that the resignation is voluntary (b) that the resignation is genuine. In other words, the Speaker can reject only on the ground that the resignation is not voluntary or genuine. But for this role the Speaker has no power of rejecting the resignation.

ಈ ಹಿನ್ನೆಲೆಯಲ್ಲಿ ಸಂವಿಧಾನದ ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ ಸ್ಪೀಕರ್ ನಿರ್ಧಾರ ಕೈಗೊಳ್ಳಬೇಕು ಅನ್ನುವುದು ಕಾನೂನು ಪರಿಣತರು ಮತ್ತು ಸಂವಿಧಾನ ತಜ್ಞರ ಅಭಿಮತ. 14 ಶಾಸಕರು ರಾಜೀನಾಮೆ ನೀಡಿರುವ ಹಾಲಿ ಪ್ರಕರಣದಲ್ಲಿ ಎಲ್ಲ ಶಾಸಕರು ತಮ್ಮ ರಾಜೀನಾಮೆಯನ್ನು ಸ್ವ ಇಚ್ಛೆಯಿಂದ ನೀಡಿದ್ದಾರೆ ಅನ್ನುವುದು ಅವರ ನಡೆಯಿಂದ ಸ್ಪಷ್ಟವಾಗಿದೆ. ಇದನ್ನು ಸಮರ್ಥಿಸುವ ರೀತಿ ಎಲ್ಲಾ 14 ಶಾಸಕರು ಖುದ್ದು ಸ್ಪೀಕರ್ ಕಛೇರಿಗೆ ತೆರಳಿ ರಾಜೀನಾಮೆ ಸಲ್ಲಿಸಿ ಸ್ವೀಕೃತಿ ಪತ್ರ ಪಡೆದುಕೊಂಡಿದ್ದಾರೆ. ತಾವು ಶಾಸಕತ್ವಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳ ಮುಂದೆ ಖಚಿತಪಡಿಸಿದ್ದಾರೆ. ಇದರಿಂದ ಶಾಸಕರು ಕೊಟ್ಟಿರುವ ರಾಜೀನಾಮೆ ಪತ್ರಗಳ ಕ್ರಮಬದ್ಧತೆ ಹಾಗೂ ವಿಶ್ವಾಸಾರ್ಹತೆ ಪ್ರಶ್ನಾತೀತ. ಸಂವಿಧಾನದ ನಿಯಮಾವಳಿಗಳ ಪ್ರಕಾರ ಓರ್ವ ಶಾಸಕ ಅಥವಾ ಸಂಸದ ಸ್ವತಂತ್ರ ಸ್ಥಾನಮಾನದ ಅಧಿಕಾರ ಹೊಂದಿದ್ದಾರೆಯೇ ಹೊರತು ಮಾಲೀಕ-ಸೇವಕ ಸಂಬಂಧ ಅಲ್ಲ. ಈ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳು ತಮ್ಮನ್ನು ಆಯ್ಕೆ ಮಾಡಿದ ಮತದಾರರಿಗೆ ಉತ್ತರದಾಯಿತ್ವ ಹೊಂದಿದ್ದಾರೆಯೇ ಹೊರತು ಸ್ಪೀಕರ್ ಅವರಿಗಲ್ಲ. ರಾಜೀನಾಮೆ ನೀಡುವ ಪ್ರಕ್ರಿಯೆಯಲ್ಲಿ The Speaker is only a medium or facilitator of the resignation. ಪ್ರಸಕ್ತ ಹಿನ್ನೆಲೆಯಲ್ಲಿ ಶಾಸಕರ ಅಥವಾ ಸಂಸದರ ಪರಮಾಧಿಕಾರದ ಮೇಲೆ ಅಂಕುಶ ಹಾಕುವ ಅಧಿಕಾರ ಸ್ಪೀಕರ್ ಅವರಿಗೆ ನೀಡಿದರೆ ಸಂಸದೀಯ ಪ್ರಜಾಸತ್ತೆಯ ಆಶಯಗಳೇ ಬುಡಮೇಲಾಗುತ್ತದೆ.

ಪ್ರಸಕ್ತ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಆಡ್ವಾಣಿ ಅವರ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಗಮನಾರ್ಹ. ಲೋಕಸಭಾ ಸದಸ್ಯನೊಬ್ಬ ಸಾರ್ವಜನಿಕ ಸೇವಕನೇ ಅಥವಾ ಅಲ್ಲವೇ ಎನ್ನುವುದನ್ನು ಸುಪ್ರೀಂಕೋರ್ಟ್ ವ್ಯಾಖ್ಯಾನಿಸಿರುವ ರೀತ್ಯಾ ಹೆಚ್ಚು ಮೌಲಿಕವಾಗಿದೆ. ಲೋಕಸಭೆಯ ಸ್ಪೀಕರ್ ಮತ್ತು ಲೋಕಸಭಾ ಸದಸ್ಯರ ನಡುವಣ ಸಂಬಂಧ ಮಾಲೀಕ ಮತ್ತು ಸೇವಕನ ನಡುವಣ ಸಂಬಂಧದಂತೆ ಅಲ್ಲವೇ ಅಲ್ಲ. ಜನಪ್ರತಿನಿಧಿಗೆ ಎಲ್ಲಾ ಕಾಲಕ್ಕೂ ತನ್ನದೇ ಆದ ಹಕ್ಕು–ಬಾಧ್ಯತೆ ಇರುತ್ತದೆ ಎನ್ನುವುದು ಸುಪ್ರೀಂಕೋರ್ಟ್ ವ್ಯಾಖ್ಯಾನ.

ಇದರ ಜೊತೆಗೆ ಸದನದ ಕಲಾಪ ನಡೆಸುವುದರ ಜೊತೆಗೆ ಸದನದ ಒಳಗಿನ ಪ್ರತಿಯೊಂದು ಘಟಾನಾವಳಿಗಳ ನೇರ ನಿಯಂತ್ರಣ ಸ್ಪೀಕರ್ ಅವರಿಗೆ ಒಳಪಟ್ಟಿರುತ್ತದೆ. ಶಾಸಕನೊಬ್ಬ ರಾಜೀನಾಮೆ ನೀಡುವ ನಿರ್ಧಾರ ಸದನದ ಕಲಾಪಗಳ ವ್ಯಾಪ್ತಿಗೆ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಸ್ಪೀಕರ್, ಸದನದ ಹೊರಗೆ ಶಾಸಕನೊಬ್ಬ ರಾಜೀನಾಮೆ ನೀಡಿದ್ದರೆ ಅದರ ಬಗೆಗಿನ ಯಾವುದೇ ನಿರ್ಧಾರವನ್ನು ಸದನದ ವ್ಯಾಪ್ತಿಯಿಂದ ಹೊರಗಿಟ್ಟು ತೆಗೆದುಕೊಳ್ಳಬೇಕಾಗುತ್ತದೆ ಅನ್ನುವುದು ಕಾನೂನು ತಜ್ಞರ ಅಭಿಮತ. ಆದರೆ, ಸಂವಿಧಾನದ ಷೆಡ್ಯೂಲ್ 10ರನ್ವಯ ಯಾವುದೇ ಒಬ್ಬ ಶಾಸಕ ಸದನದ ಒಳಗಡೆ, ತಾನು ಆಯ್ಕೆಗೊಂಡ ಪಕ್ಷದ ವಿಪ್ ಉಲ್ಲಂಘನೆ ಮಾಡಿದರೆ, ಪಕ್ಷವನ್ನು Voluntarily ಆಗಿ ತೊರೆದರೆ ಅಂತಹ ಸಂದರ್ಭದಲ್ಲಿ ಮಾತ್ರ ನಿರ್ದಿಷ್ಟ ಸದಸ್ಯನ ಸದಸ್ಯತ್ವ ಅನೂರ್ಜಿತಗೊಳಿಸುವ ಪರಮಾಧಿಕಾರ ಸ್ಪೀಕರ್ ಅವರಿಗೆ ಇದೆ. ಹೀಗೆ ಶಾಸಕನೊಬ್ಬ ಇಲ್ಲವೇ ಶಾಸಕರು ತಾವು ಆಯ್ಕೆಗೊಂಡ ಪಕ್ಷದ ವಿಪ್ ಉಲ್ಲಂಘನೆ ಮಾಡಿದ ಕಾರಣಕ್ಕೆ ಸದಸ್ಯತ್ವ ಅನೂರ್ಜಿತದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಆದರೆ, ಈ ಶಿಕ್ಷೆ ಸದಸ್ಯತ್ವ ಅನೂರ್ಜಿತಗೊಳ್ಳುವುದಕ್ಕೆ ಮಾತ್ರ ಸೀಮಿತ ಆಗಿರುತ್ತದೆ. ಇದು ಎಲ್ಲರೂ ಭಾವಿಸಿರುವ ಹಾಗೆ ಶಾಸಕನೊಬ್ಬ ಅಥವಾ ಸಂಸದನೊಬ್ಬನ ಸದಸ್ಯತ್ವ ಆರು ವರ್ಷಗಳಿಗೆ ಅನೂರ್ಜಿತಗೊಳ್ಳುವುದಿಲ್ಲ. ಸಂವಿಧಾನ 173 ನೇ ವಿಧಿ ಅನ್ವಯ ಸದಸ್ಯತ್ವ ಅನೂರ್ಜಿತಗೊಂಡ ಶಾಸಕ ಅಥವಾ ಲೋಕಸಭಾ ಸದಸ್ಯ ತನ್ನ ಸದಸ್ಯತ್ವ ಅನೂರ್ಜಿತಗೊಂಡ ತಕ್ಷಣ ನಡೆಯುವ ಯಾವುದೇ ಚುನಾವಣೆಗೆ ಸ್ಪರ್ಧಿಸುವ ಅಧಿಕಾರ– ಅರ್ಹತೆ ಹೊಂದಿರುತ್ತಾನೆ.

ಮಹದೇವ್ ಪ್ರಕಾಶ್,

ಆಧಾರ–ವಿಜಯಕರ್ನಾಟಕ,ದಿನಾಂಕ:10.07.2019.

2. ಶರಾವತಿಯನ್ನು ಬಲಿಕೊಡುವ ಮುನ್ನ

ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ನೀರು ವ್ಯರ್ಥವಾಗಿ ಅರಬ್ಬೀ ಸಮುದ್ರ ಸೇರುತ್ತಿದೆ. ಅದನ್ನೆಲ್ಲ ಬಳಸಿಕೊಳ್ಳಬೇಕು ಎಂಬ ಅಸಂಬದ್ಧ ಅವೈಜ್ಞಾನಿಕ ಹೇಳಿಕೆಗಳನ್ನು ದಿನನಿತ್ಯ ಕೇಳುತ್ತಿದ್ದೇವೆ. ನದಿ ಮತ್ತು ಅದಕ್ಕೆ ಹೊಂದಿಕೊಂಡಿರುವ ಒಟ್ಟಾರೆ ಪರಿಸರ ವ್ಯವಸ್ಥೆಯ ಒಳಗಿನ ಸಂಪೂರ್ಣ ಅಜ್ಞಾನವನ್ನು ತೋರ್ಪಡಿಸುವ ಇಂಥ ಹೇಳಿಕೆಗಳು ಮತ್ತು ಅದಕ್ಕನುಗುಣವಾಗಿ ಆಡಳಿತಗಳು ತೆಗೆದುಕೊಳ್ಳುವ ನಿರ್ಧಾರಗಳು ಅತ್ಯಂತ ಅಪಾಯಕಾರಿ. ನಮ್ಮ ನೆಲದ ಸಮಸ್ತ ಅಭಿವೃದ್ಧಿ ಆಗಬೇಕು ಎಂದು ಬಯಸುವ ಯಾರೂ ನದಿಗಳ ಪಥ ಬದಲಿಸುವ ದುಸ್ಸಾಹಸಕ್ಕೆ ಕೈ ಹಾಕಲಾರರು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಉತ್ತರ–ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ನದಿಗಳು ನಿರ್ವಹಿಸುತ್ತಿರುವ ಪರಿಸರದ ಪಾತ್ರ ಅತೀ ಪ್ರಮುಖವಾದದ್ದು. ಅಂಥ ಸೂಕ್ಷ್ಮಗಳನ್ನು ಆ ನದಿಗಳ ಜೀವ ವೈವಿಧ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಮೊದಲೇ ಅದನ್ನು ಬಲಿಕೊಡಲು ಹೊರಟಿದ್ದೇವೆ. ಜಗತ್ತಿನಲ್ಲೇ ಅಪೂರ್ವವಾದ ಶರಾವತಿ ಕೊಳ್ಳದಲ್ಲಿ ಇನ್ನೂ ಕಂಡುಹಿಡಿಯದ ಅನೇಕ ತೆರನ ಸಸ್ಯ – ಪ್ರಾಣಿ ಪ್ರಭೇಧಗಳಿವೆ ಎಂಬುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗುತ್ತಿದೆ. ಲಕ್ಷಾಂತರ ವರುಷಗಳಿಂದ ವಿಕಸನ ಹೊಂದಿದ ಅಪೂರ್ವ ಮಳೆಕಾಡಿನ ಪ್ರದೇಶದ ನದಿ ಪ್ರವಹಿಸುವ ಜೀವವೈವಿಧ್ಯವನ್ನು ಪೋಷಿಸುವ ನೈಸರ್ಗಿಕ ಹಕ್ಕನ್ನೇ

ಕಸಿದುಕೊಳ್ಳಲು ನಮಗಾವ ಹಕ್ಕಿದೆ? ಇದನ್ನು ಆಲೋಚಿಸಲೂ ವ್ಯವಧಾನವಿಲ್ಲದಂತೆ ವರ್ತಿಸುತ್ತ "ಅಭಿವೃದ್ಧಿ" ಎಂಬ ಭ್ರಮೆಯ ಹಿಂದೆ ಧಾವಿಸುತ್ತಿದ್ದೇವೆ. ನದಿ ಪಥ ಬದಲಿಸುವ, ಪ್ರವಹಿಸುವ ನೀರನ್ನು ಕಸಿದುಕೊಳ್ಳುವ ಪ್ರವೃತ್ತಿಯಿಂದ ನೈಜ, ಸಮಷ್ಠಿ ಅಭಿವೃದ್ಧಿ ಸಾಧ್ಯವಾಗದು ಎಂದು ಗೊತ್ತಿದ್ದೂ ತಪ್ಪೆಸಗುತ್ತಿದ್ದೇವೆ.

ನಗರಗಳ ತಡೆರಹಿತ ಅವೈಜ್ಞಾನಿಕ ಬೆಳವಣಿಗೆಯ ಅಗತ್ಯಗಳನ್ನು ಪೂರೈಸಲು ಮಳೆನಾಡನ್ನು ಪೋಷಿಸುವ ಶರಾವತಿಯನ್ನು ಬಲಿಕೊಡಲು ಹೊರಟಿರುವುದು ಎಂದೆಂದಿಗೂ ಖಂಡನೀಯವೇ. ಶರಾವತಿಗೆ ಇಷ್ಟೊಂದು ಅಣೆಕಟ್ಟೆ ಕಟ್ಟಿದ ನಂತರ ಅತ್ಯಲ್ಪ ನೀರನ್ನು ಕಬಳಿಸಲು ನಮಗಾವ ಹಕ್ಕೂ ಇಲ್ಲ. ಶರಾವತಿ ತನ್ನ ಉಗಮ ಸ್ಥಾನದಿಂದ ಅರಬ್ಬೀ ಸಮುದ್ರ ಸೇರುವವರೆಗೆ ದಂಡೆಗಳುದ್ದಕ್ಕೂ ಪೋಷಿಸುವ ಜೀವಜಲ, ನಿರ್ವಹಿಸುವ ಅತೀಸೂಕ್ಷ್ಮ ಪರಿಸರ ಕಾರ್ಯಗಳು ನದಿಯ ನೀರಿನ ಹರಿವಿನ ಪ್ರಮಾಣ ಮತ್ತು ವೇತನವನ್ನು ಅವಲಂಬಿಸಿದೆ. ಈ ಎರಡೂ ಅಂಶಗಳಲ್ಲಿನ ಯಾವುದೇ ತೆರನ ವ್ಯತ್ಯಯ ನದಿಯ ನೈಸರ್ಗಿಕ ಕಾರ್ಯ ನಿರ್ವಹಣೆಗೆ ಖಂಡಿತವಾಗಿಯೂ ಅಡ್ಡಿ ಉಂಟು ಮಾಡುತ್ತದೆ.

ಪ್ರತಿಯೊಂದು ನದಿಗೂ ಅದರದ್ದೇ ಆದ ಆಮ್ಲೀಯತೆ, ಲವಣ–ಖನಿಜಾಂಶಗಳ ಪ್ರಮಾಣ ಇದೆ. ನದಿ ತಳದ ಮಣ್ಣಿನ ವೈವಿಧ್ಯವಿದೆ. ನದಿಯ ನೀರಿನಲ್ಲಿರುವ ಸೂಕ್ಷ್ಮಾಣು ಜೀವಿಗಳದ್ದು ಅತಿ ಅದ್ಭುತ ಪ್ರಪಂಚ. ಅವು ಸಸ್ಯ ಮತ್ತು ಪ್ರಾಣಿ ಪ್ರಭೇದವೆರಡಕ್ಕೂ ಸೇರಿದವುಗಳು ಮತ್ತು ನದಿಯ ಆಹಾರ ಸರಪಳಿಯಲ್ಲಿ ಅತಿ ಪ್ರಮುಖ ಪಾತ್ರವಹಿಸುತ್ತವೆ.

ಇಂಥ ಸೂಕ್ಷ್ಮಾಣು ಜೀವಿಗಳನ್ನೇ ಅವಲಂಬಿಸಿ ಬದುಕುವ ಅಸಂಖ್ಯ ಆಕಶೇರುಕಗಳು, ಜಲ ಜೀವ ಪರಿಸರ ವ್ಯವಸ್ಥೆಯಲ್ಲಿ ಕೊಂಡಿಗಳಾಗಿ ಕಶೇರುಕಗಳನ್ನು ಪೋಷಿಸುತ್ತದೆ. ಮೇಲ್ನೋಟಕ್ಕೆ ಇಂಥ ಆಹಾರ ಸರಪಳಿ ಸರಳ ಎಂದೆನಿಸಿದರೂ ಅದು ತೀರ ಸಂಕೀರ್ಣವಾದದ್ದು. ನದಿ ದಡದುದ್ದಕ್ಕೂ ಅಸ್ತಿತ್ವ ಪಡೆದ ಸಸ್ಯ ಪ್ರಬೇಧ, ಅರಣ್ಯವನ್ನೇ ಅವಲಂಬಿಸಿ ಬದುಕುವ ಪ್ರಾಣಿ ಪ್ರಪಂಚ ವಿಶಿಷ್ಟ ಜೀವ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ನಿರ್ಜೀವ– ಸಜೀವ ಅಂಶಗಳೆಲ್ಲ ಸೇರಿ ನದಿಗೆ ಅದರದ್ದೇ ಆದ ಜೀವ, ಆರೋಗ್ಯ ನೀಡುತ್ತವೆ. ಅಂಥ ನದಿಯ ಜೀವ ಅಲ್ಲಿನ ಜೀವವೈವಿಧ್ಯ ಎಂಥದಿರಬೇಕು ಎಂಬುದನ್ನು ನಿರ್ಧರಿಸುತ್ತದೆ.

ಕರ್ನಾಟಕದ ನದಿಗಳು ತಮ್ಮ ರಭಸದ ಹರಿವಿನೊಟ್ಟಿಗೆ ಅಗಾಧ ಪ್ರಮಾಣದ ಪೋಷಕಾಂಶಗಳನ್ನು ಅರಬ್ಬೀ ಸಮುದ್ರಕ್ಕೆ ಕ್ಷಣ ಕ್ಷಣಕ್ಕೂ ಸೇರಿಸುವ ಪರಿಸರ ಸೂಕ್ಷ್ಮಕಾರ್ಯವೆಸಗುತ್ತಿವೆ. ಇಂಥ ಪೋಷಕಾಂಶಗಳನ್ನೇ ಅವಲಂಬಿಸಿ ಸಮುದ್ರದ ಇತರ ಜೀವಿಗಳು ಬದುಕುವ ಆಹಾರ ಸರಪಣಿ ತೀರ ಕ್ಲಿಷ್ಟವೂ, ಸೂಕ್ಷ್ಮವೂ ಆದದ್ದು. ಲಕ್ಷಾಂತರ ವರುಷಗಳಿಂದ ವಿಕಸನ ಹೊಂದಿದ ಇಂಥ ಸೂಕ್ಷ್ಮ ವ್ಯವಸ್ಥೆಯನ್ನು ನಾವು ಬಲಿಕೊಡುತ್ತಿರುವುದು ದುರ್ದೈವ. ನಮ್ಮ ನದಿಗಳು ಪಾರಂಪರಿಕ ಬೇಸಾಯ, ಮೀನುಗಾರಿಕೆಯನ್ನು ಹುಟ್ಟುಹಾಕುವಲ್ಲಿ ಪ್ರಮುಖ ಪಾತ್ರವಹಿಸಿದೆ. ಒಟ್ಟಾರೆ ನದಿಯ, ನದಿ ಪಾತ್ರದ ಈ ಎಲ್ಲಾ ಜೀವ ಪರಿಸರ ವ್ಯವಸ್ಥೆಯು ನದಿಯ ನೀರಿನ ಹರಿವಿನ ಪ್ರಮಾಣ ಮತ್ತು ವೇಗವನ್ನು ಅವಲಂಬಿಸಿಯೇ ವಿಕಸನ ಹೊಂದಿದೆ.

ನದಿ ಸಮುದ್ರವನ್ನು ಸೇರುವ ಪ್ರದೇಶ/ಅಳಿವೆ ಅಸಂಖ್ಯ ಅಕಶೇರುಕ, ಕಶೇರುಕಗಳ ಸಂತಾನೋತ್ಪತ್ತಿಯ ತಾಣ. ಅಳಿವೆಯಲ್ಲಿ ನಿರ್ದಿಷ್ಟ ಪ್ರಮಾಣದ ನದಿಯ ನೀರಿನ ಹರಿವು ಇದ್ದಲ್ಲಿ ಮಾತ್ರವೇ ಆನೇಕ ತೆರನ ಜಲಚರಗಳು ಸಂತಾನೋತ್ಪತ್ತಿ ನಡೆಸಲು ಸಾಧ್ಯ. ನದಿ ಅಳಿವೆಯ ಸ್ವಾಸ್ಥ್ಯ ಕೆಟ್ಟರೆ, ಅದರ ಪರಿಣಾಮ ಜಲಚರಗಳ, ಸಾಗರ ಜೀವಿಗಳ ಸಂತಾನೋತ್ಪತ್ತಿ ಮತ್ತು ಸಂಕುಲದ ಮೇಲೆ ಆಗುತ್ತದೆ. ನದಿಯ ಪಾತ್ರದಲ್ಲಿ ಅಸ್ತಿತ್ವ ಉಳಿಸಿಕೊಂಡಿರುವ ಮಳೆಕಾಡು, ಇತರ ಸಸ್ಯ ಪ್ರಬೇಧಗಳ ಸಾಂದ್ರತೆಯನ್ನು ನಿರ್ಧರಿಸುವಲ್ಲಿ ನದಿಯ ಅಗಲ, ನೀರಿನ ಹರಿವಿನ ಪ್ರಮಾಣ ಮತ್ತು ನೀರಿನ ವೇಗ ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಗಮನಾರ್ಹ.

ಶರಾವತಿಯ ಮೇಲಣ ನಮ್ಮ ದೌರ್ಜನ್ಯ ಒಂದೆರಡಲ್ಲ. ಈಗಾಗಲೇ ಸಾಕಷ್ಟು ಅಣೆಕಟ್ಟು ಕಟ್ಟಿದ್ದೇವೆ. ಶರಾವತಿ ನದಿ ಪಾತ್ರದ ಅಪೂರ್ವ ಜೀವರಾಶಿಯನ್ನು ಬಲಿಕೊಟ್ಟಿದ್ದೇವೆ. ಅನೇಕ ಕಡೆ ಅನಧಿಕೃತ ಮರಳು

ಗಣಿಗಾರಿಕೆ, ನದಿ ತೀರದ ಗುಡ್ಡಗಳ ಧ್ವಂಸ. ಅನೇಕ ತರನ ತ್ಯಾಜ್ಯಗಳ ಅವೈಜ್ಞಾನಿಕ ವಿಲೇವಾರಿ, ಇವೇ ಮುಂತಾದವು ಇಲ್ಲಿ ಉಲ್ಲೇಖಾರ್ಹ. ಒಂದು ನದಿಯನ್ನು ಹೇಗೆಲ್ಲ ಹಿಂಸಿಸಬಹುದೋ ಅದೆಲ್ಲವನ್ನೂ ಮಾಡುತ್ತಿದ್ದೇವೆ.

ಟೇಲರೇಸ್ ಆಣೆಕಟ್ಟು ಕಟ್ಟಿದ ನಂತರ ಗೇರುಸೊಪ್ಪೆಯಿಂದ ಹೊನ್ನಾವರದವರೆಗಿನ ನದಿಯ ಹರಿವಿನ ಪ್ರಮಾಣ ತೀರ ಕ್ಷೀಣಿಸಿದೆ. ಇದು ಸಮುದ್ರದ ಉಪ್ಪು ನೀರು ನದಿಗಭಿಮುಖವಾಗಿ ಪ್ರವಹಿಸಲು ಎಡೆಮಾಡಿಕೊಟ್ಟಿದೆ. ನದಿಯ ಜೀವಸಂಕುಲಗಳ ಬದುಕನ್ನೇ ದುಸ್ತರಗೊಳಿಸುವ ಕಾರ್ಯವನ್ನು ನದಿ ದಂಡೆಯುದ್ದಕ್ಕೂ ಉಪ್ಪು ಮಿಶ್ರಿತ ನೀರನ್ನು ಕೃಷಿಗೆ ಬಳಸಬೇಕಾದ ಅನಿವಾರ್ಯತೆ ತಂದೊಡ್ಡಿದ್ದೇವೆ ನಮ್ಮಿಂದ ಶರಾವತಿಗೆ ಒದಗಿದ ಗತಿಯಿಂದಾಗಿ ಅಪರೂಪದ ಕಪ್ಪೆ ಸಂತತಿಯೂ ಸೇರಿದಂತೆ ಅನೇಕ ಜಲಚರಗಳ ಬದುಕು ಹೇಗೆ ಸಾಗಬೇಕು ಎಂಬುದಕ್ಕೆ ಉತ್ತರಿಸಬೇಕಾದವರು ಯಾರು.

ಶರಾವತಿ ನದಿಯ ಮೇಲಿನ ನಮ್ಮ ದೌರ್ಜನ್ಯಕ್ಕೆ ಕೊನೆಯಿಲ್ಲ ಎಂಬಂತೆ ಇರುವ ಅಲ್ಪ ನೀರನ್ನೂ ನಗರ ಪ್ರದೇಶಗಳಿಗೆ ತಿರುಗಿಸುವ ಅವೈಜ್ಞಾನಿಕ ಯೋಜನೆಗಳನ್ನು ಹಮ್ಮಿಕೊಳ್ಳಲು ಉತ್ಸುಕರಾಗಿದ್ದೇವೆ. ಕ್ಷೀಣಿಸಿದ ನೀರಿನ ಪರಿಣಾಮವಾಗಿ ಶರಾವತಿ ನದಿ ಪಾತ್ರದುದ್ದಕ್ಕೂ ಅನೇಕ ಹೊಸ ನಡುಗಡ್ಡೆಗಳ ರಚನೆ ಆಗುತ್ತಿದೆ. ನದಿಯು ಸಾಗರ ಸೇರುವಲ್ಲಿನ ಭೂಪ್ರದೇಶದಲ್ಲಿ ಯಾವೆಲ್ಲ ತೆರನ ಅಪಾಯಕಾರಿ ಬೆಳವಣಿಗೆಗಳು ಉಂಟಾಗುತ್ತಿವೆ ಎಂಬುದನ್ನು ಕಣ್ಣೆತ್ತಿ ನೋಡುವ ಮೊದಲೇ ನೀರ ಹರಿವಿನ ನಿಯಂತ್ರಣಕ್ಕೆ ಕೈ ಹಾಕಿದ್ದೇವೆ. ಇಂಥ ಭೂ ರಚನೆಯಲ್ಲಿನ ಬದಲಾವಣೆಗಳನ್ನು ಪುನ: ಸುಸ್ಥಿತಿಗೆ ತರುವುದು ಅಸಾಧ್ಯದ ಕೆಲಸ ಎಂಬುದು ನಮ್ಮ ಅರಿವಿಗೆ ಬರಬೇಕಿದೆ.

ಶರಾವತಿ ನದಿಯ ಜೀವಜಾಲದ ಕುರಿತು ಅಧಿಕೃತವೆನಿಸುವ ದೀರ್ಘ ಅಧ್ಯಯನ ಕೈಗೊಂಡು, ಅಂತರರಾಷ್ಟ್ರೀಯ ಮಟ್ಟದಲ್ಲಿ ವೈಜ್ಞಾನಿಕವಾಗಿ ಅನುಮೋದಿಸಲ್ಪಟ್ಟ ಸಂಶೋಧನೆಯ ವಿವರಗಳನ್ನು ಪ್ರಕಟಿಸಿರುವ ವಿಜ್ಞಾನಿಗಳ ಅಭಿಪ್ರಾಯವನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸುತ್ತಿರುವುದು ಏಕೆ ಎಂಬುದಕ್ಕೆ ನಮ್ಮ ಸರ್ಕಾರ ಮತ್ತು ಆಡಳಿತಗಾರರು ಉತ್ತರಿಸಿಯಾರೇ.

ಅನೇಕ ಸಂದರ್ಭಗಳಲ್ಲಿ ತಜ್ಞ ವರದಿ ಆಧರಿಸಿ ಯೋಜನೆ ಕೈಗೊಳ್ಳುತ್ತೇವೆ ಎಂದು ಆಡಳಿತಗಳು ಹೇಳುತ್ತಿರುವವಾದರೂ ಆ ತಜ್ಞರು ಎನಿಸಿಕೊಂಡವರ ತಜ್ಞ ಅಭಿಪ್ರಾಯಗಳು ಜಾಗತಿಕ ಮಟ್ಟದ ವೈಜ್ಞಾನಿಕ ವಲಯ ಒಪ್ಪಿದ ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿದ್ದಾಗ ಅಂಥ ತಜ್ಞರ ವರದಿಯ ಉದ್ದೇಶಗಳನ್ನೇ ಪ್ರಶ್ನಿಸಬೇಕಾದ ಅಗತ್ಯ ಇದೆ.

ಕೆಲ ವರ್ಷಗಳ ಹಿಂದೆ ರಾಜ್ಯದ ಎಲ್ಲ ಗ್ರಾಮೀಣ ಜನವಸತಿಗಳಿಗೆ ರಾಜ್ಯದಲ್ಲಿ ಹರಿಯುವ ನದಿ ಮೂಲಗಳಿಂದ ಕುಡಿಯುವ ನೀರನ್ನು ಪೂರೈಸಲು 52,000/– ಕೋಟಿ ರೂಪಾಯಿ ಅಗತ್ಯವಿದೆ ಎಂದು ಸ್ಟೂಪ್ ಕನ್ಸಲ್ಟೆನ್ಸಿ ಎಂಬ ಸಂಸ್ಥೆ ಅಂದಾಜು ಮಾಡಿದ ವರದಿ ಬಂದಿತ್ತು. ಪಶ್ಚಿಮ ದಿಕ್ಕಿಗೆ ಹರಿದು ಸಮುದ್ರ ಸೇರುವ ನದಿಗಳ ನೀರನ್ನು ಬಳಸಿಕೊಳ್ಳುವುದರಿಂದ ಮಾತ್ರ ಈ ಬೇಡಿಕೆ ಈಡೇರಿಸಲು ಸಾಧ್ಯ ಮತ್ತು ಅದಕ್ಕಾಗಿ ಕಾರ್ಯಕ್ರಮ ರೂಪಿಸಬೇಕು ಎಂಬ ಆಗ್ರಹವು ಕೇಳಿಬಂದಿತ್ತು. ಈಗ ಪುನ: ಶರಾವತಿ ನದಿ ನೀರು ತಿರುಗಿಸುವ ಮಾತು ದಿನೇ ದಿನೇ ಕೇಳಿಬರುತ್ತಿದೆ.

ಶರಾವತಿ, ಅಘನಾಶಿನಿ, ಕಾಳಿ ನದಿಗಳಿಂದ ನಮಗೆಷ್ಟು ನೀರು ಸಿಕ್ಕೀತು ಎಂಬ ಲೆಕ್ಕಾಚಾರ ಹಾಕುವುದರಲ್ಲಿಯೇ ನಮ್ಮ ಆಡಳಿತಗಾರರಿಗೆ ಆಸಕ್ತಿ. ನದಿಯ ಮೇಲಣ ಎಲ್ಲ ಹಕ್ಕುಗಳನ್ನು ಹೊಂದಿರುವ ಅಸಂಖ್ಯ ಜಲಚರಗಳ, ಜೀವಜಾಲದ ನೈಸರ್ಗಿಕ ಹಿತಾಸಕ್ತಿ ಕಾಯಬೇಕಾದವರು ಯಾರು ಅಂಥ ಫಲಾನುಭವಿ ಜೀವಿಗಳ ಅಹವಾಲು ನಮ್ಮ ಆಡಳಿತಗಳಿಗೆ ನಗಣ್ಯವೇಕೆ. ಅಸಂಖ್ಯ ಜೀವಿಗಳ ಬದುಕುವ ಹಕ್ಕನ್ನು ಕಸಿಯುವ ಶರಾವತಿಯನ್ನು ಬಲಿಕೊಡುವ ಮುನ್ನ ಈ ಎಲ್ಲ ಅತೀ ಸಂಕೀರ್ಣ ವಿಚಾರಗಳನ್ನು ಪ್ರಾಮಾಣಿಕವಾಗಿ

ಪರಿಗಣಿಸದೆ ಮುಂದಡಿಯಿಟ್ಟರೆ ಅದರ ಪರಿಣಾಮವನ್ನು ಮುಂದಣ ಜಗತ್ತು ಅನುಭವಿಸಲೇ ಬೇಕಾದ ಅನಿವಾರ್ಯತೆ ಇರುತ್ತದೆ. ಈ ಭೂಮಿ ನಮಗಷ್ಟೆ ಅಲ್ಲ. ಇತರೆಲ್ಲ ಜೀವಿಗಳಿಗೂ ಸೇರಿದ್ದು ಎಂಬ ವಿವೇಚನೆ ಮತ್ತು ಅದಕ್ಕನುಗುಣವಾದ ವರ್ತನೆ ಇಂದಿನ ಅಗತ್ಯ.

ನದಿ ಎಂದರೆ ಅದು ಕೇವಲ ನೀರಲ್ಲ, ಅದೊಂದು ಸಂಕೀರ್ಣ ಜೀವ. ಪರಿಸರ ವ್ಯವಸ್ಥೆಯ ಭಾಗ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಅಂಥ ನಡೆ ಮಾತ್ರವೇ ಮುಂದಣ ಯುಗದ ಎಲ್ಲಾ ಜೀವಿಗಳ ಜೀವನವನ್ನು ಸಹ್ಯಗೊಳಿಸಿತು.

ರವಿ ಹೆಗಡೆ, ಜೀವಶಾಸ್ತ್ರ ಸಂಶೋಧಕ,

ಆಧಾರ–ಉದಯವಾಣಿ, 12.07.2019.

3. ಸದನ ಅವಧಾನ ಸಾವಧಾನ

ಭಾರತದ ಸಂಸತ್ ಹಾಗೂ ರಾಜ್ಯಗಳ ಶಾಸನ ಸಭೆಗಳಲ್ಲಿ ಶಾಶ್ವತವಾಗಿ ಉಳಿಯುವ ರೀತಿಯಲ್ಲಿ ಹಲವಾರು ಮಂದಿ ಸಭಾಧ್ಯಕ್ಷರು ತಮ್ಮ ನಿಲುವುಗಳ ಮೂಲಕ ಸಂಸದೀಯ ಕಲಾಪಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿರುವುದು ಇತಿಹಾಸ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ವೈಕುಂಠ ಬಾಳಿಗಾ, ಎಸ್.ಡಿ.ಕೊಠಾವಳೆ, ಕೆ.ಎಚ್. ರಂಗನಾಥ್, ಎಸ್.ಎಂ.ಕೃಷ್ಣ, ಡಿ.ಬಿ.ಚಂದ್ರೇಗೌಡ ಮೊದಲಾದ ಸಭಾಧ್ಯಕ್ಷರ ಮೌನದ ಮೂಲಕವೇ ಕಲಾಪದ ಓಟಕ್ಕೆ ಹಾಗೂ ಜನ ಕಲ್ಯಾಣದ ಗುರಿ ಮುಟ್ಟಲು ಕೈಗೊಂಡ ಕ್ರಮಗಳು ಉಲ್ಲೇಖನಾರ್ಹ. ಈಗಿನ ವಿಧಾನ ಸಭಾಧ್ಯಕ್ಷರು ಅತೃಪ್ತ ಶಾಸಕರ ರಾಜೀನಾಮೆ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರದಲ್ಲಿ ಇಡೀ ದೇಶಕ್ಕೆ ದೇಶವೇ ಮುಟ್ಟಿ ನೋಡಿಕೊಳ್ಳುವಂತಹ ನಿರ್ಧಾರ ಕೈಗೊಂಡಿರುವುದು ಸುಪ್ರೀಂಕೋರ್ಟ್‌ನಲ್ಲೂ ಈ ಪ್ರಕರಣ ಮಾರ್ದನಿಗೊಳ್ಳುವಂತಾಗಿದೆ.

ಸಂಸದೀಯ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಶಾಸನ ಸಭೆ ಹಾಗೂ ಅದರ ಸಭಾಧ್ಯಕ್ಷರಿಗೆ ಇರುವ ಪರಮಾಧಿಕಾರ ಪ್ರಶ್ನಾತೀತ. ಜನಕಲ್ಯಾಣದ ದೃಷ್ಟಿಯಿಂದ ನಿರ್ದಾಕ್ಷಿಣ್ಯವಾಗಿ ಅನುಭವಕ್ಕೆ ಎಟುಕದ, ಆದರೆ ಭಾವನೆಗಳಿಗೆ ತಟ್ಟುವ ಸಂಗತಿಗಳ ಮೂಲಕ ಆಗಲೇಬೇಕಾದ ವಿಧಿವಿಧಾನಗಳನ್ನು ಸದನದಲ್ಲಿ ಸಭಾಸದರಿಗೆ ಮಂಡಿಸಲು ಅವಕಾಶ ಕಲ್ಪಿಸುವುದೇ ಈ ಪ್ರಶ್ನಾತೀತ ಪರಮಾಧಿಕಾರ ಇರುವ ಉದ್ದೇಶ. ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಹಾಗೆ ನೋಡಿದರೆ, ಯಾವುದು ಕೂಡಾ ಪರಮಾಧಿಕಾರ ಹೊಂದಿರುವ ಸಂಸ್ಥೆ ಅಥವಾ ಪದಾಧಿಕಾರಿ ಇಲ್ಲ. ಆಂದರೆ ಎಲ್ಲವು ಪ್ರಶ್ನಾತೀತವೇ ಸಾಂಸ್ಥಿಕವಾಗಿ ಕೈಗೊಳ್ಳುವ ನಿರ್ಧಾರಕ್ಕೆ ಪರಮಾಧಿಕಾರದ ಹಾಗೂ ಪ್ರಶ್ನಾತೀತ ರಕ್ಷಣೆಯ ಬಲ ಇರುತ್ತದೆಯೇ ವಿನ: ವ್ಯಕ್ತಿಗತವಾಗಿ ಕೈಗೊಳ್ಳುವ ನಿರ್ಧಾರಗಳಿಗೆ ಅಂತಹ ರಕ್ಷಣೆ ಇರಲಾರದು. ಭಾರತದ ಸಂಸತ್ ಹಾಗೂ ರಾಜ್ಯಗಳ ಶಾಸನ ಸಭೆಗಳಲ್ಲಿ ಶಾಶ್ವತವಾಗಿ ಉಳಿಯುವ ರೀತಿಯಲ್ಲಿ ಹಲವಾರು ಮಂದಿ ಸಭಾಧ್ಯಕ್ಷರು ತಮ್ಮ ನಿಲುವುಗಳ ಮೂಲಕ ಸಂಸದೀಯ ಕಲಾಪಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿರುವುದು ಈಗಂತೂ ಇತಿಹಾಸ. ಅನಂತಶಯನ ಅಯ್ಯಂಗಾರ್, ಪಿ.ಎ.ಸಂಗ್ಮಾ, ಪಿ.ಜಿ.ಮಾವಳಂಕರ್, ನೀಲಂ ಸಂಜೀವರೆಡ್ಡಿ, ಬಾಲಯೋಗಿ. ಜಿ.ಎಸ್.ದಿಲ್ಲೋನ್, ಬಲರಾಮ ಜಾಖಡ್ ಮೊದಲಾದ ಸಭಾಧ್ಯಕ್ಷರು ತೀರ್ಪು ನೀಡುವ ಬದಲಿಗೆ ಕಲಾಪದ ನಡುವೆ ಕೆಲ ಉಕ್ತಿಗಳನ್ನು ಬಳಸುವ ಮೂಲಕ ಕಲಾಪಕ್ಕೆ ಹೊಸ ತಿರುವು ನೀಡಿ ಸಂಪ್ರದಾಯಗಳನ್ನು ಸ್ಥಾಪಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ವೈಕುಂಠ ಬಾಳಿಗಾ, ಎಸ್.ಡಿ.ಕೊಠಾವಳೆ, ಕೆ.ಎಚ್.ರಂಗನಾಥ್. ಎಸ್.ಎಂ.ಕೃಷ್ಣ, ಡಿ.ಬಿ. ಚಂದ್ರೇಗೌಡ ಮೊದಲಾದ ಸಭಾಧ್ಯಕ್ಷರು ಮೌನದ ಮೂಲಕವೇ ಕಲಾಪದ ಓಟಕ್ಕೆ ಹಾಗೂ ಜನಕಲ್ಯಾಣದ ಗುರಿ ಮುಟ್ಟಲು ಕೈಗೊಂಡ ಕ್ರಮಗಳು ಉಲ್ಲೇಖನಾರ್ಹ. ಹೆಮ್ಮೆಯಿಂದ ಗುರುತಿಸಬಹುದಾದ ಮತ್ತೊಬ್ಬ ಸಭಾಧ್ಯಕ್ಷರೆಂದರೆ ರಮೇಶ್ ಕುಮಾರ್ 1994–99ರ ಅವಧಿಯಲ್ಲಿ ಮೊದಲಬಾರಿಗೆ ಜನತಾದಳದ ಸರ್ಕಾರದ ಅವಧಿಯಲ್ಲಿ ರಮೇಶ್ ಕುಮಾರ್ ಸಭಾಧ್ಯಕ್ಷರಾಗಿದ್ದರು. 18 ವರ್ಷಗಳ

ನಂತರ ಬದಲಾದ ರಾಜಕೀಯ ಪರಿಸರದ ಹಿನ್ನೆಲೆಯಲ್ಲಿ ರಮೇಶ್ ಕುಮಾರ್ ಈಗ ಮತ್ತೆ ಸಭಾಧ್ಯಕ್ಷರು. ಆಗ ಜನತಾದಳದ ಮೂಲಕ ಸಭಾಧ್ಯಕ್ಷರಾಗಿದ್ದರು. ಈಗ ಕಾಂಗ್ರೆಸ್ ಪಕ್ಷದ ಮೂಲಕ ಅದೇ ಸ್ಥಾನಕ್ಕೆ ಬಂದಿದ್ದಾರೆ. ಕಾಕತಾಳೀಯದ ಸಂಗತಿಯೆಂದರೆ ಹಿಂದಿನ ಅವಧಿಯಲ್ಲಿ ಹೆಚ್. ಡಿ. ದೇವೇಗೌಡ ಮುಖ್ಯಮಂತ್ರಿಯಾಗಿದ್ದರು. ಈಗ ದೇವೇಗೌಡರ ಪುತ್ರ ಹೆಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್–ಜೆಡಿಎಸ್ ಮೈತ್ರಿಕೂಟದ ಮುಖ್ಯಮಂತ್ರಿ, ಹಲವಾರು ದೃಷ್ಟಿಕೋನದಿಂದ ಈಗಿನ ಪರಿಸ್ಥಿತಿಗೂ ಆಗಿನ ಪರಿಸ್ಥಿತಿಗೂ ಗುಣಾತ್ಮಕ ವ್ಯತ್ಯಾಸವುಂಟು.

ರಮೇಶ್ ಕುಮಾರ್ ಅವರು ಒಳ್ಳೆಯ ಮಾತುಗಾರರು. ಕಿವಿಗೊಟ್ಟು ಕೇಳಲೇಬೇಕು ಎನ್ನುವಂತಹ ವಾಕ್ಚಾತುರ್ಯ ಇದಕ್ಕೆ ಮುಖ್ಯ ಕಾರಣ. ಅವರ ನಿರಂತರ ಅಧ್ಯಯನ ಹಾಗೂ ಅಧ್ಯಯನ ಆಧರಿಸಿದ ಆತ್ಮಾವಲೋಕನ ಧಾಟಿಯ ವಿಶ್ಲೇಷಣೆಯ ಗುಣ, ಕನ್ನಡ, ತೆಲುಗು, ಭಾಷೆಗಳ ಜ್ಞಾನದ ಜೊತೆಗೆ ಇಂಗ್ಲಿಷ್ ಮೇಲಿನ ಪ್ರಭುತ್ವದ ಪರಿಣಾಮವೆಂದರೆ ಮೋಡಿ ಮಾಡುವ ಮಾತಿನ ಚಾತುರ್ಯ. ಇದನ್ನೇ ವಿಸ್ತರಿಸಿ ಹೇಳುವುದಾದರೆ ಇವರ ವೈವಿಧ್ಯಮಯ ಜ್ಞಾನಸಂಪತ್ತು ಅವಧಾನದ ಪ್ರತೀಕ. ಹಲವಾರು ಸಂದರ್ಭಗಳಲ್ಲಿ ಅವಧಾನಿಯನ್ನು ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪಿಸಿ ಕಡೆಯಲ್ಲಿ ಎಲ್ಲವನ್ನು ಒಟ್ಟುಗೂಡಿಸುವ ಅವರ ಕೌಶಲ್ಯ ನಿಜಕ್ಕೂ ಮೆಚ್ಚತಕ್ಕದ್ದು. ಇಂತಹ ಅಪರೂಪದ ಗುಣವಂತಿಕೆಯ ರಮೇಶ್ ಕುಮಾರ್ ವಿಧಾನ ಸಭಾಧ್ಯಕ್ಷರಾಗಿ ಈಗ ವಿವಾದಕ್ಕೆ ಗ್ರಾಸವಾಗಲು ಮುಖ್ಯ ಕಾರಣ ಹಿಡಿತಕ್ಕೆ ಸಿಕ್ಕದ, ಗುರಿಯೂ ಗುರುವು ಇಲ್ಲದಂತೆ ಕಾಣುವ ರಾಜಕೀಯ ಬೆಳವಣಿಗೆ. ಸಭಾಧ್ಯಕ್ಷರಿಗೂ ಈ ರಾಜಕೀಯ ಚಟುವಟಿಕೆಗಳಿಗೂ ಕಾನೂನಿನ ದೃಷ್ಟಿಯಲ್ಲಿ ಸಂಬಂಧವಿಲ್ಲ. ನಿರ್ವಿಕಾರವಾಗಿ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವುದು ಸಭಾಧ್ಯಕ್ಷರ ಮೊದಲ ಅರ್ಹತೆ. ಶಾಸನಕ್ಕೆ ಸಂಪೂರ್ಣವಾಗಿ ಶರಣಾಗಿ ಹೇಗೆ ಬದುಕಿನ ಬಂಡಿಯನ್ನು ಎಳೆಯಲು ಸಾಧ್ಯವಾಗುವುದಿಲ್ಲವೋ ಹಾಗೆಯೇ ಸಭಾಧ್ಯಕ್ಷರಾಗಿದ್ದುಕೊಂಡು ವ್ಯಕ್ತಿಗತವಾಗಿ ಸುತ್ತಲೂ ಜರುಗುವ ಘಟನಾವಳಿಗಳಿಗೆ ಕುರುಡಾಗುವುದು ಎಂತಹ ಧೀಮಂತರಿಗೂ ಅಸಾಧ್ಯ. ಏಕೆಂದರೆ ಧೀಮಂತರು ಕೂಡಾ ಮನುಷ್ಯ ಮಾತ್ರದವರೇ. ಕುಮಾರಸ್ವಾಮಿ ನೇತೃತ್ವದ ಸರ್ಕಾರದ ಬಗ್ಗೆ ಬೇಸರಗೊಂಡು ಕಾಂಗ್ರೆಸ್ ಹಾಗೂ ಜೆ.ಡಿ.ಎಸ್.ನ 13 ಮಂದಿ ಶಾಸಕರು ರಾಜೀನಾಮೆ ಪತ್ರಗಳನ್ನು ಕೊಟ್ಟು, ಸಭಾಧ್ಯಕ್ಷರಿಗೆ ಅಗ್ನಿಪರೀಕ್ಷೆಯಾಗುವಂತಹ ವಾತಾವರಣ ಸೃಷ್ಟಿಸಿದ್ದರಲ್ಲಿ ಪ್ರೇರಣೆಯಿದ್ದರೆ ಅದು ಜನರ ಅರಿವಿಗೆ ಬಂದಿಲ್ಲ. ಕಾರಣವಂತೂ ಶಾಸಕರೇ ಪಟ್ಟಿ ಮಾಡಿರುವಂತೆ ಸರ್ಕಾರದ ಬಗ್ಗೆ ಬೇಸರ ರಾಜೀನಾಮೆ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರದಲ್ಲಿ ರಮೇಶ್ ಕುಮಾರ್ ಇಡೀ ದೇಶಕ್ಕೆ ದೇಶವೇ ಮುಟ್ಟಿ ನೋಡಿಕೊಳ್ಳುವಂತಹ ನಿರ್ಧಾರ ಕೈಗೊಂಡ ಪರಿಣಾಮವೇ ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕರಣದ ಮಾರ್ದನಿ.

ವಿಧಾನ ಸಭಾಧ್ಯಕ್ಷರು ಪರಮಾಧಿಕಾರವುಳ್ಳವರು ಹಾಗೂ ಸಭಾಧ್ಯಕ್ಷರಿಗೆ ನಿರ್ದೇಶನ ಕೊಡುವುದಕ್ಕೆ ನ್ಯಾಯಾಲಯವೂ ಸೇರಿದಂತೆ ಯಾವುದೇ ಸಾಂವಿಧಾನಿಕ ಸಂಸ್ಥೆಗೆ ಅವಕಾಶವಿಲ್ಲ ಎಂಬುದು ಒಂದು ವಾದ. ರಮೇಶ್ ಕುಮಾರ್ ಅವರು ಕೂಡಾ ಇದೇ ನಿಲುವನ್ನು ಅನುಮೋದಿಸುವ ರೀತಿಯಲ್ಲಿ ಶಾಸಕರ ರಾಜೀನಾಮೆ ಪರಿಶೀಲಿಸುವ ಸಂದರ್ಭದಲ್ಲಿ ಹೇಳಿರುವುದು ಕೆಲವರ ದೃಷ್ಟಿಯಲ್ಲಿ ಬಂಡಾಯವಾದರೆ ಇನ್ನು ಕೆಲವರ ದೃಷ್ಟಿಯಲ್ಲಿ ರಾಜ್ಯಾಂಗದ ಮೂಲಕ ದತ್ತಕವಾಗಿರುವ ಅಧಿಕಾರ. ಈ ಜಿಜ್ಞಾಸೆಯನ್ನೇ ವಿಸ್ತರಿಸಿ ಹೇಳುವುದಾದರೆ ಸಭಾಧ್ಯಕ್ಷರು ಪ್ರಶ್ನಾತೀತರೂ ಹೌದು. ಪರಮಾಧಿಕಾರವುಳ್ಳವರು ಹೌದು. ಆದರೆ, ಸಭೆಯಲ್ಲಿ ಜರುಗಿದ ಕಲಾಪ ನಿರ್ಣಯವೇ ಇರಲಿ ಅಥವಾ ಪ್ರಸ್ತಾಪವೇ ಇರಲಿ ಅದರ ರಕ್ಷಣೆಗೆ ಸದನದ ಹೊರಗಡೆ ಯಾರೊಬ್ಬರೂ ಪ್ರಶ್ನಿಸುವಂತಿಲ್ಲ. ಇದು ಸಭಾಧ್ಯಕ್ಷರ ಪರಮಾಧಿಕಾರ. ಇಂತಹ ನಿಲುವನ್ನು ಈ ಹಿಂದೆ ಲೋಕ ಸಭಾಧ್ಯಕ್ಷರಾಗಿದ್ದ ಸೋಮನಾಥ ಚಟರ್ಜಿ ಗಟ್ಟಿ ಧ್ವನಿಯಲ್ಲಿಯೇ ಹೇಳಿ ಸಂಸತ್ತಿನ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಎತ್ತಿ ತೋರಿಸಿದ್ದುಂಟು. ಮತ್ತೊಬ್ಬ ಮಾಜಿ ಲೋಕಸಭಾಧ್ಯಕ್ಷ ರಬೀರೇ ಕೂಡ ಬೆಂಗಳೂರಿನಲ್ಲಿ 1990–91 ರಲ್ಲಿ ಜರುಗಿದ ಅಖಿಲ ಭಾರತ ಸಭಾಪತಿಗಳ ಶೃಂಗಸಭೆಯಲ್ಲಿ ಇದೇ ನಿಲುವನ್ನು ಪ್ರತಿಪಾದಿಸಿದ್ದುಂಟು. ಕರ್ನಾಟಕದ ಮಾಜಿ ವಿಧಾನಸಭಾಧ್ಯಕ್ಷ ಡಿ.ಬಿ. ಚಂದ್ರೇಗೌಡ ಅವರು 1983ರಲ್ಲಿ ಅಕ್ಕಿ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ

ಹೆಚ್. ಗಂಗಾಧರನ್ ನೇತೃತ್ವದಲ್ಲಿ ಸದನ ಸಮಿತಿಯನ್ನು ರಚಿಸಿದಾಗಲೂ ಕೂಡ ಸಭಾಧ್ಯಕ್ಷರ ಪರಮಾಧಿಕಾರವನ್ನು ಒತ್ತಿ ಹೇಳಿದ್ದರು. ಶಾಸನ ಸಭೆ ಅಧಿವೇಶನ ನಡೆಯುತ್ತಿರುವಾಗ ಮಾತ್ರ ಸಭಾಧ್ಯಕ್ಷರುಗಳಿಗೆ ಪರಮಾಧಿಕಾರ ದತ್ತಕವಾಗಿರುತ್ತದೆ ಎಂಬ ನಿಲುವನ್ನು ಆಗ ವಿಧಾನ ಸಭೆ ಪ್ರತಿಪಕ್ಷದ ನಾಯಕರಾಗಿದ್ದ ವೀರಪ್ಪ ಮೊಯ್ಲಿ ಹಾಗೂ ಕಮ್ಯುನಿಸ್ಟ್ ಪಕ್ಷದ ಎಂ.ಎಸ್. ಕೃಷ್ಣನ್ ಬಲವಾಗಿ ಪ್ರತಿಪಾದಿಸಿದ್ದರು. ಈ ವಾದ ವಿವಾದ ರಾಷ್ಟ್ರಮಟ್ಟದಲ್ಲೂ ಪ್ರತಿಧ್ವನಿಗೊಂಡು ಮುಂಬೈನಲ್ಲಿ ನಡೆದ ಸಭಾಧ್ಯಕ್ಷರ ಶೃಂಗಸಭೆಯಲ್ಲಿ ಸಾಂಸ್ಥಿಕ ನಿರ್ಧಾರಗಳಿಗೆ ಹಾಗೂ ಅಧಿವೇಶನದ ಕಾಲದಲ್ಲಿ ಮಾತ್ರ ಸಭಾಧ್ಯಕ್ಷರಿಗೆ ಪ್ರಶ್ನಾತೀತವಾದ ಪರಮಾಧಿಕಾರ ಇರುತ್ತದೆ ಎಂಬ ಒಕ್ಕೊರಲ ನಿಲುವು ಹೊರಹೊಮ್ಮಿತು.

ಶಾಸಕರ ರಾಜೀನಾಮೆಗೆ ಸಂಬಂಧಿಸಿದ ಪ್ರಕರಣ ಸುಪ್ರೀಂಕೋರ್ಟ್‌ನ ಮುಂದೆ ಇರುವಾಗ ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದು ಉಚಿತವಾಗದು. ಆದರೂ ದೇಶದಲ್ಲಿ ಈಗ ಭುಗಿಲೆದ್ದಿರುವ ಕುತೂಹಲದ ಪ್ರಶ್ನೆಯೆಂದರೆ ಸಭಾಧ್ಯಕ್ಷರಿಗೆ ಸುಪ್ರೀಂಕೋರ್ಟ್ ಈ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಿಲ್ಲ. ಆದರೆ, ಮಂಗಳವಾರದವರೆಗೆ ಯಥಾಸ್ಥಿತಿಯನ್ನು ಅಂದರೆ ಶಾಸಕರ ಅನರ್ಹತೆ ಪ್ರಕರಣದ ಬಗ್ಗೆ ವಿಚಾರಣೆ ನಡೆಸುವುದಾಗಲೀ ರಾಜೀನಾಮೆ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದಾಗಲಿ ಮಾಡಬಾರದು ಎಂಬುದು ಈ ನಿರ್ದೇಶನ. ಆದೇಶದಲ್ಲಿ ಏನನ್ನೂ ಹೇಳದೇ ಈ ನಿರ್ದೇಶನ ಕೊಟ್ಟಿರುವುದರಿಂದ ಖಚಿತವಾಗುವ ಅಂಶವೆಂದರೆ ಸುಪ್ರೀಂ ಕೋರ್ಟ್‌ಗೆ ಸಭಾಧ್ಯಕ್ಷರಿಗೆ ನಿರ್ದೇಶನ ನೀಡುವ ಅಧಿಕಾರವಿದೆ ಎಂದು ಸಭಾಧ್ಯಕ್ಷ ರಮೇಶ್ ಕುಮಾರ್ ಅವರ ಲೋಕನಿಷ್ಠೆ ಹಾಗೂ ಲೋಕದೃಷ್ಟಿ ಪ್ರಶ್ನಾತೀತ. ಎಕ್ಸ್‌ಪೋ–70ರ ಚಳುವಳಿಯ ಸಂದರ್ಭದಲ್ಲಿ ಬೆಂಗಳೂರಿನ ಸರ್ಕಾರಿ ಕಾಲೇಜಿನ ವಿದ್ಯಾರ್ಥಿ ನಾಯಕರಾಗಿ ಹೊರಹೊಮ್ಮಲು ಕಾರಣ ಆಗಿನ ವಿದ್ಯಾರ್ಥಿಗಳ ರಾಜಕೀಯ ಸ್ಥಿತಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದ ಡಿ.ಪಿ.ಆಂಜನೇಯಸ್ವಾಮಿ ಎಂಬುವರು ವಿದ್ಯಾರ್ಥಿಗಳ ಭಾವನೆಗಳಿಗೆ ತದ್ವಿರುದ್ಧವಾಗಿ ಮುಷ್ಕರದ ಬಗ್ಗೆ ತಟಸ್ಥ ಧೋರಣೆ ತಳೆದು ಆಗಿನ ವೀರೇಂದ್ರ ಪಾಟೀಲ್ ಸರ್ಕಾರಕ್ಕೆ ಬೆಂಬಲ ನೀಡಿದರು ಎಂಬ ವಿಚಾರ ದೊಡ್ಡ ವಿವಾದಕ್ಕೆ ತಿರುಗಿತ್ತು. ಆ ಬಿಕ್ಕಟ್ಟಿನ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕಣ್ಮಣಿಯಾಗಿದ್ದ ರಮೇಶ್ ಕುಮಾರ್ ಉಪಾಧ್ಯಕ್ಷ ಸ್ಥಾನದಿಂದ ಅಧ್ಯಕ್ಷ ಸ್ಥಾನಕ್ಕೆ ಬಡ್ತಿ ಪಡೆದು ನಾಯಕತ್ವ ಪಡೆದುಕೊಂಡವರು ಮತ್ತು ಮತ್ತೆ ಹಿಂದಿರುಗಿ ನೋಡಬೇಕಾದ ಅವಶ್ಯಕತೆಯೇ ಬರಲಿಲ್ಲ. ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ ಅನುಭವವೂ ಉಂಟು. ಸೋಲು ಗೆಲುವಿನ ಮೆಟ್ಟಿಲು ಎಂದು ಭಾವಿಸಿ ಹಂತಹಂತವಾಗಿ ಕಾಂಗ್ರೆಸ್ ಪಕ್ಷದಲ್ಲಿ ತಮ್ಮ ಸಂಘಟನೆ ಮತ್ತು ಮಾತಿನ ಚಾತುರ್ಯದಿಂದ ಎಲ್ಲರಿಗೂ ಬೇಕಾದ ಮುಖಂಡರಾಗಿ ಹೊರಹೊಮ್ಮಿದರು. ಕಾನೂನು ಪದವೀಧರರಲ್ಲದಿದ್ದರೂ, ಕಾನೂನಿನ ವಿವಿಧ ಆಯಾಮಗಳನ್ನು ಕಾನೂನು ತಜ್ಞರಿಗಿಂತ ಮಿಗಿಲಾಗಿ ವಿಶ್ಲೇಷಿಸುವ ಸಾಮರ್ಥ್ಯ ರಮೇಶ್ ಕುಮಾರ್ ಅವರಿಗಿದೆ. ಒಮ್ಮೆ ಯಡಿಯೂರಪ್ಪ ಕುರಿತ ಪುಸ್ತಕ ಪ್ರಕಟಣೆಯ ಕಾರ್ಯಕ್ರಮದಲ್ಲಿ ಸುಪ್ರಸಿದ್ಧ ವಕೀಲ ಜೇಠ್ಮಲಾನಿ ಅವರು ಕಣ್ಣರಳಿಸಿ ಕಿವಿ ನಿಮಿರಿಸಿಕೊಂಡು ಕೇಳುವಂತೆ ರಮೇಶ್ ಕುಮಾರ್ ಮಾತನಾಡಿದ್ದನ್ನು ಕಂಡು ವಕೀಲ ವೃಂದವೇ ವಿಸ್ಮಯಗೊಂಡಿತ್ತು. ಈಗ ವಿಸ್ಮಯಗೊಳ್ಳುವ ಸರದಿ ಇಡೀ ದೇಶಕ್ಕೆ ಯಾಕೆಂದರೆ ಸಾರ್ವತ್ರಿಕ ನಿರೀಕ್ಷೆಗೆ ಪರ್ಯಾಯವಾಗಿ ಅವರು ಶಾಸಕರ ರಾಜೀನಾಮೆ ಬಗ್ಗೆ ಕೈಗೊಂಡ ನಿಲುವು. ಸುಪ್ರೀಂಕೋರ್ಟ್‌ನ್ನು ಗೌರವಿಸುತ್ತಲೇ ಸಭಾಧ್ಯಕ್ಷರ ಸ್ಥಾನದ ಘನತೆ ಗೌರವ ಏನೆಂಬುದನ್ನು ಹೇಳುತ್ತಲೇ ಪರಮಾಧಿಕಾರದ ಮಹತ್ವ ತೋರಿಸಿಕೊಟ್ಟವರು. ಸವೆದ ದಾರಿ ರಮೇಶ್ ಕುಮಾರ್ ಅವರಿಗೆ ಅಪಥ್ಯ ಹೊಸದಾರಿ ಅವರಿಗೆ ಬಲುಪ್ರಿಯ ಎಂಬುದು ಅವರ ಸ್ನೇಹಿತರ ನಂಬಿಕೆ. ಎಲ್ಲಾ ಅಚಾರ ವಿಚಾರಗಳನ್ನು ತಿಳಿದು ಜೀರ್ಣಿಸಿಕೊಳ್ಳುತ್ತಲೇ ಎಲ್ಲದರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡುವ ರಮೇಶ್ ಕುಮಾರ್ ಯಾರು ಎಂಬುದು ದೇಶಕ್ಕೂ ಅರ್ಥವಾಗಿಲ್ಲ, ಅವರ ಸ್ನೇಹಿತರಿಗೂ ಅರ್ಥವಾಗಿಲ್ಲ. ಆದರೆ, ಅವರು ಪ್ರತಿನಿಧಿಸುವ ಶ್ರೀನಿವಾಸಪುರ ವಿಧಾನ ಸಭಾ ಕ್ಷೇತ್ರದ ಜನರಿಗೆ ಇವರು ಯಾರು ಏನೆಂಬುದು ಗೊತ್ತು. ವಸ್ತುಸ್ಥಿತಿ ಹೀಗಿರುವಾಗ ಸುಪ್ರೀಂಕೋರ್ಟ್ ಮುಂದಿರುವ ಪ್ರಕರಣದಲ್ಲಿ ರಮೇಶ್ ಕುಮಾರ್ ಸಭಾಧ್ಯಕ್ಷರಾಗಿ ಯಾವ ದಾರಿಯನ್ನು ಹಿಡಿಯುತ್ತಾರೆ. ಅದು ಸವೆದ ದಾರಿಯೇ ಇಲ್ಲವೇ

ಹೊಸ ದಾರಿಯೋ ಎಂಬುದನ್ನು ಅರಿಯುವುದು ನಿಜಕ್ಕೂ ದೊಡ್ಡ ಸವಾಲು. ಇದೇ ರಮೇಶ್ ಕುಮಾರ್ ಅವರ ವ್ಯಕ್ತಿತ್ವದ ಹೆಗ್ಗುರುತು.

ಹುಣಸವಾಡಿ ರಾಜನ್

ಆಧಾರ–ಸಂಯುಕ್ತಕರ್ನಾಟಕ, 14.07.2019

4. 1989ರ ಸನ್ನಿವೇಶಕ್ಕೂ ರಾಜ್ಯದಲ್ಲಿಗ ಎದುರಾಗಿರುವ ಸಂವಿಧಾನದ ಬಿಕ್ಕಟ್ಟಿನಲ್ಲಿ ಸಾಮ್ಯತೆ. ವಿಧಾನ ಸಭೆಯ ಶ್ರೇಷ್ಠತೆ ಎತ್ತಿ ಹಿಡಿದ ಬೊಮ್ಮಾಯಿ ಕೇಸ್.

ಹದಿನೆಂಟು ದಿನಗಳು ಕರ್ನಾಟಕ ರಾಜಕಾರಣ ಕುರುಕ್ಷೇತ್ರ ಆಗಿತ್ತು. ತಂತ್ರ – ಪ್ರತಿತಂತ್ರಗಳ ಚದುರಂಗದ ಆಟ ನಡೆದಿತ್ತು. ಯಾರಿಗೆ ಗೆಲುವು? ಯಾರಿಗೆ ಸೋಲು? ಎನ್ನುವ ರಣರೋಚಕ ಘಟನಾವಳಿಗಳು ದಿನಬಿಟ್ಟು ದಿನ ಅನಾವರಣಗೊಳ್ಳುತ್ತಿದ್ದವು. ಅಧಿಕಾರದ ಮಾಯೆ ಪ್ರತಿಯೊಂದು ರಾಜಕೀಯ ಪಕ್ಷವನ್ನು ಆವರಿಸಿತ್ತು. ಇಂತಹ ಮಾಯಾಪಾಶದಲ್ಲಿ ಸಿಲುಕಿದವರೆಲ್ಲರೂ ಏನಕೇನ ಪ್ರಕಾರೇಣ ರಾಜ್ಯಾಧಿಕಾರವನ್ನು ತಾವೇ ಉಳಿಸಿಕೊಳ್ಳಬೇಕು ಎಂದು ಸಂಕಲ್ಪ ಮಾಡಿದ್ದರು. ಈ ಸಂದರ್ಭದಲ್ಲಿ ವಿಧಾನ ಸಭೆಯ ಸ್ಪೀಕರ್ ಅಧಿಕಾರ ಪರಮೋಚ್ಚ. ಅವರು ಕೈಗೊಳ್ಳುವ ಪ್ರತಿ ನಿರ್ಧಾರಗಳು ಸಂವಿಧಾನ ಚೌಕಟ್ಟಿನಲ್ಲಿ ಪ್ರಶ್ನಾತೀತ ಎನ್ನುವ ಅಭಿಪ್ರಾಯ ಸಾರ್ವತ್ರಿಕವಾಗಿ ವ್ಯಕ್ತ ಆಗಿತ್ತು. ಇದನ್ನು ಸಮರ್ಥಿಸುವ ಹಾಗೆ, ಸಂವಿಧಾನದ 10ನೇ ಪರಿಚ್ಛೇಧದಲ್ಲಿ ಸ್ಪೀಕರ್ ಪರಮಾಧಿಕಾರ ಪ್ರಶ್ನಾತೀತ? 1994ರ ಸುಪ್ರೀಂಕೋರ್ಟಿನ ತೀರ್ಪಿನ ಅನ್ವಯ ಸ್ಪೀಕರ್ ವಿಧಾನ ಸಭೆಯ ಪರಮಾಧಿಪತಿ. ಆದ್ದರಿಂದ ಸ್ಪೀಕರ್ ಪರಮಾಧಿಕಾರದಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದು ಸುಪ್ರೀಂಕೋರ್ಟ್ ಪ್ರತಿಪಾದಿಸಿತ್ತು. ಪರಮೋಚ್ಚ ನ್ಯಾಯಾಲಯದ ಇಂಥದೊಂದು ನಿರ್ಧಾರಕ್ಕೆ ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ ಐತಿಹಾಸಿಕ ತೀರ್ಪು ಮುಖ್ಯ ಕಾರಣ. 1994ರ ಮಾರ್ಚ್ 11 ರಂದು ಸಂವಿಧಾನದ 356ನೇ ವಿಧಿ ಕುರಿತು ಸುಪ್ರೀಂಕೋರ್ಟ್ ನೀಡಿರುವ ಈ ತೀರ್ಪು ಭಾರತದ ಸಂಸದೀಯ ಜನತಾಂತ್ರಿಕ ವ್ಯವಸ್ಥೆಯಲ್ಲಿಯೇ ಅತ್ಯಂತ ಮಹತ್ವದ ತೀರ್ಪು ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿಗಳಂತೆ ವರ್ತಿಸುತ್ತಿದ್ದು, ರಾಜ್ಯಪಾಲರುಗಳ ಸ್ವೇಚ್ಛಾಚಾರಕ್ಕೆ ಪ್ರಶ್ನಾತೀತ ಅಂಕುಶ ಆಗಿತ್ತು. ಮೈಲಿಗಲ್ಲು ಎನ್ನಬಹುದಾದ ಇಂತಹ ತೀರ್ಪು ಪ್ರಕಟಗೊಂಡ ನಂತರ ಭಾರತದ ರಾಜಕಾರಣದಲ್ಲಿ ಸಂವಿಧಾನದ 356ನೇ ವಿಧಿಯ ದುರ್ಬಳಕೆ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ.

ಸಂವಿಧಾನದ 356ನೇ ವಿಧಿಗೆ ಅಂಕುಶ ಹಾಕಿದ ಸುಪ್ರೀಂ ಕೋರ್ಟ್‌ನ ತೀರ್ಪಿಗೆ ಕಾರಣವಾದ 1989ರ ರಾಜಕೀಯ ಅಭದ್ರತೆಗೂ, ಈಗ ಸೃಷ್ಟಿಯಾಗಿರುವ ರಾಜಕೀಯ ಅಭದ್ರತೆಗೂ ಸಾಕಷ್ಟು ಹೋಲಿಕೆಗಳಿವೆ. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಜನತಾದಳ ಸರ್ಕಾರದ ಮುಖ್ಯಮಂತ್ರಿಯಾಗಿದ್ದವರು ಎಸ್.ಆರ್.ಬೊಮ್ಮಾಯಿ. ಜನತಾದಳದ 19 ಶಾಸಕರು ಮುಖ್ಯಮಂತ್ರಿ ಬೊಮ್ಮಾಯಿಯವರಿಗೆ ನೀಡಿದ ಬೆಂಬಲ ವಾಪಸ್ಸು ಪಡೆದಿರುವುದಾಗಿ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿರುತ್ತಾರೆ. ಶಾಸಕರ ಮನವಿ ಪತ್ರ ಸ್ವೀಕರಿಸಿದ ಅಂದಿನ ರಾಜ್ಯಪಾಲ ಪಿ.ವೆಂಕಟಸುಬ್ಬಯ್ಯನವರು ಬೊಮ್ಮಾಯಿಯವರ ಸರ್ಕಾರ ಬಹುಮತ ಕಳೆದುಕೊಂಡಿದೆ. ಪ್ರಸಕ್ತ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನ ಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಿಕೊಟ್ಟಿದ್ದರೂ ಅದೇ ದಿನ ರಾಜ್ಯಪಾಲರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಮತ್ತು ಅಂದಿನ ಕಾನೂನು ಸಚಿವ ಲಕ್ಷ್ಮೀಸಾಗರ್‌ರವರು ಸರ್ಕಾರಿ ಆಯೋಗದ ತೀರ್ಪು ಮತ್ತು ಈ ಸಂಬಂಧ ವಿವಿಧ ನ್ಯಾಯಾಲಯಗಳು ನೀಡಿರುವ ತೀರ್ಪಿನ ಸಮಗ್ರ ಮಾಹಿತಿ ನೀಡಿ ಸರ್ಕಾರವೊಂದರ ಬಹುಮತದ ನಿರ್ಧಾರ ವಿಧಾನ ಸಭೆಯಲ್ಲಿಯೇ ಆಗಬೇಕು. ರಾಜಭವನದಲ್ಲಿ ತಲೆ ಎಣಿಸುವ ಮೂಲಕವಾಗಲಿ ಅಥವಾ "ಬೆಂಬಲ ವಾಪಸ್ಸು ಪಡೆದಿದ್ದೇವೆ" ಎಂದು ಶಾಸಕರು ನೀಡಿರುವ ಪತ್ರಗಳ ಆಧಾರದಲ್ಲಿಯಾಗಲಿ ಒಂದು ಸರ್ಕಾರಕ್ಕೆ ಬೆಂಬಲ ಇದೆ ಅಥವಾ ಇಲ್ಲ ಎಂದು ನಿರ್ಧರಿಸಲಾಗದು. ಈಗಾಗಲೇ

1989ರ ಏಪ್ರಿಲ್ 27ರಂದು ವಿಧಾನ ಸಭೆಯ ಅಧಿವೇಶನ ಕರೆಯಲಾಗಿದೆ. ಅಗತ್ಯಬಿದ್ದರೆ ಒಂದೆರಡು ದಿನಗಳಲ್ಲಿ ವಿಧಾನ ಸಭೆಯ ಅಧಿವೇಶನ ಕರೆದು, ಬಹುಮತ ಸಾಬೀತುಪಡಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದರು. ಆದರೆ, ಸರ್ಕಾರ ಈಗಾಗಲೇ ಬಹುಮತ ಕಳೆದುಕೊಂಡಿದೆ. ವಿಧಾನ ಸಭೆಯ ಅಧಿವೇಶನ ಕರೆಯಲು ಅವಕಾಶ ಮಾಡಿಕೊಟ್ಟರೆ, ಕುದುರೆ ವ್ಯಾಪಾರಕ್ಕೆ ಪ್ರೋತ್ಸಾಹ ಮಾಡಿದಂತಾಗುತ್ತದೆ ಎನ್ನುವ ತೀರ್ಮಾನಕ್ಕೆ ಬಂದಿದ್ದ ರಾಜ್ಯಪಾಲರು ವಿಧಾನ ಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಡಳಿತ ಹೇರಿ ಶಿಫಾರಸ್ಸು ಮಾಡಿರುವ ತಮ್ಮ ನಿರ್ಧಾರ ಕಾನೂನು ಬದ್ಧವಾಗಿದೆಯೆಂದು ಪುನರುಚ್ಚರಿಸಿದ್ದರು. ಕೇಂದ್ರ ಸಚಿವ ಸಂಪುಟ ರಾಜ್ಯಪಾಲರ ಶಿಫಾರಸ್ಸು ಅಂಗೀಕರಿಸಲು ರಾಷ್ಟ್ರಪತಿಗಳಿಗೆ ಸಲಹೆ ಮಾಡಿತ್ತು. ಅದರಂತೆ, ಬೊಮ್ಮಾಯಿ ಸರ್ಕಾರ ವಜಾಗೊಳಿಸಿ, ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿರುವುದಾಗಿ ರಾಷ್ಟ್ರಪತಿ ವೆಂಕಟರಾಮನ್ ಅವರು 1989 ಏಪ್ರಿಲ್ 21 ರಂದು ಘೋಷಿಸಿದ್ದರು.

ರಾಜ್ಯಪಾಲರ ಈ ನಿರ್ಧಾರವನ್ನು ಮುಖ್ಯಮಂತ್ರಿ ಆಗಿದ್ದ ಎಸ್.ಆರ್.ಬೊಮ್ಮಾಯಿ ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ತಮಗಿರುವ ಬಹುಮತವನ್ನು ವಿಧಾನ ಸಭೆಯ ಅಧಿವೇಶನದಲ್ಲಿ ಸಾಬೀತುಪಡಿಸುತ್ತೇನೆ ಎಂದು ರಾಜ್ಯಪಾಲರಲ್ಲಿ ವಿನಂತಿಸಿಕೊಂಡಿದ್ದೆ. ಆದರೆ, ರಾಜ್ಯಪಾಲರು ನನ್ನ ಮನವಿಯನ್ನು ಪುರಸ್ಕರಿಸದೇ ವಿಧಾನ ಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಡಳಿತ ಹೇರಿರುವುದು ಸಂವಿಧಾನ ಬಾಹಿರ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಡಳಿತವನ್ನು ವಜಾಗೊಳಿಸಿ ವಿಧಾನಸಭಾ ಅಧಿವೇಶನದಲ್ಲಿ ಬಹುಮತ ಸಾಬೀತುಪಡಿಸಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿಕೊಂಡಿದ್ದರು. ಎಸ್.ಆರ್.ಬೊಮ್ಮಾಯಿಯವರ ಪರವಾಗಿ ಹೆಸರಾಂತ ಕಾನೂನು ತಜ್ಞ ಸೋಲಿ ಸೊರಾಬ್ಜಿ ವಾದ ಮಂಡಿಸಿದರು. ವಾದವನ್ನು ಆಲಿಸಿದ ಮುಖ್ಯ ನ್ಯಾಯಾಮೂರ್ತಿ ಪಿ.ಸಿ. ಜೈನ್ ಅವರ ನೇತೃತ್ವದ ತ್ರಿಸದಸ್ಯದ ಪೀಠ ರಾಷ್ಟ್ರಪತಿಗಳು, ರಾಜ್ಯಪಾಲರ ಎರಡು ವರದಿಗಳನ್ನು ಆದರಿಸಿ ರಾಷ್ಟ್ರಪತಿ ಆಡಳಿತ ಹೇರುವ ನಿರ್ಧಾರ ಕೈಗೊಂಡಿದ್ದಾರೆ. ರಾಷ್ಟ್ರಪತಿಗಳು ಸರ್ಕಾರ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರಿರುವುದು ಸಂವಿಧಾನಬದ್ಧವಾಗಿದೆ ಎಂದು ಅಭಿಪ್ರಾಯಿಸಿ ಬೊಮ್ಮಾಯಿಯವರ ರಿಟ್ ಅರ್ಜಿಯನ್ನು ವಜಾಗೊಳಿಸಿತ್ತು. ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಬೊಮ್ಮಾಯಿಯವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದರು ಭಾರತದ ಸಂವೈಧಾನಿಕ ವ್ಯವಸ್ಥೆಯಲ್ಲಿ ಸಂವಿಧಾನದ 356ನೇ ವಿಧಿಯನ್ನು ಅಧಿಕಾರಾರೂಢ ಕೇಂದ್ರ ಸರ್ಕಾರಗಳು ನೂರಕ್ಕೂ ಹೆಚ್ಚು ಬಾರಿ ದುರುಪಯೋಗಪಡಿಸಿಕೊಂಡಿವೆ. ಪ್ರಸಕ್ತ ಹಿನ್ನೆಲೆಯಲ್ಲಿ ಸಂವಿಧಾನದ 356ನೇ ವಿಧಿಯಲ್ಲಿ ಅಂತರ್ಗತವಾಗಿರುವ ಲೋಪದೋಷಗಳನ್ನು ಸರಿಪಡಿಸಿ ಅದನ್ನು ಪುನರ್ ವ್ಯಾಖ್ಯಾನ ಮಾಡಬೇಕಿದೆ. ಇಂತಹ ಗುರುತರ ಹೊಣೆಗಾರಿಕೆಗೆ ಸಂವಿಧಾನ ಪೀಠ ರಚನೆಯಿಂದ ಮಾತ್ರ ಸಾಧ್ಯ ಎನ್ನುವ ನಿರ್ಧಾರಕ್ಕೆ ಸುಪ್ರೀಂಕೋರ್ಟ್ ಬಂದಿತ್ತು. ಈ ನಿರ್ಧಾರದ ಅನ್ವಯ ನ್ಯಾಯಮೂರ್ತಿಗಳಾದ ಕುಲ್ದೀಪ್ ಸಿಂಗ್, ಪಿ.ಬಿ.ಸಾವಂತ್, ಕೆ.ರಾಮಸ್ವಾಮಿ, ಎಸ್.ಸಿ.ಆಗರ್‌ವಾಲ್, ಯೋಗೇಶ್ವರ ದಯಾಳ್, ಬಿ.ಪಿ.ಸಂಜೀವ್ ರೆಡ್ಡಿ, ಎಸ್.ಆರ್.ಪಾಂಡ್ಯನ್, ಎ.ಎಂ.ಅಹ್ಮದೀ ಮತ್ತು ಜೆ.ಎಸ್.ವರ್ಮಾ ಅವರುಗಳನ್ನೊಳಗೊಂಡ ಸಂವಿಧಾನ ಪೀಠವನ್ನು ರಚಿಸಲಾಯಿತು. ಹಾಲಿ ಸಂವಿಧಾನ ಪೀಠದ ಮುಂದೆ ಬೊಮ್ಮಾಯಿಯವರ ಪರ ವಕೀಲ ಸೋಲಿ ಸೋರಾಬ್ಜಿಯವರ ಸುದೀರ್ಘ ವಾದ ಮಂಡನೆ ಮಾಡಿದ್ದರು.

ಬೊಮ್ಮಾಯಿಯವರ ಪರ ವಕೀಲ ಸೋಲಿ ಸೋರಾಬ್ಜಿಯವರ ವಾದವನ್ನು ಆಲಿಸಿದ ಸುಪ್ರೀಂಕೋರ್ಟ್ ವಿಶೇಷ ಸಂವಿಧಾನಪೀಠ ತನ್ನ ತೀರ್ಪನ್ನು 1994ರ ಮಾರ್ಚ್ 11ರಂದು ತೀರ್ಪು ನೀಡಿತ್ತು. ಈ ತೀರ್ಪಿನಲ್ಲಿ States are neither satellite's nor agents of the centre ಎನ್ನುವ ಕಟುವಾದ ಮಾತುಗಳಿಂದ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ತರಾಟೆಗೆ ತೆಗೆದುಕೊಂಡು ನ್ಯಾಯಾಂಗ ಇತಿಹಾಸದಲ್ಲಿಯೇ ಮೈಲಿಗಲ್ಲಾಗಬಹುದಾದ ತೀರ್ಪು ನೀಡಿತ್ತು. ಸರ್ಕಾರವೊಂದು ಬಹುಮತ ಪಡೆದಿದೆಯೋ ಇಲ್ಲವೋ ಎನ್ನುವುದನ್ನು ನಿರ್ಧರಿಸುವ ಸಂವೈಧಾನಿಕ ವೇದಿಕೆ ವಿಧಾನ ಸಭೆಯ ಅಧಿವೇಶನವೇ ಹೊರತು ರಾಜಭವನ ಅಲ್ಲ. ಒಂದು ವೇಳೆ ವಿಧಾನ ಸಭೆ ವಿಸರ್ಜಿಸಿ, ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು ಎನ್ನುವ

ಪರಿಸ್ಥಿತಿ ನಿರ್ಮಾಣವಾದರೆ ಆಗ ರಾಷ್ಟ್ರಪತಿ ಆಡಳಿತಕ್ಕೆ ಸಂಸತ್ತಿನ ಉಭಯ ಸದನಗಳ ಅನುಮೋದನೆ ಪಡೆಯಬೇಕು. ರಾಷ್ಟ್ರಪತಿಗಳ ಘೋಷಣೆ ನ್ಯಾಯಾಂಗದ ಪರಾಮರ್ಶೆಗೆ ಒಳಪಡುವುದಿಲ್ಲ ಎನ್ನುವ ಅಭಿಪ್ರಾಯ ಸಂವಿಧಾನ ಬಾಹಿರ. ರಾಷ್ಟ್ರಪತಿ ಆಡಳಿತ ಘೋಷಣೆ ಸಂವಿಧಾನ ಬಾಹಿರವಾಗಿದ್ದರೆ ಅದನ್ನು ಅನೂರ್ಜಿತಗೊಳಿಸುವ ಅಧಿಕಾರ ನ್ಯಾಯಾಲಯಗಳಿಗಿದೆ. ಸಂವಿಧಾನದ 356ನೇ ವಿಧಿ ರಾಷ್ಟ್ರಪತಿಗಳಿಗೆ ನೀಡಿರುವುದು ಷರತ್ತುಬದ್ಧ ಅಧಿಕಾರವೇ ಹೊರತು ಪರಾಮಾಧಿಕಾರ ಅಲ್ಲ ಎನ್ನುವ ಅನೇಕ ಮಹತ್ವದ ಅಂಶಗಳನ್ನು ತನ್ನ ತೀರ್ಪಿನಲ್ಲಿ ಉಲ್ಲೇಖಿಸುವ ಮೂಲಕ ಸಂವಿಧಾನದ 356ನೇ ವಿಧಿ ಎನ್ನುವ ಬ್ರಹ್ಮಾಸ್ತ್ರದ ಮೂಲಕ ಕೇಂದ್ರ ಸರ್ಕಾರ ವಿರೋಧ ಪಕ್ಷಗಳ ಸರ್ಕಾರಗಳನ್ನು ಪದಚ್ಯುತಗೊಳಿಸುವ ಸಂವಿಧಾನಬಾಹಿರ ಕ್ರಮಕ್ಕೆ ಶಾಶ್ವತ ಅಂಕುಶ ಹಾಕಿತ್ತು. ಆದರೆ, ಸಂವಿಧಾನದ ಮೂಲ ಆಶಯಗಳಲ್ಲಿ ಪ್ರಧಾನ ಆಗಿರುವ ಜಾತ್ಯಾತೀತ ಸಿದ್ಧಾಂತಕ್ಕೆ ಧಕ್ಕೆ ಬರುವಂತಹ ಸಂದರ್ಭದಲ್ಲಿ ಅಂತಹ ರಾಜ್ಯ ಸರ್ಕಾರಗಳನ್ನು ವಜಾಗೊಳಿಸುವ ಅಧಿಕಾರ ರಾಷ್ಟ್ರಪತಿಗಳಿಗೆ ಇದೆ ಎಂದು ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿತು. ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸುವ ದೆಸೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಬಂಧವನ್ನು ಗಟ್ಟಿಗೊಳಿಸುವ ಸದಾಶಯ ಹೊಂದಿರುವ ಈ ತೀರ್ಪು ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಒಂದು ಐತಿಹಾಸಿಕ ತೀರ್ಪು ಎಂದು ಭಾರತ ರಾಜಕೀಯ ಇತಿಹಾಸಲ್ಲಿ ದಾಖಲೆಯಾಯಿತು. ಈ ತೀರ್ಪಿನ ನಂತರ, ಉತ್ತರಪ್ರದೇಶ, ಬಿಹಾರ್, ಜಾರ್ಖಂಡ್ ಮತ್ತಿತರ ರಾಜ್ಯ ಸರ್ಕಾರಗಳನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರುವ ಕೇಂದ್ರ ಸರ್ಕಾರಗಳ ಪ್ರಯತ್ನ ಸಂಪೂರ್ಣ ವಿಫಲ ಆಯಿತು. ತಮ್ಮ ಸರ್ಕಾರ ವಜಾಗೊಳಿಸಿದ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಗೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿಯವರು ಶರಣಾಗತರಾಗಿ ಮೌನವಾಗಿ ಕುಳಿತುಕೊಳ್ಳಲಿಲ್ಲ. ಶಾಸಕಾಂಗದಲ್ಲಿ ಘಟಿಸಿದ ವೈಫಲ್ಯದ ವಿರುದ್ಧ ಅತ್ಯಂತ ಯೋಜಿತ ಕಾನೂನು ಹೋರಾಟ ನಡೆಸಿದರು. ಛಲಬಿಡದ ತ್ರಿವಿಕ್ರಮನಂತೆ ನಾಲ್ಕೈದು ವರ್ಷಗಳ ಕಾಲ ನಿರಂತರ ನ್ಯಾಯಾಂಗ ಸಮರ ನಡೆಸಿ ಭಾರತೀಯ ಜನ ತಾಂತ್ರಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ರಾಜಕೀಯ ಇಚ್ಚಾಶಕ್ತಿ ಪ್ರದರ್ಶಿಸಿದರು. ಈ ಕಾರಣದಿಂದಾಗಿಯೇ ಎಸ್.ಆರ್. ಬೊಮ್ಮಾಯಿಯವರಿಗೆ ಮುಖ್ಯ ಮಂತ್ರಿಗಿಂತ ಮಿಗಿಲಾದ ಸ್ಥಾನ ಭಾರತದ ಜನತಾಂತ್ರಿಕ ವ್ಯವಸ್ಥೆಯಲ್ಲಿ ದತ್ತವಾಗಿದೆ.

2019ರಲ್ಲಿಯೂ 1989ರಲ್ಲಿ ಸೃಷ್ಟಿಯಾಗಿದ್ದ ಸಂವೈಧಾನಿಕ ಬಿಕ್ಕಟ್ಟು ಸೃಷ್ಟಿಯಾಗಿದೆ. ಆದರೆ, ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಕಾರಣದಿಂದಾಗಿ ರಾಜ್ಯಪಾಲರು ನಿರಾಯುಧರಾಗಿದ್ದಾರೆ. ಸುಪ್ರೀಂಕೋರ್ಟ್ ಇಂತಹ ಅಂಕುಶ ಹಾಕದಿದ್ದರೆ, ರಾಜ್ಯಪಾಲರು ಈ ವೇಳೆಗೆ ಸರ್ಕಾರವನ್ನು ವಜಾಗೊಳಿಸುತ್ತಿದ್ದರು. ಅಷ್ಟು ಮಾತ್ರವಲ್ಲ, ವಿಧಾನ ಸಭೆಯ ಅಧಿವೇಶನದ ಪರಮೋಚ್ಛತೇಯ ಪ್ರದರ್ಶನ ಆಗುತ್ತಲೇ ಇರಲಿಲ್ಲ. ಇಂತಹ ಹೆಗ್ಗಳಿಕೆಯ ನಡುವೆಯೂ ಭಾರತದ ಜನ ನಾಯಕರು ರಂಗೋಲಿ ಕೆಳಗೆ ನುಸುಳುವ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಈ ಮೂಲಕ ಭಾರತದ ಜನ ತಾಂತ್ರಿಕ ವ್ಯವಸ್ಥೆ ಮತ್ತೆ ಮತ್ತೆ ಅಗ್ನಿಪರೀಕ್ಷೆಗೆ ಒಳಪಡುತ್ತಲೇ ಇರುವುದು ಭಾರತ ರಾಜಕಾರಣದ ಅತೀ ದೊಡ್ಡ ದುರಂತ.

ಮಹದೇವ್ ಪ್ರಕಾಶ್

ಆಧಾರ–ವಿಜಯ ಕರ್ನಾಟಕ, 24.07.2019.

5. ಕಲ್ಯಾಣ ಕರ್ನಾಟಕ ಶರಣ ಪರಂಪರೆಗೆ ಅನ್ವರ್ಥಕ

ಈ ದಿನ ಕನ್ನಡ ನಾಡಿನ ಜನತೆ, ಅದರಲ್ಲೂ ಹೈದರಾಬಾದ್– ಕರ್ನಾಟಕ ಜನತೆ ಹೆಮ್ಮೆ ಪಡುವ ದಿನ, ಸೆಪ್ಟೆಂಬರ್ 17 ರಂದು ನಮ್ಮ ಕರುನಾಡಿನ ಭಾಗವಾದ ಹೈದರಾಬಾದ್– ಕರ್ನಾಟಕ ಪ್ರಾಂತ್ಯವು ನಿಜಾಮನ ಶೋಷಣೆಯಿಂದ ಸ್ವಾತಂತ್ರ್ಯ ಪಡೆದ ದಿನ, ಭಾರತ ಒಕ್ಕೂಟದ ಭಾಗವಾದ ದಿನ ಈ ಸಂದರ್ಭದಲ್ಲಿ ನಾಡಿನ ಜನತೆಗೆ ಶುಭಾಶಯಗಳನ್ನು ಕೋರುತ್ತೇನೆ.

ಆದರೆ, ವಿಲೀನ ಪ್ರಕ್ರಿಯೆ ಸಾಕಷ್ಟು ಸಾವು–ನೋವುಗಳ ನಂತರ ಸಂದ ಜಯ. ಈ ಹೋರಾಟದಲ್ಲಿ ಪಾಲ್ಗೊಂಡ ಎಲ್ಲ ಮಹನೀಯರಿಗೆ ನಾವು ಚಿರಋಣಿ.

1947ರ ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಹೈದರಾಬಾದ್ – ಕರ್ನಾಟಕಕ್ಕೆ ಸ್ವಾತಂತ್ರ್ಯವೆಂಬುದು ಮರೀಚಿಕೆಯಾಗಿತ್ತು. ಅಖಂಡ ಭಾರತದ 560ಕ್ಕೂ ಹೆಚ್ಚು ಸಂಸ್ಥಾನಗಳ ಮಹಾರಾಜರು ಭಾರತ ಒಕ್ಕೂಟ ಸೇರಲು ಒಪ್ಪಿ ಕರಾರಿಗೆ ಸಹಿ ಹಾಕಿದ ಸಂದರ್ಭದಲ್ಲಿ ಹೈದರಾಬಾದ್ ನಿಜಾಮ ಭಾರತ ಒಕ್ಕೂಟ ಸೇರಲು ತೀವ್ರ ಪ್ರತಿರೋಧವನ್ನು ಒಡ್ಡುತ್ತಾನೆ.

ಭಾರತದ ಉದ್ದಗಲಕ್ಕೂ ಗೆಲುವಿನ ಜಯಭೇರಿ ಮೊಳಗುತ್ತಿದ್ದರೆ ನಿಜಾಮನ ಆಡಳಿತವಿದ್ದ ಪ್ರಾಂತ್ಯದಲ್ಲಿ ಹಿಂಸೆಯನ್ನು ಪ್ರಚೋದಿಸುವ ಘೋಷಣೆಗಳು ಮೊಳಗುತ್ತಿದ್ದವು. ಹೈದರಾಬಾದ್ ನಿಜಾಮ ಮೀರ್ ಉಸ್ಮಾನ್ ಆಲಿಖಾನ್ ಬಹಾದ್ದೂರ್‌ನನ್ನು ತನ್ನ ಕೈಗೊಂಬೆಯಾಗಿರಿಸಿಕೊಂಡಿದ್ದ ರಜಾಕರ ನಾಯಕ ಖಾಸಿಂ ರಿಜ್ವೆ ಹಿಂಸೆಯನ್ನು ಪ್ರಚೋಧಿಸುವ ಘೋಷಣೆಯ ಮೂಲಕ ಕೋಮು ದಳ್ಳುರಿಗೆ ಕಾರಣನಾಗಿದ್ದ.

ಖಾಸಿಂ ರಜ್ವಿ ಪ್ರತಿಯೊಬ್ಬ ಮುಸ್ಲಿಮರು ರಜಾಕರನಾಗಬೇಕು. ಹೈದರಾಬಾದ್ ಪ್ರಾಂತ್ಯ ಭಾರತದ ಜೊತೆ ವಿಲೀನಗೊಳ್ಳುವುದು ಅಲ್ಲಾಹಜರತ್‌ನ ಅಭಿಲಾಷೆಗೆ ವಿರುದ್ಧವಾದುದು. ಒಂದು ವೇಳೆ ಭಾರತ ಸರ್ಕಾರ ಹೈದರಾಬಾದನ್ನು ಪ್ರವೇಶಿಸುವ ಧೈರ್ಯ ಮಾಡಿದರೆ ಅದು ಕೋಟ್ಯಾಂತರ ಜನರ ಮೂಳೆ ಮಾಂಸವನ್ನು ನೋಡಬೇಕಾಗುತ್ತದೆ. ಪ್ರತಿಯೊಬ್ಬ ರಜಾಕರನು ಒಂದು ಕೈಯಲ್ಲಿ ನಿಜಾಂ ಧ್ವಜ, ಮತ್ತೊಂದು ಕೈಯಲ್ಲಿ ಖಡ್ಗ ಹಿಡಿದು ಹೋರಾಡಿ ಪ್ರಾಣಾರ್ಪಣೆ ಮಾಡಬೇಕು ಎಂದು ಕರೆ ನೀಡಿದ್ದ. ಒಂದು ಲಕ್ಷ ಅರೆ ಸೈನಿಕರ ದಂಡು ದೈತ್ಯ ಪ್ರತಿಗಾಮಿ ಶಕ್ತಿಯಾಗಿ ರೂಪುಗೊಂಡಿತ್ತು.

1947–48ರ ಅವಧಿಯಲ್ಲಿ ನಿಜಾಮ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ಸಂಪೂರ್ಣ ನೆಲಕಚ್ಚಿತು. ಹೈದರಾಬಾದ್ ಪ್ರಾಂತ್ಯದ ಹಳ್ಳಿ–ಹಳ್ಳಿಗಳಲ್ಲಿ ರಜಾಕರ ಅಮಾನುಷ ಹಿಂಸಾಕೃತ್ಯ ತಾಂಡವವಾಡುತ್ತಿತ್ತು. ರಜಾಕರ ಪಾಳೆಗಾರಿಕೆಯಿಂದ ಹೈದರಾಬಾದ್– ಕರ್ನಾಟಕ ಪ್ರದೇಶದ ಒಂದು ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾದರು.

ವಿಪರ್ಯಾಸವೆಂದರೆ, ನಿಜಾಮನ ಬಗ್ಗೆ ಭಾರತದ ಕೊನೆಯ ವೈಸ್‌ರಾಯ್ ಲಾರ್ಡ್‌ಮೌಂಟ್ ಬ್ಯಾಟನ್ ಮೃದು ಧೋರಣೆ ಹೊಂದಿದ್ದರು. ಆದರೆ, ರಜಾಕರ ಮತ್ತು ನಿಜಾಮನ ವರ್ತನೆಯಿಂದ ಮೌಂಟ್‌ಬ್ಯಾಟನ್‌ಗೆ ಬೇಸರವುಂಟಾಗಿತ್ತು. ಸಂಧಾನದ ಮಾತುಕತೆ ಪ್ರಗತಿಯಲ್ಲಿದ್ದಾಗಲೇ ಲಾರ್ಡ್‌ಮೌಂಟ್ ಬ್ಯಾಟನ್ ಬ್ರಿಟನ್‌ಗೆ ಹಿಂದಿರುಗಿದರು.

ಒಕ್ಕೂಟ ಸೇರಿ ಚಳವಳಿಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು 1947ರ ಜೂನ್ 16 ರಂದು ಪ್ರಥಮ ಹೈದರಾಬಾದ್ ಕಾಂಗ್ರೆಸ್ ಅಧಿವೇಶನ ನಡೆಸಲಾಯಿತು. ಈ ಸಮಾವೇಶದಲ್ಲಿ ಸ್ವಾಮಿ ರಮಾನಂದ ತೀರ್ಥರು, ಎಸ್.ನಿಜಲಿಂಗಪ್ಪ, ಕಮಲಾದೇವಿ ಚಟ್ಟೋಪಾಧ್ಯಾಯ, ಎನ್.ಜಿ.ರಂಗ, ಅಳವಂಡಿ ಶಿವಮೂರ್ತಿ ಸ್ವಾಮಿ, ಶಂಕರ್‌ದೇವ್ ಮುಂತಾದ ಅಗ್ರ ಗಣ್ಯರು ಭಾಗವಹಿಸಿ ನಿಜಾಮನ ನಿರಂಕುಶತ್ವವನ್ನು ಕೊನೆಗಾಣಿಸಲು ಸಂಕಲ್ಪ ಮಾಡಿದ್ದರು.

ನಿಜಾಮನ ಬಗ್ಗೆ ಪಟೇಲರ ಕೋಪ

ಇತಿಹಾಸದ ಎಲ್ಲಾ ಕರಾಳ ಅಧ್ಯಾಯಗಳಿಗೆ ಒಂದು ಅಂತ್ಯವೆಂಬುದು ಇದ್ದೇ ಇರುತ್ತದೆ. ಹಾಗೆಯೇ ರಜಾಕರ ನಾಯಕ ಖಾಸಿಂ ರಿಜ್ವೆಯ ಹಾಗೂ ನಿಜಾಮನ "ಪ್ರತ್ಯೇಕ ಹೈದರಾಬಾದ್ ಪ್ರಾಂತ್ಯ"ದ ಭ್ರಮೆಗೂ ಒಂದು ಕೊನೆ ಇತ್ತು.

ಸ್ವತಂತ್ರ ಭಾರತದ ಪ್ರಥಮ ಉಪ ಪ್ರಧಾನಿ ಹಾಗೂ ಗೃಹ ಸಚಿವ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಅಚಲ ನಿರ್ಧಾರದ ಮುಂದೆ ನಿಜಾಮನಿಗೆ ಬೇರೆ ಮಾರ್ಗಗಳಿರಲಿಲ್ಲ. ಪಟೇಲರಿಗೆ ನಿಜಾಮನ ಜೊತೆ ಯಾವುದೇ ರಾಜಿ – ಸಂಧಾನ ಬಗ್ಗೆ ಆಸಕ್ತಿ ಇರಲಿಲ್ಲ. ನಿಜಾಮನ ದ್ವಂದ್ವ ನೀತಿ ಒಂದು ಕಡೆ ಸಂಧಾನದ ಮಾತು ಮತ್ತೊಂದು ಕಡೆ ಹೈದರಾಬಾದ್ ಪ್ರಾಂತ್ಯಕ್ಕೆ ಪ್ರತ್ಯೇಕ ರಾಷ್ಟ್ರದ ಸ್ಥಾನಮಾನ ನೀಡಬೇಕೆಂದು ವಿಶ್ವಸಂಸ್ಥೆಗೆ ದೂರು ಕೊಂಡೊಯ್ಯುವುದು ಸರ್ದಾರ್ ಪಟೇಲರನ್ನು ಕೆರಳಿಸಿತ್ತು. ಸರ್ದಾರರು ನಿಜಾಮ ಭಾರತ ಒಕ್ಕೂಟದ ಜೊತೆ ಹೈದರಾಬಾದ್‌ನ್ನು ವಿಲೀನಗೊಳಿಸಬೇಕು ಇಲ್ಲವೆ ಭಾರತ ಸೇನೆಯ ನಿರ್ದಾಕ್ಷಿಣ್ಯ ದಾಳಿ ಎದುರಿಸಬೇಕೆಂದು ಎಚ್ಚರಿಸಿದ್ದರು.

ಹೈದರಾಬಾದ್ ಮೇಲೆ ದಾಳಿ

ಅದರ ಫಲವಾಗಿ ಭಾರತ ಸರ್ಕಾರದ ಪೊಲೀಸ್ ಆಕ್ಷನ್ ಮೂಲಕ ಹೈದರಾಬಾದ್ ಪ್ರಾಂತ್ಯದ ವಿಮೋಚನೆಯ ನಿರ್ಧಾರ ಕೈಗೊಂಡಿತ್ತು. ಪಟೇಲರು 1948ರ ಸೆಪ್ಟೆಂಬರ್ 13ರಂದು ಪೊಲೀಸ್ ಕಾರ್ಯಾಚರಣೆಗೆ ಅಂಕಿತ ಹಾಕಿದರು. ಮೇಜರ್ ಜನರಲ್ ಜೆ.ಎನ್.ಚೌಧರಿ ನೇತೃತ್ವದಲ್ಲಿ ಭಾರತೀಯ ಪಡೆಗಳು 12 ದಿಕ್ಕಿನಿಂದ ಹೈದರಾಬಾದ್ ಮೇಲೆ ದಾಳಿ ಮಾಡಿದವು. ನಿಜಾಮನಿಗೆ ಶರಣಾಗತಿ ಬಿಟ್ಟು ಬೇರೆ ಯಾವುದೇ ಉಪಾಯಗಳಿರಲಿಲ್ಲ. ಇದರ ಪರಿಣಾಮವಾಗಿ ನಿಜಾಮನು ಹೈದರಾಬಾದ್ ಪ್ರಾಂತ್ಯವನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸುವ ಒಪ್ಪಂದಕ್ಕೆ 1948 ಸೆಪ್ಟೆಂಬರ್ 18ರಂದು ಸಹಿ ಹಾಕಿದ ರಜಾಕರ ನಾಯಕ ಖಾಸಿಂ ರಜ್‌ಯನ್ನು ಬಂಧಿಸಿ ಸೆರೆಮನೆಗೆ ದೂಡಲಾಯಿತು. ಹೈದರಾಬಾದ್ – ಕರ್ನಾಟಕ ಪ್ರಾಂತ್ಯವು ವಿಮೋಚನೆಗೊಂಡಿತು.

71 ವರ್ಷದ ಬಳಿಕ ಹೊಸ ನಾಮಕರಣ

ಈ ಸುದಿನದಂದು ಕರ್ನಾಟಕ ಸರ್ಕಾರವು ಹೈದರಾಬಾದ್ - ಕರ್ನಾಟಕ ಪ್ರಾಂತ್ಯವನ್ನು ಕಲ್ಯಾಣ ಕರ್ನಾಟಕವೆಂದು ಮರು ನಾಮಕರಣ ಮಾಡಿದೆ. ನಮ್ಮ ಸರ್ಕಾರ 71 ವರ್ಷಗಳ ಹಳೆಯ ಹೆಸರನ್ನು ಮರುನಾಮಕರಣದೊಂದಿಗೆ ಅಂತ್ಯಗೊಳಿಸುತ್ತಿದೆ. ಹೊಸ ನಾಮಕರಣವು ಈ ಭಾಗಕ್ಕೆ ಅನ್ವರ್ಥವಾಗಿರುವುದಕ್ಕೆ ಅತೀವ ಸಂತಸ ತಂದಿದೆ.

ಕಲ್ಯಾಣ ಕರ್ನಾಟಕ ಹೆಸರು ನಮ್ಮ ಶರಣ ಪರಂಪರೆಯ ಇತಿಹಾಸವನ್ನು ಬಿಂಬಿಸುವುದರ ಜೊತೆಗೆ ಈ ಪ್ರಾಂತ್ಯದ ಅಭಿವೃದ್ಧಿಗೆ ಹೊಸ ಆಯಾಮ ನೀಡಲೆಂದು ಇಚ್ಛಿಸುತ್ತೇನೆ.

ಫ್ರಾನ್ಸ್ ದೇಶವು 18ನೇ ಶತಮಾನದಲ್ಲಿ ರಾಜಕೀಯ ಮತ್ತು ಸಾಮಾಜಿಕ ಕ್ರಾಂತಿಯಿಂದ ಇತಿಹಾಸ ಸೃಷ್ಟಿಸಿರಬಹುದು. ಆದರೆ, ನಮ್ಮ ಶರಣ ಸಂಸ್ಕೃತಿಯು 12ನೇ ಶತಮಾನದಲ್ಲಿಯೇ ಭಕ್ತಿ ಸಾಹಿತ್ಯ, ಸಾಮಾಜಿಕ ನ್ಯಾಯ ಮತ್ತು ಮಹಿಳಾ ಸಮಾನತೆಯ ಅದ್ಭುತ ಚಿಂತನೆಗೆ ಮುನ್ನುಡಿ ಬರೆದಿದೆ. ಕಳಚೂರಿ ಬಿಜ್ಜಳನ ಮುಖ್ಯ ಮಂತ್ರಿಯಾಗಿದ್ದ ಬಸವಣ್ಣ ವಿಶ್ವಗುರುವಾಗಿ ತನ್ನ ಅನುಭವ ಮಂಟಪದ ಮೂಲಕ ಸಮಾನ ಮನಸ್ಕರ ಚಿಂತಕರನ್ನು ಕಲ್ಯಾಣ ಪ್ರಾಂತ್ಯಕ್ಕೆ ಬರಮಾಡಿಕೊಂಡರು. ಆ ಮೂಲಕ ಕಲ್ಯಾಣ ಪ್ರಾಂತ್ಯವು ವೈಚಾರಿಕ ಕ್ರಾಂತಿಯ ಕೇಂದ್ರ ಬಿಂದುವಾಯಿತು. ಈ ಪ್ರಾಂತ್ಯವು ವಚನಗಾರ್ತಿ ಅಕ್ಕಮಹಾದೇವಿ, ಮಹಾಯೋಗಿ ಅಲ್ಲಮಪ್ರಭು, ಶರಣ ಚನ್ನಬಸವಣ್ಣ ಹಾಗೂ ಇತರ ಶಿವ–ಶರಣರ ಸಾಹಿತ್ಯ ಕೃಷಿ ಮತ್ತು ಸಾಮಾಜಿಕ ಚಿಂತನೆಗೆ ಪ್ರೇರಣೆಯಾಗಿದೆ.

ಇಂತಹ ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದ ಪ್ರಾಂತ್ಯವು ನಿಜಾಮನ ಶೋಷಣೆಗೆ ಗುರಿಯಾಗಿದ್ದು, ಈ ನಾಡಿನ ದುರಾದೃಷ್ಟ ಐತಿಹಾಸಿಕ ದುರಂತ. ಈ ಪ್ರಾಂತ್ಯದ ಹೊಸ ಹೆಸರಿನಲ್ಲಿರುವ ಕಲ್ಯಾಣ ಎಂಬ ಪದವು ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ಧ್ಯೇಯವನ್ನು ಎತ್ತಿ ಹಿಡಿಯುತ್ತದೆ. ಅಷ್ಟೇ ಅಲ್ಲದೆ, ಇದು ಶರಣ ಸಂಸ್ಕೃತಿಯ ಇತಿಹಾಸವನ್ನು ನೆನೆಯುವಂತೆ ಮಾಡುತ್ತದೆ. ಕಲ್ಯಾಣ ಕರ್ನಾಟಕ ಎಂಬ ಹೊಸ ಹೆಸರು ಈ ನಾಡಿನ ಜನಮಾನಸದಲ್ಲಿ ಚಿರಸ್ಥಾಯಿಯಾಗಿರುತ್ತದೆಯೆಂದು ಆಶಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು

ಆಧಾರ–ಕನ್ನಡಪ್ರಭ, 17.09.2019

6. ಬೇಕಿದೆ ಮಳೆ ನೀರು ಕೊಯ್ಲು

ಜಗತ್ತಿನಲ್ಲಿ ದೊರಕುವ ಅತ್ಯಂತ ಶುದ್ಧವಾದ ನೀರು ಮಳೆ ನೀರಾಗಿದೆ. ಈ ಮಳೆ ನೀರಿನಲ್ಲಿ ಪ್ರತಿಯೊಂದು ಜೀವಿಗಳಿಗೆ ಮತ್ತು ಸಸ್ಯಗಳಿಗೆ ಅವಶ್ಯವಿರುವ ಖನಿಜಗಳು ನೈಸರ್ಗಿಕವಾಗಿ ಮಿಶ್ರಣಗೊಂಡಿವೆ. ಕ್ಯಾಲಿಫೋರ್ನಿಯಾ, ಇಸ್ರೇಲ್ ಹಾಗೂ ಚೀನಾ ದೇಶಗಳು ಮಳೆ ನೀರು ಕೊಯ್ಲು ಪದ್ಧತಿಯನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡಿರುವ ಪರಿಣಾಮ ಕೃಷಿಯಲ್ಲಿ ಅಮೋಘ ಸಾಧನೆ ಮಾಡಿವೆ. ಕೃಷಿ ಪ್ರಧಾನವಾದ ಭಾರತದಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿದ್ದರೂ ಮಳೆ ನೀರು ಕೊಯ್ಲನ್ನು ಪ್ರಥಮ ಪ್ರಾಶಸ್ತ್ಯದಲ್ಲಿ ಅಳವಡಿಸಿಕೊಳ್ಳುವಂತೆ ಕಟ್ಟುನಿಟ್ಟಾದ ಕಾನೂನುಗಳು ಇಲ್ಲಿಯತನಕ ಜಾರಿಯಾಗದಿರುವುದು ಕಳವಳಕಾರಿಯಾದ ಅಂಶವಾಗಿದೆ. ಕಾರಣ ಮಳೆಯು ನಮಗೆ ಅವಶ್ಯಕವಾದಾಗ ಮತ್ತು ಅವಶ್ಯವೆನಿಸಿದ ಸ್ಥಳಗಳಲ್ಲಿ ಬರುವುದಿಲ್ಲ. ಯಾವಾಗಲೋ ಬರುವ ಮಳೆ ನೀರನ್ನು ತಡೆದು ಯೋಗ್ಯ ಸ್ಥಳಗಳಲ್ಲಿ ಹಿಂಗಿಸಬೇಕು.

ಸದ್ಯ ದೇಶದಲ್ಲಿ ಶೇಕಡ 26ರಷ್ಟು ಮಳೆ ಕೊರತೆಯಾಗಿದೆ. ಮಹಾರಾಷ್ಟ್ರ ಮತ್ತು ಜಾರ್ಖಂಡ್ ರಾಜ್ಯಗಳು ಅತೀ ಹೆಚ್ಚೆಂದರೆ ಶೇ.60ರಷ್ಟು ಮಳೆ ಕೊರತೆಯನ್ನು ಅನುಭವಿಸುತ್ತಿವೆ. ರಾಜ್ಯವು ಶೇ.31ರಷ್ಟು ಮಳೆ ಕೊರತೆ ಅನುಭವಿಸುತ್ತಿದೆ. ಭಾರತದಲ್ಲಿ ಶೇ.50ರಷ್ಟು ನೀರಾವರಿ ಕ್ಷೇತ್ರಕ್ಕೆ ಅಂತರ್ಜಲವೇ ಮೂಲವಾಗಿದೆ ಅಂತರ್ಜಲ ಮಟ್ಟದ ನೀರಿನಿಂದಲೇ ದೇಶದ ಶೇ.15ರಷ್ಟು ಆಹಾರ ಉತ್ಪಾದನೆಯಾಗುತ್ತಿದೆ. ದೇಶದಲ್ಲಿ ಗ್ರಾಮ ಹಾಗೂ ಪಟ್ಟಣಗಳಲ್ಲಿ ಮಳೆ ನೀರು ಕೊಯ್ಲು ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಮಾತ್ರ ಭವಿಷ್ಯದ ಬದುಕು ಸಮತೋಲನದಲ್ಲಿರುತ್ತದೆ. ಇಲ್ಲವಾದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ.

ಮಳೆ ನೀರು ಕೊಯ್ಲಿನ ಅಳವಡಿಕೆ ಹಂತ–1:

ಒಂದು ಜಮೀನಿನ ನೀರು ಮತ್ತೊಂದು ಜಮೀನಿನಲ್ಲಿ ಬರದಂತೆ ಮತ್ತು ಹೋಗದಂತೆ ಅಲ್ಲಲ್ಲಿ ಒಡ್ಡು ಹಾಕಿ ಹಿಂಗಿಸಬೇಕು. ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಮಳೆ ನೀರು ಹರಿಯುವ ಮಾರ್ಗದ ವಿರುದ್ಧ ಕಂದಕಗಳನ್ನು ನಿರ್ಮಿಸಬೇಕು. ಈ ಕಂದಕಗಳ ಅಳತೆಯು 3 ಅಡಿ ಅಗಲ 15 ಅಡಿ ಉದ್ದ ಹಾಗೂ 2 ಅಡಿ ಆಳವಿರಬೇಕು. ಹೀಗೆ ಪ್ರತಿ ಎಕರೆಯಲ್ಲಿ 10 ಕಂದಕಗಳನ್ನು ನಿರ್ಮಿಸಬೇಕು. ಈ ರೀತಿಯಾದ ಕ್ರಮಗಳಿಂದ ಪ್ರತಿ ವರ್ಷದಲ್ಲಿ ಸಾಧಾರಣ ಮಳೆ ಬಿದ್ದರೂ ಕನಿಷ್ಠ 2 ಲಕ್ಷ ಲೀಟರ್ ನೀರನ್ನು ಪ್ರತಿ ಎಕರೆ ಭೂಮಿಯಲ್ಲಿ ಇಂಗಿಸಬಹುದಾಗಿದೆ. ಇದರಿಂದ ಅಲ್ಲಲ್ಲಿ ಲಭ್ಯವಿರುವ ಬೋರ್‌ವೆಲ್ ಮತ್ತು ಬಾವಿಗಳು ರೀಚಾರ್ಜ್ ಆಗುವುದರಿಂದ ಹಲವಾರು ದಿನಗಳವರೆಗೆ ನೀರನ್ನು ಉಪಯೋಗಿಸಿ ಭವಿಷ್ಯದಲ್ಲಿನ ನೀರಿನ ಕೊರತೆಯನ್ನು ದೂರ ಮಾಡಬಹುದಾಗಿದೆ.

ಹಂತ–2:

ಕಂದಕಗಳು ತುಂಬಿ ಹೊರಹೋಗುವ ನೀರನ್ನು ನೀರು ಸಂಗ್ರಹಣಾ ಹೊಂಡ (ತೊಟ್ಟಿ)ದಲ್ಲಿ ಶೇಖರಿಸಬೇಕು. ಈ ತೊಟ್ಟಿಯ ಅಳತೆ 15 ಅಡಿ ಅಗಲ 15 ಅಡಿ ಉದ್ದ ಹಾಗೂ 10 ಅಡಿ ಆಳವಿರಬೇಕು.

ಇದನ್ನು ಭೂಮಿಯಿಂದ ಕೆಳಮಟ್ಟದಲ್ಲಿ ನಿರ್ಮಿಸಬೇಕು. ಇದು ಅಂದಾಜು 64,000 ಲೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುತ್ತದೆ. ಈ ಟ್ಯಾಂಕ್ ಮೇಲೆ ಬಿದಿರು ಅಥವಾ ತೆಂಗಿನ ಮೇಲ್ಛದರು ನಿರ್ಮಿಸಿ ನೀರಿನ ಆವಿ ಆಗುವಿಕೆ ಮತ್ತು ಕಲುಷಿತವಾಗುವಿಕೆಯನ್ನು ತಡೆಗಟ್ಟಿ ಕೃಷಿಗೆ ಬಳಸಬಹುದಾಗಿದೆ. ಇದು ಒಣ ಭೂಮಿಯಲ್ಲಿ ಬಹಳ ಉಪಯೋಗಕಾರಿಯಾಗಿದೆ.

ಹಂತ–3:

ಮೇಲಿನ ಎರಡು ಹಂತಗಳಲ್ಲಿ ನೀರು ಸಂಗ್ರಹವಾಗಿ ಹೆಚ್ಚುವರಿಯಾಗಿ ಹರಿಯುವ ನೀರನ್ನು ಬೋರ್‌ವೆಲ್ ರೀಚಾರ್ಜ್ ಕುಣಿ (ಫಿಟ್)ಗೆ ಸೇರಿಸಬೇಕು. ಬೋರ್‌ವೆಲ್ ರೀಚಾರ್ಜ್ ಕುಣಿ (ಫಿಟ್)ನ ಅಳತೆ 8 ಅಡಿ ಅಗಲ 15 ಅಡಿ ಉದ್ದ ಮತ್ತು 10 ಅಡಿ ಆಳವಿರಬೇಕು, ಈ ಕುಣಿಯನ್ನು ಸಣ್ಣ ಮತ್ತು ದೊಡ್ಡ ಕಲ್ಲುಗಳಿಂದ ಮಾತ್ರ ಸಂಪೂರ್ಣವಾಗಿ ತುಂಬಿರಬೇಕು. ಈ ರೀತಿಯಾದ ಕನಿಷ್ಠ 4 ಕುಣಿಗಳನ್ನು ಬೋರ್‌ವೆಲ್‌ನ 10 ಅಡಿ ಅಂತರದಲ್ಲಿ ನಿರ್ಮಿಸಬೇಕು.

ದೇಶದಲ್ಲಿ ಅಂದಾಜು 20 ಲಕ್ಷ ಕೊಳವೆ ಬಾವಿಗಳಿವೆ. ಭೂಮಿಯ ಅತಿ ತಳಭಾಗದಲ್ಲಿನ ನೀರು ಬೇಡವಾದ ರಾಸಾಯನಿಕ ಕಣಗಳಿಂದ ಮಿಶ್ರಣಗೊಂಡಿದ್ದು ರೋಗಗಳ ಆಗರವಾಗಿವೆ. ಕಳೆದ ದಶಕದ ಹಿಂದೆ 100 ಅಡಿಯ ಕೆಳಭಾಗದಲ್ಲಿದ್ದ ಶುದ್ಧ ನೀರು ಇಂದು ಸಾವಿರಾರು ಅಡಿಗಳ ಕೆಳಗೆ ತಲುಪಿದೆ. ಈ ಕೆಳಭಾಗದ ನೀರು ಬಳಕೆಗೆ ಅಷ್ಟೊಂದು ಸಮರ್ಪಕವಲ್ಲದ ಮತ್ತು ರುಚಿಕರವಲ್ಲದ ಫ್ಲೋರೈಡ್ ಲವಣ ಹಾಗೂ ಕ್ಷಾರಯುಕ್ತ. ನೀರಾಗಿದ್ದರೂ ಅನಿವಾರ್ಯವಾಗಿ ಬಳಸುತ್ತಿದ್ದು, ಕೃಷಿ ಮತ್ತು ಸಕಲ ಜೀವರಾಶಿಗಳಿಗೆ ಇವು ಮಾರಕವಾಗಿವೆ.

ಆದ್ದರಿಂದ, ಮಳೆ ನೀರಿನಿಂದ ಬೋರ್‌ವೆಲ್‌ಗಳನ್ನು ರೀಚಾರ್ಜ್ ಮಾಡುವ ತಂತ್ರಜ್ಞಾನವನ್ನು ಅಳವಡಿಸುವುದರಿಂದ ಶುದ್ಧ ನೀರು ಲಭಿಸುವುದಲ್ಲದೆ, ಭೂಮಿಯಲ್ಲಿನ ಅಂತರ್ಜಲ ಮಟ್ಟವನ್ನು ಹೆಚ್ಚಿಸಬಹುದಾಗಿದೆ. ಎಲ್ಲಿಂದಲೋ ಹರಿದು ಬರುವ ನೀರನ್ನು ಎಲ್ಲೆಲ್ಲೊ ಹಿಂಗಿಸುವುದಕ್ಕಿಂತ ಮಳೆ ಬಿದ್ದ ಸ್ಥಳದಲ್ಲಿ ಹಿಂಗಿಸುವುದು ಉತ್ತಮ. ಹರಿದು ಬರುವ ನೀರು ಕೆಲವೊಮ್ಮೆ ರಾಸಾಯನಿಕ ಪ್ರದೇಶದಿಂದ ಬರುತ್ತಿದ್ದರೆ, ಆ ನೀರು ಭೂಮಿಯೊಳಗೆ ಪ್ರವೇಶಿಸಿ ಎಲ್ಲಾ ನೀರನ್ನು ಕಲುಷಿತಗೊಳಿಸುವ ಆತಂಕವಿದೆ. ಯುವಜನಾಂಗದ ಉದ್ಯೋಗಕ್ಕಾಗಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ಅತೀ ಅವಶ್ಯಕವಿರುವುದರಿಂದ ಇಲ್ಲಿ ಹೊರಹೊಮ್ಮುವ ರಾಸಾಯನಿಕಯುಕ್ತ ನೀರನ್ನು ಭೂಮಿಯಲ್ಲಿ ಸೇರಿಸದೆ, ಹೊಸ ತಂತ್ರಜ್ಞಾನದಿಂದ ಶುದ್ಧೀಕರಿಸಿ ಮರುಬಳಕೆ ಮಾಡಬಹುದಾಗಿದೆ.

ಹಂತ–4

ಅಂದಾಜು 4 ರಿಂದ 5 ಜನರು ವಾಸವಿರುವ ಗೃಹಗಳಿಗೆ ಪ್ರತಿ ವರ್ಷ ಒಂದು ಲಕ್ಷ ಲೀಟರ್ ಶುದ್ಧ ನೀರು ಅವಶ್ಯವಿದೆ. ಒಂದು ಸಾವಿರ ಚದರ ಅಡಿ ಪ್ರದೇಶದ ಮನೆಯ ಮೇಲೆ ವಾರ್ಷಿಕ ಕನಿಷ್ಠ 100 ಸೆಂ.ಮೀ.ನಷ್ಟು ಮಳೆಯಾದರೂ ಒಂದು ಲಕ್ಷ ಲೀಟರ್ ನೀರು ಸಂಗ್ರಹವಾಗುತ್ತದೆ. ತಂತ್ರಜ್ಞರ ಸಲಹೆಯಂತೆ ಮನೆಯ ಈಶಾನ್ಯದ ನೆಲದಡಿಯ ಲಭ್ಯವಿರುವ ಸ್ಥಳಗಳಲ್ಲಿ ಆಳವಾದ ನೀರು ಸಂಗ್ರಹಣಾ ತೊಟ್ಟಿ ನಿರ್ಮಿಸಿ ಮರುಬಳಕೆ ಮಾಡಬಹುದಾಗಿದೆ. ಭವಿಷ್ಯದಲ್ಲಿ ನಡೆಯಬಹುದಾದ ನೀರಿನ ಮಹಾಯುದ್ಧವನ್ನು ತಪ್ಪಿಸಿ ರುಚಿ ಹಾಗೂ ಶುಚಿಯಾದ ನೀರನ್ನು ಪಡೆಯುವುದರೊಂದಿಗೆ ಅಪರೂಪದ ಪ್ರಾಣಿ ಸಂಕುಲ ಮತ್ತು ಸಸ್ಯ ಸಂಕುಲವನ್ನು ಕಾಪಾಡಬಹುದಾಗಿದೆ.

ನೀರಿನ ಕೊರತೆಗೆ ಕಾರಣಗಳು

ಹೆಚ್ಚುತ್ತಿರುವ ಜನಸಂಖ್ಯೆ, ನೀರಾವರಿ ಕ್ಷೇತ್ರದ ಹೆಚ್ಚಳ, ಕೃಷಿಯಲ್ಲಿ ಅವೈಜ್ಞಾನಿಕ ಬಳಕೆ, ಹೆಚ್ಚುತ್ತಿರುವ ಕೈಗಾರಿಕೀಕರಣ, ಹೆಚ್ಚುತ್ತಿರುವ ಜಾಗತಿಕ ತಾಪಮಾನ, ಸ್ಥಳೀಯ ನೀರಿನ ಮೂಲಗಳ ಕಡೆಗಣನೆ, ಅಂತರ್ಜಲ

ಮಟ್ಟ ಕುಸಿತ, ಜೀವನಮಟ್ಟದಲ್ಲಿ ಬದಲಾವಣೆ, ಅರಣ್ಯ ನಾಶ, ಮಳೆ ನೀರು ಕೊಯ್ಲು ಮಾಡದಿರುವುದು ಈ ಎಲ್ಲಾ ಕಾರಣಗಳಿಂದ ದಿನದಿಂದ ದಿನಕ್ಕೆ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ.

ಮಳೆ ಕೊರತೆಗೆ ಕಾರಣಗಳು:-

ಮರಗಳನ್ನು ಕಡಿಯಲು ಸಡಿಲವಾದ ಕಾನೂನು

ಗಿಡಮರಗಳ ನೆಡುವಿಕೆ ಪ್ರಮಾಣ ಕಡಿಮೆ

ಗಿಡಮರಗಳನ್ನು ನೆಟ್ಟ ನಂತರ ಅವುಗಳ ಆರೈಕೆ ಮಾಡುವ ಪ್ರಮಾಣ ಕಡಿಮೆ

ಅರಣ್ಯಗಳ ಒತ್ತುವರಿ ಮತ್ತು ನಾಶ

ಮೇಲಿಂದ ಮೇಲೆ ತಗಲುತ್ತಿರುವ ಕಾಡ್ಗಿಚ್ಚು

ರಸ್ತೆಗಳ ಸುಧಾರಣೆ ನೆಪದಲ್ಲಿ ಮರಗಳ ಮಾರಣಹೋಮ.

ಬಸವರಾಜ ಶಿವಪ್ಪ ಗಿರಗಾಂವಿ

ಆಧಾರ-ವಿಶ್ವವಾಣಿ 05.08.2019

7. ಉತ್ತಮ ವ್ಯವಸಾಯದ ಮೂಲಕ ಮಣ್ಣಿನ ರಕ್ಷಣೆ

ಭಾರತದ ನೆಲದ ಒಂದು ವಿಶೇಷತೆ ಏನೆಂದರೆ ಫಲವತ್ತಾಗಿರುವ ಪ್ರದೇಶದಲ್ಲಿನ ಒಂದು ಕ್ಯೂಬಿಕ್ ಮೀಟರ್ ಮಣ್ಣನ್ನು ತೆಗೆದುಕೊಂಡು ಪರಿಶೀಲಿಸಿದರೆ, ಅದರಲ್ಲಿ ಸುಮಾರು 10,000 ಜಾತಿಯ ವಿವಿಧ ಜೀವಿಗಳಿರುವುದು ಕಂಡುಬರುತ್ತದೆ ಎಂದು ಹೇಳಲಾಗುತ್ತದೆ. ಈ ಅಗಾಧ ಸಂಖ್ಯೆಯಲ್ಲಿ ಜೀವಿಗಳು ಒಂದೆಡೆ ಕೇಂದ್ರೀಕೃತವಾಗಿರುವುದು ಈ ಭೂಗ್ರಹದಲ್ಲಿ ಅತಿ ಹೆಚ್ಚಿನದು.

ಕೊಯಮತ್ತೂರಿನಿಂದ ದೆಹಲಿಗೆ ವಿಮಾನದಲ್ಲಿ ಹೋಗುವಾಗ ಕಿಟಕಿಯಿಂದ ಕೆಳಗೆ ನೋಡಿದರೆ, ಪಶ್ಚಿಮ ಘಟ್ಟಗಳನ್ನು ಬಿಟ್ಟು ಮತ್ತೆಲ್ಲವೂ ಕಂದು ಬಣ್ಣದ ಮರುಭೂಮಿಯಂತೆ ಕಾಣಿಸುತ್ತದೆ. ಅದಕ್ಕೆ ಕಾರಣ ವಿವೇಚನಾ ರಹಿತ ಕೃಷಿಗಾರಿಕೆ, ಇಂದು ಭಾರತದ ಶೇ.84 ನೆಲದಲ್ಲಿ ಕೃಷಿ ನಡೆಯುತ್ತಿದೆ. ನಮಗೆ ಸ್ವಾತಂತ್ರ್ಯ ದೊರೆತ ಸಮಯದಲ್ಲಿ ಶೇ.90 ಜನತೆ ಕೃಷಿಯಲ್ಲಿ ತೊಡಗಿತ್ತು. ಅಂದರೆ ಅವರೆಲ್ಲ ಸಾಂಪ್ರದಾಯಿಕವಾಗಿ ಕೃಷಿಕರು ಅಥವಾ ರೈತರಾಗಿದ್ದರು ಎಂದರ್ಥವಲ್ಲ. ಭಾರತದ ಚರಿತ್ರೆಯನ್ನು ಅವಲೋಕಿಸಿದರೆ, 250 ವರ್ಷಗಳ ಹಿಂದೆ ನಾವು ಜಗತ್ತಿನಲ್ಲಿಯೇ ಅತಿ ದೊಡ್ಡ ಜವಳಿ ರಫ್ತುದಾರರಾಗಿದ್ದೇವೆ. ಜಗತ್ತಿನ ಶೇ.33 ಜವಳಿ ರಫ್ತು ಭಾರತದಿಂದಾಗುತ್ತಿತ್ತು. ಸರಿ ಸುಮಾರು ಶೇ.40-45 ಜನರು ನೇಯ್ಗೆ ಕೆಲಸದಲ್ಲಿ ತೊಡಗಿದ್ದರು. ನಾವು ಎಂದಿಗೂ ಕಚ್ಚಾ ಹತ್ತಿಯನ್ನು ಹೊರ ಕಳುಹಿಸುತ್ತಿರಲಿಲ್ಲ. ಏಕೆಂದರೆ, ಇಲ್ಲಿ ಬೆಳೆಯುತ್ತಿದ್ದ ಹತ್ತಿಯ ಗುಣಮಟ್ಟ ಅಷ್ಟೇನೂ ಉತ್ತಮವಾಗಿರಲಿಲ್ಲ. ಆದರೆ, ಅದೇ ಹತ್ತಿಯನ್ನು ಉಪಯೋಗಿಸಿ ಮತ್ತು ರೇಷ್ಮೆ, ಕತ್ತಾಳೆ, ಸೆಣಬು ಮತ್ತಿತರ ಯಾವುದೇ ನೂಲನ್ನಾದರೂ ಉಪಯೋಗಿಸಿ ನಮ್ಮ ಜನ ಬಟ್ಟೆಗಳ ರೂಪದಲ್ಲಿ ಚಮತ್ಕಾರವನ್ನೇ ಸೃಷ್ಟಿಸುತ್ತಿದ್ದರು. ನಾವು 140ಕ್ಕೂ ಹೆಚ್ಚಿನ ವಿವಿಧ ರೀತಿಯ ನೇಯ್ಗೆಗಳನ್ನು ರೂಪಿಸಿದ್ದೆವು ಮತ್ತು ಅವುಗಳಿಂದ ಅದೆಷ್ಟೋ ಮನಮೋಹಕ ವಸ್ತುಗಳನ್ನು ತಯಾರಿಸುತ್ತಿದ್ದೇವೆಂದರೆ ಇಡೀ ಜಗತ್ತೇ ಅವುಗಳಿಗೆ ಮನಸೋತಿತ್ತು. ಆದರೆ, 1800 ಮತ್ತು 1860ರ ಇಸವಿಯ ಮಧ್ಯೆ, ನಮ್ಮ ಜವಳಿ ರಫ್ತು ಶೇ.94ರಷ್ಟು ಕುಸಿದು ಹೋಯಿತು. ಈ ಬಾರಿ ಕುಸಿತ ಆಕಸ್ಮಿಕವಾಗಿ ಆಗಿದ್ದಲ್ಲ, ವ್ಯವಸ್ಥಿತವಾಗಿ ಮಾಡಲಾಗಿದ್ದು, ಬ್ರಿಟಿಷರು ನಮ್ಮ ಮಗ್ಗಗಳನ್ನು ಮುರಿದುಹಾಕಿ, ಮಾರುಕಟ್ಟೆಯನ್ನು ನಾಶಮಾಡಿದರು ಮತ್ತು ಎಲ್ಲದರ ಮೇಲೂ ತೆರಿಗೆಯನ್ನು ಮೂರು ಪಟ್ಟು ಹೆಚ್ಚಿಸಿ ತಮ್ಮ ದೇಶದಿಂದ ಬಟ್ಟೆಗಳನ್ನು ಆಮದು ಮಾಡಿಕೊಂಡರು. ಹತ್ತಿ ನೇಕಾರರ ಮೂಳೆಗಳಿಂದ ಭಾರತದ ನೆಲ ಬಿಳಿಚಿಕೊಳ್ಳುತ್ತಿದೆ ಎಂದು ಆಗಿನ ಬ್ರಿಟಿಷ್ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಹೇಳಿದ್ದ. ಲಕ್ಷಗಟ್ಟಲೆ ಜನ ಜೀವನೋಪಾಯವನ್ನು

ಕಳೆದುಕೊಂಡು ಹೊಟ್ಟೆಗಿಲ್ಲದೆ ಹಸಿವಿನಿಂದ ಸತ್ತರು. ಉಳಿದವರು ಬೇರೆ ದಾರಿ ಇಲ್ಲದೆ ಭೂಮಿಯನ್ನು ಹಾಗೂ ಹೀಗೂ ಉಳಿಮೆ ಮಾಡತೊಡಗಿದರು. ಹೊಟ್ಟೆಪಾಡಿಗಾಗಿನ ವ್ಯವಸಾಯ ಎಲ್ಲೆಡೆ ಹರಡಿತು. ಅವರ್‍ಯಾರೂ ಪಾರಂಪರಿಕ ಕೃಷಿಕರಾಗಿರಲಿಲ್ಲ. ಆದರೆ, ವಸ್ತ್ರ ತಯಾರಿಕೆಯಲ್ಲಿನ ವಿವಿಧ ಹಂತಗಳಲ್ಲಿ ನುರಿತ ಜನರಾಗಿದ್ದರು ಮತ್ತು ವಿಧಿ ಇಲ್ಲದೆ ಬೇಸಾಯಕ್ಕಿಳಿದಿದ್ದರು. 1947ರಲ್ಲಿ ನಮಗೆ ಸ್ವಾತಂತ್ರ್ಯ ದೊರೆತಿದ್ದಾಗ ಶೇ.90 ಜನ ಕೃಷಿಕರಾಗಿದ್ದರು. ಇಂದು ಅದು ಶೇ. 70ಕ್ಕೆ ಇಳಿದಿದೆ. ಇದರ ಅರ್ಥ 10 ಜನರ ಆಹಾರವನ್ನು 7 ಜನ ಬೆಳೆಯುತ್ತಿದ್ದಾರೆ ಎಂದು. ಇದು ಅಷ್ಟೇನೂ ಸಮರ್ಥವಾದ ರೀತಿಯಲ್ಲ. ಅಲ್ಲದೆ, ಒಂದಡಿ ಭೂಮಿಯನ್ನು ಬಿಡದೆ ನಾವು ಉಳುತ್ತಿದ್ದರೂ ಸಾಕಷ್ಟು ಆಹಾರ ಸಿಗುತ್ತಿಲ್ಲ. ನಮ್ಮ ಬೇಸಾಯದ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಯನ್ನು ಮಾಡದ ಹೊರತಾಗಿ ಬೇರೆ ದಾರಿಯೇ ಇಲ್ಲ. ಭಾರತದಲ್ಲಿ ಜನ ಸಾವಿರಾರು ಪೀಳಿಗೆಗಳಿಂದ ಅದೇ ನೆಲವನ್ನೇ ಉತ್ತು ಬಿತ್ತುತ್ತಿದ್ದಾರೆ. ಆದರೆ, ಕಳೆದ ಒಂದು ಪೀಳಿಗೆಯಲ್ಲಿ ಮಣ್ಣಿನ ಗುಣಮಟ್ಟ ಎಷ್ಟು ಕ್ಷೀಣಿಸಿಬಿಟ್ಟಿದೆ ಎಂದರೆ ನೆಲ ಬಂಜರಾಗುವ ಸ್ಥಿತಿಗೆ ತಲುಪಿದೆ. ಇದಕ್ಕೆ ಕಾರಣ, ಮರಗಳನ್ನು ಕಡಿದಿರುವುದು ಮತ್ತು ಲಕ್ಷಗಟ್ಟಲೆ ಜಾನುವಾರುಗಳನ್ನು ವಿದೇಶಕ್ಕೆ ರಫ್ತು ಮಾಡುತ್ತಿರುವುದು. ನಮಗಿದು ಅರ್ಥವಾಗಬೇಕು. ಇಲ್ಲಿಂದ ಹೊರಹೋಗುತ್ತಿರುವುದು ರಾಸುಗಳಲ್ಲ ನಮ್ಮ ನೆಲದ ಸಾರ, ಹೀಗಾದರೆ ಮಣ್ಣಿನ ಸಾರವನ್ನು ಮತ್ತೆ ತುಂಬುವುದು ಹೇಗೆ, ಮಣ್ಣನ್ನು ಸಂರಕ್ಷಿಸಬೇಕೆಂದರೆ ಅದರಲ್ಲಿ ಜೈವಿಕ ಅಂಶಗಳು ಬೀಳಬೇಕು. ಮರದ ಎಲೆಗಳು, ದನಗಳ ಸಗಣಿ ಇಲ್ಲದೆ ಮಣ್ಣನ್ನು ಫಲವತ್ತಾಗಿಸಲು ಸಾಧ್ಯವಿಲ್ಲ. ನಿಗದಿತ ವಿಸ್ತಾರದ ನೆಲದಲ್ಲಿ ಎಷ್ಟು ಮರಗಳಿರಬೇಕು ಮತ್ತು ಎಷ್ಟು ದನಗಳಿರಬೇಕು ಎಂಬುದು ಪ್ರತಿಯೊಂದು ಕೃಷಿಕ ಕುಟುಂಬಕ್ಕೂ ತಿಳಿದಿದ್ದ ಸಾಮಾನ್ಯ ತಿಳುವಳಿಕೆಯಾಗಿತ್ತು. ನಮ್ಮ ಹಳೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತದ ಶೇ.33 ನೆಲ ನೆರಳಿನಲ್ಲಿರಬೇಕು ಎಂದು ಈಗಾಗಲೇ ನಿರ್ಧರಿಸಲಾಗಿದೆ. ಏಕೆಂದರೆ, ಮಣ್ಣನ್ನು ಸಂರಕ್ಷಿಸಬೇಕಿದ್ದರೆ, ಇರುವುದು ಅದೊಂದೇ ಮಾರ್ಗ. ನಾನು ಒಂದು ಕಾನೂನನ್ನು ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಪ್ರಯತ್ನ ನಡೆಸುತ್ತಿದ್ದೇನೆ. ಅದರ ಪ್ರಕಾರ ಯಾರಾದರೂ ಒಂದು ಹೆಕ್ಟೇರಿನಷ್ಟು (ಕೃಷಿ ಭೂಮಿ)ಹೊಂದಿದ್ದರೆ, ಕಡೇಪಕ್ಷ ಅವರ ಬಳಿ ಐದು ಗೋವುಗಳಾದರೂ ಇರಬೇಕು. ಇಲ್ಲವಾದರೆ ಅವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕು. ಏಕೆಂದರೆ, ಅಷ್ಟು ಗೋವುಗಳು ಇಲ್ಲ ಅಂತಾದರೆ, ಅವರು ಆ ನೆಲವನ್ನು ವಿಸ್ತಾರಗೊಳಿಸದೆ ನಿಷ್ಪ್ರಯೋಜಕಗೊಳಿಸುತ್ತಿದ್ದಾರೆ ಎಂದೇ ಅರ್ಥ.

ಭಾರತದ ನೆಲದ ವಿಶೇಷತೆ ಏನೆಂದರೆ, ಫಲವತ್ತಾಗಿರುವ ಪ್ರದೇಶದಲ್ಲಿನ ಒಂದು ಕ್ಯೂಬಿಕ್ ಮೀಟರ್ ಮಣ್ಣನ್ನು ತೆಗೆದುಕೊಂಡು ಪರಿಶೀಲಿಸಿದರೆ, ಅದರಲ್ಲಿ ಸುಮಾರು 10.000 ಜಾತಿಯ ವಿವಿಧ ಜೀವಿಗಳಿರುವುದು ಕಂಡುಬರುತ್ತದೆ ಎಂದು ಹೇಳಲಾಗುತ್ತದೆ. ಈ ಅಗಾಧ ಸಂಖ್ಯೆಯಲ್ಲಿ ಜೀವಿಗಳು ಒಂದೆಡೆ ಕೇಂದ್ರೀಕೃತವಾಗಿರುವುದು ಈ ಭೂ ಗ್ರಹಣದಲ್ಲೇ ಅತಿ ಹೆಚ್ಚಿನದು. ಇದು ವೈಜ್ಞಾನಿಕ ಮಾಹಿತಿ, ಆದರೆ ಇದಕ್ಕೆ ತಕ್ಕ ವೈಜ್ಞಾನಿಕ ಕಾರಣ ಇನ್ನೂ ದೊರೆತಿಲ್ಲ. ಆದ್ದರಿಂದ ಇಲ್ಲಿನ ಮಣ್ಣಿಗೆ ಸ್ವಲ್ಪ ಸಹಾಯ ಬೇಕು ಅಷ್ಟೆ. ನೀವು ಆ ಸಣ್ಣ ಸಹಾಯವನ್ನು ನೀಡಿದರೆ, ಅದು ಬಹುಬೇಗನೆ ಎಂದಿನಂತೆ ಫಲವತ್ತಾಗುತ್ತದೆ. ಆದರೆ ಈ ಪೀಳಿಗೆಯ ಪ್ರಜೆಗಳಾಗಿ, ನಮ್ಮಲ್ಲಿ ಅತಿ ಚಿಕ್ಕ ಸಹಾಯವನ್ನು ನೀಡುವ ಮನಸ್ಸು ಮತ್ತು ಬುದ್ಧಿ ಇದೆಯೇ ಅಥವಾ ಅದು ಸಾಯುತ್ತಿರುವುದನ್ನು ನೋಡುತ್ತಾ ನಾವು ಹೀಗೆ ಸುಮ್ಮನೆ ಕೂರುತ್ತೇವೆಯೆ

ಉದಾಹರಣೆಗೆ, ಕಾವೇರಿ ಜಲಾನಯನ ಪ್ರದೇಶ ಸುಮಾರು 85,000 ಚದರ ಕಿ.ಮೀ.ನಷ್ಟಿದೆ. ಕಳೆದ 50 ವರ್ಷಗಳಲ್ಲಿ ಅಲ್ಲಿನ ಶೇ.87 ಹಸಿರು ಹೊದಿಕೆಯನ್ನು ನಾಶ ಮಾಡಲಾಗಿದೆ. ಆದ್ದರಿಂದ ಕಾವೇರಿ ನದಿಯ ಪುನಶ್ಚೇತನಕ್ಕಾಗಿ ನಾವೀಗ 'ಕಾವೇರಿ ಕೂಗು' ಎಂಬ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಕಾವೇರಿ ಜಲಾನಯನ ಪ್ರದೇಶದ ಮೂರನೇ ಒಂದು ಭಾಗವನ್ನು ಹಸಿರಿನಡಿ ತರಲು ನಾವು 242 ಕೋಟಿ ಮರಗಳನ್ನು ನೆಡಬೇಕಾಗುತ್ತದೆ. ನನ್ನ ಮಾತಿನ ಅರ್ಥ "ಈಶ ಸಂಸ್ಥೆ" ಈ ಮರಗಳನ್ನು ನೆಡುತ್ತದೆ ಎಂದಲ್ಲ. ನಾವು ಅರಣ್ಯ

ಕೃಷಿ (ಆಗ್ರೋ ಫಾರೆಸ್ಟ್ರಿ) ಆಂದೋಲನವನ್ನು ಮಾಡಬೇಕೆಂದಿದ್ದೇವೆ ಮತ್ತು ರೈತರಿಗೆ ಅದು ಅತ್ಯುತ್ತಮವಾದ ಆರ್ಥಿಕ ಮಾದರಿಯೆಂದು ಮನವರಿಕೆ ಮಾಡಿಕೊಡಲಿದ್ದೇವೆ.

ಕರ್ನಾಟಕದಲ್ಲಿ ಒಬ್ಬ ಸಾಧಾರಣ ರೈತ ವರ್ಷಕ್ಕೆ ಪ್ರತಿ ಹೆಕ್ಟೇರಿಗೆ ಸುಮಾರು 42,000 ರೂಪಾಯಿಗಳನ್ನು ಗಳಿಸಿದರೆ ತಮಿಳುನಾಡಿನ ರೈತ 46,000 ಗಳಿಸುತ್ತಾನೆ. ಅರಣ್ಯ ಕೃಷಿ ವಿಧಾನ ಅಳವಡಿಸಿಕೊಂಡರೆ ಮೊದಲ ಐದು ವರ್ಷಗಳಲ್ಲಿ ಸರಾಸರಿ ಆದಾಯವನ್ನು ವರ್ಷಕ್ಕೆ 45,000 ದಿಂದ 3.60 ಲಕ್ಷ ರೂ.ಗಳಿಗೆ ಏರಿಸಬಹುದಾಗಿದೆ. ಒಮ್ಮೆ ರೈತರು ಈ ಬದಲಾವಣೆಯ ಆರ್ಥಿಕ ಲಾಭವನ್ನು ಮನಗಂಡರೆ ಮುಂದೆ ನಾವು ಅವರ ಮನವೊಲಿಸಬೇಕಾಗಿಲ್ಲ. ಅವರಾಗಿಯೇ ಈ ಭಾಗವನ್ನು ಅರಣ್ಯ ಕೃಷಿಗೆ ಬದಲಾಯಿಸಿಕೊಂಡರೆ ಅವರ ಆದಾಯ ಹೆಚ್ಚುವುದರ ಜೊತೆಗೆ ಭೂಮಿಯೂ ಫಲವತ್ತಾಗುತ್ತದೆ.

ಕಾವೇರಿ ಕೂಗು ಅಭಿಯಾನದ ಕುರಿತು . . . .

ನಮ್ಮ ದೇಶದ ಜೀವನಾಡಿಗಳಂತಿರುವ ನದಿಗಳನ್ನು ಹೇಗೆ ಪುನರುಜ್ಜೀವನಗೊಳಿಸಬಹುದು ಎಂಬುದರ ಮಾನದಂಡವನ್ನು ನಿಗದಿಪಡಿಸುವ ನಿಟ್ಟಿನಲ್ಲಿ **'ಕಾವೇರಿ ಕೂಗು'** ಅಭಿಯಾನದ ಮೊದಲನೆಯ ಪ್ರಯತ್ನ ಎನ್ನಬಹುದು. ಈ ಅಭಿಯಾನ ಕಾವೇರಿ ಜಲಾನಯನ ಪ್ರದೇಶದಲ್ಲಿ 242 ಕೋಟಿ ಮರಗಳನ್ನು ನೆಡಲು ರೈತರಿಗೆ ಬೆಂಬಲ ನೀಡುವ ಮೂಲಕ ನದಿಯ ಪುನರುಜ್ಜೀವನಕ್ಕೆ ಚಾಲನೆ ನೀಡಲಿದೆ. ಇದು ಜಲಾನಯನ ಪ್ರದೇಶದಲ್ಲಿ ನೀರಿನ ಧಾರಣವನ್ನು ಹೆಚ್ಚಿಸುತ್ತದೆ ಹಾಗೂ 5 ರಿಂದ 7 ವರ್ಷಗಳಲ್ಲಿ ರೈತರ ಆದಾಯವನ್ನು 3 ರಿಂದ 8 ಪಟ್ಟು ಹೆಚ್ಚಿಸುತ್ತದೆ ಮತ್ತು 84 ದಶಲಕ್ಷ ಜನರ ಜೀವನವನ್ನು ಪರಿವರ್ತಿಸುತ್ತದೆ ಎಂದು ಅಂದಾಜಿಸಲಾಗಿದೆ.

ಸದ್ಗುರು

ಆಧಾರ–ವಿಜಯವಾಣಿ, 16.08.2019

8. ಪ್ಲಾಸ್ಟಿಕ್ ಮಾಯೆ ಎಲ್ಲೆಲ್ಲೂ ನಿನ್ನ ಕರಾಳ ಛಾಯೆ

ನಾವು ಬೆಳಿಗ್ಗೆ ಎದ್ದು ಹಲ್ಲು ಉಜ್ಜುವ ಬ್ರಷ್‌ನಿಂದ ರಾತ್ರಿ ಮಲಗುವ ಚಾಪೆಯವರೆಗೂ ಒಂದಲ್ಲ ಒಂದು ರೀತಿಯಲ್ಲಿ ಪ್ಲಾಸ್ಟಿಕ್ ಪ್ರಕಾರಗಳನ್ನು ಬಳಸುತ್ತಲೇ ಇರುತ್ತೇವೆ. ಈ ಬ್ಯಾಗಡಿ ಮೋಹ ನಮ್ಮನ್ನು ಎಷ್ಟು ಸುತ್ತಿಕೊಂಡಿದೆ ಎಂದರೆ ಹೆಣಕ್ಕೂ ಪ್ಲಾಸ್ಟಿಕ್ ಹೊದಿಕೆ ಬೇಕು ಎಂಬ ಮಟ್ಟಕ್ಕೆ ಜಗತ್ತನ್ನೇ ಆವರಿಸಿಬಿಟ್ಟಿದೆ.

ಇತ್ತೀಚೆಗಷ್ಟೇ ಬೆಂಗಳೂರಿನ ಸದಾಶಿವನಗರದ ನೇಚರ್ ಬ್ಯಾಸ್ಕೆಟ್ ಔಟ್‌ಲೆಟ್, ಈಸಿಡೇ ಕ್ಲಬ್, ಎಂ.ಜಿ.ರಸ್ತೆಯ ನೀಲಗಿರೀಸ್ ಮಳಿಗೆಗಳ ಮೇಲೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳ ಜೊತೆ ದಾಳಿ ಮಾಡಿದಾಗ ನಿಜಕ್ಕೂ ಅಚ್ಚರಿ ಕಾದಿತ್ತು. ನಾವು ತಿನ್ನುವ ತರಕಾರಿ, ಹಣ್ಣು, ಮೊಟ್ಟೆ, ದೋಸೆ, ಇಡ್ಲಿಯ ಹಿಟ್ಟುಗಳನ್ನೆಲ್ಲ ಪ್ಲಾಸ್ಟಿಕ್‌ನಲ್ಲಿ ಪ್ಯಾಕ್ ಮಾಡಿ ಶೇಖರಿಸಿಟ್ಟಿದ್ದರು.

ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ಪ್ಲಾಸ್ಟಿಕ್ ನಿಜಕ್ಕೂ ಬದುಕು ಸರಳಗೊಳಿಸುವ ನೆಪದಲ್ಲಿ ಇಡೀ ಪರಿಸರವನ್ನು ಕದಂಬ ಬಾಹುವಿನಂತೆ ಆಕ್ರಮಿಸಿಕೊಂಡು ಬಿಟ್ಟಿದೆ. ಬ್ಯಾಗಡಿ ಎಂಬ ಕನ್ನಡ ನಾಮಾಂಕಿತ ಈ ಆಂಗ್ಲ ಪ್ಲಾಸ್ಟಿಕ್ ಪದ ಇವತ್ತು ಜೀವ ಜಗತ್ತಿಗೆ ಸವಾಲಾಗಿ ಆಧುನಿಕ ಬಸ್ಮಾಸುರನಂತಾಗಿದೆ. ಕಾಸ್ಮೋನಗರ ಮಾತ್ರವಲ್ಲ, ಪೇಟೆ, ಪಟ್ಟಣ, ಹಳ್ಳಿಗಳ ಸಂದುಗೊಂದುಗಳಲ್ಲಿ, ತಿಪ್ಪೆಗಳಲ್ಲಿ, ಹೊಲಗಳಲ್ಲಿ ಎಲ್ಲೆಲ್ಲಿಯೂ ತನ್ನ ಇರುವಿಕೆಯನ್ನು ಪ್ರದರ್ಶಿಸುತ್ತಿದೆ.

ನಿಷೇಧವೆಂಬ ಮೊಂಡು ಅಸ್ತ್ರ

2011ರಲ್ಲಿ ನಿಯಮ ಜಾರಿಗೊಳಿಸಿದ ಕೇಂದ್ರ ಸರ್ಕಾರ 40 ಮೈಕ್ರಾನ್‌ಗಿಂತ ತೆಳುವಿನ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ನಿಷೇಧಿಸಿತು. 2016ರಲ್ಲಿ ಮತ್ತಷ್ಟು ಬಿಗಿಗೊಳಿಸಿ 50 ಮೈಕ್ರಾನ್‌ಗಿಂತ ತೆಳುವಾದ ಪ್ಲಾಸ್ಟಿಕ್‌ನ

ಉತ್ಪಾದನೆ ಮತ್ತು ಬಳಕೆಯನ್ನು ನಿರ್ಬಂಧಿಸಿತು. ನಮ್ಮ ರಾಜ್ಯದಲ್ಲಿ ಪ್ಲಾಸ್ಟಿಕ್ ನಿಷೇಧ ಕಾನೂನು ಜಾರಿಯಲ್ಲಿದ್ದರೂ ರಾಜಾರೋಷವಾಗಿ ಅಂಗಡಿ ಮುಂಗಟ್ಟುಗಳಲ್ಲಿ, ಹೋಟೆಲುಗಳಲ್ಲಿ, ಮಾರುಕಟ್ಟೆಗಳಲ್ಲಿ, ಮಾಲ್‌ಗಳಲ್ಲಿ ಎಲ್ಲೆಂದರಲ್ಲಿ ಮಾರಾಟವಾಗುತ್ತಿದೆ. ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಭಿತ್ತಿಪತ್ರ ತೋರಣ, ಫ್ಲೆಕ್ಸ್ ಬಾವುಟ ತಟ್ಟೆ–ಲೋಟ, ಥರ್ಮಾಕೋಲ್ ಪ್ಲಾಸ್ಟಿಕ್ ಹಾಳೆ, ಮೈಕ್ರೋಬಿಟ್ಸ್ ಮುಂತಾದವುಗಳ ತಯಾರಿ, ಸಂಗ್ರಹಣೆ, ಮಾರಾಟ ಮತ್ತು ವಿತರಣೆ ಮೇಲೆ ಸಂಪೂರ್ಣ ನಿಷೇಧವಿದೆ.

ರಫ್ತು ಉದ್ದೇಶಕ್ಕಾಗಿ, ಪ್ಲಾಸ್ಟಿಕ್ ಸೀಲ್ ಮಾಡಲು ಬಳಸುವ ಪ್ಲಾಸ್ಟಿಕ್, ಅರಣ್ಯ, ತೋಟಗಾರಿಕೆ, ನರ್ಸರಿಗಳಲ್ಲಿ–ಪ್ಯಾಕಿಂಗ್ ಬಳಸುವ ಪ್ಲಾಸ್ಟಿಕ್ ಚೀಲ ಮತ್ತು ಹಾಳೆಗಳಿಗೆ ವಿನಾಯಿತಿ ನೀಡಲಾಗಿದೆ. ಆದರೆ ಅದನ್ನೇ ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುವ ಕಂಪನಿಗಳ ಮಾಲೀಕರು ಇಡೀ ಪ್ಯಾಕಿಂಗ್ ಸಿಸ್ಟಂ ಅನ್ನೇ ಬ್ಯಾಗಡಿಮಯವನ್ನಾಗಿ ಮಾರ್ಪಡಿಸಿಕೊಂಡಿದ್ದಾರೆ. ಕಂಪನಿಗಳ ಲಾಬಿ, ಇಲಾಖೆಗಳ ಸಮನ್ವಯ ಕೊರತೆಯಿಂದ ಪ್ಲಾಸ್ಟಿಕ್ ಹಾವಳಿ ನಿಯಂತ್ರಣಕ್ಕೆ ಬರುತ್ತಿಲ್ಲ. ಕಳೆದ ವರ್ಷ ಸರ್ಕಾರ ಜಾರಿಗೆ ತಂದ ನಿಯಮಗಳಡಿ ಮಾಲಿನ್ಯ ನಿಯಂತ್ರಣ ಮಂಡಳಿ 80ಕ್ಕೂ ಹೆಚ್ಚು ಪ್ಲಾಸ್ಟಿಕ್ ತಯಾರಿಕೆ ಮತ್ತು ಬಳಕೆ ಘಟಕಗಳ ವಿರುದ್ಧ ಕ್ರಮ ಕೈಗೊಂಡಿತು.

ಪ್ಲಾಸ್ಟಿಕ್ ಹುಟ್ಟು ಮತ್ತು ಇತಿಹಾಸ:

ಆಕಾರಕ್ಕೆ ತಕ್ಕಂತೆ ಬಣ್ಣ ಬದಲಿಸುವ ಊಸರವಳ್ಳಿಯಂತೆ ಈ ಪ್ಲಾಸ್ಟಿಕ್ ಎಂಬ ನಾಜೂಕಯ್ಯನ ಹುಟ್ಟು, ಇತಿಹಾಸ 150 ವರ್ಷ ಹಿಂದಿನದು. ಅಲೆಕ್ಸಾಂಡರ್ ಪಾಕರ್ಸ್ ಇಂಗ್ಲಿಷ್ ವಿಜ್ಞಾನಿ 1855 ರಲ್ಲಿ ಪ್ಲಾಸ್ಟಿಕ್‌ನ ಮೂಲ ರೂಪವನ್ನು ಕಂಡುಹಿಡಿದಿದ್ದ. 20ನೇ ಶತಮಾನದಲ್ಲಿ ಇದರ ಬಳಕೆ 1980ರ ನಂತರ ವ್ಯಾಪಕವಾಯಿತು. ನೈಸರ್ಗಿಕ ಅನಿಲ ಮತ್ತು ಪೆಟ್ರೋಲಿಯಂನ ತೈಲದಿಂದ ಪಡೆಯುವ ಪೆಟ್ರೋ ರಾಸಾಯನಿಕಗಳನ್ನು ಬಳಸಿ ಪ್ಲಾಸ್ಟಿಕ್ ತಯಾರಿಸಲಾಗುತ್ತದೆ. ಪೆಟ್ರೋಲಿಯಂ ತೈಲವನ್ನು ಸಂಸ್ಕರಿಸಿ ಅದರಿಂದ ಇಥಲೀನ್ ಮತ್ತು ಪ್ರೊಪಿಲೀನ್‌ಗಳನ್ನು ರೂಪಿಸಿ ಇತರೆ ರಾಸಾಯನಿಕ ವಸ್ತುಗಳನ್ನು ಬೆರೆಸಿದಾಗ ಪ್ಲಾಸ್ಟಿಕ್ ಹುಟ್ಟುತ್ತದೆ. ಪ್ಲಾಸ್ಟಿಕ್ ವಸ್ತುಗಳು ಜೈವಿಕವಾಗಿ ಕರುಗುವುದಿಲ್ಲ. ಅವು ಕರಗಿ ಮಣ್ಣಿನಲ್ಲಿ ಸೇರಲು 1000 ವರ್ಷಗಳು ಬೇಕಾಗಬಹುದು. ಮರುಬಳಕೆ ಸಮರ್ಪಕವಾಗಿ ಆಗದ ಕಾರಣ ಬಹುತೇಕ ಪ್ಲಾಸ್ಟಿಕ್ ವಸ್ತುಗಳು ಕಸದ ರೂಪದಲ್ಲಿ ಭೂಗರ್ಭ ಸೇರುತ್ತಿವೆ.

ಪ್ಲಾಸ್ಟಿಕ್ ಏಕೆ ಅಪಾಯಕಾರಿ

ಇತ್ತೀಚೆಗೆ ಹಸುವೊಂದರ ಹೊಟ್ಟೆಯಲ್ಲಿದ್ದ ಪ್ಲಾಸ್ಟಿಕ್ ಬಗ್ಗಡವನ್ನು ಪಶುವೈದ್ಯನೋರ್ವ ಹೊರತೆಗೆವ ದೃಶ್ಯ ಸಾಮಾಜಿಕ ಜಾಣ ತಾಣಗಳಲ್ಲಿ ಹರಿದಾಡಿತು. ಅತ್ತ ಫಿಲಿಫೈನ್ಸ್ ಸಮುದ್ರ ಕಿನಾರೆಯಲ್ಲಿ ಮೃತ ತಿಮಿಂಗಲದ ಹೊಟ್ಟೆಯನ್ನು ಬಗೆದಾಗ ಬರೋಬ್ಬರಿ 40 ಕೆ.ಜಿ. ಪ್ಲಾಸ್ಟಿಕ್ ಪತ್ತೆಯಾದ ಸುದ್ದಿ ಟಿವಿಯಲ್ಲಿ ಬಂದಿತ್ತು. ಸರಿಯಾಗಿ ವಿಲೇವಾರಿ ಆಗದ ಪ್ಲಾಸ್ಟಿಕ್ ನದಿ ಸಮುದ್ರಗಳನ್ನು ಸೇರಿ ಜಲಚರಗಳ ಹೊಟ್ಟೆ ಸೇರುತ್ತಿದೆ. ಪ್ಲಾಸ್ಟಿಕ್ ಪರಿಕರಗಳ ಅತಿ ಬಳಕೆಯಿಂದ ಕ್ಯಾನ್ಸರ್‌ನಂತಹ ರೋಗಗಳು ಉಲ್ಬಣವಾಗುತ್ತಿವೆ. ಪ್ಲಾಸ್ಟಿಕ್ ಸುಟ್ಟರೆ ಡಯಾಕ್ಸಿನ ಎಂಬ ಹೊಗೆ ಹೊರಹೊಮ್ಮಿ ಕ್ಯಾನ್ಸರ್ ಶ್ವಾಸಕೋಶದ ಕಾಯಿಲೆ, ಬಂಜೆತನ, ವೀರ್ಯಾಣುಸಂಖ್ಯೆ ಕಡಿಮೆ ಮತ್ತು ಹಾರ್ಮೋನ್‌ಗಳಿಗೆ ಸಂಬಂಧಿಸಿದ ಕಾಯಿಲೆಗಳು ಜಗತ್ತನ್ನೇ ವ್ಯಾಪಿಸಿವೆ.

ರಾಜ್ಯ – ದೇಶದಲ್ಲಿ ಪ್ಲಾಸ್ಟಿಕ್ ಉತ್ಪನ್ನವೆಷ್ಟು?

ನಮ್ಮ ದೇಶದಲ್ಲಿ ಪ್ರತಿವರ್ಷ 134 ಲಕ್ಷ ಟನ್ನು ಪ್ಲಾಸ್ಟಿಕ್ ಉತ್ಪಾದನೆಯಾಗುತ್ತದೆ. ಅದರಲ್ಲಿ 80 ಲಕ್ಷ ಟನ್ನು ಕಸವಾಗಿ ಸೇರುತ್ತಿದೆ. ಒಂದು ವರ್ಷಕ್ಕೆ ಉತ್ಪನ್ನವಾಗುವ ಪ್ಲಾಸ್ಟಿಕ್ ಸರಕುಗಳ ಒಟ್ಟು ಮೌಲ್ಯ ಒಂದು ಲಕ್ಷ ಕೋಟಿ ರೂ. ದೇಶದಾದ್ಯಂತ 30,000 ಕ್ಕೂ ಹೆಚ್ಚು ಪ್ಲಾಸ್ಟಿಕ್ ಘಟಕಗಳಿವೆ. ಈ ಉದ್ದಿಮೆಗಳು ವರ್ಷಕ್ಕೆ ಶೇ.11ರ ದರದಲ್ಲಿ ಬೆಳೆಯುತ್ತಿವೆ. ವರ್ಷಕ್ಕೆ ಒಬ್ಬ ಭಾರತೀಯ ಸರಾಸರಿ 11 ಕೆ.ಜಿ. ಪ್ಲಾಸ್ಟಿಕ್ ಬಳಸುತ್ತಾನಂತೆ. ಜಾಗತಿಕ ಮಟ್ಟದಲ್ಲಿ ತಲಾ ಬಳಕೆ 28 ಕೆ.ಜಿ. ಇದೆ. ಪ್ರತಿದಿನ ನಮ್ಮ ದೇಶದಲ್ಲಿ 6,000 ಟನ್ನು ಪ್ಲಾಸ್ಟಿಕ್ ವಸ್ತುಗಳು ಕಸವಾಗಿ

ಪರಿವರ್ತನೆಯಾಗುತ್ತಿವೆ. ಪ್ರತಿದಿನ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಪ್ಲಾಸ್ಟಿಕ್ ಪ್ರಮಾಣ 300 ಟನ್. ಇದರಲ್ಲಿ ಶೇ.30ರಷ್ಟು ಮಾತ್ರ ಮರುಬಳಕೆಯಾಗುತ್ತಿದೆ.

ಖಾಸಗಿ ಸಂಸ್ಥೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಯನದ ಪ್ರಕಾರ ಬೆಂಗಳೂರು ನಗರದಲ್ಲಿ ಪ್ರತಿದಿನ 4,000 ಟನ್ ಕಸ ಉತ್ಪಾದನೆಯಾಗುತ್ತಿದೆ. ಅದರಲ್ಲಿ 400 ಟನ್ ಕಡಿಮೆ ಕ್ಯಾಲರಿ ಪ್ಲಾಸ್ಟಿಕ್ ಸೇರಿದೆ. ಪ್ಲಾಸ್ಟಿಕ್ ನಿಷೇಧಕ್ಕೆ ಸಂಬಂಧಿಸಿದಂತೆ ಏಕರೂಪ ನಿಯಮಗಳು ಜಾರಿಯಾಗಬೇಕು. ಆದರೆ, ದಕ್ಷಿಣದ ರಾಜ್ಯಗಳಲ್ಲಿ ಬೇರೆ ಬೇರೆ ನಿಯಮಗಳು ಇರುವುದರಿಂದ ತಮಿಳುನಾಡಿನಿಂದ ಬೆಂಗಳೂರಿಗೆ ಹಾಗೂ ಇಡೀ ರಾಜ್ಯಕ್ಕೆ ಪ್ಲಾಸ್ಟಿಕ್ ಕಳ್ಳಮಾರ್ಗದ ಮೂಲಕ ಪೂರೈಕೆಯಾಗುತ್ತಿದೆ.

ಪ್ಲಾಸ್ಟಿಕ್ ತಯಾರಿಕೆ–ಬಳಕೆ ಅಪರಾಧ

ಪ್ಲಾಸ್ಟಿಕ್‌ನ ತಯಾರಿಕೆ, ಬಳಕೆ ಮತ್ತು ಸಂಗ್ರಹ ಅಪರಾಧವಾಗಿದೆ. ಇದಕ್ಕೆ 5 ಲಕ್ಷದವರೆಗೆ ದಂಡ ವಿಧಿಸಬಹುದು. ಈ ವಿಚಾರದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸ್ಥಳೀಯ ಆಡಳಿತಗಳಿಗೆ ಪ್ರತ್ಯೇಕ ಅಧಿಕಾರಗಳಿವೆ. ಪರಿಸರ ಸಂರಕ್ಷಣಾ ಕಾಯಿದೆ 1986ರ ಸೆಕ್ಷನ್ 5ರನ್ವಯ ದಪ್ಪ–ತೆಳು ಚೀಲಗಳನ್ನು ನಿಷೇಧಿಸಲಾಗಿದೆ. ದೇಶದ ಅನೇಕ ರಾಜ್ಯಗಳಲ್ಲಿ ಪ್ಲಾಸ್ಟಿಕ್‌ಗೆ ನಿಷೇಧವಿದೆ. ಆದರೆ ಪರಿಣಾಮಕಾರಿಯಾದ ಕಾನೂನುಗಳಿಲ್ಲ. ಇದನ್ನು ಮನಗಂಡು ಪ್ರಧಾನಿ ಮೋದಿಯವರು ಬರುವ ಅಕ್ಟೋಬರ್ 2ರ ಗಾಂಧಿ ಜಯಂತಿ ದಿನ ದೇಶದಾದ್ಯಂತ ಹಂತ ಹಂತವಾಗಿ ಪ್ಲಾಸ್ಟಿಕ್ ನಿಷೇಧಕ್ಕೆ ಮುಂದಾಗುವ ಸೂಚನೆ ನೀಡಿದ್ದಾರೆ. ಇದು ಜಾರಿಗೆ ಬಂದರೆ ಒಳ್ಳೆಯದು.

ಪ್ಲಾಸ್ಟಿಕ್ ನಿಷೇಧ–ಗಾಂಧಿ ಕನಸಿನ ಸಾಕಾರ:

ಪೆಟ್ರೋಲಿಯಂ ತೈಲ ಬಳಸದೆಯೂ ಪ್ಲಾಸ್ಟಿಕ್ ತಯಾರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ಸಸ್ಯ ಜನ್ಯಗಳನ್ನು ಬಳಸಿ ಜೈವಿಕ ಪ್ಲಾಸ್ಟಿಕ್ ತಯಾರಿಸುವ ವಿಧಾನಗಳು ಜನಪ್ರಿಯಗೊಳ್ಳುತ್ತಿವೆ. ಸಮಾರಂಭಗಳಲ್ಲಿ ಪ್ಲಾಸ್ಟಿಕ್ ತಟ್ಟೆಗಳ ಬದಲಿಗೆ ಅಡಿಕೆ ತಟ್ಟೆಗಳು, ಪ್ಲಾಸ್ಟಿಕ್ ಲೋಟಗಳ ಬದಲಿಗೆ ಮಡಿಕೆ–ಕುಡಿಕೆ, ಪೇಪರ್ ಗ್ಲಾಸ್ ಬಳಸಬಹುದು. ಹೀಗೆ ಮಾಡಿದರೆ ಸ್ಥಳೀಯ ರೈತರಿಗೆ, ಅಡಿಕೆ ಬೆಳೆಗಾರರಿಗೆ, ಕುಂಬಾರರಿಗೆ ಉದ್ಯೋಗ ಸೃಷ್ಟಿಯಾದಂತಾಗುತ್ತದೆ. ಪರಿಸರವೂ ಸುರಕ್ಷಿತವಾದಂತಾಗುತ್ತದೆ. ಇದೇ ಅಲ್ಲವೆ ಮಹಾತ್ಮ ಗಾಂಧೀಜಿಯವರ ಗುಡಿ ಕೈಗಾರಿಕೆಗಳ ಕನಸು. ಆದಷ್ಟು ಬೇಗ ಪ್ಲಾಸ್ಟಿಕ್ ನಿಷೇಧ ಜಾರಿಗೆ ಬರಲಿ ಎಂಬುದು ನಮ್ಮೆಲ್ಲರ ಆಶಯ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷನಾಗಿ ನಾನು ಸಹ ನನ್ನ ಪ್ರಾಮಾಣಿಕ ಪ್ರಯತ್ನವನ್ನು ಮುಂದುವರೆಸುತ್ತೇನೆ. ರಾಜ್ಯದಾದ್ಯಂತ ಪ್ಲಾಸ್ಟಿಕ್ ನಿಷೇಧಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಬದ್ಧನಾಗಿದ್ದೇನೆ.

ಡಾ: ಕೆ.ಸುಧಾಕರ್,
ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಅಧ್ಯಕ್ಷರು.

ಆಧಾರ–ಕನ್ನಡಪ್ರಭ, 06.09.2019

WD 0 4492, 500 copies, GCP, Unit-2, Bengaluru-59.